ಶನಿವಾರ, ಮಾರ್ಚ್ 2, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ

ಮುಂಬೈನಲ್ಲಿ ನೆಟ್‌ಫ್ಲಿಕ್ಸ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಟಿ ಪರಿಣೀತಿ ಚೋಪ್ರಾ ಪಾಲ್ಗೊಂಡಿದ್ದರು



ಗ್ರಾಮೀಣರ ಕೈಗೆಟುಕಲಿವೆ ಸರ್ಕಾರಿ ಸೇವೆ

ಗ್ರಾಮೀಣ ಜನರ ಜತೆ ನೇರ ಸಂಪರ್ಕ ಇರುವ, ಅವರ ಅಹವಾಲುಗಳನ್ನು ಆಲಿಸಿ ಪರಿಹಾರ ಕಂಡುಕೊಳ್ಳುವತ್ತ ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಕಂದಾಯ ಇಲಾಖೆಗಳು ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಲು ಮುಂದಾಗಿವೆ. ಜನರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು 89 ಸೇವೆಗಳು ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದೆ

ಗ್ರಾಮಗಳ ಡಿಜಿಟಲೀಕರಣ: ಹೊಸ ಪೋರ್ಟಲ್, ವಾಟ್ಸ್‌ಆ್ಯಪ್ ಚಾಟ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 5,991 ಗ್ರಾಮಗಳನ್ನು ಸಂಪೂರ್ಣ ಡಿಜಿಟಲೀಕರಣ ಮಾಡುವತ್ತ ದಾಪುಗಾಲಿಟ್ಟಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ದೇಶದಲ್ಲೇ ಮೊದಲ ಬಾರಿಗೆ ಗ್ರಾಮೀಣ ಜನರಿಗಾಗಿ ಸರ್ಕಾರದ 89 ಸೇವೆಗಳನ್ನು ನೀಡುವ 'ಪಂಚಮಿತ್ರ' ಹೆಸರಿನಲ್ಲಿ ಹೊಸ ಪೋರ್ಟಲ್ ಮತ್ತು ವಾಟ್ಸ್‌ಆ್ಯಪ್ ಚಾಟ್ ಡಿಜಿಟಲ್ ವೇದಿಕೆಗಳನ್ನು ಆರಂಭಿಸಿದೆ.

ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಅವರು ಶುಕ್ರವಾರ 'ಪಂಚಮಿತ್ರ ಪೋರ್ಟಲ್' ಮತ್ತು 'ಪಂಚ ಮಿತ್ರ ವಾಟ್ಸ್‌ಆ್ಯಪ್ ಚಾಟ್'ಗೆ ಚಾಲನೆ ನೀಡಿದ ಬಳಿಕ, ಈ ಮಾಹಿತಿ ನೀಡಿದರು.

ಇನ್ನು ಮುಂದೆ ಎಲ್ಲ ಗ್ರಾಮ ಪಂಚಾಯತಿಗಳ ಎಲ್ಲ ರೀತಿಯ ಸಭೆಗಳನ್ನು ವೆಬ್‌ಕಾಸ್ಟಿಂಗ್ ಮಾಡಲಾಗುವುದು. ಈಗಾಗಲೇ 74,902 ಸಭೆಗಳನ್ನು ವೆಬ್‌ಕಾಸ್ಟಿಂಗ್ ಮಾಡಲಾಗಿದ್ದು, ಸುಮಾರು 1 ಲಕ್ಷ ಸಭೆಗಳನ್ನು ಷೆಡ್ಯೂಲ್ ಮಾಡಲಾಗಿದೆ. ತಿಂಗಳ ಸಭೆ, ಸ್ಥಾಯಿ ಸಮಿತಿ ಸಭೆಗಳನ್ನು ವೆಬ್‌ಕಾಸ್ಟಿಂಗ್ ಮೂಲಕ ಸಾರ್ವಜನಿಕರು ವೀಕ್ಷಿಸಬಹುದಾಗಿದೆ. ಸಭೆಗಳ ನಡಾವಳಿ ವರದಿಗಳನ್ನೂ ಆಯಾ ದಿನವೇ ಪೋರ್ಟಲ್‌ನಲ್ಲಿ ಅಪ್‌ಲೋಡ್ ಆಗುತ್ತದೆ ಹೇಳಿದರು.

ನಾಗರಿಕರು ಗ್ರಾಮ ಪಂಚಾಯಿತಿಗಳಲ್ಲಿನ ತಮ್ಮ ಕೆಲಸ ಮಾಡಿಕೊಳ್ಳಲು ವೃಥಾ ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಮತ್ತು ತ್ವರಿತಗತಿಯಲ್ಲಿ ಸೇವೆ ನೀಡುವ ಹಾಗೂ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಲು ಈ ಯೋಜನೆ ಜಾರಿ ಮಾಡಲಾಗಿದೆ. ಗ್ರಾಮಪಂಚಾಯಿತಿಗೆ ಸಂಬಂಧಿಸಿದ 17 ಸೇವೆಗಳು ಮತ್ತು ಇತರ ಇಲಾಖೆಗಳಿಗೆ ಸಂಬಂಧಿಸಿದ 72 ಸೇವೆಗಳು ಈ ಎರಡೂ ಡಿಜಿಟಲ್ ವೇದಿಕೆಗಳಲ್ಲಿ ಸಿಗಲಿವೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ ಮೊಬೈಲ್ ಆಧಾರಿತ ಇಂಟರ್‌ನೆಟ್ ಸೇವೆ ಶೇ 96.86ರಷ್ಟು ಲಭ್ಯವಿದೆ. ಶೇ 80ಕ್ಕೂ ಹೆಚ್ಚು ಜನರು ವಾಟ್ಸ್‌ಆ್ಯಪ್ ಬಳಕೆ ಮಾಡುತ್ತಿದ್ದಾರೆ. ಹೀಗಾಗಿ ಗ್ರಾಮೀಣ ಜನರಿಗೆ ಈ ಸೇವೆ ಪಡೆಯುವುದು ಕಷ್ಟವಾಗುವುದಿಲ್ಲ. ಯಾರಿಗೆ ಬಳಕೆ ಮಾಡಲು ಗೊತ್ತಾಗುವುದಿಲ್ಲವೋ ಅವರ ಸಹಾಯಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ತಲಾ ಇಬ್ಬರು ಡೇಟಾ ಆಪರೇಟರ್‌ಗಳನ್ನು ನೇಮಿಸಲಾಗುವುದು ಎಂದು ಪ್ರಿಯಾಂಕ್ ಹೇಳಿದರು.

ಗ್ರಾಮೀಣ ಜನರು ಡಿಜಿಟಲ್ ವೇದಿಕೆ ಮೂಲಕ ದೂರು ನೀಡುವ ಪ್ರಯೋಗವೂ ನಡೆದಿದೆ. ಸುಮಾರು 95,000 ಜನ ಅಹವಾಲುಗಳನ್ನು ಸಲ್ಲಿಸಿದ್ದಾರೆ. ಗೃಹ ಲಕ್ಷ್ಮಿ ಯೋಜನೆಗೆ 32 ಲಕ್ಷ ಮಹಿಳೆಯರು ಬಾಪೂಜಿ ಸೇವಾಕೇಂದ್ರಗಳ ಮೂಲಕವೇ ತಮ್ಮ ಹೆಸರುಗಳನ್ನು ನೋಂದಣಿ ಮಾಡಿಕೊಂಡಿರುವುದು ವಿಶೇಷ ಎಂದು ಅವರು ತಿಳಿಸಿದರು.

ಗ್ರಾಮ ಪಂಚಾಯಿತಿ ಸೇವೆಗಳಿಗೆ ಅರ್ಜಿ ಸಲ್ಲಿಸಿದ ಬಳಿಕ, ಅರ್ಜಿಗಳ ಸ್ಥಿತಿಗತಿಯನ್ನು ಪರಿಶೀಲಿಸಲೂ ಅವಕಾಶವಿದೆ. ಗ್ರಾಮೀಣ ಜನರು ಕುಡಿಯುವ ನೀರು, ರಸ್ತೆ, ಸೇತುವೆ ದುರಸ್ತಿ, ನರೇಗಾ ಯೋಜನೆ ಮತ್ತು ಪಂಚಾಯತ್ ರಾಜ್ ವಿಷಯಗಳಿಗೆ ಸಂಬಂಧಿಸಿದ 39 ರೀತಿಯ ಕುಂದುಕೊರತೆಗಳನ್ನು ಗುರುತಿಸಲಾಗಿದೆ. ಪೋರ್ಟಲ್ ಅಥವಾ ವಾಟ್ಸ್‌ಆ್ಯಪ್ ಮೂಲಕ ಅಹವಾಲು ಸಲ್ಲಿಸಿ ಪರಿಹಾರ ಪಡೆದುಕೊಳ್ಳಬಹುದು.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ 'ಪಂಚಮಿತ್ರ' ಪೋರ್ಟಲ್ ಮತ್ತು ವಾಟ್ಸ್‌ಆ್ಯಪ್ ಚಾಟ್‌ಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಇಲಾಖೆ ಆಯುಕ್ತೆ ಪ್ರಿಯಾಂಕ ಮೇರಿ ಫ್ರಾನ್ಸಿಸ್, ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳಾದ ಉಮಾಮಹಾದೇವನ್ ಮತ್ತು ಅಂಜುಂ ಪರ್ವೇಜ್ ಇದ್ದರು

ಡಿಜಿಟಲ್ ಪಾವತಿ ಮೂಲಕ ₹490 ಕೋಟಿ ಆದಾಯ

ಗ್ರಾಮೀಣ ಪ್ರದೇಶಗಳಲ್ಲಿ ಡಿಜಿಟಲ್ ಪಾವತಿ ಪ್ರಮಾಣ ಹೆಚ್ಚಾಗಿದೆ. ವಿವಿಧ ರೀತಿಯ ತೆರಿಗೆಗಳು, ಶುಲ್ಕಗಳನ್ನು ಡಿಜಿಟಲ್ ಪಾವತಿ ಮೂಲಕ ಸಂಗ್ರಹಿಸಲಾಗುತ್ತಿದೆ. ಈ ವರ್ಷ ₹490 ಕೋಟಿ ಆದಾಯ ಸಂಗ್ರಹಿಸಲಾಗಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದರು.

ಪಾಯಿಂಟ್ ಆಫ್ ಸೇಲ್ (ಪಿಒಎಸ್), ಗೂಗಲ್, ಪೇಟಿಎಂ ಮತ್ತು ಇತರ ಆನ್‌ಲೈನ್ ಪಾವತಿ ವಿಧಾನಗಳ ಮೂಲಕ ಜನರ ಹಣ ಪಾವತಿ ಮಾಡುತ್ತಿದ್ದಾರೆ ಎಂದರು.

10 ಸಾವಿರ ಗ್ರಾಮ ಲೆಕ್ಕಿಗರಿಗೆ ಲ್ಯಾಪ್‌ಟಾಪ್



ಕೃಷ್ಣಬೈರೇಗೌಡ

ಗ್ರಾಮ ಲೆಕ್ಕಿಗರು ತಮ್ಮ ಕಚೇರಿಯಲ್ಲೇ ಇದ್ದು ಎಲ್ಲ ಕೆಲಸಗಳನ್ನು ಮಾಡಲು ಮತ್ತು ಪ್ರತಿ ನಿತ್ಯ ತಾಲ್ಲೂಕು ಕಚೇರಿಗಳಿಗೆ ಹೋಗುವುದನ್ನು ತಪ್ಪಿಸಲು 10 ಸಾವಿರ ಗ್ರಾಮ ಲೆಕ್ಕಿಗರಿಗೆ ಲ್ಯಾಪ್‌ಟಾಪ್ ವಿತರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗ್ರಾಮ ಲೆಕ್ಕಿಗರು ಕಡತಗಳನ್ನು ತಾಲ್ಲೂಕು ಕಚೇರಿಗೆ ಒಯ್ಯುತ್ತಾರೆ. ಇದರಿಂದಾಗಿ ಪಂಚಾಯಿತಿ ಕಚೇರಿಗಳಲ್ಲಿ ಅವರು ಇರುವುದಿಲ್ಲ. ಸಾರ್ವಜನಿಕರ ಕೆಲಸಗಳು ಆಗುತ್ತಿಲ್ಲ. ಆದ್ದರಿಂದ ಗ್ರಾಮ ಲೆಕ್ಕಿಗರು ಎಲ್ಲಿ ಇರುತ್ತಾರೋ ಅಲ್ಲಿಂದಲೇ ಕೆಲಸ ಮಾಡಲು ಮತ್ತು ಕಡತಗಳನ್ನು ಆನ್‌ಲೈನ್ ಮೂಲಕ ಕಳುಹಿಸಲು ಅವರಿಗೆ ಇ-ಆಫೀಸ್ ಲಾಗ್‌ಇನ್ ವ್ಯವಸ್ಥೆಯನ್ನೂ ಮಾಡಿಕೊಡಲಾಗುವುದು ಎಂದು ಅವರು ತಿಳಿಸಿದರು.

ಸರ್ವೇ ರೋವರ್: ಸರ್ವೇ ಕೆಲಸವನ್ನು ವೇಗವಾಗಿ ಮುಗಿಸುವ ಉದ್ದೇಶದಿಂದ ಆಧುನಿಕ 'ಸರ್ವೇ ರೋವರ್' ಉಪಕರಣಗಳನ್ನು ಖರೀದಿಸಲಾಗುವುದು. ₹18 ಕೋಟಿ ವೆಚ್ಚದಲ್ಲಿ ಎಲ್ಲಾ ತಾಲ್ಲೂಕುಗಳಿಗೂ 372 ಸರ್ವೇ ರೋವರ್ ಒದಗಿಸಲು ಟೆಂಡರ್ ಕರೆಯಲು ನಿರ್ಧರಿಸಲಾಗಿದೆ. 'ಸರ್ವೇ ರೋವರ್'ನಿಂದ ಸರ್ವೇ ಕೆಲಸ ನಿಖರವಾಗಿ ಮತ್ತು ತ್ವರಿತವಾಗಿ ಮಾಡಲು ಸಾಧ್ಯ ಎಂದು ಹೇಳಿದರು.

'ಪಂಚಮಿತ್ರ' ವಾಟ್ಸ್‌ಆ್ಯಪ್‌ನಲ್ಲಿ ಸಿಗುವ ಸೇವೆ

ಸಾರ್ವಜನಿಕರು ಈ ಕೆಳಗಿನ ಸೇವೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಸೇವೆ ಪಡೆಯಬಹುದು:
● ಕಟ್ಟಡ ನಿರ್ಮಾಣ ಪರವಾನಗಿ ● ಹೊಸ ನೀರು ಸರಬರಾಜು ಸಂಪರ್ಕ ● ನೀರು ಸರಬರಾಜಿನ ಸಂಪರ್ಕ ಕಡಿತ ● ಕುಡಿಯುವ ನೀರಿನ ನಿರ್ವಹಣೆ ● ಬೀದಿ ದೀಪದ ನಿರ್ವಹಣೆ ● ಗ್ರಾಮ ನೈರ್ಮಲ್ಯ ನಿರ್ವಹಣೆ ● ವ್ಯಾಪಾರ ಪರವಾನಗಿ ● ಸ್ವಾಧೀನ ಪ್ರಮಾಣ ಪತ್ರ ● ರಸ್ತೆ ಅಗೆಯುವುದಕ್ಕಾಗಿ ಅನುಮತಿ ● ಕೈಗಾರಿಕೆ, ಕೃಷಿ ಆಧಾರಿತ ಉತ್ಪಾದನಾ ಘಟಕ ಸ್ಥಾಪನೆಗೆ ಅನುಮತಿ ● ನಿರಾಕ್ಷೇಪಣಾ ಪತ್ರ ● ಎಂನರೇಗಾ ಅಡಿ ಕಾರ್ಮಿಕರಿಗೆ ಜಾಬ್ ಕಾರ್ಡ್ ವಿತರಣೆ ● ಕಾರ್ಮಿಕರಿಗೆ ಉದ್ಯೋಗ ಒದಗಿಸುವುದು ● ಹೊಸ/ ಅಸ್ತಿತ್ವದಲ್ಲಿರುವ ದೂರಸಂಪರ್ಕ ಮೂಲಸೌಕರ್ಯ ಗೋಪುರಕ್ಕೆ ಅನುಮತಿ, ನಿಯಮಿತಗೊಳಿಸುವಿಕೆ ● ಹೊಸ/ ಅಸ್ತಿತ್ವದಲ್ಲಿರುವ ಓವರ್ ಗ್ರೌಂಡ್ ಕೇಬಲ್ ಮೂಲಸೌಕರ್ಯ/ಭೂಗತ ಕೇಬಲ್ ಮೂಲ ಸೌಕರ್ಯಕ್ಕಾಗಿ ಅನುಮತಿ ನಿಯಮಿತಗೊಳಿಸುವಿಕೆ ● ನಮೂನೆ 9/11ಎ ● ನಮೂನೆ11 ಬಿ

ಸುದ್ದಿ 2 ನಿಮಿಷ

ನಾಲ್ಕು ನಿಗಮಗಳಿಗೆ 5 ಪ್ರಶಸ್ತಿ

ಬೆಂಗಳೂರು: ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಐದು ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿವೆ.

ದೆಹಲಿಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟ (ಎಎಸ್‌ಆರ್‌ಟಿಯು) ನೀಡುವ ನ್ಯಾಷನಲ್ ಟ್ರಾನ್ಸ್‌ಪೋರ್ಟ್ ಎಕ್ಸಲೆನ್ಸ್ ಅವಾರ್ಡ್ ಇದಾಗಿದೆ. ದೇಶದ 62 ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಈ ಒಕ್ಕೂಟದ ಸದಸ್ಯತ್ವವನ್ನು ಹೊಂದಿವೆ.

ಬ್ರ್ಯಾಂಡಿಂಗ್, ವರ್ಚಸ್ಸು ಅಭಿವೃದ್ಧಿ ಉಪಕ್ರಮ ಮತ್ತು ಸಿಬ್ಬಂದಿ ಕಲ್ಯಾಣದ ಉಪಕ್ರಮಗಳಿಗಾಗಿ ಕೆಎಸ್‌ಆರ್‌ಟಿಸಿ 2 ಪ್ರಶಸ್ತಿಗಳಿಗೆ ಆಯ್ಕೆಯಾಗಿದೆ. ವಿದ್ಯುತ್ ಚಾಲಿತ ವಾಹನಗಳಾದ 'ಅಸ್ತ್ರ' ಕಾರ್ಯಾಚರಣೆಗೊಳಿಸಿದ್ದಕ್ಕಾಗಿ ಬಿಎಂಟಿಸಿ, ರಸ್ತೆ ಸಾರಿಗೆ ಸುರಕ್ಷತೆಯ ಉಪಕ್ರಮ ಅನುಷ್ಠಾನಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ) ಹಾಗೂ ಸಾರಿಗೆ ಸುರಕ್ಷತೆ ಪದ್ಧತಿಯ ಅನುಷ್ಠಾನಕ್ಕಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಪ್ರಶಸ್ತಿಗೆ ಆಯ್ಕೆಯಾಗಿವೆ.

ದೆಹಲಿಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟದಲ್ಲಿ ಮಾರ್ಚ್ 15ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ.




ಸಾಹಿತ್ಯ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಡೆಸಿದ 2023–24ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿದೆ.


ಫಲಿತಾಂಶದ ಪಟ್ಟಿಯನ್ನು ಪರಿಷತ್ತಿನ ಅಂತರ್ಜಾಲ ತಾಣ kannadasahithyaparishattu.inನಲ್ಲಿ ಪ್ರಕಟಿಸಲಾಗಿದೆ. ಎಲ್ಲ ಅಭ್ಯರ್ಥಿಗಳಿಗೆ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ಶೀಘ್ರದಲ್ಲಿಯೇ ನೋಂದಾಯಿತ ಅಂಚೆ ಮೂಲಕ ಕಳುಹಿಸಿ ಕೊಡಲಾಗುತ್ತದೆ. ಮರು ಮೌಲ್ಯಮಾಪನ ಹಾಗೂ ಮರು ಎಣಿಕೆಗೆ ಅಂಕಪಟ್ಟಿಗಳು ಕಳುಹಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ. ಸಂಪರ್ಕಕ್ಕೆ: 080 26623584 ಅಥವಾ 26612991

ರಾಧಾಕೃಷ್ಣ ಸೇರಿ ಮೂವರಿಗೆ 'ಗಡಿನಾಡ ಚೇತನ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ರಾಧಾಕೃಷ್ಣ



ಪಂಚಾಕ್ಷರಿ



ಬಿ.ಎಸ್. ಗವಿಮಠ

ಬೆಂಗಳೂರು: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ನೀಡುವ 'ಗಡಿನಾಡ ಚೇತನ ರಾಜ್ಯ ಪ್ರಶಸ್ತಿ'ಗೆ ಕೇರಳದ ಕಾಸರಗೋಡಿನ ಸಾಹಿತಿ ರಾಧಾಕೃಷ್ಣ ಉಳಿಯತ್ತಡ್ಕ ಸೇರಿ ಮೂವರು ಆಯ್ಕೆಯಾಗಿದ್ದಾರೆ.

ಭಾಲ್ಕಿ ಹಿರೇಮಠದ ಚನ್ನಬಸವ ಪಟ್ಟದೇವರು ಹೆಸರಿನಲ್ಲಿ ಸ್ಥಾಪಿಸಿರುವ ಪ್ರಶಸ್ತಿಗೆ ರಾಧಾಕೃಷ್ಣ, 'ಜಯದೇವಿತಾಯಿ ಲಿಗಾಡೆ' ಅವರ ಹೆಸರಿನಲ್ಲಿ ಸ್ಥಾಪಿಸಿರುವ ಪ್ರಶಸ್ತಿಗೆ ಬೀದರ್‌ನ ಕನ್ನಡ ಪರ ಹೋರಾಟಗಾರ ಪಂಚಾಕ್ಷರಿ ಪುಣ್ಯಶೆಟ್ಟಿ ಹಾಗೂ 'ಕಯ್ಯಾರ ಕಿಞ್ಞಣ್ಣ ರೈ' ಅವರ ಹೆಸರಿನಲ್ಲಿ ಸ್ಥಾಪಿಸಲಾದ ಪ್ರಶಸ್ತಿಗೆ ಬೆಳಗಾವಿಯ ಕನ್ನಡ ಪರ ಚಿಂತಕ ಬಿ.ಎಸ್. ಗವಿಮಠ ಆಯ್ಕೆಯಾಗಿದ್ದಾರೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯ ಸಮಿತಿ ಈ ಆಯ್ಕೆ ಮಾಡಿದೆ. ಸಾಹಿತಿ ಸರಜೂ ಕಾಟ್ಕರ್, ಕನ್ನಡ ಪ್ರಾಧ್ಯಾಪಕರಾದ ಎಂ.ಎಸ್. ದುರ್ಗಾ ಪ್ರವೀಣ್, ಆರ್.ನಾಗಪ್ಪಗೌಡ, ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ ಸಮಿತಿಯಲ್ಲಿ ಇದ್ದರು. ಪ್ರಶಸ್ತಿ ತಲಾ ₹1 ಲಕ್ಷ ನಗದು ಒಳಗೊಂಡಿದ್ದು, ಆಯ್ಕೆ ಸಮಿತಿಯು ಪ್ರಶಸ್ತಿ ಮೊತ್ತವನ್ನು ₹3 ಲಕ್ಷಕ್ಕೆ ಹೆಚ್ಚಿಸಲು ಪ್ರಾಧಿಕಾರಕ್ಕೆ ಸಲಹೆ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

ಇಬ್ಬರು ಕಾನ್‌ಸ್ಟೆಬಲ್ ಅಮಾನತು

ಬೀದರ್: ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ಭರ್ತಿಗೆ ನಗರದಲ್ಲಿ ಶುಕ್ರವಾರ ನಡೆದ ದೇಹದಾರ್ಢ್ಯ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಆರೋಪದಡಿ ಇಬ್ಬರು ಸಿಬ್ಬಂದಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. ಅಮಾನತುಗೊಳಿಸಿದ್ದಾರೆ.

ಡಿ.ಎ.ಆರ್. ಪೊಲೀಸ್ ಕಾನ್‌ಸ್ಟೆಬಲ್ ಐವಾನ್ ಹಾಗೂ ಜನವಾಡ ಠಾಣೆಯ ಕಾನ್‌ಸ್ಟೆಬಲ್ ಶಫೀಕ್ ಅಮಾನತುಗೊಂಡವರು.

'ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ಭರ್ತಿಗೆ ಇತ್ತೀಚೆಗೆ ನಡೆದ ಲಿಖಿತ ಪರೀಕ್ಷೆಯಲ್ಲಿ ಪಾಸಾದವರಿಗೆ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಶುಕ್ರವಾರ ದೇಹದಾರ್ಢ್ಯ ಪರೀಕ್ಷೆ ಏರ್ಪಡಿಸಲಾಗಿತ್ತು. ಐವಾನ್, 1,600 ಮೀಟರ್ ಓಟವನ್ನು 6 ನಿಮಿಷ 30 ಸೆಕೆಂಡ್‌ಗಳಲ್ಲಿ ಪೂರ್ಣಗೊಳಿಸಬೇಕಿತ್ತು. ಆದರೆ, ಅವರು ಮೂರು ಸುತ್ತು ಮಾತ್ರ (1,200 ಮೀ.) ಪೂರ್ಣಗೊಳಿಸಿದ್ದರು. ನಾಲ್ಕು ಸುತ್ತು ಪೂರ್ಣಗೊಳಿಸಿದ್ದೇನೆಂದು ಅಧಿಕಾರಿಗಳಿಗೆ ಸುಳ್ಳು ಮಾಹಿತಿ ನೀಡಿದ್ದ. ಓಟದ ಸಮಯ ನೋಡಲು ಜನವಾಡ ಠಾಣೆಯ ಶಫೀಕ್‌ನನ್ನು ನಿಯೋಜಿಸಲಾಗಿತ್ತು. ಶಫೀಕ್ ಕೂಡ ಹಿರಿಯ ಅಧಿಕಾರಿಗಳಿಗೆ ಸುಳ್ಳು ಮಾಹಿತಿ ಕೊಟ್ಟಿದ್ದ. ಡಿವೈಎಸ್ಪಿ ಸಲ್ಲಿಸಿರುವ ವರದಿ, ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಇಬ್ಬರೂ ಸುಳ್ಳು ಮಾಹಿತಿ ಕೊಟ್ಟಿರುವುದು ಸಾಬೀತಾಗಿದೆ' ಎಂದು ಎಸ್ಪಿ ತಿಳಿಸಿದ್ದಾರೆ.

ಪಿಎಸ್‌ಐ ಮರು ಪರೀಕ್ಷೆ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳಿಗೆ ನಡೆಸಲಾಗಿದ್ದ ಮರು ಪರೀಕ್ಷೆಯ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಲಾಗಿದೆ.

ಅಭ್ಯರ್ಥಿಗಳು ಪಡೆದ ಅಂಕಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಗಳನ್ನು ಮಾರ್ಚ್ 5ರ ಒಳಗೆ ಕೆಇಎ ಇ-ಮೇಲ್ ಮೂಲಕ ಸಲ್ಲಿಸಬೇಕು. ನಂತರ ಅಂತಿಮ ಪಟ್ಟಿ ಪ್ರಕಟಿಸಿ, ಗೃಹ ಇಲಾಖೆಗೆ ಸಲ್ಲಿಸಲಾಗುವುದು ಎಂದು ಕೆಇಎ ಹೇಳಿದೆ.

ಕಳೆದ ಬಾರಿ ನಡೆದಿದ್ದ ಇದೇ ನೇಮಕಾತಿ ಪರೀಕ್ಷೆಯಲ್ಲಿ ಉತ್ತರ ಕರ್ನಾಟಕ ಭಾಗದ ಕೆಲ ಜಿಲ್ಲೆಗಳಲ್ಲಿ ಅಕ್ರಮಗಳು ಪತ್ತೆಯಾಗಿ ಆಯ್ಕೆ ಪಟ್ಟಿಯನ್ನೇ ರದ್ದು ಮಾಡಲಾಗಿತ್ತು. ಅಂದು ಅರ್ಜಿ ಸಲ್ಲಿಸಿದ್ದ ಸುಮಾರು 56 ಸಾವಿರ ಆಕಾಂಕ್ಷಿಗಳಲ್ಲಿ 35,823 ಅಭ್ಯರ್ಥಿಗಳು ಮರು ಪರೀಕ್ಷೆ ಬರೆದಿದ್ದರು. ಬೆಂಗಳೂರಿನ 117 ಪರೀಕ್ಷಾ ಕೇಂದ್ರಗಳಲ್ಲಿ ಇದೇ ವರ್ಷದ ಜ.23ರಂದು ಮರು ಪರೀಕ್ಷೆ ನಡೆಸಲಾಗಿತ್ತು. 33 ಅಭ್ಯರ್ಥಿಗಳ ಒಎಂಆರ್ ಪ್ರತಿಗಳು ತಿರಸ್ಕೃತಗೊಂಡಿದ್ದವು. ಫೆ.23ರಂದು ಕೀ ಉತ್ತರಗಳನ್ನು ಬಿಡುಗಡೆ ಮಾಡಲಾಗಿತ್ತು.

'ಕೀ ಉತ್ತರಗಳಲ್ಲೇ ತಪ್ಪು'

ಪ್ರಶ್ನೆಗಳಿಗೆ ನೀಡಿರುವ 'ಕೀ ಆಪ್ಷನ್' ಉತ್ತರಗಳಲ್ಲೇ ಹಲವು ತಪ್ಪುಗಳಿದ್ದವು. ಎಲ್ಲ ಲೋಪಗಳನ್ನು ಸರಿಪಡಿಸಿದ ನಂತರವೇ ಅಂತಿಮ ಪಟ್ಟಿ ಪ್ರಕಟಿಸಬೇಕು ಎಂದು ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.

ಮಂಗಳನ ಅಂಗಳಕ್ಕೆ ಮ್ಯಾರಿನರ್–4 ಕಳಿಸಿರುವುದು. ಉತ್ತರದಲ್ಲಿ ಮ್ಯಾರಿನರ್ ಪೋಲ್ ಅಂತ ಕೊಟ್ಟಿದ್ದಾರೆ. ಹಾಕಿ ವಿಶ್ವಕಪ್‌ನಲ್ಲಿ ಭಾರತ 9ನೇ ಸ್ಥಾನ ಪಡೆದಿದೆ, ಉತ್ತರದಲ್ಲಿ 4 ಎಂದಿದೆ. ಕಾಂಗ್ರೆಸ್ ರೇಡಿಯೊ ಸಂಯೋಜಕಿ ಉಷಾ ಮೆಹ್ತಾ. ಆದರೆ, ಉತ್ತರದಲ್ಲಿ ಅವರ ಹೆಸರನ್ನೇ ಕೊಟ್ಟಿಲ್ಲ. ಎಚ್‌ಐವಿ ಪ್ರಕರಣದಲ್ಲಿ ಮಿಜೋರಾಂ ಮೊದಲ ಸ್ಥಾನದಲ್ಲಿದೆ. ಆದರೆ, ಮೇಘಾಲಯ ಎಂದಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

'1 ವರ್ಷ: 178 ಮಂದಿ ಅಂಗಾಂಗ ದಾನ'

ಅಂಗಾಂಗಕ್ಕೆ 8 ಸಾವಿರ ಕೋರಿಕೆ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ವರ್ಷದಲ್ಲಿ 178 ಮಂದಿಯ ಅಂಗಾಂಗ ದಾನ ಪಡೆಯಲಾಗಿದೆ. ದಾನದಲ್ಲಿ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ದಾನದ ಪ್ರಮಾಣ ಇನ್ನಷ್ಟು ಹೆಚ್ಚಾಗಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮುಖ್ಯಮಂತ್ರಿಯವರ ಅಧಿಕೃತ ನಿವಾಸ 'ಕಾವೇರಿ'ಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಂಗಾಂಗ ದಾನಿಗಳ ಕುಟುಂಬದ ಸದಸ್ಯರಿಗೆ ಪ್ರಶಂಸಾ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಗಾಂಗ ಪಡೆಯಲು ಎಂಟು ಸಾವಿರಕ್ಕೂ ಹೆಚ್ಚು ಜನರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಆದರೆ, ಒಂದು ವರ್ಷದಲ್ಲಿ ದಾನ ಮಾಡಿದವರ ಸಂಖ್ಯೆ ಅತ್ಯಂತ ಕಡಿಮೆ. ದಾನ ಕುರಿತು ಜನರಲ್ಲಿ ಹೆಚ್ಚಿನ ಅರಿವು ಮೂಡಿಸುವ ಕೆಲಸ ಆಗಬೇಕಿದೆ. ಒಬ್ಬ ವ್ಯಕ್ತಿ ಅಂಗಾಂಗ ದಾನದ ಮೂಲಕ ಎಂಟು ಜನರಿಗೆ ಜೀವದಾನ ಮಾಡಬಹುದು ಎಂದರು.

ದಾನಿಗಳ ಕುಟುಂಬದ ಸದಸ್ಯರಿಗೆ ಪ್ರಶಂಸಾ ಪತ್ರ ವಿತರಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಂಗಾಂಗ ದಾನದ ನಿರ್ಧಾರ ಸುಲಭವಲ್ಲ. ಇತರರ ಜೀವ ಉಳಿಸುವ ಕೆಲಸ ಶ್ರೇಷ್ಠವಾದುದು. ಅದಕ್ಕಾಗಿ ಹಿಂದಿನ ಅವಧಿಯಲ್ಲಿ ದಾನಕ್ಕಾಗಿಯೇ ಸಂಸ್ಥೆ ಸ್ಥಾಪಿಸಲಾಗಿತ್ತು. ದಾನಿಗಳ ಕುಟುಂಬದ ಜತೆ ಸರ್ಕಾರ ಸದಾ ಇರುತ್ತದೆ. ಯಾವುದೇ ಸಂಕಷ್ಟ ಎದುರಾದರೂ ನೆರವಿಗೆ ಬರುತ್ತದೆ ಎಂದು ಭರವಸೆ ನೀಡಿದರು.

ಅಪಘಾತಕ್ಕೀಡಾದ ಶರವಣ ಅವರ ಪತ್ನಿ, ಪ್ರಶಂಸಾ ಪತ್ರ ಸ್ವೀಕರಿಸುವಾಗ ಅಗಲಿದ ತಮ್ಮ ಪತಿ ನೆನಪು ಮಾಡಿಕೊಂಡು ಕಣ್ಣೀರಾದರು. ಅವರಿಗೆ ಧೈರ್ಯ ತುಂಬಿದ ಸಿದ್ದರಾಮಯ್ಯ, ಕೊಲೆಯಾಗಿದ್ದ ರಾಮನಗರದ ಕೆ.ಜಿ. ನವೀನ್ ಕುಟುಂಬದ ಸದಸ್ಯರಿಗೆ ಸಾವಿಗೆ ನ್ಯಾಯ ಒದಗಿಸುವ ಭರವಸೆ ನೀಡಿದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್, ಆಯುಕ್ತ ಡಿ.ರಂದೀಪ್ ಅವರು ಉಪಸ್ಥಿತರಿದ್ದರು.

ವಿರೋಧದ ಮಧ್ಯೆಯೂ ಚಿತ್ರದುರ್ಗ ಕಚೇರಿ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯ ಕರ್ನಾಟಕ, ಮಲೆನಾಡು, ಕರಾವಳಿ, ಬಯಲು ಸೀಮೆಯ ಜಿಲ್ಲೆಗಳ ಜನಪ್ರತಿನಿಧಿಗಳ ವಿರೋಧದ ನಡುವೆಯೂ ಚಿತ್ರದುರ್ಗದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಗುಣನಿಯಂತ್ರಣ ಉಪ ವಿಭಾಗವನ್ನು ಕಲಬುರಗಿಗೆ ಸ್ಥಳಾಂತರಿಸಲು ಲೋಕೋಪಯೋಗಿ ಇಲಾಖೆ ಆದೇಶ ಹೊರಡಿಸಿದೆ.

ಸ್ಥಳಾಂತರ ಮಾಡದಂತೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಹಾಗೂ ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಸೇರಿದಂತೆ ಹಲವು ಶಾಸಕರು ಪತ್ರ ಬರೆದು ಒತ್ತಡ ಹಾಕಿದ್ದರು.

ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ 2023–24ನೇ ಸಾಲಿನಲ್ಲಿ ₹10,055 ಕೋಟಿ ಮೊತ್ತದ 29 ಹಾಗೂ ₹4,199 ಕೋಟಿ ಮೊತ್ತದ 19 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಬಹುತೇಕ ಕಾಮಗಾರಿಗಳು ಧಾರವಾಡ ಕಚೇರಿ ವ್ಯಾಪ್ತಿಯಲ್ಲಿವೆ. ಹಾಗಾಗಿ, ಹುಬ್ಬಳ್ಳಿ ಗುಣನಿಯಂತ್ರಣ ಉಪ ವಿಭಾಗದ ಮೇಲೆ ಒತ್ತಡ ಹೆಚ್ಚಾಗಿದ್ದು, ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಕಾಮಗಾರಿಗಳ ಮೇಲೆ ನಿಗಾವಹಿಸಲು ಸಾಧ್ಯವಾಗಿಲ್ಲ. ಇದರಿಂದ ಚಿತ್ರದುರ್ಗ ಉಪ ವಿಭಾಗವನ್ನು ಹುದ್ದೆಗಳ ಸಮೇತ ಸ್ಥಳಾಂತರ ಮಾಡುವುದರಿಂದ ಕಲ್ಯಾಣ ಕರ್ನಾಟಕ ಪ್ರದೇಶಗಳ ವ್ಯಾಪ್ತಿಯ ಜಿಲ್ಲೆಗಳಿಗೆ ಅನುಕೂಲವಾಗಲಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಚಿತ್ರದುರ್ಗದಲ್ಲಿ ಕಚೇರಿ ಹೊಂದಿರುವ ರಾಷ್ಟ್ರೀಯ ಹೆದ್ದಾರಿ ಗುಣನಿಯಂತ್ರಣ ಉಪ ವಿಭಾಗ ವ್ಯಾಪ್ತಿಗೆ ಶಿವಮೊಗ್ಗ, ದಾವಣಗೆರೆ, ತುಮಕೂರು, ಬಳ್ಳಾರಿ, ವಿಜಯನಗರ, ರಾಯಚೂರು, ಹಾವೇರಿ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳು ಒಳಪಡುತ್ತವೆ. ಈಗ ಈ ಎಲ್ಲ ಜಿಲ್ಲೆಗಳನ್ನು ಬೆಂಗಳೂರು ಕಚೇರಿಯ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಬೆಂಗಳೂರು, ಚಿತ್ರದುರ್ಗ ಹಾಗೂ ಹುಬ್ಬಳ್ಳಿಯಲ್ಲಿ ಗುಣನಿಯಂತ್ರಣ ಉಪ ವಿಭಾಗ ಕಚೇರಿಗಳು ಇದ್ದು, ಕಲಬುರಗಿಯಲ್ಲಿ ನಾಲ್ಕನೇ ಕಚೇರಿ ತೆರೆಯುವ ಕುರಿತು ಕಳೆದ ವರ್ಷದ ಜೂನ್‌ನಲ್ಲೇ ನಡೆದಿದ್ದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚಿಸಲಾಗಿತ್ತು. ಪ್ರಸ್ತಾವವನ್ನು ಸಲ್ಲಿಸುವಂತೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರೂ ಸೂಚಿಸಿದ್ದರು. ಈಗ ಹೊಸ ಕಚೇರಿ ತೆರೆಯುವ ಬದಲು ಚಿತ್ರದುರ್ಗ ಕಚೇರಿ ಸ್ಥಳಾಂತರಿಸಲಾಗಿದೆ.

ಕುಪ್ಪೇಗಾಲ, ಸಿದ್ದರಾಮನಹುಂಡಿ ಶಾಲೆಗಳಿಗೆ ತಲಾ ₹ 10 ಲಕ್ಷ ದೇಣಿಗೆ

ಓದಿದ ಶಾಲೆಗೆ ಮುಖ್ಯಮಂತ್ರಿ ನೆರವು

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವು ಪ್ರಾಥಮಿಕ ಶಿಕ್ಷಣ ಪಡೆದ ತಾಲ್ಲೂಕಿನ ಕುಪ್ಪೇಗಾಲ ಹಾಗೂ ಸಿದ್ದರಾಮನಹುಂಡಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ತಲಾ ₹10 ಲಕ್ಷ ವೈಯಕ್ತಿಕ ನೆರವು ನೀಡಿದ್ದಾರೆ.

ರಾಜ್ಯ ಸರ್ಕಾರವು ಶಾಲೆಗಳ ಅಭಿವೃದ್ಧಿಗೆ 'ನನ್ನ ಶಾಲೆ, ನನ್ನ ಜವಾಬ್ದಾರಿ' ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಶಾಲೆಗಳಲ್ಲಿ ಓದಿದ ಹಳೆ ವಿದ್ಯಾರ್ಥಿಗಳಿಗೆ ಶಾಲಾಭಿವೃದ್ಧಿಯ ಜವಾಬ್ದಾರಿಯನ್ನು ನೀಡಲಾಗುತ್ತಿದೆ.

'ಯೋಜನೆಯ ಆರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ದೇಣಿಗೆ ನೀಡಿದ್ದು, ಮಾರ್ಚ್ 7ರಂದು ಬೆಂಗಳೂರಿನಲ್ಲಿ ಚಾಲನೆ ನೀಡಲಿದ್ದಾರೆ' ಎಂದು ಡಿಡಿಪಿಐ ಎಚ್.ಕೆ.ಪಾಂಡು 'ಪ್ರಜಾವಾಣಿ'ಗೆ ತಿಳಿಸಿದರು.

'ಹತ್ತನೇ ವರ್ಷದವರೆಗೂ ಸಿದ್ದರಾಮಯ್ಯ ಶಾಲೆಗೆ ಹೋಗಿರಲಿಲ್ಲ. ಸಿದ್ದರಾಮನಹುಂಡಿಯಿಂದ 1.5 ಕಿ.ಮೀ ದೂರವಿರುವ ಕುಪ್ಪೇಗಾಲ ಶಾಲೆಗೆ 5ನೇ ತರಗತಿಗೆ ನೇರವಾಗಿ ಪ್ರವೇಶ ಪಡೆದ ಅವರು, 7ನೇ ತರಗತಿವರೆಗೂ ಶಿಕ್ಷಣ ಪಡೆದಿದ್ದರು' ಎಂದರು.

'2015–16ರಲ್ಲಿ ಶಾಲೆಗೆ 1 ಎಕರೆ ಜಾಗದಲ್ಲಿ 8 ಕೊಠಡಿ, 2 ಶೌಚಾಲಯ ಹಾಗೂ ಕಾಂಪೌಂಡ್ ಸೇರಿದಂತೆ ಹೊಸ ಕಟ್ಟಡ ಕಟ್ಟಿಸಿಕೊಟ್ಟು ಉನ್ನತೀಕರಿಸಿದ್ದರು, ಇದೀಗ ₹10 ಲಕ್ಷ ವೈಯಕ್ತಿಕ ನೆರವು ನೀಡಿದ್ದಾರೆ' ಎಂದು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರವಿ ಹೇಳಿದರು.

'ಈ ನೆರವಿನಿಂದ ಸ್ಮಾರ್ಟ್ ಕ್ಲಾಸ್‌ಗಳನ್ನು ನಡೆಸಲು ಅನುಕೂಲವಾಗುವಂತೆ ಸ್ಮಾರ್ಟ್ ಟಿವಿ, ಪ್ರೊಜೆಕ್ಟರ್ ತರಲಾಗುವುದು. ಕುರ್ಚಿ, ಮೇಜು ಸೇರಿದಂತೆ ಅಗತ್ಯ ಪರಿಕರಗಳನ್ನು ಖರೀದಿಸಲಾಗುವುದು' ಎಂದರು.



ಸಿದ್ದರಾಮಯ್ಯ ಅವರು ಓದಿದ ಕುಪ್ಪೇಗಾಲದ ಸರ್ಕಾರಿ ಶಾಲೆ

> **ಕುಪ್ಪೇಗಾಲ ಹಾಗೂ ಸಿದ್ದರಾಮನಹುಂಡಿಯ ಶಾಲೆಗಳಿಗೆ ತಲಾ ₹10 ಲಕ್ಷ ನೀಡಿರುವುದು ಸಿಎಸ್‌ಆರ್ ನಿಧಿಯಿಂದ. ಅದು ಸರ್ಕಾರದ ಹಣವಲ್ಲ**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ (ಹಾಸನದಲ್ಲಿ ನೀಡಿದ ಹೇಳಿಕೆ)

> **ಯೋಜನೆಗೆ ಮುಖ್ಯಮಂತ್ರಿ ಅವರೇ ನೆರವು ನೀಡಿ ಎಲ್ಲ ಶಾಲೆಗಳಲ್ಲಿ ಕಲಿತ ಹಳೆಯ ವಿದ್ಯಾರ್ಥಿಗಳಿಗೆ ನೆರವಾಗಲು ದಾರಿ ತೋರಿದ್ದಾರೆ**
> **ಎಚ್.ಕೆ.ಪಾಂಡು,** ಡಿಡಿಪಿಐ

> **ಶಾಲೆ ಉನ್ನತೀಕರಣಗೊಂಡಿತ್ತು. ಸಿ.ಎಂ ನೆರವಿನಿಂದ ಗುಣಮಟ್ಟದ ಶಿಕ್ಷಣ ನೀಡಲು ಅಗತ್ಯ ಪರಿಕರ ಖರೀದಿಸಲಾಗುವುದು**
> **ಬಿ.ಭಾಗ್ಯ,** ಮುಖ್ಯಶಿಕ್ಷಕಿ, ಕುಪ್ಪೇಗಾಲ ಸರ್ಕಾರಿ ಶಾಲೆ

ಶನಿವಾರ, ಮಾರ್ಚ್ 2, 2024 | ₹ 7.00
www.prajavani.net
prajavani.net prajavani prajavani prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಪ್ಯಾರಿಸ್‌ನ ಗ್ರ್ಯಾಂಡ್ ರೆಕ್ಸ್ ಥಿಯೇಟರ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಟ ಭಾವನಾ ಪಾನಿ ಪಾಲ್ಗೊಂಡಿದ್ದರು



ಶಂಕಿತ ಹೊರಟು ಹೋದ ಗಂಟೆ ಬಳಿಕ ಸ್ಫೋಟ • ದುಷ್ಕರ್ಮಿ ಪತ್ತೆಗೆ 8 ವಿಶೇಷ ತಂಡ ರಚನೆ

‘ಇಡ್ಲಿ ತಿಂದ, ಬಾಂಬ್ ಇಟ್ಟು ಹೋದ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರೂಕ್‌ಫೀಲ್ಡ್‌ನಲ್ಲಿರುವ ದಿ ರಾಮೇಶ್ವರಂ ಕೆಫೆ ಹೋಟೆಲ್‌ನಲ್ಲಿ ಬಾಂಬ್ ಇರಿಸಿ ಪರಾರಿಯಾಗಿರುವ ಶಂಕಿತನ ಪತ್ತೆಗಾಗಿ ಪೊಲೀಸರ ಎಂಟು ವಿಶೇಷ ತಂಡಗಳನ್ನು ರಚಿಸಲಾಗಿದ್ದು, ನಗರ ಹಾಗೂ ಹೊರ ರಾಜ್ಯಗಳಲ್ಲಿ ಹುಡುಕಾಟ ಆರಂಭವಾಗಿದೆ.

ಕೆಫೆಗೆ ಶುಕ್ರವಾರ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಬಂದಿದ್ದರು. ಸಿಬ್ಬಂದಿ, ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ಗ್ರಾಹಕರ ತಟ್ಟೆಗಳನ್ನು ತೊಳೆಯಲು ಮೀಸಲಿಟ್ಟ ಜಾಗದ ಪಕ್ಕದಲ್ಲಿದ್ದ ಕಟ್ಟೆ ಮೇಲೆ ಬಾಂಬ್ ಸ್ಫೋಟಗೊಂಡಿತ್ತು. ಎಲ್ಲರೂ ದಿಕ್ಕಾಪಾಲಾಗಿ ಹೋಟೆಲ್‌ನಿಂದ ಹೊರಗೆ ಓಡಿ ಬಂದರು. ಘಟನಾ ಸ್ಥಳದಲ್ಲಿದ್ದ ಗಾಯಾಳುಗಳನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದರು.

‘ಕುಟುಂಬಸ್ಥರ ಜೊತೆ ಊಟ ಮಾಡಲು ಕೆಫೆಗೆ ಬಂದಿದ್ದೆ. ಎಲ್ಲರೂ ಊಟ ತೆಗೆದುಕೊಂಡು ಕಟ್ಟೆ ಮೇಲೆ ಕುಳಿತು ತಿನ್ನುತ್ತಿದ್ದೆವು. ಸ್ವಲ್ಪ ದೂರದಲ್ಲಿದ್ದ ಕಟ್ಟೆ ಮೇಲೆ ಸ್ಫೋಟ ಉಂಟಾಗಿ, ದಟ್ಟ ಹೊಗೆ ಬಂತು. ಹೊಗೆ ಹೋದ ನಂತರ ಗಾಯಾಳುಗಳು ಬಿದ್ದಿದ್ದು ಕಂಡಿತು’ ಎಂದು ಪ್ರತ್ಯಕ್ಷದರ್ಶಿ ನಿಖಿಲ್ ಹೇಳಿದರು.

‘ತೀವ್ರ ಗಾಯಗೊಂಡಿದ್ದ ಮಹಿಳೆಯ ಮುಖ, ಕಾಲು, ಕೈ ಹಾಗೂ ಇತರೆ ಭಾಗಕ್ಕೆ ಗಾಯವಾಗಿತ್ತು. ಉಳಿದವರ ಬಟ್ಟೆಗಳು ಹರಿದಿದ್ದವು. ಮೈಗೂ ಗಾಯವಾಗಿತ್ತು. ಎಲ್ಲರನ್ನೂ ಆಟೊದಲ್ಲಿ ಆಸ್ಪತ್ರೆಗೆ ಕಳುಹಿಸಲಾಯಿತು’ ಎಂದರು.

ಶಂಕಿತನ ಸುಳಿವು ಪತ್ತೆ: ‘ಹೋಟೆಲ್‌ನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಶಂಕಿತನ ಹಾವ–ಭಾವ ಸೆರೆಯಾಗಿದೆ. ಹೋಟೆಲ್ ಅಕ್ಕ-ಪಕ್ಕದಲ್ಲಿರುವ ಕ್ಯಾಮೆರಾದಲ್ಲಿ ಮುಖ ಚಹರೆಯ ಸುಳಿವು ಲಭ್ಯವಾಗಿದೆ. ವಿಡಿಯೊ ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಬ್ರೂಕ್‌ಫೀಲ್ಡ್‌ಗೆ ಬಸ್ಸಿನಲ್ಲಿ ಬಂದಿದ್ದ ಆರೋಪಿ, ಬ್ಯಾಗ್ ಹಿಡಿದುಕೊಂಡು ನೇರವಾಗಿ ರಾಮೇಶ್ವರಂ ಕೆಫೆಗೆ ಹೋಗಿದ್ದ. ಇಡ್ಲಿ ಪಡೆದಿದ್ದ. ಕೈ ಹಾಗೂ ತಟ್ಟೆಗಳನ್ನು ತೊಳೆಯಲು ಪ್ರತ್ಯೇಕ ಜಾಗವಿದೆ. ಇದರ ಪಕ್ಕವೇ ಕಟ್ಟೆ ಇದ್ದು, ಅದೇ ಜಾಗದಲ್ಲಿ ಶಂಕಿತ ಕುಳಿತುಕೊಂಡಿದ್ದ. ಕಟ್ಟೆ ಪಕ್ಕ ಮರವಿದ್ದು, ಅಲ್ಲೇ ಬ್ಯಾಗ್ ಇರಿಸಿದ್ದ. ನಂತರ, ಇಡ್ಲಿ ತಿಂದು ಸ್ಥಳದಿಂದ ಹೊರಟು ಹೋಗಿದ್ದಾನೆ. ಈ ದೃಶ್ಯ ವಿಡಿಯೊದಲ್ಲಿದೆ’ ಎಂದು ಹೇಳಿದರು.

‘ಆರೋಪಿ ಹೋದ ಗಂಟೆ ನಂತರ ಮಧ್ಯಾಹ್ನ 12.55ಕ್ಕೆ ಬಾಂಬ್ ಸ್ಫೋಟಗೊಂಡಿದೆ’ ಎಂದು ಮಾಹಿತಿ ನೀಡಿದರು.

ಘಟನಾ ಸ್ಥಳಕ್ಕೆ ಹಾಗೂ ಗಾಯಾಳುಗಳು ದಾಖಲಾಗಿರುವ ಆಸ್ಪತ್ರೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಭೇಟಿ ನೀಡಿದರು.



ಹೋಟೆಲ್‌ನಲ್ಲಿ ಸ್ಫೋಟ ಸಂಭವಿಸಿದ ಸ್ಥಳ –ಪ್ರಜಾವಾಣಿ ಚಿತ್ರ

ಗೋಕುಲ್ ಚಾಟ್ಸ್ ಸ್ಫೋಟಕ್ಕೆ ನಂಟು?

ಹೈದರಾಬಾದ್‌ನ ಗೋಕುಲ್ ಚಾಟ್ಸ್ ಮಳಿಗೆಯಲ್ಲಿ 2007ರಲ್ಲಿ ಬಾಂಬ್ ಸ್ಫೋಟ ಸಂಭವಿಸಿತ್ತು. ಕಡಿಮೆ ಅವಧಿಯಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿದ್ದ ಮಳಿಗೆಯನ್ನು ಮುಗಿಸಲು ಕೃತ್ಯ ಎಸಗಿದ್ದ ನಿಷೇಧಿತ ಭಯೋತ್ಪಾದನಾ ಸಂಘಟನೆಯ ಶಂಕಿತರಿಗೆ ಈಗಾಗಲೇ ಶಿಕ್ಷೆಯೂ ಆಗಿದೆ. ಈ ಸ್ಫೋಟಕ್ಕೂ ದಿ ರಾಮೇಶ್ವರಂ ಕೆಫೆಯಲ್ಲಿ ನಡೆದಿರುವ ಸ್ಫೋಟಕ್ಕೂ ನಂಟು ಇರುವ ಅನುಮಾನ ವ್ಯಕ್ತವಾಗುತ್ತಿದೆ.

ಗಾಯಗೊಂಡವರು

ಹೋಟೆಲ್ ಕೆಲಸಗಾರ: ಫಾರೂಖ್ (19)
ಗ್ರಾಹಕರು: ದೀಪಾಂಶು (23), ಸ್ವರ್ಣಾಂಬಾ (49), ಮೋಹನ್ (41), ನಾಗಶ್ರೀ (35), ಮೋಮಿ (30), ಬಲರಾಮ್ ಕೃಷ್ಣನ್ (31), ನವ್ಯಾ (25), ಶ್ರೀನಿವಾಸ್ (67)
• ಒಬ್ಬರ ಹೆಸರು ತಿಳಿದುಬಂದಿಲ್ಲ

‘ಟೈಮರ್ ವಶಕ್ಕೆ’

ಸ್ಫೋಟ ನಡೆದಿದ್ದ ಸ್ಥಳವನ್ನು ಸುಪರ್ದಿಗೆ ಪಡೆದಿದ್ದ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಅವಶೇಷಗಳಡಿ ಹುಡುಕಾಟ ಆರಂಭಿಸಿದರು.

‘ಚಿಕ್ಕ ಮೊಳೆಗಳು, 9 ವೋಲ್ಟ್ ಬ್ಯಾಟರಿ, ಬೋಲ್ಟ್‌ಗಳು ಸ್ಥಳದಲ್ಲಿ ಬಿದ್ದಿದ್ದವು. ಜೊತೆಗೆ, ಬಾಂಬ್‌ಗೆ ಅಳವಡಿಸಿದ್ದ ಟೈಮರ್ ಸಹ ಘಟನಾ ಸ್ಥಳದಲ್ಲಿತ್ತು. ಎಲ್ಲವನ್ನೂ ಪರೀಕ್ಷೆಗೆಂದು ಕಾಯ್ದಿರಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದರು.

> ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಸಂಭವಿಸಿರುವ ಸ್ಫೋಟದ ಬಗ್ಗೆ ತನಿಖೆ ನಡೆಯುತ್ತಿದೆ. ಆರೋಪಿಗಳನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದು. ಸ್ಫೋಟದ ವಿಚಾರದಲ್ಲಿ ವಿರೋಧ ಪಕ್ಷದವರು ರಾಜಕಾರಣ ಮಾಡಬಾರದು, ತನಿಖೆಗೆ ಸಹಕರಿಸಬೇಕು.
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

> ಘಟನೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ನಡೆಸಿರುವ ಪೊಲೀಸ್ ಅಧಿಕಾರಿಗಳು ವರದಿ ಕೊಟ್ಟ ನಂತರ ಮುಂದಿನ ತನಿಖೆ ಬಗ್ಗೆ ನಿರ್ಧರಿಸಲಾಗುವುದು.
> **ಜಿ.ಪರಮೇಶ್ವರ**, ಗೃಹ ಸಚಿವ

‘ಹಿಂದೆಯೂ ಬ್ಯಾಗ್ ತಂದಿಟ್ಟಿದ್ದರು’

‘10 ಸೆಕೆಂಡ್ ಅಂತರದಲ್ಲಿ ಎರಡು ಬಾರಿ ಸ್ಫೋಟ ಸಂಭವಿಸಿದ್ದು, ಇದು ಹೊರಗಿನವರ ದುಷ್ಕೃತ್ಯ’ ಎಂದು ದಿ ರಾಮೇಶ್ವರಂ ಕೆಫೆ ವ್ಯವಸ್ಥಾಪಕ ನಿರ್ದೇಶಕರಾದ (ಎಂ.ಡಿ) ಎಸ್. ದಿವ್ಯಾ ಹೇಳಿದರು.

ಸ್ಫೋಟದ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ವಿದ್ಯುತ್ ಅವಘಡ ಹಾಗೂ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿಲ್ಲ. ಹೊರಗಡೆಯಿಂದ ತಂದಿಟ್ಟಿದ್ದ ಬ್ಯಾಗ್‌ನಿಂದ ಈ ಸ್ಫೋಟ ಸಂಭವಿಸಿದೆ’ ಎಂದರು.

‘ಈ ಹಿಂದೆಯೂ ಎರಡು ಬಾರಿ ಅನುಮಾನಾಸ್ಪದ ರೀತಿಯಲ್ಲಿ ಬ್ಯಾಗ್‌ಗಳು ಕೆಫೆಯಲ್ಲಿ ಪತ್ತೆಯಾಗಿದ್ದವು. ಈ ಬಗ್ಗೆ ಪೊಲೀಸರಿಗೂ ದೂರು ನೀಡಲಾಗಿತ್ತು. ಒಂದು ಬ್ಯಾಗ್‌ನಲ್ಲಿ ಮಡಿಕೆಗಳು ಇದ್ದವು. ಮತ್ತೊಂದು ಬ್ಯಾಗ್ ಅನ್ನು ಪೊಲೀಸರೇ ತೆಗೆದುಕೊಂಡು ಹೋಗಿದ್ದರು. ಇದಾದ ಕೆಲದಿನಗಳ ನಂತರ, ಇದೀಗ ಬ್ಯಾಗ್‌ನಿಂದಲೇ ಸ್ಫೋಟ ಸಂಭವಿಸಿದೆ’ ಎಂದು ಮಾಹಿತಿ ನೀಡಿದರು.

‘ಊಟಕ್ಕೆ ಬಂದಿದ್ದ ಐವರು ಸಹೋದ್ಯೋಗಿಗಳು’

‘ಗಾಯಾಳು ಸ್ವರ್ಣಾಂಬಾ ಹಾಗೂ ನಾಲ್ವರು ಸಹೋದ್ಯೋಗಿಗಳು ಮಧ್ಯಾಹ್ನ ಊಟಕ್ಕೆಂದು ಕೆಫೆಗೆ ಬಂದಿದ್ದರು. ಊಟ ತೆಗೆದುಕೊಂಡಿದ್ದರು. ಶಂಕಿತ ಕುಳಿತುಕೊಂಡು ಹೋಗಿದ್ದ ಕಟ್ಟೆ ಮೇಲೆಯೇ ಸ್ವರ್ಣಾಂಭಾ ಹಾಗೂ ನಾಲ್ವರು ಕುಳಿತಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸ್ವರ್ಣಾಂಬಾ ಅವರು ಕುಳಿತ ಕೆಲ ನಿಮಿಷಗಳಲ್ಲಿ ಬಾಂಬ್ ಸ್ಫೋಟಗೊಂಡಿತು. ಗಾಯಗೊಂಡವರು ಭಯದಲ್ಲಿ ದಿಕ್ಕಾಪಾಲಾಗಿ ಓಡಿ ಹೋದರು. ಸ್ವರ್ಣಾಂಬಾ ಅವರು ಸ್ಥಳದಲ್ಲೇ ಬಿದ್ದು ಒದ್ದಾಡುತ್ತಿದ್ದರು. ಅವರ ಬಟ್ಟೆಗಳು ಹರಿದಿದ್ದವು’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಗೌರಿ ಲಂಕೇಶ್ ಕೊಲೆ: ಆರೋಪಿಗೆ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ: ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಪ್ರಕರಣದ ಆರೋಪಿ ಎನ್. ಮೋಹನ್ ನಾಯಕ್‌ಗೆ ಜಾಮೀನು ಮಂಜೂರು ಮಾಡಿದ್ದ ಹೈಕೋರ್ಟ್ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಆರೋಪಿಗೆ ನೋಟಿಸ್ ಜಾರಿ ಮಾಡಿದೆ.



ಈ ಸಂಬಂಧ ಕರ್ನಾಟಕ ಸರ್ಕಾರದ ಪರ ವಕೀಲ ವಿ.ಎನ್. ರಘುಪತಿ ಅವರು ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಹಾಗೂ ಸತೀಶ್ಚಂದ್ರ ಶರ್ಮಾ ಅವರಿದ್ದ ಪೀಠವು ಆರೋಪಿಯಿಂದ ಪ್ರತಿಕ್ರಿಯೆ ಕೇಳಿತು.

ಮೃತರ ಸಹೋದರಿ ಕವಿತಾ ಲಂಕೇಶ್ ಅವರು ಸಲ್ಲಿಸಿದ್ದ ಅರ್ಜಿಯ ಮೇರೆಗೆ ನ್ಯಾಯಪೀಠವು ಜನವರಿಯಲ್ಲಿ ಆರೋಪಿಗೆ ನೋಟಿಸ್ ನೀಡಿತ್ತು. ಕವಿತಾ ಪರ ವಕೀಲೆ ಅಪರ್ಣಾ ಭಟ್ ವಾದ ಮಂಡಿಸಿದ್ದರು. ನ್ಯಾಯಾಲಯವು ಎರಡೂ ಅರ್ಜಿಗಳನ್ನು ಒಟ್ಟಿಗೆ ವಿಚಾರಣೆ ಮಾಡಲು ನಿರ್ಧರಿಸಿದೆ. ಏಪ್ರಿಲ್ 9ರಂದು ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ತಿಳಿಸಿದೆ.

ಆರೋಪಿಗೆ ಹೈಕೋರ್ಟ್ 2023ರ ಡಿಸೆಂಬರ್ 7ರಂದು ಜಾಮೀನು ನೀಡಿತ್ತು.

ನಿಗಮ–ಮಂಡಳಿ ನೇಮಕದಲ್ಲಿ ನೇಕಾರರ ನಿರ್ಲಕ್ಷ್ಯ: ಆಕ್ರೋಶ

ಬೆಂಗಳೂರು: ನಿಗಮ, ಮಂಡಳಿಗಳಿಗೆ ನಾಮನಿರ್ದೇಶನ ಮಾಡುವಾಗ ರಾಜ್ಯ ಸರ್ಕಾರವು ನೇಕಾರ ಸಮುದಾಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ ಎಂದು ಕೈಮಗ್ಗ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಲ್.ಆರ್. ಅನಂತ್ ಬೇಸರ ವ್ಯಕ್ತಪಡಿಸಿದ್ದಾರೆ.

‘ರಾಜ್ಯದಲ್ಲಿ ದೇವಾಂಗ, ಪದ್ಮಸಾಲಿ, ಕುರುಹಿನ ಶೆಟ್ಟಿ, ಪಟ್ವೇಗಾರ್ ಹೀಗೆ ನಾನಾ ಹೆಸರುಗಳಲ್ಲಿ ನೇಕಾರ ಸಮುದಾಯವಿದ್ದು, 75 ಲಕ್ಷ ಜನಸಂಖ್ಯೆ ಹೊಂದಿದೆ. ಇದು ಕುರುಬ ಸಮುದಾಯಕ್ಕಿಂತ ಅಧಿಕವಾಗಿದೆ. 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ನೇಕಾರರ ಸಮುದಾಯದ ಒಬ್ಬರಿಗೂ ಕಾಂಗ್ರೆಸ್ ಟಿಕೆಟ್ ನೀಡಿರಲಿಲ್ಲ. ಆದರೂ, ಉತ್ತರ ಕರ್ನಾಟಕ ಭಾಗದಲ್ಲಿ 37 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲು ನೇಕಾರರು ಕಾರಣರಾಗಿದ್ದಾರೆ’ ಎಂದಿದ್ದಾರೆ.

ಬೆಳಗಾವಿ ಮತ್ತು ವಿಜಯಪುರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೇಕಾರರು ಇರುವುದರಿಂದ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಈ ಸಮುದಾಯದವರಿಗೆ ಟಿಕೆಟ್ ನೀಡಬೇಕು. ಇಲ್ಲದೇ ಹೋದರೆ ಅದರ ಪರಿಣಾಮವನ್ನು ಕಾಂಗ್ರೆಸ್ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಜಾತಿ ಗಣತಿ ವರದಿ ಸ್ವೀಕಾರವು ಅಶಾಂತಿಗೂ ಕಾರಣವಾಗಬಹುದು

ಬೆಂಕಿ ಜತೆಗೆ ಸರ್ಕಾರದ ಆಟ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಜಾತಿ ಗಣತಿ ವರದಿ ಪಡೆಯುವ ಮೂಲಕ ಬೆಂಕಿಯ ಜೊತೆ ಆಟವಾಡಲು ಹೊರಟಿದೆ. ಇದು ಅಶಾಂತಿಗೂ ಕಾರಣವಾಗಲಿದೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಜಾತ್ಯತೀತ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆ ಹತ್ತಿರ ಬಂದಾಗ ಜಾತಿಗಳ ಮೇಲೆ ಪ್ರೀತಿ ಉಕ್ಕುತ್ತದೆ. ಜಾತಿ ಸಮಾವೇಶ ನಡೆಸುವುದು, ಸುಳ್ಳು ಆಶ್ವಾಸನೆ ಕೊಡುವುದನ್ನು ಮಾಡುತ್ತಾರೆ. ಸಿದ್ದರಾಮಯ್ಯ ಅವರು ಎಲ್ಲ ಜಾತಿಗಳ ಶಿಕ್ಷಣ ಮತ್ತು ಸಾಮಾಜಿಕ ಅಧ್ಯಯನ ಮಾಡಲು 2015ರಲ್ಲಿ ಸೂಚಿಸಿದ್ದರು. ಅವರ ಉದ್ದೇಶ ಬೇರೆ ಇತ್ತು. ಜಾತಿ ಗಣತಿ ಮಾಡುವ ಅಧಿಕಾರ ಯಾರದ್ದು ಎಂಬ ವಿಚಾರ ಸುಪ್ರೀಂ ಕೋರ್ಟ್ ಮುಂದಿದೆ. ಅದನ್ನು ತಪ್ಪಿಸಲು ಇವರು ಶೈಕ್ಷಣಿಕ, ಸಾಮಾಜಿಕ ಅಧ್ಯಯನ ಅಂತ ಹೇಳಿದರು. ಉದ್ದೇಶವೇ ಒಂದು ಆದೇಶವೇ ಒಂದು ಆಗಿರುವುದರಿಂದ ಈ ಗೊಂದಲ ಸೃಷ್ಟಿಯಾಯಿತು ಎಂದರು.

‘ಜಾತಿ ಸಮೀಕ್ಷೆಗೆ ನಮ್ಮ ವಿರೋಧವಿಲ್ಲ. ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದವರನ್ನು ಮೇಲೆತ್ತಬೇಕು ಎಂಬ ಕಾರಣಕ್ಕೆ ನಮ್ಮ ಸರ್ಕಾರ ಇದ್ದಾಗ, ಪರಿಶಿಷ್ಟ ಜಾತಿ– ಪಂಗಡದವರ ಮೀಸಲಾತಿ ಹೆಚ್ಚಿಸಿದ್ದೇವೆ. ಹಿಂದುಳಿದವರಲ್ಲಿ ಅತಿ ಹಿಂದುಳಿದವರಿಗೆ ಮೀಸಲಾತಿ ಪ್ರಯೋಜನ ಸಿಗುತ್ತಿಲ್ಲ. ಅವರಿಗೆ ಸೌಲಭ್ಯ ಸಿಗಬೇಕು. ವರದಿಯನ್ನು ಮುಖ್ಯಮಂತ್ರಿ ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು. ಬಳಸಿಕೊಂಡರೆ ಅದು ಅಕ್ಷಮ್ಯ ಅಪರಾಧ’ ಎಂದು ಹೇಳಿದರು.

‘ವರದಿ ಬಗ್ಗೆ ಸಂಪುಟದ ಸಚಿವರೇ ಅಪಸ್ವರ ಎತ್ತಿದ್ದಾರೆ. ನಿಮ್ಮ ಸಂಪುಟದಲ್ಲಿ ಒಗ್ಗಟ್ಟಿಲ್ಲವೇ’ ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ ಬೊಮ್ಮಾಯಿ, ‘ತುಳಿತಕ್ಕೊಳಗಾದವರ ಜೊತೆ ಆಟ ಆಡುವುದು ಸರಿಯಲ್ಲ. ಸಮಾಜದಲ್ಲಿ ಗೊಂದಲ ಉಂಟು ಮಾಡುವ ಕೆಲಸ ಮಾಡಬೇಡಿ’ ಎಂದರು.

‘ಜಾತಿ ಗಣತಿ ವರದಿ ವಿರೋಧಿಸಿ ಹೋರಾಟ’

‘ಜಾತಿ ಗಣತಿ ವರದಿಯು ಅವೈಜ್ಞಾನಿಕವಾಗಿದ್ದು, ಇದರ ವಿರುದ್ಧ ರಾಜ್ಯದಾದ್ಯಂತ ಹೋರಾಟ ಮಾಡಲಾಗುವುದು’ ಎಂದು ರಾಜ್ಯ ಒಕ್ಕಲಿಗರ ಹೋರಾಟ ಸಮಿತಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಗಾ.ನಂ. ಶ್ರೀಕಂಠಯ್ಯ ಹಾಗೂ ನಾಗರಾಜ ಯಲಚವಾಡಿ, ‘ಜಾತಿ ಗಣತಿ ವರದಿ ವಿರೋಧಿಸಿ ನಡೆಸಲಾಗುವ ಹೋರಾಟದ ರೂಪುರೇಷೆ ಬಗ್ಗೆ ಒಕ್ಕಲಿಗ ಸಮುದಾಯದ ಸ್ವಾಮೀಜಿಗಳು, ಸಚಿವರು, ಶಾಸಕರು, ಸಂಸದರು ಹಾಗೂ ಸಮುದಾಯದ ಹಿರಿಯರ ಜತೆಗೆ ಚರ್ಚಿಸಲಾಗುವುದು. ಎಚ್. ಕಾಂತರಾಜ ಆಯೋಗವು ಅನುಕೂಲಕ್ಕೆ ತಕ್ಕಂತೆ ಸಮೀಕ್ಷೆ ನಡೆಸಿದ್ದು, ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಪಡೆದಿಲ್ಲ. ಆಯೋಗವು 2014-2015ರಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿದೆ. ಈಗ ಸುಮಾರು 10 ವರ್ಷಗಳು ಕಳೆದಿರುವುದರಿಂದ ಈ ವರದಿಯನ್ನು ತಿರಸ್ಕರಿಸಬೇಕು’ ಎಂದು ಆಗ್ರಹಿಸಿದರು.

‘ಒಕ್ಕಲಿಗ ಸಮಾಜದ ಎಲ್ಲ ಉಪಪಂಗಡಗಳನ್ನು ಒಟ್ಟಿಗೆ ಸೇರಿಸಿ, ವರದಿಯನ್ನು ನೀಡಬೇಕೆಂದು ಆಯೋಗಕ್ಕೆ ಮನವಿ ಮಾಡಲಾಗಿದ್ದರೂ ಆಯೋಗ ಅದನ್ನು ಪರಿಗಣಿಸಿಲ್ಲ. ಆಯೋಗದ ವರದಿಯೇ ಕಾನೂನುಬಾಹಿರವಾಗಿದೆ’ ಎಂದು ಹೇಳಿದರು.

‘ವೈಜ್ಞಾನಿಕವಾಗಿ ಜಾತಿ ಗಣತಿ ನಡೆಸಿ’

‘ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು, ಮತ್ತೊಮ್ಮೆ ವೈಜ್ಞಾನಿಕವಾಗಿ ಜನಗಣತಿಯನ್ನು ಮಾಡಿಸಬೇಕು. ಸಂವಿಧಾನದ ಪ್ರಕಾರ ಜಾತಿ ಜನಗಣತಿ ಮಾಡುವ ಅಧಿಕಾರ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಇಲ್ಲ’ ಎಂದು ವಿಶ್ವ ವಿಪ್ರತ್ರಯೀ ಪರಿಷತ್ ಅಧ್ಯಕ್ಷ ಎಸ್. ರಘುನಾಥ್ ತಿಳಿಸಿದ್ದಾರೆ.

‘ಎಚ್. ಕಾಂತರಾಜ ಆಯೋಗದ ವರದಿಯು ಹಲವು ಅನುಮಾನ ಮೂಡಿಸಿದೆ. ಬ್ರಾಹ್ಮಣ ಸಮುದಾಯದ ಜನಗಣತಿಯ ಅವಶ್ಯ ಇದ್ದಲ್ಲಿ ಅದನ್ನು ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಮೂಲಕ ಮಾಡಿಸಬಹುದು. ಇಲ್ಲವಾದಲ್ಲಿ ಆ ಜವಾಬ್ದಾರಿಯನ್ನು ನಮ್ಮ ಪರಿಷತ್ತಿಗೆ ವಹಿಸಬಹುದು. ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳ ಬಗ್ಗೆ ನಮ್ಮ ವಿರೋಧವಿಲ್ಲ’ ಎಂದಿದ್ದಾರೆ.

‘ಸಂಪುಟದಲ್ಲಿ ಚರ್ಚಿಸಿ ತೀರ್ಮಾನ’

ಹಾಸನ: ‘ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ಸಲ್ಲಿಸಿರುವ ಜಾತಿ ಗಣತಿ ವರದಿಯನ್ನು ಸ್ವೀಕರಿಸಿದ್ದು, ಅದರಲ್ಲಿ ಏನಿದೆ ಎಂಬುದು ಗೊತ್ತಿಲ್ಲ. ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎಲ್ಲರ ಅಭಿಪ್ರಾಯವನ್ನು ಪಡೆದೇ ವರದಿಯನ್ನು ಸಿದ್ಧಪಡಿಸಲಾಗಿದೆ ಎಂದು ಅಧ್ಯಕ್ಷರು ತಿಳಿಸಿದ್ದಾರೆ’ ಎಂದರು.

ಪ್ರಮಾಣಪತ್ರ ಸಲ್ಲಿಸಲು ನಿರ್ದೇಶನ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಸಮೀಕ್ಷೆಯ ವರದಿ ಸ್ವೀಕರಿಸಿರುವ ಕುರಿತ ಮಾಹಿತಿ ಒದಗಿಸಿ ಪ್ರಮಾಣಪತ್ರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಶುಕ್ರವಾರ ನಿರ್ದೇಶಿಸಿದೆ.

ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವಂತೆ (ಜಾತಿ ಗಣತಿ) ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚಿಸಿ 2014ರ ಜ.23ರಂದು ರಾಜ್ಯ ಸರ್ಕಾರ ಹೊರಡಿಸಿದ ಆದೇಶ ರದ್ದು ಕೋರಿ ಬೀದರ್‌ನ ಶಿವರಾಜ್ ಕಣಶೆಟ್ಟಿ ಮತ್ತಿತರರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರ ನೇತೃತ್ವದ ವಿಭಾಗೀಯ ಪೀಠ ಈ ಸೂಚನೆ ನೀಡಿ ವಿಚಾರಣೆಯನ್ನು ಮಾ.5ಕ್ಕೆ ಮುಂದೂಡಿದೆ.

ಅರ್ಜಿದಾರರ ಪರ ವಕೀಲರ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ, ಆಯೋಗದ ವರದಿಯನ್ನು ಸರ್ಕಾರ ಸ್ವೀಕರಿಸಿರುವ ಬಗ್ಗೆ ಸತ್ಯ ಸಂಗತಿಗಳನ್ನು ತಿಳಿಸಿ ಪ್ರಮಾಣ ಪತ್ರ ಸಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಿತು.

ಬಿಜೆಪಿಯಿಂದ ₹ 50 ಕೋಟಿ ಆಫರ್: ಸಿ.ಎಂ ಆರೋಪ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬಿಜೆಪಿಯವರು ಕಾಂಗ್ರೆಸ್ ಶಾಸಕರ ಖರೀದಿಗೆ ಯತ್ನಿಸುತ್ತಿದ್ದಾರೆ. ಒಬ್ಬೊಬ್ಬರಿಗೆ ₹ 50 ಕೋಟಿ ಆಫರ್ ಮಾಡಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನಾವು ಬಹುಮತ ಪಡೆದಿದ್ದರೂ ಸರ್ಕಾರ ಅಲುಗಾಡಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಕಾಂಗ್ರೆಸ್ ಶಾಸಕರಾರೂ ಆಮಿಷಕ್ಕೆ ಬಗ್ಗಿಲ್ಲ’ ಎಂದರು.

‘ಸರ್ಕಾರಗಳನ್ನು ಬೀಳಿಸುವುದು ಬಿಜೆಪಿಯವರಿಗೆ ಅಭ್ಯಾಸವಾಗಿ ಹೋಗಿದೆ. ಅವರು ರಾಜ್ಯದಲ್ಲಿ ಜನರ ಆಶೀರ್ವಾದ ಪಡೆದು, ನೇರವಾಗಿ ಯಾವತ್ತೂ ಅಧಿಕಾರಕ್ಕೆ ಬಂದೇ ಇಲ್ಲ. ಆಪರೇಷನ್ ಕಮಲ ಮಾಡಿಯೇ ಬಂದವರು. ದೇಶದ ಕೆಲವೆಡೆ ಸರ್ಕಾರ ಅತಂತ್ರಗೊಳಿಸುತ್ತಿರುವಂತೆ ಕರ್ನಾಟಕದಲ್ಲೂ ಅವರು ಪ್ರಯತ್ನಿಸುತ್ತಿರುವುದು ಸತ್ಯ’ ಎಂದರು.

‘ನೀತಿ ಆಯೋಗದವರು ಬಡತನದ ಕುರಿತು ನೀಡಿರುವ ವರದಿಯನ್ನು ಪರಿಶೀಲಿಸಬೇಕು. ಅದೇನೂ ಸಮೀಕ್ಷಾ ವರದಿಯಲ್ಲ. ದೇಶದಲ್ಲಿ ಬಡತನದ ಪ್ರಮಾಣ ಶೇ 5ರಷ್ಟು ಮಾತ್ರ ಇದೆ ಎಂದು ಹೇಳಲಾಗಿದೆ. ಅದು ಸತ್ಯವೋ, ಅಸತ್ಯವೋ ಎನ್ನುವುದು ಗೊತ್ತಾಗಬೇಕು. ಬಡತನ ಕಡಿಮೆಯಾದರೆ ಖುಷಿ ಪಡುವಂಥ ವಿಚಾರವೇ. ಜನ ಹಾಗೂ ಪರಿಸ್ಥಿತಿ ನೋಡಿದರೆ ಬಡತನ ದೊಡ್ಡ ಪ್ರಮಾಣದಲ್ಲಿ ಕಡಿಮೆಯಾಗಿರುವಂತೆ ಕಾಣಿಸುತ್ತಿಲ್ಲ’ ಎಂದು ಪ್ರತಿಕ್ರಿಯಿಸಿದರು.

ನಳಿನ್, ಪೂಂಜಾ ವಿರುದ್ಧ ಸೌಜನ್ಯ ತಾಯಿ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮಗಳ ಕೊಲೆ ಹಾಗೂ ಅತ್ಯಾಚಾರ ಪ್ರಕರಣದ ಉನ್ನತ ಮಟ್ಟದ ತನಿಖೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿ ಮಾಡಿಸುವುದಾಗಿ ಸಂಸದ ನಳಿನ್ ಕುಮಾರ್ ಕಟೀಲು ಹಾಗೂ ಸ್ಥಳೀಯ ಶಾಸಕ ಹರೀಶ್ ಪೂಂಜಾ ವಾಗ್ದಾನ ಮಾಡಿದ್ದರು. ಬಳಿಕ ಅದನ್ನು ಮರೆತೇಬಿಟ್ಟರು. ಅವರು ನಮ್ಮ ಪರವಾಗಿ ನಿಲ್ಲಲಿಲ್ಲ’ ಎಂದು ಧರ್ಮಸ್ಥಳದ ಸೌಜನ್ಯ ತಾಯಿ ಕುಸುಮಾವತಿ ಆಕ್ರೋಶ ವ್ಯಕ್ತಪಡಿಸಿದರು.

ಸೌಜನ್ಯ ಕೊಲೆ ಪ್ರಕರಣದ ಸಮಗ್ರ ತನಿಖೆಗೆ ಆಗ್ರಹಿಸಿ ಕರ್ನಾಟಕ ಭವನದ ಸಮೀಪದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ದೆಹಲಿ ಚಲೋ’ ಪ್ರತಿಭಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಮಗಳ ಕೊಲೆಯಾಗಿ 12 ವರ್ಷಗಳು ಕಳೆದಿವೆ. ನಾವು 12 ವರ್ಷಗಳಿಂದ ನಿರಂತರ ಹೋರಾಟ ಮಾಡುತ್ತಿದ್ದೇವೆ. ಆದರೆ, ಅತ್ಯಾಚಾರಿಗಳು ನಿರಾಂತಕವಾಗಿ ಓಡಾಡುತ್ತಿದ್ದಾರೆ. ಅವರಿಗೆ ಕಠಿಣ ಶಿಕ್ಷೆ ಆಗಬೇಕು. ಜನಪ್ರತಿನಿಧಿಗಳು ಜನಾಂದೋಲನದಲ್ಲಿ ಭಾಷಣ ಮಾಡಿ ಹೋಗಿದ್ದಾರೆ. ಆ ಬಳಿಕ ನಮ್ಮ ನೆರವಿಗೆ ಬಂದಿಲ್ಲ. ಪ್ರಧಾನಿ ಅವರನ್ನು ಭೇಟಿ ಮಾಡಬೇಕು ಎಂಬ ಉದ್ದೇಶದಿಂದ ದೆಹಲಿಗೆ ಬಂದಿದ್ದೇವೆ’ ಎಂದರು.

ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಮಾತನಾಡಿ, ‘ಪ್ರಕರಣದ ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಿ ರಾಜಕಾರಣಿಗಳು ಅನೇಕ ಬಾರಿ ಮನವಿ ಸಲ್ಲಿಸಿದ್ದೇವೆ. ಹೋರಾಟಗಳನ್ನು ಮಾಡಿದ್ದೇವೆ. ಅತ್ಯಾಚಾರಿಗಳನ್ನು ಪತ್ತೆ ಹಚ್ಚಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಹಲವು ರಾಜಕಾರಣಿಗಳು ಅತ್ಯಾಚಾರಿಗಳ ಬೆಂಬಲಕ್ಕೆ ನಿಂತಿದ್ದಾರೆ. ರಾಜ್ಯದಲ್ಲಿ ಕಾನೂನು ವಿರೋಧಿ ಸರ್ಕಾರ ಇದೆ’ ಎಂದು ಕಿಡಿಕಾರಿದರು.

‘ಧರ್ಮಸ್ಥಳದಲ್ಲಿ ಧರ್ಮದ ಹೆಸರಿನಲ್ಲಿ ಧಾರ್ಮಿಕ ಭಯೋತ್ಪಾದನೆ ನಡೆಯುತ್ತಿದೆ. ಸೌಜನ್ಯ ಕೊಲೆ ಪ್ರಕರಣದ ಸಾಕ್ಷ್ಯನಾಶ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಹೋರಾಟದ ಕಿಚ್ಚು ಮತ್ತಷ್ಟು ಹೆಚ್ಚಲಿದೆ. ಶನಿವಾರ ಸಹ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತೇವೆ’ ಎಂದರು.

ರೈತರ ಹೋರಾಟದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ನಿಷೇಧಾಜ್ಞೆ ಹೇರಲಾಗಿದ್ದು, ಪ್ರತಿಭಟನೆಗೆ ಅವಕಾಶ ಇಲ್ಲ ಎಂದು ಪೊಲೀಸರು ಪ್ರತಿಭಟನಾಕಾರರ ಮನವೊಲಿಸಿದರು. ಬಳಿಕ ಪ್ರತಿಭಟನಾಕಾರರು ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ ₹12,815 ಕೋಟಿ ಜಿಎಸ್‌ಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಫೆಬ್ರುವರಿಯಲ್ಲಿ ₹12,815 ಕೋಟಿ ಸಂಗ್ರಹವಾಗಿದೆ.

2023ರ ಫೆಬ್ರುವರಿಯಲ್ಲಿ ₹10,809 ಕೋಟಿ ಸಂಗ್ರಹವಾಗಿತ್ತು. ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳು ಮೊದಲ ಎರಡು ಸ್ಥಾನದಲ್ಲಿವೆ.

ಕೆರೆಗಳಿಗೆ ನೀರು ಹರಿಸುವ ಬೆಳೆಗೆರೆ ನಾರಾಯಣಪುರ ಬಲದಂಡೆ

ಕಾಲುವೆ ಸ್ವಚ್ಛತೆಗೆ ಗ್ರಾಮಸ್ಥರ ‘ಶ್ರಮದಾನ’

• ತಿಮ್ಮಯ್ಯ ಜೆ.

ಪರಶುರಾಂಪುರ (ಚಿತ್ರದುರ್ಗ): ವೇದಾವತಿ ನದಿ ನೀರನ್ನು ವಿವಿಧ ಕೆರೆಗಳಿಗೆ ಹರಿಸುವ ಬೆಳಗೆರೆ ನಾರಾಯಣಪುರ ಬಲದಂಡೆ ಕಾಲುವೆಯಲ್ಲಿ ತುಂಬಿಕೊಂಡಿರುವ ಹೂಳು ಮತ್ತು ಕಸ-ಕಡ್ಡಿಯನ್ನು ಅಚ್ಚುಕಟ್ಟು ಭಾಗದ ರೈತರೇ ಸ್ವಯಂ ಪ್ರೇರಣೆಯಿಂದ ಸ್ವಚ್ಛಗೊಳಿಸುವ ಕೆಲಸ ಮಾಡುತ್ತಿದ್ದಾರೆ.

ವಾಣಿವಿಲಾಸ (ವಿ.ವಿ) ಸಾಗರ ಜಲಾಶಯದಲ್ಲಿ ಸಂಗ್ರಹವಾದ ನೀರನ್ನು ವೇದಾವತಿ ನದಿಗೆ ಬಿಟ್ಟಾಗ ಹಿರಿಯೂರು ತಾಲ್ಲೂಕಿನ ಸಿಡ್ಲಯ್ಯನ ಕೋಟೆ ಬಳಿಯಿಂದ ಸಮೀಪದ ತಿಮ್ಮಣ್ಣ ನಾಯಕನಕೋಟೆ, ಗೋಸಿಕೆರೆ, ಚೌಳೂರು, ದೊಡ್ಡಬೀರನಹಳ್ಳಿ, ಹೊನ್ನಯ್ಯನರೊಪ್ಪ, ಓಬಳಾಪುರ, ಕೊನಿಗರಹಳ್ಳಿ ಮತ್ತಿತರ ಗ್ರಾಮಗಳ ರೈತರಿಗೆ ಅನುಕೂಲ ಕಲ್ಪಿಸಲು ಈ ಕಾಲುವೆ ತೋಡಲಾಗಿದೆ.

ಆದರೆ, ಕೆಲವು ವರ್ಷಗಳಿಂದ ನೈಸರ್ಗಿಕವಾದ ಈ ಕಾಲುವೆಯು ಸಂಪೂರ್ಣ ಹಾಳಾಗಿದ್ದು, ಗ್ರಾಮಸ್ಥರೇ ಸ್ವಚ್ಛಗೊಳಿಸುತ್ತಿದ್ದಾರೆ.

ಕಾಲುವೆ ಹಾಳಾಗಿರುವ ಕಾರಣ ಬೇಸಿಗೆ ವೇಳೆ ಕೆರೆಗಳನ್ನು ತುಂಬಿಸಲೂ ಆಗುತ್ತಿಲ್ಲ. ಅಂದಾಜು 45 ಕಿ.ಮೀ. ವ್ಯಾಪ್ತಿಯ ಈ ಕಾಲುವೆಯಲ್ಲಿ ಹೂಳು ತುಂಬಿದ್ದು, ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನ ಆಗಿರಲಿಲ್ಲ.

2022ರಲ್ಲಿ ಭಾರಿ ಮಳೆಯಾಗಿದ್ದರಿಂದ ಕೆರೆಗಳು ತುಂಬಿ ಈವರೆಗೆ ನೀರಿನ ಸಮಸ್ಯೆ ತಲೆದೋರಿರಲಿಲ್ಲ. ಪ್ರಸಕ್ತ ವರ್ಷ ಮಳೆಯ ಕೊರತೆ ಆಗಿದ್ದು, ಕೆರೆಗಳಲ್ಲಿ ನೀರು ಖಾಲಿಯಾಗಿದೆ. ಅಂತರ್ಜಲ ಮಟ್ಟ ಕುಸಿದಿದೆ. ರೈತರು ಅಡಿಕೆ, ತೆಂಗು, ದಾಳಿಂಬೆ, ಪಪ್ಪಾಯ ತೋಟ ಉಳಿಸಿಕೊಳ್ಳುವುದರ ಜೊತೆಗೆ ರಾಗಿ, ಶೇಂಗಾ, ಮೆಕ್ಕೆಜೋಳ ಬೆಳೆಯಲು ಹೆಣಗಾಡಬೇಕಾದ ಸ್ಥಿತಿ ಇದೆ. ಕೆಲವೇ ದಿನಗಳಲ್ಲಿ ನದಿಗೆ ನೀರು ಹರಿಸಲಿರುವ ಕಾರಣ ಗ್ರಾಮಸ್ಥರು ಕಾಲುವೆಯಲ್ಲಿ ಬೆಳೆದಿರುವ ಗಿಡ–ಗಂಟಿ, ತುಂಬಿಕೊಂಡಿರುವ ಹೂಳು, ಕಸ-ಕಡ್ಡಿ ತೆರವು ಕಾರ್ಯದಲ್ಲಿ ನಿರತರಾಗಿದ್ದಾರೆ.

ದೊಡ್ಡಬೀರನ ಹಳ್ಳಿಯಿಂದ ಜೆಸಿಬಿ ಯಂತ್ರ, ತಿಮ್ಮಣ್ಣ ನಾಯಕನಕೋಟೆಯಿಂದ ಹುಲ್ಲು ಕಟಾವು ಯಂತ್ರ, ಹೊನ್ನಯ್ಯನರೊಪ್ಪ ಮತ್ತು ಓಬಳಾಪುರದಿಂದ ಇತರೆ ಸಾಧನ ಗಳ ವ್ಯವಸ್ಥೆ ಮಾಡಿಕೊಂಡು ಸಾಮೂಹಿಕವಾಗಿ ಸ್ವಚ್ಛತಾ ಕೆಲಸ ಕೈಗೊಂಡಿದ್ದೇವೆ ಎಂದು ರೈತರಾದ ದೇವರಾಜ, ಗುರುಸ್ವಾಮಿ, ಪಟೇಲ್, ರವಿ, ಪ್ರಮೋದ್, ತಿಪ್ಪೇಸ್ವಾಮಿ, ನರೇಂದ್ರ, ಉಮಾಮಹೇಶ್ವರಪ್ಪ ತಿಳಿಸಿದರು.

‘ರೈತರೆಲ್ಲಾ ಸೇರಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯನ್ನು ಸಂಪರ್ಕಿಸಿ ಕಾಲುವೆ ಅಭಿವೃದ್ಧಿಗಾಗಿ ಮನವಿ ಸಲ್ಲಿಸಿದ್ದೆವು. ಆದರೆ, ಅದಕ್ಕೆ ಅನುದಾನ ಇಲ್ಲ ಎಂದು ಅಧಿಕಾರಿಗಳು ಕೈಚೆಲ್ಲಿದರು. ಸುಮ್ಮನೆ ಕುಳಿತರೆ ಅಲ್ಪಸ್ವಲ್ಪ ನೀರೂ ದಕ್ಕುವುದಿಲ್ಲ ಎಂದು ಊರವರೇ ಹಣ ಸಂಗ್ರಹಿಸಿ ಯಂತ್ರಗಳನ್ನು ಬಾಡಿಗೆಗೆ ತಂದಿದ್ದೇವೆ. ನಿತ್ಯವೂ 40-50 ಜನ ಶ್ರಮದಾನವನ್ನೂ ಮಾಡುತ್ತಿದ್ದೇವೆ’ ಎಂದು ಅವರು ಹೇಳಿದರು.



ಪರಶುರಾಂಪುರ ಹೋಬಳಿಯ ರೈತರು ನಾರಾಯಣಪುರ ಬಲದಂಡೆ ಕಾಲುವೆ ಸ್ವಚ್ಛಗೊಳಿಸುವಲ್ಲಿ ನಿರತರಾಗಿರುವುದು


> ನಾರಾಯಣಪುರ ಬಲದಂಡೆ ಕಾಲುವೆಯನ್ನು ಸಂಪೂರ್ಣ ಕಾಂಕ್ರೀಟ್ ಕಾಲುವೆಯಾಗಿ ಪರಿವರ್ತಿಸ ಬೇಕು. ವೇದಾವತಿ ನದಿ ನೀರು ಕಾಲುವೆ ಮೂಲಕ ಹರಿದು ಈ ಭಾಗದ ಕೆರೆಗಳು ತುಂಬುವಂತಾಗಬೇಕು
> **ರಂಗಸ್ವಾಮಿ ಎಸ್.**, ತಿಮ್ಮಣ್ಣ ನಾಯಕನಕೋಟೆ

> ಕಾಂಕ್ರೀಟ್ ಕಾಲುವೆ ಮಾಡಲು ಪ್ರಸ್ತಾವನೆ ಕಳುಹಿಸಲಾಗಿದೆ. ಅನುದಾನ ಬಂದ ತಕ್ಷಣ ಕಾಮಗಾರಿ ಪ್ರಾರಂಭಿಸಲಾಗುವುದು
> **ರವಿಕುಮಾರ,** ಸಣ್ಣ ನಿರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಅಧಿಕಾರಿ

ರಾಜ್ಯಸಭೆ: 31 ಮಂದಿ ಕೋಟ್ಯಧೀಶರು

ನವದೆಹಲಿ (ಪಿಟಿಐ): ರಾಜ್ಯಸಭೆಯ 225 ಸದಸ್ಯರ ಒಟ್ಟು ಆಸ್ತಿ ₹19,602 ಕೋಟಿ. ಈ ಪೈಕಿ 31 ಮಂದಿ ಕೋಟ್ಯಧೀಶರು ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ತಿಳಿಸಿದೆ. ಇದೇ ವೇಳೆ, ಒಟ್ಟು ಸದಸ್ಯರ ಪೈಕಿ ವಿವಿಧ ಪಕ್ಷಗಳ 75 ಮಂದಿ (ಶೇ 33ರಷ್ಟು) ವಿರುದ್ಧ ಕ್ರಿಮಿನಲ್ ಅಪರಾಧ ಪ್ರಕರಣಗಳು ದಾಖಲಾಗಿವೆ. 40 ಸದಸ್ಯರ (ಶೇ 18ರಷ್ಟು) ವಿರುದ್ಧ ಕೊಲೆ, ಕೊಲೆ ಯತ್ನ ಸೇರಿದಂತೆ ಹಲವು ಗಂಭೀರ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದೆ. ಇಬ್ಬರು ಸದಸ್ಯರ ವಿರುದ್ಧ ಐಪಿಸಿ ಸೆಕ್ಷನ್ 302ರ ಅಡಿಯಲ್ಲಿ ಕೊಲೆ ಪ್ರಕರಣ ಮತ್ತು ನಾಲ್ವರ ವಿರುದ್ಧ ಐಪಿಸಿ ಸೆಕ್ಷನ್ 307ರ ಅಡಿಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿರುವುದಾಗಿ ಅವರು ಅಫಿಡವಿಟ್‌ನಲ್ಲಿ ಘೋಷಿಸಿಕೊಂಡಿದ್ದಾರೆ ಎಂದು ತಿಳಿಸಿದೆ.

ರಾಜ್ಯಸಭಾ ಸದಸ್ಯರ ಒಟ್ಟು ಆಸ್ತಿ (₹ ಕೋಟಿಗಳಲ್ಲಿ)




ಪಕ್ಷ	ಒಟ್ಟು ರಾಜ್ಯಸಭಾ ಸದಸ್ಯರು	ಕ್ರಿಮಿನಲ್ ಪ್ರಕರಣ ದಾಖಲಾಗಿರುವವರ ಸಂಖ್ಯೆ (ಶೇ)
ಬಿಜೆಪಿ	90	23
ಕಾಂಗ್ರೆಸ್	28	50
ಟಿಎಂಸಿ	13	38
ಆರ್‌ಜೆಡಿ	6	67
ಸಿಪಿಎಂ	5	80
ಎಎಪಿ	10	30
ವೈಎಸ್‌ಆರ್‌ಸಿಪಿ	11	36
ಡಿಎಂಕೆ	10	20

100 ಕೋಟಿಗೂ ಅಧಿಕ ಆಸ್ತಿ ಹೊಂದಿರುವ ಸದಸ್ಯರ ಸಂಖ್ಯೆ



ಅಪರಾಧ ಹಿನ್ನೆಲೆ ಹೊಂದಿರುವ ಸದಸ್ಯರ ಸಂಖ್ಯೆ



www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸಹಚರ್ಯದಿಂದ ಸಂಪ್ರೀತ ಬದುಕಿನ ಪ್ರೇರಣೆಯ ನುಡಿ



ಆಳ-ಅಗಲ ಎಲ್ಲರೂ ಇಲ್ಲಿ ಕೇಳಿ ಕೇಳಿಸಿಕೊಳ್ಳಲು ನೆರವಾಗಿ

₹2 ಸಾವಿರ ಮುಖಬೆಲೆ: ಶೇ 97.62ರಷ್ಟು ನೋಟು ವಾಪಸ್ 12
ಜ್ಞಾನವಾಪಿ: ಅರ್ಜಿ ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,745 ▲	22,338 ▲	₹64,480 (ಬೆಂಗಳೂರು) ▲	₹72,100 (ಬೆಂಗಳೂರು) ▲	82.91 ▼

ರಾಮೇಶ್ವರಂ ಕೆಫೆಯಲ್ಲಿ ಟೈಮರ್ ಐಇಡಿ • 10 ಜನರಿಗೆ ಗಾಯ • ಎನ್ಐಎ, ಸಿಸಿಬಿ ಜಂಟಿ ತನಿಖೆ

ಬೆಂಗಳೂರಿನಲ್ಲಿ ಬಾಂಬ್ ಸ್ಫೋಟ

ಪ್ರಜಾವಾಣಿ ವಾರ್ತೆ


ಬೆಂಗಳೂರು: ವೈಟ್‌ಫೀಲ್ಡ್ ಸಮೀಪದ ಬ್ರೂಕ್‌ಫೀಲ್ಡ್‌ನಲ್ಲಿರುವ 'ದಿ ರಾಮೇಶ್ವರಂ ಕೆಫೆ' ಹೋಟೆಲ್‌ನಲ್ಲಿ ಟೈಮರ್ ಚಾಲಿತ ಕಚ್ಚಾ ಬಾಂಬ್ (ಐಇಡಿ) ಸ್ಫೋಟಿಸಲಾಗಿದ್ದು, ಗ್ರಾಹಕರು ಸೇರಿ 10 ಮಂದಿ ಗಾಯಗೊಂಡಿದ್ದಾರೆ.

ದುಷ್ಕರ್ಮಿಗಳ ಕೃತ್ಯದ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆಯಡಿ (ಯುಎಪಿಎ) ಪ್ರಕರಣ ದಾಖಲಾಗಿದ್ದು, ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಹಾಗೂ ಸಿಸಿಬಿ ಪೊಲೀಸರು ಜಂಟಿಯಾಗಿ ತನಿಖೆ ಮುಂದುವರಿಸಿದ್ದಾರೆ.

ಗ್ರಾಹಕನ ಸೋಗಿನಲ್ಲಿ ಶುಕ್ರವಾರ ಹೋಟೆಲ್‌ಗೆ ಬಂದಿದ್ದ 30–35 ವರ್ಷದೊಳಗಿನ ವ್ಯಕ್ತಿ, ತಟ್ಟೆ ತೊಳೆಯುವ ಜಾಗದ ಪಕ್ಕದಲ್ಲಿ ಬ್ಯಾಗ್ ಇರಿಸಿ ಹೋಗಿದ್ದಾನೆ. ಅದರಲ್ಲಿದ್ದ ಟೈಮರ್ ಬಾಂಬ್, ಶುಕ್ರವಾರ ಮಧ್ಯಾಹ್ನ 12.55 ಗಂಟೆ ಸುಮಾರಿಗೆ ಸ್ಫೋಟಗೊಂಡಿದ್ದರಿಂದ ಗ್ರಾಹಕರು ಹಾಗೂ ಸಿಬ್ಬಂದಿ ದಿಕ್ಕಾಪಾಲಾಗಿ ಓಡಿದರು. ಗಾಯಗೊಂಡಿದ್ದ ಮಹಿಳೆಯೊಬ್ಬರು ಸ್ಥಳದಲ್ಲಿಯೇ ನರಳಾಡುತ್ತಾ ಬಿದ್ದಿದ್ದರು.

'ಎರಡು ಬಾರಿ ಸ್ಫೋಟ ಸಂಭವಿಸಿ ದೊಡ್ಡ ಶಬ್ದ ಬಂದಿತ್ತು. ಹೊಗೆ ದಟ್ಟವಾಗಿತ್ತು. ಮಹಿಳೆ ಸ್ವರ್ಣಾಂಬಾ ಸೇರಿ ಏಳು ಗ್ರಾಹಕರು ಹಾಗೂ ಮೂವರು ಸಿಬ್ಬಂದಿ ಗಾಯಗೊಂಡರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮಹಿಳೆ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಹೋಟೆಲ್ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಬ್ಯಾಗ್ ತಂದಿಟ್ಟಿದ್ದ ಶಂಕಿತನ ಬಗ್ಗೆ ಸುಳಿವು ಸಿಕ್ಕಿದ್ದು, ಆತನ ಪತ್ತೆಗಾಗಿ ಶೋಧ ಮುಂದುವರಿಸಲಾಗಿದೆ. ರಾಮೇಶ್ವರಂ ಕೆಫೆ ಕಡಿಮೆ ಅವಧಿಯಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿತ್ತು. ವೃತ್ತಿ ವೈಷಮ್ಯ ಅಥವಾ ಬೇರೆ ಕಾರಣಕ್ಕೆ ದುಷ್ಕರ್ಮಿಗಳು ಬಾಂಬ್ ಸ್ಫೋಟಿಸಿರುವ ಅನುಮಾನವಿದೆ' ಎಂದರು.




ಪೊಲೀಸ್ ಕಮಿಷನರ್ ಬಿ.ದಯಾನಂದ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಬಾಂಬ್ ಸ್ಫೋಟ ಸಂಭವಿಸಿದ್ದ ಸ್ಥಳದಲ್ಲಿದ್ದ ಅವಶೇಷಗಳನ್ನು ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

> **ರಾಜ್ಯದಲ್ಲಿ ಇಂತಹದ್ದು ನಡೆಯಬಾರದಿತ್ತು. ಮಂಗಳೂರಿನಲ್ಲಿ ಆದ ಬಳಿಕ ಪುನಃ ಇಂಥ ಘಟನೆ ನಡೆದಿದೆ. ಕೃತ್ಯ ಎಸಗಿದವರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಜರುಗಿಸಲಾಗುವುದು**
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಬ್ರ್ಯಾಂಡ್ ಬೆಂಗಳೂರು ರೂಪಿಸದೇ ಇದ್ದರೂ ಪರವಾಗಿಲ್ಲ, ಬಾಂಬ್ ಬೆಂಗಳೂರು ಸೃಷ್ಟಿಸಬೇಡಿ. ಕಾಂಗ್ರೆಸ್ ಸರ್ಕಾರದ ಓಲೈಕೆ ರಾಜಕಾರಣದಿಂದಲೇ ಬಾಂಬ್ ಸ್ಫೋಟ ನಡೆದಿದೆ**
>
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಚಿನಕುರಳಿ

ಪ್ರಕಾಶ್ ಶೆಟ್ಟಿ



1,093 ನಕಲಿ ಕ್ಲಿನಿಕ್‌ಗಳಿಗೆ ಬೀಗ

• ವರುಣ ಹೆಗಡೆ

ಬೆಂಗಳೂರು: ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳು, ಕ್ಲಿನಿಕ್‌ಗಳು, ಪ್ರಯೋಗಾಲಯಗಳು ಹಾಗೂ ನಕಲಿ ವೈದ್ಯರ ಪತ್ತೆ ಕಾರ್ಯ ಚುರುಕುಗೊಳಿಸಿರುವ ಆರೋಗ್ಯ ಇಲಾಖೆ, ರಾಜ್ಯದ ವಿವಿಧೆಡೆ ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸುತ್ತಿದ್ದ 1,093 ಕ್ಲಿನಿಕ್‌ಗಳಿಗೆ ಬೀಗ ಹಾಕಿಸಿದೆ.

ಭ್ರೂಣ ಲಿಂಗ ಪತ್ತೆ ಪರೀಕ್ಷೆ ಮತ್ತು ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ರಾಜ್ಯದ ವಿವಿಧೆಡೆ ಕಳೆದ ವರ್ಷ ವರದಿಯಾಗಿದ್ದವು. ಪರವಾನಗಿ ಇಲ್ಲದೆ, ನೋಂದಣಿ ಮಾಡದೆ ಹಾಗೂ ಅರ್ಹ ವಿದ್ಯಾರ್ಹತೆ ಇಲ್ಲದೆ ಕ್ಲಿನಿಕ್‌ಗಳನ್ನು ನಡೆಸುತ್ತಿರುವ ಬಗ್ಗೆಯೂ ಇಲಾಖೆಗೆ ದೂರುಗಳು ಸಲ್ಲಿಕೆಯಾಗಿದ್ದವು. ಅನಧಿಕೃತ ಚಿಕಿತ್ಸಾ ಕೇಂದ್ರಗಳ ಮೇಲೆ ಕೆಪಿಎಂಇ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ) ಕಾಯ್ದೆಯಡಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಇಲಾಖೆ ಸೂಚಿಸಿತ್ತು. ಈವರೆಗೆ, ಒಟ್ಟು 1,775 ನಕಲಿ ವೈದ್ಯರನ್ನು ಪತ್ತೆ ಮಾಡಲಾಗಿದೆ.

ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಕೆಪಿಎಂಇ ಕಾಯ್ದೆಯಡಿ ಕಡ್ಡಾಯವಾಗಿ ನೋಂದಣಿಯಾಗಿರಬೇಕು.

6ನೇ ಪುಟ ನೋಡಿ

ನೀರಿನ ಸಮಸ್ಯೆ ಉಲ್ಬಣ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬರ ಇರುವ ಕಾರಣ ಮುಂದಿನ ದಿನಗಳಲ್ಲಿ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಲ್ಬಣಗೊಳ್ಳುವ ಸಾಧ್ಯತೆ ಇದ್ದು, ಪರಿಸ್ಥಿತಿ ಎದುರಿಸಲು ಈಗಿನಿಂದಲೇ ಅಗತ್ಯ ಕ್ರಮ ಕೈಗೊಳ್ಳುತ್ತಿರುವುದಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 1,272 ವಾರ್ಡ್‌ಗಳು ಮತ್ತು 7,377 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದು ಎಂದು ಅಂದಾಜಿಸಲಾಗಿದೆ. ಅಲ್ಲಿಗೆ ಟ್ಯಾಂಕರ್‌ಗಳು ಮತ್ತು ಖಾಸಗಿ ಕೊಳವೆ ಬಾವಿಗಳಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು ಎಂದರು.

ನೀರು ಪೂರೈಕೆಗಾಗಿ ಮುಂಜಾಗ್ರತಾ ಕ್ರಮವಾಗಿ ಖಾಸಗಿ ಕೊಳವೆ ಬಾವಿಗಳನ್ನು ಈಗಾಗಲೇ ಗುರುತಿಸಲಾಗಿದೆ. ಬಹುಪಾಲು ಕೊಳವೆ ಬಾವಿ ಮಾಲೀಕರ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಟ್ಯಾಂಕರ್‌ಗಳನ್ನು ಸಿದ್ಧವಾಗಿಟ್ಟುಕೊಳ್ಳಲು ಟೆಂಡರ್ ಕರೆಯಲು ಸೂಚಿಸಲಾಗಿದೆ.

6ನೇ ಪುಟ ನೋಡಿ

ನೆಲಮಂಗಲ: ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ 4ಕ್ಕೆ

ನೆಲಮಂಗಲ: ತಾಲ್ಲೂಕಿನಲ್ಲಿ ₹ 869 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶವನ್ನು ಮಾರ್ಚ್ 4ರಂದು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಕೆ.ಜೆ. ಜಾರ್ಜ್, ವಿವಿಧ ಸಚಿವರು ಭಾಗವಹಿಸಲಿದ್ದಾರೆ ಎಂದು ಶಾಸಕ ಎನ್. ಶ್ರೀನಿವಾಸ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

₹ 27.60 ಕೋಟಿ ವೆಚ್ಚದಲ್ಲಿ 220 ಕೆ.ವಿ. ಸಾಮರ್ಥ್ಯದ ವಿದ್ಯುತ್ ವಿತರಣಾ ಉಪಕೇಂದ್ರ, 2,500 ಮನೆಗಳ ಸಾಂಕೇತಿಕ ವಿತರಣೆ, 69 ಕೆರೆಗಳನ್ನು ತುಂಬಿಸುವ ವೃಷಭಾವತಿ ಯೋಜನೆಗೆ ಸಿ.ಎಂ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ತಿಳಿಸಿದರು.

ತಾಲ್ಲೂಕಿಗೆ ಒಂದೂ ರೂಪಾಯಿ ಬಿಡುಗಡೆಯಾಗಿಲ್ಲ ಎಂದು ಮಾಜಿ ಶಾಸಕ ಕೆ.ಶ್ರೀನಿವಾಸಮೂರ್ತಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಇಷ್ಟೆಲ್ಲ ಅನುದಾನ ಬಿಡುಗಡೆಯಾಗಿರುವುದು ಸುಳ್ಳೇ ಎಂದು ಪ್ರಶ್ನಿಸಿದರು.

ಅಂತರರಾಷ್ಟ್ರೀಯ ತ್ಯಾಜ್ಯ ಆಯುವವರ ದಿನಾಚರಣೆಯಲ್ಲಿ ಎಎಲ್‌ಸಿ ಸಂತೋಷ್ ಹಿಪ್ಪರಗಿ

‘ಸ್ವಚ್ಛತೆ: ಚಿಂದಿ ಆಯುವವರ ಪಾತ್ರ ಹಿರಿದು’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕರ್ನಾಟಕದಲ್ಲಿ ಇದ್ದಾರೆ 1 ಲಕ್ಷಕ್ಕೂ ಅಧಿಕ ಮಂದಿ ಚಿಂದಿ ಆಯುವವರು
- ರಾಜ್ಯ ಸರ್ಕಾರದಿಂದ ತ್ಯಾಜ್ಯ ಕಾರ್ಮಿಕರ ಖಾತೆಗೆ ನೇರವಾಗಿ ₹2000 ಜಮೆ

ಬೆಂಗಳೂರು: ಅಪಾಯಕಾರಿ ಸ್ಥಳಗಳನ್ನು ಸ್ವಚ್ಛಗೊಳಿಸುವ ಮೂಲಕ ಪರಿಸರ ಸ್ವಚ್ಛತೆಯಲ್ಲಿ ಚಿಂದಿ ಆಯುವವರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಸಹಾಯಕ ಕಾರ್ಮಿಕ ಆಯುಕ್ತ ಸಂತೋಷ್ ಹಿಪ್ಪರಗಿ ಹೇಳಿದರು.

ನಗರದಲ್ಲಿ ಶುಕ್ರವಾರ ತ್ಯಾಜ್ಯ ಶ್ರಮಿಕ ಸಂಘ ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ತ್ಯಾಜ್ಯ ಆಯುವವರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಯ್ದ ವಸ್ತುಗಳನ್ನು ಪುನರ್ ಬಳಕೆಗೆ ನೀಡುವ ಮೂಲಕ ದೇಶದ ಆರ್ಥಿಕತೆಯ ಬೆಳವಣಿಗೆಗೂ ಕೊಡುಗೆಯನ್ನು ಈ ಸಮುದಾಯ ನೀಡುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚಿಂದಿ ಆಯುವವರನ್ನು ಗುರುತಿಸಿ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ ಎಂದು ತಿಳಿಸಿದರು.

ಕೊಲಂಬಿಯಾದಲ್ಲಿ 1992ರಲ್ಲಿ ತ್ಯಾಜ್ಯ ಆಯುವವರ ದಿನಾಚರಣೆ ಆರಂಭಗೊಂಡಿತು. ಇದೀಗ ವಿಶ್ವದ ಎಲ್ಲ ರಾಷ್ಟ್ರಗಳಲ್ಲಿ ಈ ದಿನ ಆಚರಿಸಲಾಗುತ್ತಿದೆ. ಭಾರತದಲ್ಲಿ ಚಿಂದಿ ಆಯುವವರ ಸಂಖ್ಯೆ 20 ಲಕ್ಷ ಇದೆ. 2009ರಲ್ಲಿ ಭಾರತ ಸರ್ಕಾರವು ಜಾರಿಗೆ ತಂದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯಡಿ ಚಿಂದಿ ಆಯುವವರನ್ನೂ ಸೇರಿಸಿದೆ. ರಾಜ್ಯ ಸರ್ಕಾರವು ತ್ಯಾಜ್ಯ ಕಾರ್ಮಿಕರ ಖಾತೆಗೆ ನೇರವಾಗಿ ₹2000 ಹಾಕುತ್ತಿದೆ ಎಂದು ಮಾಹಿತಿ ನೀಡಿದರು.

ಬಾಲಕಾರ್ಮಿಕರ ಪತ್ತೆ ಹಚ್ಚಲು ಸರ್ವೆ ನಡೆಸಿದಾಗ ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಇದ್ದಿದ್ದು ಚಿಂದಿ ಆಯುವ ಮಕ್ಕಳು ಎಂಬುದು ಬೇಸರದ ವಿಷಯ. ಮಕ್ಕಳನ್ನು ಶಾಲೆ ಬಿಡಿಸದೇ ವಿದ್ಯಾಭ್ಯಾಸ ಕೊಡಿಸುವ ಮೂಲಕ ಅವರ ಭವಿಷ್ಯ ಉಜ್ವಲವಾಗುವಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕದಲ್ಲಿ 1 ಲಕ್ಷಕ್ಕೂ ಅಧಿಕ ಮಂದಿ ಚಿಂದಿ ಆಯುವವರಿದ್ದಾರೆ. ಅದರಲ್ಲಿ ಹೆಚ್ಚಿನವರು ದಲಿತ ಮತ್ತು ಬುಡಕಟ್ಟು ಸಮುದಾಯಗಳಿಗೆ ಸೇರಿದ ಮಹಿಳೆಯರಾಗಿದ್ದಾರೆ. ಎಲ್ಲ ತ್ಯಾಜ್ಯ ಕಾರ್ಮಿಕರಿಗೆ ವಿಮೆ ಸೌಲಭ್ಯ ಒದಗಿಸಬೇಕು. ಗುರುತಿನ ಚೀಟಿ ನೀಡಬೇಕು. ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಿಸಬೇಕು. ಆರೋಗ್ಯ ಸೇವೆ ಒದಗಿಸಬೇಕು. ವಸತಿ ನೀಡಬೇಕು. ಕೌಶಲ ತರಬೇತಿ, ಮಾರುಕಟ್ಟೆ ಸೌಲಭ್ಯ ಒದಗಿಸಬೇಕು. ಕಲ್ಯಾಣ ನಿಧಿ ಸ್ಥಾಪಿಸಬೇಕು ಎಂದು ತ್ಯಾಜ್ಯ ಶ್ರಮಿಕ ಸಂಘದ ಪದಾಧಿಕಾರಿಗಳು ಆಗ್ರಹಿಸಿದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿ ಆಯುಕ್ತ ಬಿ. ವೆಂಕಟೇಶ್, ಕಾರ್ಮಿಕ ಅಧಿಕಾರಿ ಶಕುಂತಲಾದೇವಿ, ಸಹಾಯಕ ಆಯುಕ್ತೆ ಮೀರಾ ಪಾಟೀಲ್, ಕೆಎಸ್‌ಡಬ್ಲ್ಯುಸಿಯು ಮಹಿಳಾ ಕಾರ್ಯದರ್ಶಿ ಲೀಲಾವತಿ, ತ್ಯಾಜ್ಯ ಶ್ರಮಿಕ ಸಂಘದ ರಾಜ್ಯಾಧ್ಯಕ್ಷೆ ಇಂದುಮತಿ, ಬೆಂಗಳೂರು ನಗರ ಅಧ್ಯಕ್ಷೆ ಇಂದಿರಾ ಭಾಗವಹಿಸಿದ್ದರು.



ಅಂತರರಾಷ್ಟ್ರೀಯ ತ್ಯಾಜ್ಯ ಆಯುವವರ ದಿನಾಚರಣೆ ಅಂಗವಾಗಿ ಸಹಾಯಕ ಕಾರ್ಮಿಕ ಆಯುಕ್ತ ಸಂತೋಷ್ ಹಿಪ್ಪರಗಿ ಅವರು ತ್ಯಾಜ್ಯ ಶ್ರಮಿಕ ಸಂಘದ ನೋಂದಣಿ ಪ್ರಮಾಣಪತ್ರವನ್ನು ತ್ಯಾಜ್ಯ ಶ್ರಮಿಕ ಸಂಘದ ಸದಸ್ಯರಿಗೆ ವಿತರಿಸಿದರು. ಚಿಂತಾಮಣಿ ನಗರಸಭೆ ಸದಸ್ಯೆ ರಾಣಿಯಮ್ಮ, ಕಾರ್ಮಿಕ ಅಧಿಕಾರಿ ಮೀರಾ ಪಾಟೀಲ್, ಕೆಎಸ್‌ಡಬ್ಲ್ಯುಸಿಯು ಮಹಿಳಾ ಕಾರ್ಯದರ್ಶಿ ಲೀಲಾವತಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಎರಡು ತಿಂಗಳಲ್ಲಿ 65 ಲಕ್ಷ ಆರ್‌ಟಿಸಿ-ಆಧಾರ್ ಜೋಡಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಆರ್‌ಟಿಸಿ–ಆಧಾರ್ ಜೋಡಣೆ ಕೆಲಸ ಅಭಿಯಾನದ ಮಾದರಿಯಲ್ಲಿ ನಡೆಯುತ್ತಿದ್ದು, ಈವರೆಗೆ 15 ಲಕ್ಷ ಆರ್‌ಟಿಸಿ ಮಾಲೀಕರನ್ನು ಸಂಪರ್ಕಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಜಿಲ್ಲಾಧಿಕಾರಿ ಸಭೆಗಳ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗ್ರಾಮ ಲೆಕ್ಕಿಗರು ಮನೆ ಬಾಗಿಲಿಗೆ ತೆರಳಿ ಆರ್‌ಟಿಸಿ-ಆಧಾರ್ ಜೋಡಣೆ ಕೆಲಸದಲ್ಲಿ ತೊಡಗಿದ್ದಾರೆ. 88 ಸಾವಿರ ಆರ್‌ಟಿಸಿಗಳಲ್ಲಿ ಕೃಷಿ ಭೂಮಿ ಇರುವುದು ಕಂಡು ಬಂದಿದೆ. ಆಧಾರ್ ಲಿಂಕ್ ಮಾಡಲಾಗಿದೆ. ಮುಂದಿನ ಎರಡು–ಮೂರು ತಿಂಗಳಲ್ಲಿ ಎಲ್ಲ ಆರ್‌ಟಿಸಿ ಮಾಲೀಕರನ್ನು ತಲುಪಲು ರೂಪುರೇಷೆ ಸಿದ್ಧಪಡಿಸಲಾಗಿದೆ’ ಎಂದರು.

ಬಾಕಿ ಪೋಡಿ ಹಾಗೂ ದುರಸ್ತಿ ಪ್ರಕರಣ ಇತ್ಯರ್ಥಕ್ಕೆ ಮೊದಲು ನಿಖರವಾದ ಆಕಾರ್ ಬಂದ್ ಮಾಹಿತಿ ಪಡೆಯಬೇಕು. ನಿಖರವಾದ ಆಕಾರ್ ಬಂದ್ ಇಲ್ಲದೇ ಆರ್‌ಟಿಸಿ ಜೊತೆಗೆ ಜೋಡಣೆ ಸಾಧ್ಯವಿಲ್ಲ. ಆ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳಿಗೆ ಮುಂದಿನ ಎರಡು ತಿಂಗಳಲ್ಲಿ 65 ಲಕ್ಷ ಆಕಾರ್ ಬಂದ್ ಡಿಜಿಟಲೀಕರಣಗೊಳಿಸಲು ಸೂಚಿಸಲಾಗಿದೆ ಎಂದು ಕೃಷ್ಣ ಬೈರೇಗೌಡ ಹೇಳಿದರು.

ನಗರದಲ್ಲಿ ಇಂದು

‘ಧೃತಿ’ ಉತ್ಸವ: ವಸ್ತು ಪ್ರದರ್ಶನ ಹಾಗೂ ಮಾರಾಟ, ಆಯೋಜನೆ: ಧೃತಿ ಮಾರ್ಟ್, ಸ್ಥಳ: ನ್ಯಾಷನಲ್ ಕಾಲೇಜು ಮೈದಾನ, ಜಯನಗರ, ಬೆಳಿಗ್ಗೆ 9.30ರಿಂದ

ವಿಶ್ವ ಮಹಿಳಾ ದಿನಾಚರಣೆ ಸಮಾರಂಭ: ಆಯೋಜನೆ: ಸೇಂಟ್ ಮೇರಿಸ್ ಕಾನ್ವೆಂಟ್ ಹೈಸ್ಕೂಲ್, ಸ್ಥಳ: ಬಿಬಿಎಂಪಿ ವಿವಿಧೋದ್ದೇಶ ಕಟ್ಟಡ ಸಂಕೀರ್ಣ, ಮಾರೇನಹಳ್ಳಿ, ಮಧ್ಯಾಹ್ನ 2

‘ಚಿಟ್ಟೆ’ 100ನೇ ರಂಗ ಪ್ರಯೋಗ: ಸಂಜೆ 4ರಿಂದ ‘ಚಿಟ್ಟೆಯೊಂದಿಗೆ ಮಾತುಕತೆ’ ಸಂವಾದ: ಸುಬ್ಬು ಹೊಲೆಯಾರ್, ಪಿ. ಚಂದ್ರಿಕಾ, ಸಿ. ಬಸವಲಿಂಗಯ್ಯ, ದಾಕ್ಷಾಯಿಣಿ ಭಟ್, ಎಂ.ಎಸ್. ಆಶಾದೇವಿ, ಸಂಜೆ 5.45ರಿಂದ **ಅಭಿನಂದನಾ ಕಾರ್ಯಕ್ರಮ**: ಪುಸ್ತಕ ಬಿಡುಗಡೆ: ಉಮಾಶ್ರೀ, ಅಭಿನಂದಿತರ ಬಗೆಗೆ ಮಾತು: ವಿದ್ಯಾರಣ್ಯ ಬಿ.ಎಸ್., ನವೀನ್ ಕೃಷಿ, ಅಭಿನಂದನಾ ನುಡಿ: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ಬಿ.ವಿ. ರಾಜಾರಾಮ್, ಮುಖ್ಯ ಅತಿಥಿಗಳು: ಶಶಿಧರ ಅಡಪ, ಪ್ರಕಾಶ ಮೂರ್ತಿ, ಭಾರತಿ ಶೆಟ್ಟರ್, ಉಪಸ್ಥಿತಿ: ಕೃಷ್ಣಮೂರ್ತಿ ಕವತ್ತಾರ್, ಬೇಲೂರು ರಘುನಂದನ್, ಮಾಗಡಿ ಗಿರೀಶ್, ಸವಿತಕ್ಕ, ಗೋಕುಲ ಸಹೃದಯ, ಸಂಜೆ 7.30ಕ್ಕೆ ರಂಗ ಪ್ರಯೋಗ, ಆಯೋಜನೆ: ಶಾರದಾ ಪ್ರತಿಷ್ಠಾನ, ಕಾಜಾಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ

‘ಸಂಗ್ಯಾ ಬಾಳ್ಯಾ’ ನಾಟಕ ಪ್ರದರ್ಶನ: **ರಚನೆ:** ಚಂದ್ರಶೇಖರ ಕಂಬಾರ, ನಿರ್ದೇಶನ: ಸಿ.ಎಂ. ತಿಮ್ಮಯ್ಯ, ಆಯೋಜನೆ: ರಂಗಚಂದಿರ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

‘ಘಂಟಸಾಲ ಶತಮಾನೋತ್ಸವ ಸಂಭ್ರಮ’: ಮುಖ್ಯ ಅತಿಥಿ: ಕೆ.ಸಿ. ರಾಮಮೂರ್ತಿ, ‘ಕಲಾ ಪ್ರದರ್ಶಿನಿ ಘಂಟಸಾಲ ಪುರಸ್ಕಾರ’ ಪ್ರಶಸ್ತಿ: ಚಿತ್ರಾ ವಿಶ್ವೇಶ್ವರನ್, ಲಲಿತಾ ಶ್ರೀನಿವಾಸನ್, ಹಂಸಲೇಖ, ಟಿ.ಎಸ್. ಸತ್ಯವತಿ, ಕಲಾ ಪ್ರದರ್ಶನ: ಪಾರ್ವತಿ ರವಿ ಘಂಟಸಾಲ, ವೀಣಾಮೂರ್ತಿ ವಿಜಯ್, ಸತ್ಯನಾರಾಯಣ ರಾಜು, ವಸಂತ ಕಿರಣ ರಾಯಸಂ, ಹರಿ, ಚೇತನ, ಪಾರ್ಶ್ವನಾಥ್ ಎಸ್. ಉಪಾಧ್ಯೆ, ಬದರಿ ದಿವ್ಯ ಭೂಷಣ, ಅನುರಾಧ ವಿಕ್ರಾಂತ್, ಐಶ್ವರ್ಯ ಅನಂತ ಕಾರ್ತಿಕ್, ರಂಜಿತಾ ವಿವಿನ್, ಅಂಜನಾ ಅನುಪ್ ಚಂಗವಳ್ಳಿ, ಪವಿತ್ರಾ ಶ್ರೀಧರ್, ರಮಾ ಪ್ರಸಾದ್, ಆಯೋಜನೆ: ರಂಗಮ್ಮ ಭೀಮಪ್ಪ ಚೆಟ್ಟಿ ಲಲಿತಕಲಾ ಟ್ರಸ್ಟ್, ಕಲಾ ಪ್ರದರ್ಶಿನಿ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

‘ಕಾಯುವ ಕಾಯಕ’ ನಾಟಕ ಪ್ರದರ್ಶನ: ರಚನೆ: ಡುಂಡಿರಾಜ್, ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಡಾ.ಸಿ. ಅಶ್ವತ್ಥ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 7.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ವಿದ್ಯುತ್ ಸರಬರಾಜು ವ್ಯವಸ್ಥೆ ಸುಧಾರಣೆಗೆ ನಿಯಮ ತಿದ್ದುಪಡಿ

ನವದೆಹಲಿ: ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಕೆಯ ಖಾತರಿಗೆ ಪೂರಕವಾಗಿ 'ವಿದ್ಯುತ್ ನಿಯಮಗಳು (ವಿಳಂಬ ಪಾವತಿಗೆ ಸರ್ಚಾರ್ಜ್ ಮತ್ತು ಸಂಬಂಧಿತ ವಿಷಯಗಳು) 2022'ಕ್ಕೆ ಕೇಂದ್ರ ಸರ್ಕಾರ ತಿದ್ದುಪಡಿ ತಂದಿದೆ.

ಎಲ್ಲ ಪ್ರಕಾರದ ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಪೂರೈಕೆಯ ಖಾತರಿಯನ್ನು ಉಲ್ಲೇಖಿತ ತಿದ್ದುಪಡಿಯು ನೀಡಲಿದೆ ಎಂದು ಕೇಂದ್ರ ಇಂಧನ ಸಚಿವ ಆರ್.ಕೆ.ಸಿಂಗ್ ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಹೆಚ್ಚುವರಿ ವಿದ್ಯುತ್‌ಗೆ ನಿಶ್ಚಿತ ಶುಲ್ಕ ಪಾವತಿಸುವಂತೆ ಬೇಡಿಕೆ ಮಂಡಿಸುವ ಅರ್ಹತೆ ಪಡೆಯಲು ವಿದ್ಯುತ್ ಉತ್ಪಾದಕ ಸಂಸ್ಥೆಗಳು ಈಗ, ವಿದ್ಯುತ್ ಸರಬರಾಜು ಕಂಪನಿಗಳಿಗೆ (ಎಸ್ಕಾಂ)ಅಗತ್ಯವಿಲ್ಲದ ಹೆಚ್ಚುವರಿ ವಿದ್ಯುತ್ ಹಿಂಪಡೆಯುವು-ದಾಗಿಯೂ ಭರವಸೆ ನೀಡಬೇಕಾಗಿದೆ.

ಕೆಲ ವಿದ್ಯುತ್ ಉತ್ಪಾದಕ ಸಂಸ್ಥೆಗಳು ಸದ್ಯ ಹೆಚ್ಚುವರಿ ವಿದ್ಯುತ್ ಹಿಂಪಡೆಯಲು ನಿರಾಕರಿಸುತ್ತಿದ್ದವು. ಇದರಿಂದಾಗಿ ರಾಷ್ಟ್ರೀಯ ಮಟ್ಟದಲ್ಲಿ ಬಳಕೆಯಾಗದ ವಿದ್ಯುಚ್ಛಕ್ತಿ ಉಳಿಯುತ್ತಿತ್ತು. ಈ ಸಮಸ್ಯೆಗೆ ಪರಿಹಾರ ಹಾಗೂ ಲಭ್ಯ ವಿದ್ಯುತ್‌ನ ಪರಿಣಾಮಕಾರಿ ಬಳಕೆಗೆ ಪೂರಕವಾಗಿ ಈ ತಿದ್ದುಪಡಿ ಮಾಡಲಾಗಿದೆ. ಹೆಚ್ಚುವರಿ ವಿದ್ಯುತ್ ನೀಡಲು ಒಪ್ಪದ ಉತ್ಪಾದಕ ಸಂಸ್ಥೆಗಳು ಈಗ, ಹೆಚ್ಚುವರಿ ವಿದ್ಯುತ್‌ಗೆ ನಿಶ್ಚಿತ ಶುಲ್ಕಕ್ಕಾಗಿ ಹಕ್ಕು ಪ್ರತಿಪಾದಿಸಲಾ-ಗದು. ಇದರಿಂದಾಗಿ, ಹೆಚ್ಚುವರಿ ವಿದ್ಯುತ್ ಖರೀದಿಸಿ ಬಳಸುವುದು ಸಾಧ್ಯವಾಗಲಿದೆ ಎಂದು ವಿವರಿಸಿದರು.

ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ವಿದ್ಯುತ್ ಪೂರೈಕೆ ಸಂಸ್ಥೆಗಳು ಎದುರಿಸುತ್ತಿದ್ದ ಹಣದ ಹರಿವು ಸಮಸ್ಯೆಗೆ ಪರಿಹಾರವಾಗಿ 2022ರಲ್ಲಿ ನಿಯಮ ರೂಪಿಸಲಾಗಿತ್ತು. ವಿದ್ಯುತ್ ಕ್ಷೇತ್ರದಲ್ಲಿ ಸಕಾಲದಲ್ಲಿ ಹಣದ ಪಾವತಿ ಖಾತರಿಪ-ಡಿಸುವುದು ಇದರ ಉದ್ದೇಶವಾಗಿತ್ತು. ಈ ಅಧಿಸೂಚನೆ ಬಳಿಕ ಪರಿಸ್ಥಿತಿ ಗಣನೀಯವಾಗಿ ಸುಧಾರಿಸಿತ್ತು. ಬಾಕಿ ಬಿಲ್‌ಗಳ ಮೊತ್ತ ಜೂನ್ 2022ರಲ್ಲಿ ₹1.4 ಲಕ್ಷ ಕೋಟಿ ಇದ್ದರೆ, ಈ ಮೊತ್ತ ಫೆಬ್ರುವರಿ 2024ರ ವೇಳೆಗೆ ₹ 48,000 ಕೋಟಿಗೆ ಇಳಿದಿತ್ತು ಎಂದು ಈ ಸಂಬಂಧ ನೀಡಲಾದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮರಾಠಿ ನಿರ್ದೇಶಕ ಜಬ್ಬಾರ್ ಪಟೇಲ್

ಸಿನಿಮಾಗಳು ಸಮಾನತೆ ಬಿಂಬಿಸಲಿ

● ವಿನಾಯಕ ಕೆ.ಎಸ್

ಬೆಂಗಳೂರು: ನಮ್ಮದು ಸರ್ವಧರ್ಮ ಸಹಿಷ್ಣು ರಾಷ್ಟ್ರ ಎಂಬ ಗಾಂಧಿ, ಅಂಬೇಡ್ಕರ್ ಆಶಯಗಳನ್ನು ಕಮರ್ಷಿಯಲ್, ಬಾಲಿವುಡ್ ಸಿನಿಮಾಗಳಲ್ಲಿ ಮಸಾಲೆ ತುಂಬಿ, ಮನರಂಜನಾತ್ಮಕವಾಗಿ ತೋರಿಸುತ್ತಾರೆ. ಮೂರು ಭಿನ್ನ ಧರ್ಮದ ಮಕ್ಕಳು ಒಂದು ತಾಯಿಗೆ ರಕ್ತ ನೀಡುವಂತಹ ದೃಶ್ಯಗಳು ಸ್ವಲ್ಪ ಅವೈಜ್ಞಾನಿಕವೆನ್ನಿಸಿದರೂ, ಅಂತಿಮವಾಗಿ ಕೊಡುವ ಸಂದೇಶ ಗಟ್ಟಿಯಾದದ್ದು ಎಂದು ಮರಾಠಿ ನಿರ್ದೇಶಕ ಜಬ್ಬಾರ್ ಪಟೇಲ್ ಹೇಳಿದರು.

ನಗರದಲ್ಲಿ ಶುಕ್ರವಾರ ನಡೆದ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನ-ಚಿತ್ರೋತ್ಸವದಲ್ಲಿ ಅವರು 'ಸಾಂವಿಧಾನಿಕ ಮೌಲ್ಯಗಳು ಮತ್ತು ಭಾರತೀಯ ಚಿತ್ರರಂಗ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಸಿನಿಮಾಗಳಲ್ಲಿ ಸ್ವಾತಂತ್ರ್ಯ, ಸಮಾನತೆ ಸಾರುವ ಅಂಶಗಳನ್ನು ಹೆಚ್ಚು ಹೆಚ್ಚು ಬಳಸಿಕೊಳ್ಳಬೇಕೆಂದು ಕರೆ ನೀಡಿದ ಅವರು, ಭಾರತೀಯ ಚಿತ್ರರಂಗದಲ್ಲಿ ಸಾಂವಿಧಾನಿಕ ಮೌಲ್ಯಗಳ ಅಳವಡಿಕೆ ಹಾದಿಯನ್ನು ವಿವರಿಸಿದರು.

'ಸ್ವಾತಂತ್ರ್ಯ ಪೂರ್ವದಲ್ಲಿಯೇ ಬಿಮಲ್ ರಾಯ್, ಮೆಹಬೂಬ್ ಖಾನ್‌ರಂತಹ ನಿರ್ದೇಶಕರು ಸಂವಿಧಾನ ರಚನೆಗೆ ಮೊದಲೇ ಅದರ ಮೌಲ್ಯಗಳನ್ನು ತೆರೆಯ ಮೇಲೆ ತರಲು ಯತ್ನಿಸಿದ್ದರು. ಅಂಬೇಡ್ಕರ್ ಮೂಲಕ ನಾವು ಪಡೆದುಕೊಂಡಿದ್ದನ್ನು ಸಿನಿಮಾದ ಮೂಲಕ ಇನ್ನಷ್ಟು ಜನರಿಗೆ ತಲುಪಿಸುವ ಯತ್ನಗಳು ಹೆಚ್ಚಾಗಬೇಕು' ಎಂದು ತಿಳಿಸಿದರು. ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್.ಎಸ್. ವಿದ್ಯಾಶಂಕರ್ ಕಾರ್ಯಕ್ರಮ ನಡೆಸಿಕೊಟ್ಟರು.

ಉತ್ತಮ ಪ್ರತಿಕ್ರಿಯೆ: ಈ ವರ್ಷದ ಚಿತ್ರೋತ್ಸವಕ್ಕೆ ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಪಾರ ಸಂಖ್ಯೆಯ ಸಿನಿಮೋತ್ಸಾಹಿಗಳು ಚಿತ್ರೋತ್ಸವದತ್ತ ಹೆಜ್ಜೆ ಹಾಕಿದ್ದಾರೆ. ಈ ವರ್ಷ ಕಳೆದ ವರ್ಷಕ್ಕಿಂತ ಹೆಚ್ಚು ಜನ ಬಂದಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

ಉತ್ತಮ ಚಿತ್ರಗಳನ್ನು ವೀಕ್ಷಿಸಲು ಬೆಳಿಗ್ಗೆಯಿಂದಲೇ ಜನ ಸರದಿ ಸಾಲಿನಲ್ಲಿ ನಿಂತ ದೃಶ್ಯಗಳು ಅಲ್ಲಲ್ಲಿ ಕಂಡು ಬಂದವು.

ಮಧ್ಯಾಹ್ನ 12.50ರ ಸುಮಾರಿಗೆ ಸಿನಿಮಾದ ಪ್ರಾಂಗಣ ಭರ್ತಿಯಾಗಿತ್ತು. ಶ್ರೀಲಂಕಾದ ನಿರ್ದೇಶಕ ಪ್ರಸನ್ನ ವಿತಾನಗೆ ಅವರ 'ಪ್ಯಾರಡೈಸ್', ಬಲ್ಗೇರಿಯಾದ 'ಬ್ಲಾಗಾಸ್ ಲೆಸನ್', ಟರ್ಕಿಶ್ ಚಿತ್ರ 'ಅಬೌಟ್ ಡ್ರೈ ಗ್ರಾಸಸ್', ಪರ್ಷಿಯನ್ ಚಿತ್ರ 'ಟೆರೆಸ್ಟ್ರಿಯಲ್ ವರ್ಸಸ್' ಮೊದಲಾದ ಸಿನಿಮಾಗಳಿಗೆ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.



ನಗರದ ಒರಾಯನ್ ಮಾಲ್‌ನಲ್ಲಿ ಶುಕ್ರವಾರ ಆರಂಭವಾದ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ದಲ್ಲಿ ಪ್ರದರ್ಶನಗೊಳ್ಳುತ್ತಿರುವ ಸಿನಿಮಾಗಳ ವೀಕ್ಷಣೆಗಾಗಿ ಆಗಮಿಸಿದ್ದ ಸಿನಿಮಾಸಕ್ತರು ಪ್ರಜಾವಾಣಿ ಚಿತ್ರ



15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 'ಸಾಂವಿಧಾನಿಕ ಮೌಲ್ಯಗಳು ಮತ್ತು ಭಾರತೀಯ ಚಿತ್ರರಂಗ' ಎಂಬ ವಿಷಯದ ಕುರಿತು ಮರಾಠಿ ನಿರ್ದೇಶಕ ಜಬ್ಬಾರ್ ಪಟೇಲ್ ಉಪನ್ಯಾಸ ನೀಡಿದರು. ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್.ಎಸ್ ವಿದ್ಯಾಶಂಕರ್ ಹಾಜರಿದ್ದರು– ಪ್ರಜಾವಾಣಿ ಚಿತ್ರ

'ಸಿಗ್ನೇಚರ್ ಹಾಡು'

ಮೊದಲ ಬಾರಿಗೆ ಜನಪದ ಕಲೆಗಳನ್ನು ಬಳಸಿ ಸೃಷ್ಟಿಸಿರುವ 'ಸಿಗ್ನೇಚರ್ ಹಾಡು' ಚಿತ್ರೋತ್ಸವದ ಪ್ರಮುಖ ಆಕರ್ಷಣೆಯಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ತ್ರಿಲೋಕಚಂದ್ರ ಕೆ.ವಿ, ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಮಾರ್ಗದರ್ಶನದಲ್ಲಿ ಚಿತ್ರ ನಿರ್ದೇಶಕ ಕೆ.ಶಿವರುದ್ರಯ್ಯ ಗೀತೆಯನ್ನು ನಿರ್ದೇಶನ ಮಾಡಿದ್ದಾರೆ. ಜಾನಪದ ಕಲಾವಿದರಾದ ಪಿಚ್ಚಳ್ಳಿ ಶ್ರೀನಿವಾಸ್, ಜನಾರ್ದನ್ (ಜನ್ನಿ), ರಾಮಚಂದ್ರ ಹಡಪದ, ಸವಿತಾ, ವೈ.ಜಿ.ಉಮಾ ಕೋಲಾರ ಅಭಿನಯಿಸಿದ್ದಾರೆ.

'ಕಿಸಾನ್ ಸತ್ಯಾಗ್ರಹ' ಪ್ರದರ್ಶನಕ್ಕೆ ತಡೆ

ಪಂಜಾಬ್ ರೈತರ ಚಳವಳಿಯ ಚಿತ್ರಣ ಕಟ್ಟಿಕೊಡುವ ಕೇಸರಿ ಹರವೂ ನಿರ್ದೇಶನದ 'ಕಿಸಾನ್ ಸತ್ಯಾಗ್ರಹ' ಸಾಕ್ಷ್ಯಚಿತ್ರ ಈ ವರ್ಷದ ಚಿತ್ರೋತ್ಸವ ಪ್ರದರ್ಶನ ಪಟ್ಟಿಯಲ್ಲಿ ಜಾಗ ಪಡೆದಿತ್ತು. ಆದರೆ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ ಈ ಸಾಕ್ಷ್ಯಚಿತ್ರ ಪದರ್ಶಿಸದಂತೆ ತಡೆ ಹಿಡಿದಿದೆ.



ಸಿನಿಮೋತ್ಸವದ ಮಾಹಿತಿ ಪತ್ರದಲ್ಲಿರುವ ಕೇಸರಿ ಹರವು ನಿರ್ದೇಶನದ 'ಕಿಸಾನ್ ಸತ್ಯಾಗ್ರಹ' ಸಾಕ್ಷ್ಯಚಿತ್ರದ ಟಿಪ್ಪಣಿ

'ಈ ಸಾಕ್ಷ್ಯಚಿತ್ರಕ್ಕೆ ಸೆನ್ಸಾರ್ ಇರಲಿಲ್ಲ. ಹೀಗಾಗಿ ನಾವು ಇದನ್ನು ಪ್ರದರ್ಶಿಸಲು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅನುಮತಿಗಾಗಿ ಕಳುಹಿಸಿದ್ದೆವು. ಅಲ್ಲಿ ಈ ಚಿತ್ರ ಸೇರಿದಂತೆ ಒಟ್ಟು ಮೂರು ಚಿತ್ರಗಳಿಗೆ ಅನುಮೋದನೆ ದೊರೆತಿಲ್ಲ' ಎಂದು ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್.ಎಸ್.ವಿದ್ಯಾಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಇದನ್ನು ತಡೆಹಿಡಿದಿರುವುದರ ಹಿನ್ನೆಲೆ ಪ್ರಶ್ನಾರ್ಹ. ಇಸ್ರೇಲ್, ಉಕ್ರೇನ್‌ನಲ್ಲಿ ಯುದ್ಧ ನಡೆಯುತ್ತಿದೆ. ಹಾಗಾಗಿ ಅಲ್ಲಿನ ಚಿತ್ರಗಳನ್ನು ತಡೆಹಿಡಿದಿದ್ದಾರೆ. ಮಾನವ ಹಕ್ಕುಗಳ ದಮನದ ಕುರಿತಾಗಿನ ಈ ಚಿತ್ರಗಳು ವಿವಾದ ಹುಟ್ಟಿ-ಸಬಹುದೆಂಬ ಉದ್ದೇಶದಿಂದ ಇರಬಹುದು. ಆದರೆ, ಈ ಮೂಲಕ ಒಬ್ಬ ಚಿತ್ರ ನಿರ್ಮಾಣಕಾರನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುತ್ತಿದೆ. ರೈತರ ಹೋರಾಟವನ್ನೇ ತಡೆಹಿಡಿಯಲು ಯತ್ನಿಸುತ್ತಿರುವವರು, ನಮ್ಮ ಚಿತ್ರ ತಡೆ-ಹಿಡಿದಿರುವುದು ಅಚ್ಚರಿಯಲ್ಲ' ಎಂದು ನಿರ್ದೇಶಕ ಕೇಸರಿ ಹರವೂ ಕೇಂದ್ರ ಸರ್ಕಾರದ ನಿಲುವಿನ ಕುರಿತು ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ನೀರಿನ ಟ್ಯಾಂಕರ್ ಸ್ವಯಂ ನೋಂದಣಿ ಆರಂಭ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರು ಪೂರೈಕೆ ಮಾಡುತ್ತಿರುವವ ಟ್ಯಾಂಕರ್‌ಗಳ ಮಾಹಿತಿಗಳನ್ನು ಕಡ್ಡಾಯವಾಗಿ ಸ್ವಯಂ ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ.

ಪಾಲಿಕೆಯು ಹೊಸದಾಗಿ ಅಭಿವೃದ್ಧಿಪಡಿಸಲಾಗಿರುವ ಪೋರ್ಟಲ್‌ನಲ್ಲಿ https://bbmp.oasisweb.in/TankerManagement/SelfRegistration.aspx ನೀರಿನ ಟ್ಯಾಂಕರ್ ಮಾಲೀಕರು ಮಾರ್ಚ್ 7ರೊಳಗೆ ನೋಂದಾಯಿಸಿಕೊಳ್ಳ-ಬೇಕು. ಹೆಸರು, ವಿಳಾಸ, ವಲಯ, ಪಿನ್ ಕೋಡ್, ಮೊಬೈಲ್ ಸಂಖ್ಯೆ, ಟ್ಯಾಂಕರ್ ವಾಹನದ ಸಂಖ್ಯೆ, ಸಾಮರ್ಥ್ಯ, ಚಾಲಕನ ಹೆಸರು, ಚಾಲಕನ ಡ್ರೈವಿಂಗ್ ಲೈಸನ್ಸ್ ಮಾಹಿತಿಗಳನ್ನು ದಾಖಲಿಸಬೇಕು.

ಸದರಿ ಪೋರ್ಟಲ್ ಮೂಲಕ ಪಡೆಯಲಾಗಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ವಾಹನ ಚಾಲಕರೊಂದಿಗೆ ಇರಬೇಕು ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಲ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ.

ಅತ್ಯಾಚಾರ ಪ್ರಕರಣ: ಆರೋಪಿಗೆ ಶಿಕ್ಷೆ ವಿಧಿಸಲು ಆಗ್ರಹ



ಬೆಂಗಳೂರು: ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು ವ್ಯಾಪ್ತಿಯ ಗ್ರಾಮವೊಂದರ ಬಾಲಕಿ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ್ದ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

ಆರೋಪಿಯನ್ನು ರಕ್ಷಣೆ ಮಾಡುವ ಕೆಲಸ ಮಾಡಲಾಗುತ್ತಿದೆ. ಪ್ರಕರಣ ಕುರಿತು ಸರಿಯಾದ ತನಿಖೆ ನಡೆಸಿ ಆರೋಪಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸಂತ್ರಸ್ತ ಬಾಲಕಿಯ ಕುಟುಂಬಕ್ಕೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ₹25 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ನಿರಂತರ ದೌರ್ಜನ್ಯಗಳು ನಡೆಯುತ್ತಿವೆ. ಈ ರೀತಿಯ ಕೃತ್ಯದಲ್ಲಿ ಭಾಗಿಯಾಗುವ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದ ಎಲ್ಲ ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿ ಮಹಿಳೆಯರ ರಕ್ಷಣೆಗಾಗಿ ಪೊಲೀಸ್ ನಿಗಾ ಘಟಕ ಸ್ಥಾಪಿಸಬೇಕು. ಮಹಿಳೆಯರು ಸಂಕಷ್ಟಕ್ಕೆ ಒಳಗಾದ ಸಂದರ್ಭದಲ್ಲಿ ವಿಪತ್ತು ಸಂದೇಶ ರವಾನಿಸಲು ಮೊಬೈಲ್ ಆ್ಯಪ್ ಸ್ಥಾಪಿಸಬೇಕು ಎಂದು ಕೋರಿದರು.

ಪ್ರತಿಭಟನೆಯಲ್ಲಿ ವಿ.ನಾರಾಯಣಸ್ವಾಮಿ, ಪಿ.ಎಂ.ಕೃಷ್ಣಪ್ಪ, ಅಂದಾನಿ ಸೋಮನಹಳ್ಳಿ ಮೊದಲಾದವರು ಪಾಲ್ಗೊಂಡಿದ್ದರು.

ರ‍್ಯಾಂಕ್ ನೀಡಿಕೆ: ಪಕ್ಷಪಾತ ಆರೋಪ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆಎಸ್‌ಒಯು)ದಲ್ಲಿ ರ‍್ಯಾಂಕ್ ನೀಡುವಲ್ಲಿ ಪಕ್ಷಪಾತ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಪತ್ರಿಕೋದ್ಯಮ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಹಾಗೂ ಮುಖ್ಯಸ್ಥೆ ಆರ್. ಹೇಮಲತಾ ವಿರುದ್ಧ ಅದೇ ವಿಭಾಗದ ಪ್ರೊ.ತೇಜಸ್ವಿ ನವಿಲೂರ್ ಅವರು ಕುಲಪತಿ, ಕುಲಸಚಿವ ಹಾಗೂ ಡೀನ್‌ಗೆ ದೂರು ಸಲ್ಲಿಸಿದ್ದಾರೆ.

'ಹೇಮಲತಾ ಹಲವು ವರ್ಷಗಳಿಂದ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಅದರಲ್ಲಿ ಪಾಲುದಾರರಾದ ರೇಡಿಯೊ ಜಾಕಿಗೆ ಪ್ರಥಮ ರ‍್ಯಾಂಕ್ ನೀಡಿದ್ದಾರೆ. ಹೀಗಾಗಿ, ಆ ಪಟ್ಟಿ ರದ್ದುಪಡಿಸಬೇಕು. ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ. ದೂರಿನ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಅತ್ಯಾಚಾರ: ಅಪರಾಧಿಗೆ 10 ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದ ಅಪರಾಧಿಗೆ 2ನೇ ತ್ವರಿತಗತಿ ವಿಶೇಷ ನ್ಯಾಯಾಲಯವು 10 ವರ್ಷ ಕಾರಾಗೃಹ ಶಿಕ್ಷೆ, ₹10 ಸಾವಿರ ದಂಡ ವಿಧಿಸಿದೆ.

ಅಬ್ಬಿಗೆರೆ ನಿವಾಸಿ ನಾರಾಯಣ ಅಲಿಯಾಸ್ ಶ್ರೀನಿವಾಸ್ (32) ಶಿಕ್ಷೆಗೆ ಗುರಿಯಾದ ಅಪರಾಧಿ.

2015ರ ಮೇ 13ರಂದು ಈ ಘಟನೆ ನಡೆದಿತ್ತು. ಗಂಗಮ್ಮನ ಗುಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತಾಯಿ ಕೆಲಸಕ್ಕೆ ತೆರಳಿದ್ದ ಮೇಲೆ ಬಾಲಕಿ ಮನೆಗೆ ತೆರಳಿದ್ದ ಅಪರಾಧಿ ಅತ್ಯಾಚಾರ ಎಸಗಿದ್ದ. ಪ್ರಕರಣ ದಾಖ-ಲಿಸಿಕೊಂಡಿದ್ದ ಪೊಲೀಸರು, ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಶಿಕ್ಷೆ ವಿಧಿಸಿ ಆದೇಶ ನೀಡಿದೆ. ಬಾಲಕಿ ಕುಟುಂಬಕ್ಕೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ₹4 ಲಕ್ಷ ಪರಿಹಾರ ವಿತರಣೆ ಮಾಡುವಂತೆಯೂ ನ್ಯಾಯಾಲಯ ಆದೇಶಿಸಿದೆ.



ಸಮ್ಮೇಳನದಲ್ಲಿ ವಿವಿಧ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ಕನ್ನಡಿಗರಿಗೆ ಉದ್ಯೋಗ ದೊರೆಯದ ಸ್ಥಿತಿ: ಚೌಡಯ್ಯ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕನ್ನಡದ ನೆಲದಲ್ಲಿ, ಕನ್ನಡಿಗರ ಜಮೀನಿನಲ್ಲಿ ತೆರೆಯುವ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ದೊರೆಯದ ಸ್ಥಿತಿ ಎದುರಾಗಿದೆ ಎಂದು ಸಮ್ಮೇಳನಾಧ್ಯಕ್ಷ ಚೌಡಯ್ಯ ಕಳವಳ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ 12ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಕನ್ನಡ ಭವನ ನಿರ್ಮಿ-ಸಿಕೊಡಬೇಕು ಎಂದು ಶಾಸಕರಿಗೆ ಮನವಿ ಮಾಡಿದರು. 4,530 ಎಕರೆ ಭೂಮಿಯಲ್ಲಿ 1,428 ಕೈಗಾರಿಕೆಗಳು ಸ್ಥಾಪನೆಯಾಗಿವೆ. ಆದರೆ, ಶೇ 5ರಷ್ಟು ಕನ್ನಡಿಗರಿಗೆ ಮಾತ್ರ ಉದ್ಯೋಗ ದೊರೆತಿದೆ ಎಂದರು

ತಹಶೀಲ್ದಾರ್ ಅಮೃತ್ ಅತ್ರೇಶ್, ತಾಲ್ಲೂಕು ಪಂಚಾಯಿತಿ ಇಒ ಮಧು ಮತ್ತು ಬಿಇಒ ತಿಮ್ಮಯ್ಯ, ಬಸವಣ್ಣ-ದೇವರ ಮಠದ ಸಿದ್ದಲಿಂಗ ಸ್ವಾಮೀಜಿ ಅವರು ಕ್ರಮವಾಗಿ ರಾಷ್ಟ್ರ, ನಾಡು ಹಾಗೂ ಪರಿಷತ್ ಧ್ವಜಾರೋಹಣ ಮಾಡಿದರು. ಸಾಹಿತಿ ಮಣ್ಣೆಮೋಹನ್ ಅಧ್ಯಕ್ಷತೆಯಲ್ಲಿ ವಿಚಾರಗೋಷ್ಠಿ ನಡೆಯಿತು.

ಪ್ರಕಾಶ್‌ಮೂರ್ತಿ ಅವರ 'ನಿರಪರಾಧಿ', ಮುರಳೀಧರ್ ಅವರ 'ಆರದ ದೀಪ', ಸಿರಾಜ್ ಅಹಮದ್‌ರ 'ನವಿಲಿಗೆ ಸಾವಿರ ನಯನಗಳು', ಪ್ರೇಮಕುಮಾರ್ ಅವರ 'ಮನದ ಹನಿ', ನಂದಾದೀಪ ಅವರ 'ಕಾವ್ಯದರ್ಶಿನಿ' ಪುಸ್ತಕಗಳನ್ನು ಚೌಡಯ್ಯ ಹಾಗೂ ಜಿಲ್ಲಾ ಕಸಾಪ ಅಧ್ಯಕ್ಷ ಕೃಷ್ಣಪ್ಪ ಬಿಡುಗಡೆ ಮಾಡಿದರು.

ತಾಲ್ಲೂಕು ಕಸಾಪ ಅಧ್ಯಕ್ಷ ಪ್ರದೀಪ್, ಶಿವಾನಂದಾಶ್ರಮದ ರಮಣಾನಂದ ಸ್ವಾಮೀಜಿ, ಕಲಾವಿದರ ಸಂಘದ ಅಧ್ಯಕ್ಷ ಜಿ.ಗಂಗರಾಜು, ಪುರಸಭೆ ಮಾಜಿ ಅಧ್ಯಕ್ಷ ನಾರಾಯಣಗೌಡ, ಪದಾಧಿಕಾರಿಗಳಾದ ದಿನೇಶ್, ಶಿವಲಿಂಗಯ್ಯ, ಬೂದಿಹಾಳ್ ಕಿಟ್ಟಿ ಕಾರ್ಯಕ್ರಮದಲ್ಲಿ ಹಾಜರಿದ್ದರು.



ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಾಂಸ್ಕೃತಿಕ ಮತ್ತು ಹಿತರಕ್ಷಣಾ ಸಮಿತಿಯ ಅಂತರರಾಷ್ಟ್ರೀಯ ನಿರ್ದೇಶಕನಾಗಿ ನೇಮಕಗೊಂಡ ಗಾಯಕ ಮೋಹನ್ ಕೃಷ್ಣ ಅವರನ್ನು ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಪದಗ್ರಹಣ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಶಿವಕುಮಾರ್ ನಾಗರನವಿಲೆ, ನಿವೃತ್ತ ಐ.ಎ.ಎಸ್‌ಅಧಿಕಾರಿ ಸಿ.ಸೋಮಶೇಖರ್, ಸಂಗೀತ ನಿರ್ದೇಶಕ ಹಂಸಲೇಖ, ಸಾಹಿತಿ ಎಸ್‌ಜಿ. ಸಿದ್ದರಾಮಯ್ಯ, ದಿನೇಶ್ ಕುಮಾರ್ ಜೋಶಿ ಅಬಸೆ ಉಪಸ್ಥಿತರಿದ್ದರು.

ನಿಧನ ವಾರ್ತೆ

ಜಯಮ್ಮ

ಬೆಂಗಳೂರು: ಬಿಬಿಎಂಪಿಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಎಲ್. ಸುರೇಶ್ ಅವರ ತಾಯಿ ಜಯಮ್ಮ(72) ಅವರು ನಾಗಪುರದ-ಲ್ಲಿರುವ ಅವರ ಸ್ವಗೃಹದಲ್ಲಿ ಶುಕ್ರವಾರ ಸಂಜೆ ನಿಧನರಾದರು. ಹರಿಶ್ಚಂದ್ರ ಘಾಟ್‌ನಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.



ಜಯಮ್ಮ

ಆಸ್ತಿ ತೆರಿಗೆ ಹೆಚ್ಚು ಬಾಕಿ: ಮಾಲೀಕರ ಹೆಸರು ಪ್ರಕಟ


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರತಿಷ್ಠಿತ ಸಂಸ್ಥೆಗಳಾದ ರಹೇಜಾ ಹೋಟೆಲ್ಸ್, ಮಾನ್ಯತಾ ಪ್ರಮೋಟರ್ಸ್, ಬ್ರಿಗೇಡ್ ಫೌಂಡೇಷನ್ ಸೇರಿದಂತೆ ಶಿಕ್ಷಣ ಸಂಸ್ಥೆಗಳು, ಚಾರಿಟಬಲ್ ಟ್ರಸ್ಟ್‌ಗಳು, ಡೆವಲಪರ್‌ಗಳು ಲಕ್ಷಾಂತರ ರೂಪಾಯಿ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದ್ದಾರೆ.

ಎಂಟೂ ವಲಯಗಳಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಅಗ್ರ 50 ಆಸ್ತಿ ಮಾಲೀಕರ ಪಟ್ಟಿಯನ್ನು ಬಿಬಿಎಂಪಿ ಬಿಡುಗಡೆ ಮಾಡಿದೆ. ಇದರಲ್ಲಿ ಕೆಲವು ಆಸ್ತಿಗಳಿಗೆ ಬೀಗ ಹಾಕಲಾಗಿದೆ. ಕೆಲವು ಆಸ್ತಿಗಳನ್ನು 'ಅಟ್ಯಾಚ್' ಮಾಡಿಕೊಳ್ಳಲಾಗಿದೆ.

'ಅತಿ ಹೆಚ್ಚು ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿರುವ ಎಲ್ಲ ಆಸ್ತಿ ಮಾಲೀಕರಿಗೂ ನೋಟಿಸ್ ಜಾರಿ ಮಾಡಲಾಗಿದೆ. ಇದಕ್ಕೆ ಸ್ಪಂದಿಸದ ಎಲ್ಲ ಆಸ್ತಿಗಳಿಗೂ ಫಾರ್ಮ್ 13 ಜಾರಿ ಮಾಡಿ, ಉಪ ನೋಂದಣಾಧಿಕಾರಿ ಕಚೇರಿಯ ದಾಖಲೆಗಳಲ್ಲಿ ಬಿಬಿಎಂಪಿ ಹೆಸರನ್ನು ಸೇರಿಸುವ 'ಅಟ್ಯಾಚ್' ಪ್ರಕ್ರಿಯೆ ಆರಂಭಿಸಲಾಗಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಆಸ್ತಿ ತೆರಿಗೆ ಹೆಚ್ಚು ಬಾಕಿ ಉಳಿಸಿಕೊಂಡವರ ಪಟ್ಟಿಯನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ **https://bbmptax.karnataka.gov.in/documents/Top50TaxDefaulterslistofallZones.pdf** ಪ್ರಕಟಿಸಲಾಗಿದೆ.



ಅಗ್ರ 10 ಬಾಕಿದಾರರು

ಯಲಹಂಕ ವಲಯ

ಕ್ರ. ಸಂ	ಮಾಲೀಕರ ಹೆಸರು	ಬಾಕಿ ಆಸ್ತಿತೆರಿಗೆ
1	ಮಾನ್ಯತಾ ಪ್ರಮೋಟರ್ಸ್	₹1.89 ಕೋಟಿ
2	ಸುನಿತಾ ಬಿ. ವಿನಯ್ ಡಿ. ವಿದ್ಯಾಡಿ	₹18.04 ಲಕ್ಷ
3	ಕೆ. ಪದ್ಮನಾಭಯ್ಯ, ಪಿ. ರಾಕೇಶ್	₹17.02 ಲಕ್ಷ
4	ಎಚ್‌ಕೆಇಎಸ್ ಟ್ರಸ್ಟ್ ಬಸವರಾಜ ಪಾಟೀಲ್	₹15.09 ಲಕ್ಷ
5	ಎಎಚ್ ಮೆಮೋರಿಯಲ್ ಎಜುಕೇಷನ್ ಟ್ರಸ್ಟ್	₹13.64 ಲಕ್ಷ
6	ಡಾ. ಬಿ.ಆರ್ ಶೆಟ್ಟಿ	₹13.27 ಲಕ್ಷ
7	ಶ್ರೀ ಶಾರದಾ ವಿದ್ಯಾನಿಕೇತನ	₹12.68 ಲಕ್ಷ
8	ಅಬ್ದುಲ್ ಅಜೀಜ್ ಲಾಲ್ ಸಾಹೇಬ್	₹12.32 ಲಕ್ಷ
9	ಸೂರ್ಯ ಡೆವಲಪರ್ಸ್	₹12.20 ಲಕ್ಷ
10	ಕೆಪಿಇಎಸ್ ಪ್ರಾಪರ್ಟಿ	₹11.59 ಲಕ್ಷ

ದಕ್ಷಿಣ ವಲಯ

ಕ್ರ. ಸಂ	ಮಾಲೀಕರ ಹೆಸರು	ಬಾಕಿ ಆಸ್ತಿತೆರಿಗೆ
1	ಗಂಗಾಧರ್ ಟಿ, ರಾಮಚಂದ್ರ ಟಿ, ಆನಂದ್ ಎಸ್.ಟಿ, ಮಂಜುನಾಥ್	₹1.85 ಕೋಟಿ
2	ಕೆ.ವಿ. ಶ್ರೀನಿವಾಸ್	₹69.05 ಲಕ್ಷ
3	ನಿರಂಜನ್ ಕೈಗಾರಿಕಾ ಕೇಂದ್ರದ ಪಾಲುದಾರ ಸಿ. ಜಯರಾಂ	₹50.46 ಲಕ್ಷ
4	ಲಕ್ಷ್ಮೀನಾರಾಯಣ ಎಂ	₹32.30 ಲಕ್ಷ
5	ಚರ್ಚ್ ಆಫ್ ಸೌತ್ ಇಂಡಿಯಾ	₹20.66 ಲಕ್ಷ
6	ಎಲ್. ಗೋವಿಂದರಾಜ್	₹19.10 ಲಕ್ಷ
7	ಸೂರ್ಯನಾರಾಯಣರಾವ್	₹17.03 ಲಕ್ಷ
8	ಶ್ರೀರಾಮ ಎಂಟರ್‌ಪ್ರೈಸಸ್, ಸುಶೀಲಮ್ಮ, ಎಸ್. ವಿನೋದ್‌ಕುಮಾರ್	₹15.12 ಲಕ್ಷ
9	ಸುರಭಿ ಚಿಟ್ಸ್ ಲಿ.,	₹14.11 ಲಕ್ಷ
10	ತಿಮ್ಮೇಗೌಡ ಎಂ., ಪ್ರಸನ್ನಗೌಡ ಟಿ., ರಾಘವೇಂದ್ರಗೌಡ	₹12.77 ಲಕ್ಷ

ಪಶ್ಚಿಮ ವಲಯ

ಕ್ರ. ಸಂ	ಮಾಲೀಕರ ಹೆಸರು	ಬಾಕಿ ಆಸ್ತಿತೆರಿಗೆ
1	ಪ್ರಮೀಳಾ ಸಂತೋಷ್ ಲ್ಯಾಂಡ್ ಡೆವಲಪರ್ಸ್, ಕೆ.ಜಿ ಪ್ರಮೀಳಾ	₹26.58 ಲಕ್ಷ
2	ಗೋಧಾ ಕೃಷ್ಣಪ್ರಸಾದ್	₹19 ಲಕ್ಷ
3	ಗೋಕುಲ ಎಜುಕೇಷನ್ ಟ್ರಸ್ಟ್	₹16.91 ಲಕ್ಷ
4	ಆದರ್ಶ ವಿದ್ಯಾ ಇನ್‌ಸ್ಟಿಟ್ಯೂಷನ್	₹16.83 ಲಕ್ಷ
5	ಶ್ರೀರಾಮ ಮಂದಿರ	₹15.49 ಲಕ್ಷ
6	ಶ್ರೀರಾಮಕೃಷ್ಣ ಹೋಟೆಲ್ ಆ್ಯಂಡ್ ಎಂಟರ್‌ಪ್ರೈಸಸ್	₹14.21 ಲಕ್ಷ
7	ರಂಗನಾಥ ಟಾಕೀಸ್	₹14.13 ಲಕ್ಷ
8	ಫಾರ್ಚ್ಯೂನ ಬಿಲ್ಡ್‌ಕಾನ್, ಎಸ್.ವಿ. ನರೇಶ್ ಕುಮಾರ್	₹13.26 ಲಕ್ಷ
9	ಗೋಕುಲ ಎಜುಕೇಷನ್ ಟ್ರಸ್ಟ್	₹12.42 ಲಕ್ಷ
10	ಕಯಾಂಚಿ ಹೋಟೆಲ್ ಆ್ಯಂಡ್ ಎಂಜಿನಿಯರಿಂಗ್ ಪ್ರೈ.ಲಿ.	₹11.89 ಲಕ್ಷ

ರಾಜರಾಜೇಶ್ವರಿನಗರ ವಲಯ

ಕ್ರ. ಸಂ	ಮಾಲೀಕರ ಹೆಸರು	ಬಾಕಿ ಆಸ್ತಿತೆರಿಗೆ
1	ಲೆಸ್ಪಿ ಸೌಜನ್ಯ ಪಟೇಲ್ ಟ್ರಸ್ಟ್	₹1.14 ಕೋಟಿ
2	ಜ್ಞಾನ ಸ್ವೀಕಾರ್ ಫೌಂಡೇಷನ್, ಎಚ್.ಡಿ. ಬಾಲಕೃಷ್ಣಗೌಡ	₹1.11 ಕೋಟಿ
3	ಎಂ. ಮಂಜುನಾಥ್	₹52.08 ಲಕ್ಷ
4	ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಅಧ್ಯಕ್ಷ, ಸಿದ್ಧಗಂಗಾ ಮಠ	₹51.57 ಲಕ್ಷ
5	ಕಮ್ಮವಾರಿ ಸಂಘಮ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ	₹47.83 ಲಕ್ಷ
6	ಆರ್. ರಾಜಗೋಪಾಲ ನಾಯ್ಡು	₹44.84 ಲಕ್ಷ
7	ಜ್ಞಾನಮಿತ್ರ ಎಜುಕೇಷನ್ ಸೊಸೈಟಿ	₹41.58 ಲಕ್ಷ
8	ಶರೀಫ್ ಕನ್‌ಸ್ಟ್ರಕ್ಷನ್, ಜಿಯಾ ಉಲ್ಲಾ ಶರೀಫ್	₹36.01 ಲಕ್ಷ
9	ಸರವಣ ಅಲಾಯ್ ಸ್ಟೀಲ್ಸ್ ಪ್ರೈ.ಲಿ	₹26.48 ಲಕ್ಷ
10	ಜೆಮಿನಿ ಡೈಯಿಂಗ್ ಆ್ಯಂಡ್ ಪ್ರಿಂಟಿಂಗ್ ಮಿಲ್ಸ್ ಪ್ರೈ.ಲಿ	₹22.69 ಲಕ್ಷ

ಮಹದೇವಪುರ ವಲಯ

ಕ್ರ. ಸಂ	ಮಾಲೀಕರ ಹೆಸರು	ಬಾಕಿ ಆಸ್ತಿತೆರಿಗೆ
1	ಬ್ರಿಗೇಡ್ ಫೌಂಡೇಷನ್	₹1.46 ಕೋಟಿ
2	ಸ್ಟೀವರ್ಡ್ಸ್ ಅಸೋಸಿಯೇಷನ್ ಇನ್ ಇಂಡಿಯಾ	₹77.63 ಲಕ್ಷ
3	ಎನ್.ಎಸ್. ನಂದೀಶ್	₹37.88 ಲಕ್ಷ
4	ಜಿ. ರಾಜು ಮತ್ತು ಇತರರು	₹35.24 ಲಕ್ಷ
5	ಆರ್. ಭೂಪಾಲ್ ರೆಡ್ಡಿ ಮತ್ತು ಕಾವ್ಯಾ ಬಿ. ರೆಡ್ಡಿ	₹34.62 ಲಕ್ಷ
6	ಎನ್. ಚಿಕ್ಕೇಗೌಡ	₹28.05 ಲಕ್ಷ
7	ಹಾರ್ವೆಸ್ಟ್ ಹೋಟೆಲ್ಸ್ ಆ್ಯಂಡ್ ಸರ್ವ್ಡ್ ಅಪಾರ್ಟ್‌ಮೆಂಟ್ಸ್	₹27.54 ಲಕ್ಷ
8	ಸಾವಿತ್ರಮ್ಮ	₹26.82 ಲಕ್ಷ
9	ನರಸಿಂಹರೆಡ್ಡಿ, ಚಂದ್ರಶೇಖರ್ ರೆಡ್ಡಿ, ರಾಜಶೇಖರ್ ರೆಡ್ಡಿ	₹26.76 ಲಕ್ಷ
10	ಸ್ಟರ್ಲಿಂಗ್ ಅರ್ಬನ್ ಇನ್‌ಫ್ರಾ ಪ್ರಾಜೆಕ್ಟ್ಸ್	₹25.23 ಲಕ್ಷ

ಪೂರ್ವ ವಲಯ

ಕ್ರ. ಸಂ	ಮಾಲೀಕರ ಹೆಸರು	ಬಾಕಿ ಆಸ್ತಿತೆರಿಗೆ
1	ಕೆ. ರಹೇಜಾ ಹೋಟೆಲ್ಸ್ ಆ್ಯಂಡ್ ಎಸ್ಟೇಟ್ಸ್	₹36.45 ಲಕ್ಷ
2	ಕೆ. ರಹೇಜಾ ಹೋಟೆಲ್ಸ್ ಆ್ಯಂಡ್ ಎಸ್ಟೇಟ್ಸ್	₹28.31 ಲಕ್ಷ
3	ಕೆ. ರಹೇಜಾ ಹೋಟೆಲ್ಸ್ ಆ್ಯಂಡ್ ಎಸ್ಟೇಟ್ಸ್	₹23.25 ಲಕ್ಷ
4	ಸೋಮೇಶ್ವರ ಬಿಲ್ಡರ್ಸ್	₹19.32 ಲಕ್ಷ
5	ಹೋಟೆಲ್ ಅಜಂತಾ	₹17.91 ಲಕ್ಷ
6	ಎಚ್. ಮುರಳೀಧರ	₹16.49 ಲಕ್ಷ
7	ಎಂ.ಎನ್. ಗೋಪಾಲಕೃಷ್ಣ, ರೇಣುಕಾ ಗೋಪಾಲಕೃಷ್ಣ	₹16.01 ಲಕ್ಷ
8	ಸೌಭಾಗ್ಯಲಕ್ಷ್ಮಿ ಎಸ್	₹15.93 ಲಕ್ಷ
9	ಜಯಂತಿ ಶಾಮ್	₹15.54 ಲಕ್ಷ
10	ಮಲ್ಲೂರ್ ಫ್ಲೋರಾ ಪ್ರೈ.ಲಿ., ಮುನಿಲಕ್ಕಪ್ಪ	₹15.33 ಲಕ್ಷ

ದಾಸರಹಳ್ಳಿ ವಲಯ

ಕ್ರ. ಸಂ	ಮಾಲೀಕರ ಹೆಸರು	ಬಾಕಿ ಆಸ್ತಿತೆರಿಗೆ
1	ಶ್ರೀನಿವಾಸ ಎಜುಕೇಷನ್ ಚಾರಿಟಬಲ್ ಟ್ರಸ್ಟ್	₹11.59 ಕೋಟಿ
2	ಕೋಟಕ್ ಉರ್ಜ ಪ್ರೈ.ಲಿ., ಡಾ.ಟಿ.ಸಿ. ಕಾಶಿವಿಶ್ವನಾಥನ್	₹16.11 ಲಕ್ಷ
3	ಶಂಕರೇಗೌಡ ಜಿ.ಬಿ	₹14.98 ಲಕ್ಷ
4	ಸಿ. ಲೋಕೇಶ್, ಮೋಹನ್ ಟಾಕೀಸ್	₹9.90 ಲಕ್ಷ
5	ಅಜಿತ್‌ಕುಮಾರ್ ಬಾಳಸಾಹೇಬ್	₹8.66 ಲಕ್ಷ
6	ಪಿ.ಸಿ. ಹರಿ ಮಹೇಶ್	₹7.98 ಲಕ್ಷ
7	ಎನ್. ಗಂಗನರಸಯ್ಯ	₹7.64 ಲಕ್ಷ
8	ಪಿ. ಮಂಜಪ್ಪ	₹7.02 ಲಕ್ಷ
9	ಟಿ.ಎ. ಗಾಯಿತ್ರಿ	₹6.26 ಲಕ್ಷ
10	ಸೌಂದರ್ಯ ಎಜುಕೇಷನ್ ಟ್ರಸ್ಟ್, ಪಿ. ಮಂಜಪ್ಪ	₹6.08 ಲಕ್ಷ

ಬೊಮ್ಮನಹಳ್ಳಿ ವಲಯ

ಕ್ರ. ಸಂ	ಮಾಲೀಕರ ಹೆಸರು	ಬಾಕಿ ಆಸ್ತಿತೆರಿಗೆ
1	ಲಿಬರ್ಟಿ ರೆಸ್ಟೋರೆಂಟ್ ಪ್ರೈ.ಲಿ.	₹19.62 ಲಕ್ಷ
2	ಬಿ.ಎಂ. ಮುನಿರಾಮ್ ರೆಡ್ಡಿ	₹18.58 ಲಕ್ಷ
3	ಬಾಬಾ ಸಾಹೇಬ್ ಅಂಬೇಡ್ಕರ್ ಎಜುಕೇಷನ್ ಸೊಸೈಟಿ	₹18.06 ಲಕ್ಷ
4	ಆರ್. ಸುಧಾ ಶಿವಶಂಕರ್, ಎ.ಆರ್. ಶಶಿಕಲಾ, ಎ.ಆರ್. ಅಶೋಕ	₹17.71 ಲಕ್ಷ
5	ಕುಮಾರ್ ಎಂ	₹16.98 ಲಕ್ಷ
6	ಎಂ. ಬಾಬು ರೆಡ್ಡಿ	₹16.98 ಲಕ್ಷ
7	ಗೀತಾ ಬಾಬು ರೆಡ್ಡಿ	₹14.28 ಲಕ್ಷ
8	ಎನ್. ರಘುನಾಥ್	₹13.35 ಲಕ್ಷ
9	ಯುನೂಸ್ ಖಾನ್, ಸುಲ್ತಾನ ಬೇಗಂ	₹12.17 ಲಕ್ಷ
10	ಬಿ.ಎಂ. ಶ್ರೀನಿವಾಸ ರೆಡ್ಡಿ	₹10.14 ಲಕ್ಷ

'ಇಂಗ್ಲಿಷ್ ಮಾಧ್ಯಮ ವಾಪಸ್: ಪರಿಶೀಲನೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ವಾಪಸ್ ಪಡೆಯುವ ಬಗ್ಗೆ ಗಂಭೀರ ಪರಿಶೀಲನೆ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕಲಾಮಂದಿರದಲ್ಲಿ 'ಪ.ಮಲ್ಲೇಶ್-90' ಸ್ಮರಣಾರ್ಥ ನಡೆಯುತ್ತಿರುವ ವಿಚಾರಸಂಕಿರಣದಲ್ಲಿ ಶುಕ್ರವಾರ ಅವರು ಮಾತನಾಡಿದರು.

ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ್, 'ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 3 ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಐದನೇ ತರಗತಿವರೆಗೂ ಇಂಗ್ಲಿಷ್ ಮಾಧ್ಯಮ ಪ್ರಾರಂಭಿಸಲು ಹೊರಟಿದ್ದಾರೆ. ಅದನ್ನು ತಪ್ಪಿಸಬೇಕು' ಎಂದು ಕೋರಿದರು.

'ಪ.ಮಲ್ಲೇಶ್ ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಬೇಕೆಂದು ಹೋರಾಟ ನಡೆಸಿದವರು. ನೀವು 2015ರಲ್ಲಿ ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಬೇಕೆಂದು ವಿಧಾನಸಭೆಯಲ್ಲಿ ವಿಧೇಯಕ ಮಂಡಿಸಿ ಅಂಗೀಕಾರ ಪಡೆದಿದ್ದೀರಿ' ಎಂದು ನೆನಪಿಸಿದರು.

'ಮಲ್ಲೇಶ್ ಅವರು ಕನ್ನಡ ಮಾಧ್ಯಮದ ಬಗ್ಗೆ ಹೊಂದಿದ್ದ ಬದ್ಧತೆ ಎಲ್ಲರಿಗೂ ಗೊತ್ತಿದೆ. ಒತ್ತಾಯವನ್ನು ಗಂಭೀರವಾಗಿ ಪರಿಗಣಿಸಿ ಕ್ರಮವಹಿಸುವೆ' ಎಂದು ಸಿದ್ದರಾಮಯ್ಯ ಉತ್ತರಿಸಿದರು.

₹37.85 ಲಕ್ಷ ಮೌಲ್ಯದ ಚಿನ್ನ ಕಳ್ಳಸಾಗಣೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಫೆ.28ರಂದು ಶ್ರೀಲಂಕಾ ಏರ್‌ವೇಸ್ ಮೂಲಕ ಆಗಮಿಸಿದ್ದ ಪ್ರಯಾಣಿಕನೊಬ್ಬ ಅರ್ಧ ಕೆ.ಜಿಗೂ ಅಧಿಕ ಚಿನ್ನ ಕಳ್ಳಸಾಗಣೆ ಮಾಡುವ ವೇಳೆ ವೈಮಾನಿಕ ಗುಪ್ತಚರ ಸಿಬ್ಬಂದಿಗೆ ಸಿಕ್ಕಿ ಬಿದ್ದಿದ್ದಾನೆ.

ಆರೋಪಿ ಬಳಿ 611 ಗ್ರಾಂ ಚಿನ್ನ ಪತ್ತೆಯಾಗಿದೆ. ಇದರ ಮೌಲ್ಯ ₹37.85ಲಕ್ಷ ಎಂದು ಅಂದಾಜಿಸಲಾಗಿದೆ.

ಸುದ್ದಿ 2 ನಿಮಿಷ

ಭಾರತ್ ಮ್ಯಾಟ್ರಿಮೋನಿಗೆ ಪ್ಲೇ ಸ್ಟೋರ್‌ನಿಂದ ಕೊಕ್?

ನವದೆಹಲಿ (ಪಿಟಿಐ): ನಿಗದಿಪಡಿಸಿದ ಸೇವಾ ಶುಲ್ಕ ಭರಿಸಲು ಹಿಂದೇಟು ಹಾಕಿರುವ ಭಾರತ್ ಮ್ಯಾಟ್ರಿಮೋನಿ ಸೇರಿದಂತೆ ದೇಶದ ಪ್ರಮುಖ ಹತ್ತು ಕಂಪನಿಗಳ ಆ್ಯಪ್‌ಗಳನ್ನು ತನ್ನ ಪ್ಲೇ ಸ್ಟೋರ್‌ನಿಂದ ತೆಗೆದು ಹಾಕಲಾಗುವುದು ಎಂದು ಗೂಗಲ್ ಕಂಪನಿ ಶುಕ್ರವಾರ ತಿಳಿಸಿದೆ.

ಕ್ರಿಶ್ಚಿಯನ್ ಮ್ಯಾಟ್ರಿಮೋನಿ, ಮುಸ್ಲಿಂ ಮ್ಯಾಟ್ರಿಮೋನಿ ಸೇರಿದಂತೆ ಹಲವು ಆ್ಯಪ್‌ಗಳನ್ನು ಭಾರತ್ ಮ್ಯಾಟ್ರಿಮೋನಿ ಕಂಪನಿಯು ಅಭಿವೃದ್ಧಿಪಡಿಸಿದೆ. ಆದರೆ, ಗೂಗಲ್ ನಿಗದಿಪಡಿಸಿರುವ ಶುಲ್ಕ ಪಾವತಿಸುವಲ್ಲಿ ಈ ಕಂಪನಿಯು ನಿರ್ಲಕ್ಷ್ಯವಹಿಸಿದೆ ಎನ್ನಲಾಗಿದೆ.

ಹಾಗಾಗಿ, ಆ ಆ್ಯಪ್‌ಗಳಿಗೆ ಗೂಗಲ್ ಪ್ಲೇ ಸ್ಟೋರ್‌ನಿಂದ ಕೊಕ್ ನೀಡಲು ತೀರ್ಮಾನಿಸಲಾಗಿದೆ. ಈ ಆ್ಯಪ್‌ಗಳಲ್ಲಿ ಸಂಗಾತಿಗಳನ್ನು ಹುಡುಕಾಟ ನಡೆಸಲು ಇನ್ನು ಮುಂದೆ ಸಾಧ್ಯವಾಗುವುದಿಲ್ಲ ಎಂದು ಹೇಳಲಾಗಿದೆ.

ಕಾರಣ ಏನು?: ಗೂಗಲ್ ಕಂಪನಿಯ ಶುಲ್ಕ ನೀತಿ ಖಂಡಿಸಿ ಇತ್ತೀಚೆಗೆ ಹತ್ತು ಸ್ಟಾರ್ಟ್‌ಅಪ್‌ಗಳು ಸುಪ್ರೀಂ ಕೋರ್ಟ್‌ನ ಮೊರೆಹೋಗಿದ್ದವು.

ಫೆಬ್ರುವರಿ 9ರಂದು ಅರ್ಜಿಯ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅಧ್ಯಕ್ಷತೆಯ ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಸತೀಶ್ ಚಂದ್ರ ಶರ್ಮಾ ಅವರಿದ್ದ ತ್ರಿಸದಸ್ಯ ಪೀಠವು, ಗೂಗಲ್ ಕೈಗೊಂಡಿರುವ ಕ್ರಮಕ್ಕೆ ತಡೆಯಾಜ್ಞೆ ನೀಡಲು ನಿರಾಕರಿಸಿತ್ತು.

ಮೂರು ವಾರಗಳ ಬಳಿಕ ಗೂಗಲ್, ಆ್ಯಪ್‌ಗಳನ್ನು ತೆಗೆದುಹಾಕಲು ನಿರ್ಧರಿಸಿದೆ.

ಕಳ್ಳತನ: ಆರೋಪಿ ಸೆರೆ, ಚಿನ್ನ ವಶ



ನೆಲಮಂಗಲ: ಹಾಡ ಹಗಲಲ್ಲೇ ಮನೆಗಳ ಬೀಗ ಒಡೆದು ಕಳ್ಳತನ ಮಾಡಿದ್ದ ಆರೋಪಿ ಕೋಲಾರ ಜಿಲ್ಲೆ ಬಂಗಾರಪೇಟೆಯ ಬಟ್ಟೆ ವ್ಯಾಪಾರಿ ಸೈಯದ್ ಅಹಮದ್ (39)ನನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ ₹25 ಲಕ್ಷ ಮೌಲ್ಯದ 531 ಗ್ರಾಂ ಚಿನ್ನದ ಒಡವೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಆರೋಪಿ ವಿರುದ್ಧ ವಿವಿಧ ಠಾಣೆಗಳಲ್ಲಿ 45ಕ್ಕೂ ಅಧಿಕ ಮನೆಕಳ್ಳತನದ ಪ್ರಕರಣಗಳು ದಾಖಲಾಗಿವೆ.


ವಶಪಡಿಸಿಕೊಂಡಿದ್ದ ಚಿನ್ನಾಭರಣಗಳನ್ನು ಮಾಲೀಕರಿಗೆ ಹಸ್ತಾಂತರಿಸಲಾಯಿತು. ಡಿವೈಎಸ್ಪಿ ಜಗದೀಶ್, ಇನ್‌ಸ್ಪೆಕ್ಟರ್ ಎಸ್.ಡಿ.ಶಶಿಧರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ. ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ತಂಡವನ್ನು ಎಸ್‌ಪಿ ಅಭಿನಂದಿಸಿದರು.

ಬೆಳಗಾವಿಗೆ ಬಂತು ಆನೆ!

ಬೆಳಗಾವಿ: ನಗರದ ಹೊರವಲಯದಲ್ಲಿ ಶುಕ್ರವಾರ ಬೆಳಿಗ್ಗೆ ಆನೆಯೊಂದು ಹೊಲಗದ್ದೆಗಳಲ್ಲಿ ಸುತ್ತಾಡಿದ್ದು ಅಲ್ಲದೇ, ಜನವಸತಿ ಪ್ರದೇಶದಲ್ಲೂ ಓಡಾಡಿತು. ಆದರೆ, ಯಾರಿಗೂ ಯಾವುದೇ ಹಾನಿ ಮಾಡಲಿಲ್ಲ.

ವೈಭವನಗರ ಕೆರೆ ಅಂಗಳದಲ್ಲಿ ಮೊದಲಿಗೆ ಕಾಣಿಸಿಕೊಂಡ ಆನೆಯು ಅಲ್ಲಿಂದ ಶಾಹೂನಗರ, ಕಂಗ್ರಾಳಿ ಬಿ.ಕೆ., ಬೆಕ್ಕಿನಕೆರೆ ಗ್ರಾಮಗಳಲ್ಲಿ ಓಡಾಡಿತು. ಮೊಬೈಲ್ ಫೋನ್‌ನಲ್ಲಿ ಚಿತ್ರಗಳನ್ನು ಕ್ಲಿಕ್ಕಿಸಿ, ವಿಡಿಯೊ ಮಾಡಿಕೊಂಡು ಜನರು, ಶಾಲಾಕಾಲೇಜು ವಿದ್ಯಾರ್ಥಿಗಳು ಖುಷಿಪಟ್ಟರು. ವೈಭವ ನಗರದ ಮನೆಯೊಂದರ ಹಿತ್ತಲಿಗೆ ಹೋದ ಆನೆ, ಬ್ಯಾರಲ್‌ಗಳನ್ನು ಕೆಡವಿ ನೀರಿಗಾಗಿ ತಡಕಾಡಿತು. ಅದನ್ನು ಕಂಡು ಸುತ್ತಲಿನ ಮನೆಗಳವರು ಹೊರ ಓಡಿಬಂದರು.

ಸ್ಥಳಕ್ಕೆ ಬಂದ ಅರಣ್ಯ ಇಲಾಖೆಯ ಸಿಬ್ಬಂದಿ ಪಟಾಕಿಗಳನ್ನು ಸಿಡಿಸುತ್ತ, ದೊಡ್ಡ ಶಬ್ದ ಮಾಡುತ್ತ ಆನೆಯನ್ನು ಕಾಡಿನತ್ತ ಅಟ್ಟಿದರು.



ಕಂಗ್ರಾಳಿ ಬಿ.ಕೆ.ಗ್ರಾಮದಲ್ಲಿ ಕಾಡಾನೆ, ಅರಣ್ಯಾಧಿಕಾರಿಯೊಬ್ಬರನ್ನು ಬೆನ್ನಟ್ಟಿ ಬಂತು

ಕೆ.ಶಿವರಾಮ್‌ಗೆ ಕಂಬನಿಯ ವಿದಾಯ

ಪ್ರಜಾವಾಣಿ ವಾರ್ತೆ

ರಾಮನಗರ: ನಿವೃತ್ತ ಐಎಎಸ್ ಅಧಿಕಾರಿ, ನಟ ಹಾಗೂ ರಾಜಕಾರಣಿ ಕೆ.ಶಿವರಾಮ್ (71) ಅವರ ಅಂತ್ಯಕ್ರಿಯೆ ಸ್ವಗ್ರಾಮ ಬಿಡದಿ ಹೋಬಳಿ ಉರಗಹಳ್ಳಿಯಲ್ಲಿ ನೂರಾರು ಅಭಿಮಾನಿಗಳ ಸಮ್ಮುಖದಲ್ಲಿ ಶುಕ್ರವಾರ ನೆರವೇರಿತು. 'ಜೈ ಭೀಮ್', 'ಜೈ ಶಿವರಾಮ್', 'ಶಿವರಾಮ್ ಚಿರಾಯುವಾಗಲಿ' ಎಂಬ ಘೋಷಣೆಯೊಂದಿಗೆ ಅವರ ಅಭಿಮಾನಿಗಳು ಕಣ್ಣೀರ ವಿದಾಯ ಹೇಳಿದರು.

ಅನಾರೋಗ್ಯದಿಂದಾಗಿ ಗುರುವಾರ ಸಂಜೆ ಮೃತಪಟ್ಟಿದ್ದ ಶಿವರಾಮ್ ಅವರ ಶವವನ್ನು ಅಭಿಮಾನಿಗಳ ದರ್ಶನಕ್ಕಾಗಿ ಶುಕ್ರವಾರ ಬೆಳಿಗ್ಗೆಯಿಂದ ಸಂಜೆವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇಡಲಾಗಿತ್ತು. ನಂತರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಸಲು ತೀರ್ಮಾನಿಸಿ ಸಂಜೆ 5.30ರ ಸುಮಾರಿಗೆ ಉರಗಹಳ್ಳಿಗೆ ಶವವನ್ನು ತರಲಾಯಿತು.

ಗ್ರಾಮದಲ್ಲಿ ಅವರು ಸ್ಥಾಪಿಸಿರುವ ವಿಶ್ವಚೇತನ ಪ್ರೌಢಶಾಲೆ ಆವರಣದಲ್ಲಿ ಸ್ಥಳೀಯರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಂತರ ಗ್ರಾಮದಲ್ಲಿ ಮೆರವಣಿಗೆ ಮೂಲಕ ತೋಟಕ್ಕೆ 7 ಗಂಟೆ ಸುಮಾರಿಗೆ ತರಲಾಯಿತು. ರಾತ್ರಿ 8 ಗಂಟೆಗೆ ಅಂತ್ಯಕ್ರಿಯೆ ನೆರವೇರಿತು. ಅಂತ್ಯಕ್ರಿಯೆ ವೇಳೆ ಬೌದ್ಧ ಧರ್ಮದ ಪಂಚಶೀಲ ತತ್ವಗಳು ಹಾಗೂ ಅಲ್ಲಮಪ್ರಭು ವಚನಗಳನ್ನು ಸಾಮೂಹಿಕವಾಗಿ ಪಠಿಸಲಾಯಿತು. ಚಿತ್ರದುರ್ಗ ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ ಮಾರ್ಗದರ್ಶನದಲ್ಲಿ ಶಿವರಾಮ್ ಅವರ ಹಿರಿಯ ಅಳಿಯ ಪ್ರದೀಪ್ ಅಂತಿಮ ವಿಧಿ-ವಿಧಾನ ಪೂರೈಸಿದರು.



ಉರಗಹಳ್ಳಿಯಲ್ಲಿ ಶುಕ್ರವಾರ ರಾತ್ರಿ ನಡೆದ ಕೆ.ಶಿವರಾಮ್ ಅವರ ಅಂತ್ಯಕ್ರಿಯೆ ಸಂದರ್ಭದಲ್ಲಿ ದುಃಖತಪ್ತ ಕುಟುಂಬ ವರ್ಗ –ಪ್ರಜಾವಾಣಿ ಚಿತ್ರ

> **ನಾನು ಮೊದಲ ಸಲ ಶಾಸಕನಾಗಿದ್ದಾಗ ಶಿವರಾಮ್ ಅವರು ಬೆಂಗಳೂರಿನಲ್ಲಿ ಅಧಿಕಾರಿಯಾಗಿದ್ದರು. ಅಂದಿನಿಂದಲೂ ಅವರೊಂದಿಗೆ ಉತ್ತಮ ಸ್ನೇಹವಿತ್ತು. ಅವರ ಸಾವು ನೋವು ತಂದಿದೆ**
>
> **ರಾಮಲಿಂಗಾ ರೆಡ್ಡಿ,** ಜಿಲ್ಲಾ ಉಸ್ತುವಾರಿ ಸಚಿವ

ಅತ್ಯಾಚಾರ: ಮಹಡಿಯಿಂದ ತಳ್ಳಿ ಮಹಿಳೆಯ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹಣದ ಆಮಿಷವೊಡ್ಡಿ ಮಹಿಳೆಯೊಬ್ಬರನ್ನು ಕರೆದೊಯ್ದು ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಆರೋಪದಡಿ ಮುಬಾರಕ್‌ನನ್ನು (38) ಸಂಪಂಗಿರಾಮನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಂಜನಪ್ಪ ಗಾರ್ಡನ್‌ನ ಮುಬಾರಕ್, ಆಟೊ ಚಾಲಕ. ಫೆ.19ರಂದು ತಡರಾತ್ರಿ ಮಹಿಳೆಯನ್ನು ಕೊಂದು ಸಾಕ್ಷ್ಯ ನಾಶ ಮಾಡಿ ತಲೆಮರೆಸಿಕೊಂಡಿದ್ದ ಈತನನ್ನು ಇತ್ತೀಚೆಗೆ ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸಿಟಿ ಮಾರುಕಟ್ಟೆಯಲ್ಲಿ ಪರಿಚಯ: 'ಆರೋಪಿ ಮುಬಾರಕ್ ರಾತ್ರಿ 12 ಗಂಟೆ ಸುಮಾರಿಗೆ ತನ್ನ ಆಟೊದಲ್ಲಿ ಸಿಟಿ ಮಾರುಕಟ್ಟೆ ಬಳಿ ಹೋಗಿದ್ದ. ಅಲ್ಲಿಯೇ ಈತನಿಗೆ ಮಹಿಳೆ ಪರಿಚಯವಾಗಿತ್ತು. ಹಣ ನೀಡುವುದಾಗಿ ಹೇಳಿದ್ದ ಆರೋಪಿ, ಮಹಿಳೆಯನ್ನು ಆಟೊದಲ್ಲಿ ಹತ್ತಿಸಿಕೊಂಡು ಸ್ಥಳದಿಂದ ಹೊರಟಿದ್ದ' ಎಂದು ಅಧಿಕಾರಿ ತಿಳಿಸಿದರು.

'ನಿರ್ಮಾಣ ಹಂತದ ಕಟ್ಟಡವೊಂದಕ್ಕೆ ಮಹಿಳೆಯನ್ನು ಕರೆದೊಯ್ದಿದ್ದ ಆರೋಪಿ, ಅವರ ಮೇಲೆ ಅತ್ಯಾಚಾರ ಎಸಗಿದ್ದ. ಬಳಿಕ, ಇಬ್ಬರ ನಡುವೆ ಗಲಾಟೆ ಶುರುವಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು' ಎಂದು ಹೇಳಿದರು.

ಕಟ್ಟಡದಿಂದ ತಳ್ಳಿ ಕೊಲೆ: 'ಅತ್ಯಾಚಾರದ ವಿರುದ್ಧ ಪೊಲೀಸರಿಗೆ ಮಾಹಿತಿ ನೀಡುವುದಾಗಿ ಮಹಿಳೆ ಹೇಳಿದ್ದರು. ಇದರಿಂದ ಹೆದರಿದ್ದ ಆರೋಪಿ ಮುಬಾರಕ್, ಮಹಿಳೆಯನ್ನು ಮೊದಲ ಮಹಡಿಯಿಂದ ತಳ್ಳಿ ಕೊಂದಿದ್ದ. ನಂತರ ಸ್ಥಳದಿಂದ ಪರಾರಿಯಾಗಿದ್ದ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಫೆ.20ರಂದು ಬೆಳಿಗ್ಗೆ ಮೃತದೇಹ ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಕಟ್ಟಡದಿಂದ ಬಿದ್ದು ಮಹಿಳೆ ಮೃತಪಟ್ಟಿರಬಹುದೆಂದು ಊಹಿಸಲಾಗಿತ್ತು. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿತ್ತು' ಎಂದು ಹೇಳಿದರು.

ವೈದ್ಯರ ವರದಿ ಸುಳಿವು: 'ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು, ಮಹಿಳೆ ಮೇಲೆ ಅತ್ಯಾಚಾರ ನಡೆದಿರುವುದಾಗಿ ಹೇಳಿದ್ದರು. ಇದೇ ಸುಳಿವು ಆಧರಿಸಿ ಘಟನಾ ಸ್ಥಳ ಹಾಗೂ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಸಂಗ್ರಹಿಸಲಾಗಿತ್ತು. ಆಗಲೇ ಆಟೊ ನೋಂದಣಿ ಸಂಖ್ಯೆ ಪತ್ತೆಯಾಗಿತ್ತು. ಚಾಲಕನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ' ಎಂದು ಅಧಿಕಾರಿ ತಿಳಿಸಿದರು.

ಅಂದಾನಪ್ಪ ಲೇಔಟ್ ರಸ್ತೆಗೆ ಕಾಂಕ್ರೀಟ್

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಪೀಣ್ಯ ದಾಸರಹಳ್ಳಿ: ಗುಂಡಿಗಳಿಂದ ಕೂಡಿದ್ದ, ದೂಳುಮಯವಾಗಿದ್ದ ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಅಂದಾನಪ್ಪ ಲೇಔಟ್ ರಸ್ತೆಯನ್ನು ದುರಸ್ತಿಗೊಳಿಸಿ ಕಾಂಕ್ರೀಟ್ ಹಾಕಿಸಿ ಅಭಿವೃದ್ಧಿಪಡಿಸಲಾಗಿದೆ.

ಅಂದಾನಪ್ಪ ಲೇಔಟ್‌ನ ಗಣಪತಿ ನಗರದ ರಸ್ತೆಯಿಂದ ತಮ್ಮೇನಹಳ್ಳಿ ಕಡೆಗೆ ಹೋಗುವ ಈ ರಸ್ತೆ ತುಂಬಾ ಗುಂಡಿಗಳಿದ್ದವು. ದೂಳುಮಯವಾಗಿತ್ತು. ವಾಹನಗಳು ಸಂಚರಿಸಿದಾಗ ಉಂಟಾಗುವ ದೂಳಿನಿಂದ ಜನರು ರಸ್ತೆಯಲ್ಲಿ ಓಡಾಡಲು ಹರಸಾಹಸಪಡುತ್ತಿದ್ದರು. ರಸ್ತೆ ಅವ್ಯವಸ್ಥೆಯ ಕುರಿತು 'ಪ್ರಜಾವಾಣಿ' ಫೆ.9ರ ಸಂಚಿಕೆಯಲ್ಲಿ 'ಡಾಂಬರು ಕಾಣದ ಅಂದಾನಪ್ಪ ಲೇಔಟ್ ರಸ್ತೆ' ಎಂಬ ಶೀರ್ಷಿಕೆಯಡಿ ಸುದ್ದಿ ಪ್ರಕಟಿಸಿತ್ತು. ವರದಿಯಿಂದ ಎಚ್ಚೆತ್ತ ಅಧಿಕಾರಿಗಳು, ರಸ್ತೆಗೆ ಕಾಂಕ್ರೀಟ್ ಹಾಕಿಸಿ ಅಭಿವೃದ್ಧಿಪಡಿಸಿದ್ದಾರೆ.

'ಈ ರಸ್ತೆಯ ಸಮಸ್ಯೆ ಬಗ್ಗೆ ದೂರುಗಳು ಬಂದಿದ್ದವು. ಅನುದಾನದ ಕೊರತೆಯಿಂದಾಗಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ. ಆದರೂ ಜನರ ಹಿತದೃಷ್ಟಿಯಿಂದ ರಸ್ತೆಗೆ ಕಾಂಕ್ರೀಟ್ ಹಾಕಿಸಲಾಗಿದೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

'ರಸ್ತೆಗೆ ಕಾಂಕ್ರೀಟ್ ಹಾಕಿಸಲಾಗಿದೆ. ಗುಣಮಟ್ಟದ ರಸ್ತೆಯಾಗಿದೆ' ಎಂದು ಚಿಕ್ಕಬಾಣಾವರ ಪುರಸಭೆ ಮುಖ್ಯ ಅಧಿಕಾರಿ ಎಚ್.ಎ. ಕುಮಾರ್ ತಿಳಿಸಿದರು. ಸ್ಥಳೀಯ ನಿವಾಸಿ ಬಿ.ಎಂ. ಚಿಕ್ಕಣ್ಣ 'ಸುಮಾರು ವರ್ಷಗಳಿಂದ ರಸ್ತೆ ದುರಸ್ತಿಪಡಿಸುವಂತೆ ಪುರಸಭೆಗೆ ಮನವಿ ಮಾಡಿದ್ದೆವು. ಈಗ ಅದಕ್ಕೆ ಫಲ ಸಿಕ್ಕಿದೆ. ಮನವಿಗೆ ಸ್ಪಂದಿಸಿದ ಶಾಸಕರಿಗೂ, ಅಧಿಕಾರಿಗಳಿಗೂ ಧನ್ಯವಾದಗಳು' ಎಂದರು.


ಜೆಎನ್‌ಯು: ವಿದ್ಯಾರಣ್ಯರ ಪ್ರತಿಮೆ ಅನಾವರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಶೃಂಗೇರಿ ಶಾರದಾ ಪೀಠದ 12ನೇ ಪೀಠಾಧ್ಯಕ್ಷರಾಗಿದ್ದ ವಿಜಯನಗರ ಸಾಮ್ರಾಜ್ಯ ಸ್ಥಾಪಕ ವಿದ್ಯಾರಣ್ಯರ ಪ್ರತಿಮೆಯನ್ನು ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ವಿದ್ಯಾರಣ್ಯ ಇನ್‌ಸ್ಟಿಟ್ಯೂಟ್ ಆಫ್ ನಾಲೆಜ್ ಆ್ಯಂಡ್ ಅಡ್ವಾನ್ಸ್ಡ್ ಸ್ಟಡೀಸ್ ಸೆಂಟರ್‌ನಲ್ಲಿ (ವಿದ್ಯಾರಣ್ಯ) ಗುರುವಾರ ಅನಾವರಣ ಮಾಡಲಾಯಿತು.

ಪ್ರತಿಮೆ ಅನಾವರಣಗೊಳಿಸಿದ ಶೃಂಗೇರಿ ಶಾರದಾ ಪೀಠದ ಮುಖ್ಯ ಸಲಹೆಗಾರ ವಿ.ಆರ್. ಗೌರಿಶಂಕರ್, 'ಭಾರತೀಯ ಜ್ಞಾನ ಪರಂಪರೆಯುಳ್ಳ ಸನಾತನ, ಧಾರ್ಮಿಕ ಆಧಾರಿತ ಶಿಕ್ಷಣ ಮತ್ತು ಸಂಶೋಧನೆ ನಡೆಸುವ ಉದ್ದೇಶದಿಂದ ಈ ಸಂಸ್ಥೆಗೆ ವಿದ್ಯಾರಣ್ಯರ ಹೆಸರಿಡಲಾಗಿದೆ. ಇದೀಗ ಶೃಂಗೇರಿ ಶಾರದಾ ಪೀಠದ ನೆರವಿನೊಂದಿಗೆ ಪ್ರತಿಮೆ ಪ್ರತಿಷ್ಠಾಪನೆಗೊಂಡಿದೆ. ಶೃಂಗೇರಿ ಪೀಠದ ಸಹಯೋಗದಲ್ಲಿ ವಿದ್ಯಾರಣ್ಯರ ಕೊಡುಗೆಯ ಕುರಿತು ಇಲ್ಲಿ ಹೆಚ್ಚಿನ ಅಧ್ಯಯನ ನಡೆಸಲಾಗುತ್ತದೆ. ಅವರ ಪೀಠ ಸ್ಥಾಪಿಸುವ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಗುವುದು' ಎಂದರು. 'ಈ ಹಿಂದೆ ಜೆಎನ್‌ಯು ಒಳಕ್ಕೆ ಬರುವುದಕ್ಕೂ ಭಯದ ವಾತಾವರಣ ಇತ್ತು. ಈಗ ಅಂತಹ ಪರಿಸ್ಥಿತಿ ಇಲ್ಲ' ಎಂದರು.

ಜೆಎನ್‌ಯು ಕುಲಪತಿ ಶಾಂತಿಶ್ರೀ ಡಿ. ಪಂಡಿತ್, ಸಂಸ್ಥೆಯ ನಿರ್ದೇಶಕ ಅಮಿತ್ ಶರ್ಮ ಹಾಗೂ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸಂಗಮೇಶ್ ಇದ್ದರು.



ವಿದ್ಯಾರಣ್ಯರ ಪ್ರತಿಮೆಗೆ ಜೆಎನ್‌ಯು ಕುಲಪತಿ ಶಾಂತಿಶ್ರೀ ಡಿ. ಪಂಡಿತ್ ಪುಷ್ಪನಮನ ಸಲ್ಲಿಸಿದರು

ಹೇಮಾವತಿ ನದಿ ನೀರು ಕಲುಷಿತ: ಮಾಕವಳ್ಳಿ ರೈತರ ಪ್ರತಿಭಟನೆ

ಕಾರ್ಖಾನೆ ಹಾರುಬೂದಿ: ರೈತರಿಗೆ ಸಂಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಮಾಕವಳ್ಳಿ ಗ್ರಾಮದಲ್ಲಿರುವ ಕೋರಮಂಡಲ್ ಸಕ್ಕರೆ ಕಾರ್ಖಾನೆಯಿಂದ ಪರಿಸರ ಮಾಲಿನ್ಯವಾಗುತ್ತಿದ್ದು, ಕಾರ್ಖಾನೆ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರಾಜ್ಯ ರೈತ ಸಂಘ, ಪರಿಸರ ಮಾಲಿನ್ಯ ಸಂರಕ್ಷಣೆ ನಾಗರಿಕರ ವೇದಿಕೆ ಹಾಗೂ ಪರಿಸರ ಬಳಗ, ಜನಶಕ್ತಿ ಸಂಘಟನೆಗಳ ನೇತೃತ್ವದಲ್ಲಿ ನಗರದ ಚರ್ಚ್‌ಸ್ಟ್ರೀಟ್ ರಸ್ತೆಯಲ್ಲಿರುವ ರಾಜ್ಯ ಪರಿಸರ ಮಾಲಿನ್ಯ ಹಾಗೂ ನಿಯಂತ್ರಣ ಮಂಡಳಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಯಿತು.

ಕಾರ್ಖಾನೆಯಿಂದ ಮಾಕವಳ್ಳಿ ಗ್ರಾಮದ ಸುತ್ತಮುತ್ತಲಿನ ಒಂಬತ್ತು ಗ್ರಾಮಗಳಿಗೆ ಸಮಸ್ಯೆ ಆಗುತ್ತಿದ್ದರೂ ಮಂಡಳಿ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ ಎಂದು ಆರೋಪಿಸಿದ ಪ್ರತಿಭಟನಕಾರರು, ಕಚೇರಿ ಒಳಕ್ಕೂ ನುಗ್ಗಿ ಆಕ್ರೋಶ ಹೊರಹಾಕಿದರು.

ಮಧ್ಯಾಹ್ನ 3 ಗಂಟೆ ಸುಮಾರಿಗೆ ಮಂಡಳಿ ಅಧಿಕಾರಿಗಳು ರೈತರೊಂದಿಗೆ ಚರ್ಚಿಸಿದರೂ ಆಕ್ರೋಶ ತಣಿಯಲಿಲ್ಲ. ಕಾರ್ಖಾನೆ ವಿರುದ್ಧ ಕೇಂದ್ರಕ್ಕೆ ಪತ್ರ ಬರೆಯುವಂತೆ ಒತ್ತಾಯಿಸಿದರು. ಅಲ್ಲದೇ ನದಿಯಲ್ಲಿ ಕಲುಷಿತಗೊಂಡಿರುವ ನೀರನ್ನು ಬಾಟಲಿಯಲ್ಲಿ ತುಂಬಿ ರೈತರು ತಂದಿದ್ದರು.

ರಾತ್ರಿವರೆಗೂ ಪ್ರತಿಭಟನೆ ಮುಂದುವರಿದಿತ್ತು. ಸ್ಥಳದಲ್ಲೇ ಅಡುಗೆ ಮಾಡಿ, ಅಹೋರಾತ್ರಿ ಪ್ರತಿಭಟನೆ ನಡೆಸಲು ರೈತರು ಪಾತ್ರೆ, ಸಿಲಿಂಡರ್ ಹಾಗೂ ಸ್ಟೌಗಳನ್ನು ಮಂಡಳಿ ಆವರಣಕ್ಕೆ ತಂದಿದ್ದರು. ಇದಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ. ರೈತರು ಹೋಟೆಲ್‌ನಿಂದ ಊಟ ತಂದು ಸೇವಿಸಿದರು.


'ಕಾರ್ಖಾನೆ ವಿರುದ್ಧ ಚೆನ್ನೈನ ಹಸಿರು ನ್ಯಾಯಾಧಿಕರಣದಲ್ಲಿ ರೈತ ಸಂಘವು ಪ್ರಕರಣ ದಾಖಲಿಸಿತ್ತು. ಆಗ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಡಿಸ್ಟಿಲರಿ ಘಟಕವನ್ನು ಸ್ಥಾಪಿಸುವುದಿಲ್ಲ ಎಂಬುದಾಗಿ ಆಡಳಿತ ಮಂಡಳಿ ಒಪ್ಪಿಗೆ ನೀಡಿತ್ತು. ಆದರೆ, ನ್ಯಾಯಾಲಯದಲ್ಲಿ ನೀಡಿದ ಭರವಸೆಯನ್ನೂ ಬದಿಗೊತ್ತಿ ಡಿಸ್ಟಿಲರಿ ಸ್ಥಾಪಿಸಲು ಮುಂದಾಗಿದೆ' ಎಂದು ಆಕ್ರೋಶ ಹೊರಹಾಕಿದರು.

'ಸಕ್ಕರೆ ಕಾರ್ಖಾನೆಯಲ್ಲಿ ಡಿಸ್ಟಿಲರಿ ಎಥೆನಾಲ್ ಘಟಕವನ್ನು ಸ್ಥಾಪಿಸುವ ಸಂಬಂಧ ಮಾರ್ಚ್ 6ರಂದು ಸಾರ್ವಜನಿಕ ಸಭೆ ಕರೆಯಲಾಗಿದೆ. ಅದನ್ನು ರದ್ದುಗೊಳಿಸಬೇಕು' ಎಂದು ಆಗ್ರಹಿಸಿದರು.

'2011ರಿಂದಲೂ ಕೋರಮಂಡಲ್ ಸಕ್ಕರೆ ಕಾರ್ಖಾನೆಯಿಂದ ಪರಿಸರದ ಮೇಲೆ ಹಾನಿಯಾಗುತ್ತಿದೆ. ತಾಲ್ಲೂಕು ಆಡಳಿತ, ಜಿಲ್ಲಾಡಳಿತ ಹಾಗೂ ರಾಜ್ಯಮಟ್ಟದ ಅಧಿಕಾರಿಗಳಿಗೆ ವರದಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ನಿರ್ಲಕ್ಷ್ಯ ವಹಿಸಿರುವ ಜಿಲ್ಲಾ ಹಾಗೂ ರಾಜ್ಯಮಟ್ಟದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಕಾರ್ಖಾನೆ ಹೊರಸೂಸುತ್ತಿರುವ ಹಾರುಬೂದಿಯಿದ ಜಾನುವಾರುಗಳು ಮೇವಿಗೂ ಸಮಸ್ಯೆ ಆಗುತ್ತಿದೆ. ಪಶು ಸಂಗೋಪನಾ ಇಲಾಖೆ ಹೆಚ್ಚಿನ ಸಂಶೋಧನೆ ನಡೆಸಬೇಕು ಎಂದು ಜಿಲ್ಲಾಡಳಿತ ಶಿಫಾರಸು ಮಾಡಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಸಂಘದ ಅಧ್ಯಕ್ಷ ರಾಜೇಗೌಡ ಆಪಾದಿಸಿದರು.

ರಾಜ್ಯದಲ್ಲಿ ಹರಿಯುತ್ತಿರುವ ಕೆಲವು ನದಿಗಳ ನೀರು ಕುಡಿಯಲು ಯೋಗ್ಯವಿಲ್ಲ ಎಂದು ತಜ್ಞರು ವರದಿ ನೀಡಿದ್ದಾರೆ. ಒಂದು ಕಾರ್ಖಾನೆಯ ವೈಯಕ್ತಿಕ ಅಭಿವೃದ್ಧಿ ಹಾಗೂ ಹಿತಾಸಕ್ತಿ ನದಿಗಳನ್ನು ಮತ್ತಷ್ಟು ಕಲುಷಿತ ಮಾಡಲಾಗುತ್ತಿದೆ ಎಂದು ಸಂಘದ ಮುಖಂಡ ಯೋಗೇಶ್ ಹೇಳಿದರು.



ಕಾರ್ಖಾನೆಯಿಂದ ಹೇಮಾವತಿ ನದಿಯ ನೀರು ಕಲುಷಿತಗೊಂಡಿದೆ ಎಂದು ಆರೋಪಿಸಿ, ಬಾಟಲಿಯಲ್ಲಿ ಕಲುಷಿತ ನೀರನ್ನು ತಂದು ಬೆಂಗಳೂರಿನ ರಾಜ್ಯ ಪರಿಸರ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯ ಕಚೇರಿಯಲ್ಲಿ ಮಾಕವಳ್ಳಿ ಗ್ರಾಮದ ರೈತರು, ಶುಕ್ರವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

'ಕಬ್ಬು ಅರೆಯುವಿಕೆಗೆ ಮಾತ್ರ ಅವಕಾಶ ಸಿಗಲಿ'

ಕೋರಮಂಡಲ್ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಕಬ್ಬು ಅರೆಯುವಿಕೆ ಹೊರತುಪಡಿಸಿ ಡಿಸ್ಟಿಲರಿ ಎಥೆನಾಲ್ ಘಟಕದ ಸ್ಥಾಪನೆಗೆ ಅವಕಾಶ ನೀಡಬಾರದು. ಎಥೆನಾಲ್ ಘಟಕದ ಸ್ಥಾಪನೆ ಪ್ರಸ್ತಾವವನ್ನು ಶಾಶ್ವತವಾಗಿ ಕೈಬಿಡಬೇಕು ಎಂದು ರೈತರು ಕೋರಿದರು.





ಸ್ಫೋಟ ಕೃತ್ಯ ನಡೆದ ದಿ ರಾಮೇಶ್ವರಂ ಕೆಫೆ ಎದುರು ಸೇರಿದ್ದ ಜನ (ಮೊದಲ ಚಿತ್ರ). ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ಕುಟುಂಬಸ್ಥರಿಗೆ ನಮಸ್ಕಾರ ಮಾಡಿ ಧೈರ್ಯ ಹೇಳಿದರು. ಸಂಸದ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕಿ ಮಂಜುಳಾ ಲಿಂಬಾವಳಿ ಇದ್ದರು – ಪ್ರಜಾವಾಣಿ ಚಿತ್ರಗಳು

ಐಇಡಿ ತಯಾರಿಸಲು ಬಳಸಲಾಗಿದ್ದ ಸರ್ಕಿಟ್ ● ಗಾಯಾಳುಗಳ ಆರೋಗ್ಯ ವಿಚಾರಿಸಿದ ರಾಜ್ಯಪಾಲರು, ಸಚಿವರು

ಸ್ಫೋಟ ಸ್ಥಳದಲ್ಲಿ 'ಮೊಬೈಲ್ ಸರ್ಕಿಟ್' ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆಯಲ್ಲಿ ಮೊಬೈಲ್ ಸರ್ಕಿಟ್ ಪತ್ತೆಯಾಗಿದ್ದು, ಇದನ್ನು ಬಳಸಿ ಬಾಂಬ್ ಸ್ಫೋಟಿಸಿರುವ ಸಂಗತಿ ತನಿಖೆಯಿಂದ ಗೊತ್ತಾಗಿದೆ.

ಸ್ಫೋಟದ ಬಗ್ಗೆ ತನಿಖೆ ಮುಂದುವರಿಸಿರುವ ಎನ್‌ಐಎ ಹಾಗೂ ಸಿಸಿಬಿ ಅಧಿಕಾರಿಗಳು, ಆರೋಪಿಯ ಬೆನ್ನು ಬಿದ್ದಿದ್ದಾರೆ. ಜೊತೆಗೆ, ಘಟನಾ ಸ್ಥಳದಲ್ಲಿ ಸಿಕ್ಕಿರುವ ವಸ್ತುಗಳ ಬಗ್ಗೆಯೂ ಮಾಹಿತಿ ಕಲೆ ಹಾಕುತ್ತಿದ್ದಾರೆ.

ವಿಧಿವಿಜ್ಞಾನ ಪ್ರಯೋಗಾಲಯ ತಜ್ಞರು, ಕೆಫೆ ಒಳಗೆ ಹಾಗೂ ಹೊರಗಿನ ಭಾಗದಲ್ಲಿ ಶೋಧ ನಡೆಸಿದ್ದರು. ಮೊಬೈಲ್ ಸರ್ಕಿಟ್, ತಂತಿಗಳು, ಬೋಲ್ಟ್, ಬ್ಯಾಟರಿ ಹಾಗೂ ಮೊಳೆಗಳು ಪತ್ತೆಯಾಗಿರುವುದಾಗಿ ಮೂಲಗಳು ಹೇಳಿವೆ.

'ಮೊಬೈಲ್ ಸರ್ಕಿಟ್ ಬಳಸಿಕೊಂಡು ಕಚ್ಚಾ ಬಾಂಬ್ (ಐಇಡಿ) ತಯಾರಿಸಿದ್ದ ದುಷ್ಕರ್ಮಿ, ಅದನ್ನೇ ಕೆಫೆಯಲ್ಲಿ ಇರಿಸಿ ಹೋಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.



ಗಾಯಗೊಂಡ ಮಹಿಳೆಯನ್ನು ಆಸ್ಪತ್ರೆಗೆ ಕರೆದೊಯ್ದರು



ಕೆಫೆಯಿಂದ ಹೊರಗೆ ಓಡಿ ಬಂದು ನಿಂತಿದ್ದ ಗ್ರಾಹಕರು

ಅಡುಗೆ ಅನಿಲ ಸೋರಿಕೆ ವದಂತಿ: ಕೆಫೆಯಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿದ್ದ ಬಗ್ಗೆ ವದಂತಿ ಹರಡಿತ್ತು. ಬೆಂಕಿ ಕೆನ್ನಾಲಗೆ ಹಾಗೂ ದಟ್ಟ ಹೊಗೆ ಇದ್ದಿದ್ದರಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಕಾರ್ಯಾಚರಣೆ ನಡೆಸಿದರು. ಆದರೆ, ಅಡುಗೆ ಅನಿಲ ಸೋರಿಕೆ ಬಗ್ಗೆ ಯಾವುದೇ ಪುರಾವೆ ಲಭ್ಯವಾಗಲಿಲ್ಲ.

'ಸ್ಫೋಟಕ್ಕೆ ಕಾರಣ ಗೊತ್ತಾಗಿರಲಿಲ್ಲ. ಬೆಂಕಿ ನಂದಿಸಿದ ನಂತರ, ಘಟನಾ ಸ್ಥಳದಲ್ಲಿ ಹಲವು ಅನುಮಾನಾಸ್ಪದ ವಸ್ತುಗಳು ಸಿಕ್ಕವು. ಆಗಲೇ ಇದೊಂದು ಬಾಂಬ್ ಸ್ಫೋಟ ಎಂಬುದು ತಿಳಿಯಿತು' ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ಹೇಳಿದರು.

ರಾಜ್ಯಪಾಲರ ಭೇಟಿ: ಸ್ಫೋಟದ ಗಾಯಾಳುಗಳು ದಾಖಲಾಗಿರುವ ಆಸ್ಪತ್ರೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಘಟನಾ ಸ್ಥಳಕ್ಕೆ ಭೇಟಿ ನೀಡಿದರು.

'ಹಿಂದೆಯೂ ಬ್ಯಾಗ್ ತಂದಿಟ್ಟಿದ್ದರು'

'10 ಸೆಕೆಂಡ್ ಅಂತರದಲ್ಲಿ ಎರಡು ಬಾರಿ ಸ್ಫೋಟ ಸಂಭವಿಸಿದ್ದು, ಇದು ಹೊರಗಿನವರ ದುಷ್ಕೃತ್ಯ' ಎಂದು ದಿ ರಾಮೇಶ್ವರಂ ಕೆಫೆ ವ್ಯವಸ್ಥಾಪಕ ನಿರ್ದೇಶಕರಾದ (ಎಂ.ಡಿ) ಎಸ್. ದಿವ್ಯಾ ಹೇಳಿದರು.

ಸ್ಫೋಟದ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಿದ್ಯುತ್ ಅವಘಡ ಹಾಗೂ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿಲ್ಲ. ಹೊರಗಡೆಯಿಂದ ತಂದಿಟ್ಟಿದ್ದ ಬ್ಯಾಗ್‌ನಿಂದ ಈ ಸ್ಫೋಟ ಸಂಭವಿಸಿದೆ' ಎಂದರು.

'ಈ ಹಿಂದೆಯೂ ಎರಡು ಬಾರಿ ಅನುಮಾನಾಸ್ಪದ ರೀತಿಯಲ್ಲಿ ಬ್ಯಾಗ್‌ಗಳು ಕೆಫೆಯಲ್ಲಿ ಪತ್ತೆಯಾಗಿದ್ದವು. ಈ ಬಗ್ಗೆ ಪೊಲೀಸರಿಗೂ ದೂರು ನೀಡಲಾಗಿತ್ತು. ಒಂದು ಬ್ಯಾಗ್‌ನಲ್ಲಿ ಮಡಿಕೆಗಳು ಇದ್ದವು. ಮತ್ತೊಂದು ಬ್ಯಾಗ್ ಅನ್ನು ಪೊಲೀಸರೇ ತೆಗೆದುಕೊಂಡು ಹೋಗಿದ್ದರು. ಇದಾದ ಕೆಲದಿನಗಳ ನಂತರ, ಇದೀಗ ಬ್ಯಾಗ್‌ನಿಂದಲೇ ಸ್ಫೋಟ ಸಂಭವಿಸಿದೆ' ಎಂದು ಮಾಹಿತಿ ನೀಡಿದರು.

'ಊಟಕ್ಕೆ ಬಂದಿದ್ದ ಐವರು ಸಹೋದ್ಯೋಗಿಗಳು'

'ಗಾಯಾಳು ಸ್ವರ್ಣಾಂಬಾ ಹಾಗೂ ನಾಲ್ವರು ಸಹೋದ್ಯೋಗಿಗಳು ಮಧ್ಯಾಹ್ನ ಊಟಕ್ಕೆಂದು ಕೆಫೆಗೆ ಬಂದಿದ್ದರು. ಊಟ ತೆಗೆದುಕೊಂಡಿದ್ದರು. ಶಂಕಿತ ಕುಳಿತುಕೊಂಡು ಹೋಗಿದ್ದ ಕಟ್ಟೆ ಮೇಲೆಯೇ ಸ್ವರ್ಣಾಂಭಾ ಹಾಗೂ ನಾಲ್ವರು ಕುಳಿತಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸ್ವರ್ಣಾಂಬಾ ಅವರು ಕುಳಿತ ಕೆಲ ನಿಮಿಷಗಳಲ್ಲಿ ಬಾಂಬ್ ಸ್ಫೋಟಗೊಂಡಿತು. ಗಾಯಗೊಂಡವರು ಭಯದಲ್ಲಿ ದಿಕ್ಕಾಪಾಲಾಗಿ ಓಡಿ ಹೋದರು. ಸ್ವರ್ಣಾಂಬಾ ಅವರು ಸ್ಥಳದಲ್ಲೇ ಬಿದ್ದು ಒದ್ದಾಡುತ್ತಿದ್ದರು. ಅವರ ಬಟ್ಟೆಗಳು ಹರಿದಿದ್ದವು' ಎಂದು ತಿಳಿಸಿದರು.

ದುಷ್ಕರ್ಮಿಗಳ ಬಂಧನ ಶೀಘ್ರ: ಡಿಸಿಎಂ

ಬೆಂಗಳೂರು: ಬಾಂಬ್ ಸ್ಫೋಟ ನಡೆದ ಹೋಟೆಲ್‌ನ ಸುತ್ತಲಿನ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಲಾಗುತ್ತಿದೆ. ಬೆಂಗಳೂರು ಪೊಲೀಸರು ಅತ್ಯಂತ ದಕ್ಷರಿದ್ದು, ದುಷ್ಕರ್ಮಿಗಳನ್ನು ಶೀಘ್ರ ಬಂಧಿಸಲಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸ್ಫೋಟ ನಡೆದ ಕೋರಮಂಗಲದ ರಾಮೇಶ್ವರಂ ಕೆಫೆ ಹಾಗೂ ಗಾಯಗೊಂಡವರು ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಗೆ ಗೃಹ ಸಚಿವ ಜಿ. ಪರಮೇಶ್ವರ ಜತೆ ಭೇಟಿ ನೀಡಿದ ನಂತರ ಅವರು ಮಾತನಾಡಿದರು.

'ಇದೊಂದು ಅಲ್ಪ ತೀವ್ರತೆಯ ಸ್ಫೋಟ. ಸಿಸಿಬಿ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ. ಏಳೆಂಟು ತಂಡಗಳನ್ನು ನೇಮಿಸಲಾಗಿದೆ. ಬಾಂಬ್ ನಿಗ್ರಹ ದಳ, ಎಫ್‌ಎಸ್‌ಎಲ್ ತಂಡ ಪರಿಶೀಲನೆ ನಡೆಸುತ್ತಿದೆ. ತನಿಖಾಧಿಕಾರಿಗಳಿಗೆ ಮುಕ್ತ ಅವಕಾಶ ನೀಡಲಾಗಿದೆ. ಬೆಂಗಳೂರಿನ ನಾಗರಿಕರು ಗಾಬರಿಯಾಗುವ ಅಗತ್ಯವಿಲ್ಲ. ನಗರ ಹಾಗೂ ರಾಜ್ಯದ ಘನತೆ ರಕ್ಷಣೆ ಮಾಡಲು ಸರ್ಕಾರ ಬದ್ಧವಾಗಿದೆ' ಎಂದರು.

'ವಿರೋಧ ಪಕ್ಷಗಳ ಟೀಕೆಗೆ ಉತ್ತರ ನೀಡುವ ಅಗತ್ಯವಿಲ್ಲ. ಅವರ ಅಧಿಕಾರ ಅವಧಿಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಏನಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಪ್ರಕರಣದ ರೂವಾರಿಗಳನ್ನು ಸೆರೆ ಹಿಡಿಯುತ್ತೇವೆ' ಎಂದು ಹೇಳಿದರು.

'ಟೈಮರ್ ವಶಕ್ಕೆ'

ಸ್ಫೋಟ ನಡೆದಿದ್ದ ಸ್ಥಳವನ್ನು ಸುಪರ್ದಿಗೆ ಪಡೆದಿದ್ದ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಅವಶೇಷಗಳಡಿ ಹುಡುಕಾಟ ಆರಂಭಿಸಿದರು.

'ಚಿಕ್ಕ ಮೊಳೆಗಳು, 9 ವೋಲ್ಟ್ ಬ್ಯಾಟರಿ, ಬೋಲ್ಟ್‌ಗಳು ಸ್ಥಳದಲ್ಲಿ ಬಿದ್ದಿದ್ದವು. ಬಾಂಬ್‌ಗೆ ಅಳವಡಿಸಿದ್ದ ಟೈಮರ್ ಸಹ ಸ್ಥಳದಲ್ಲಿತ್ತು. ಎಲ್ಲವನ್ನೂ ಪರೀಕ್ಷೆಗೆಂದು ಕಾಯ್ದಿರಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಘಟನೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ನಡೆಸಿರುವ ಪೊಲೀಸ್ ಅಧಿಕಾರಿ ಗಳು ವರದಿ ಕೊಟ್ಟ ನಂತರ ಮುಂದಿನ ತನಿಖೆ ಬಗ್ಗೆ ನಿರ್ಧರಿಸಲಾಗುವುದು.
ಜಿ.ಪರಮೇಶ್ವರ, ಗೃಹ ಸಚಿವ

'ಬೆಂಗಳೂರು ವರ್ಚಸ್ಸಿಗೆ ಧಕ್ಕೆ ತರಲು ಸ್ಫೋಟ ಕೃತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನ ವರ್ಚಸ್ಸು ಕುಗ್ಗಿಸಿ, ಜನರಲ್ಲಿ ಅಭದ್ರತೆ ಮೂಡಿಸುವ ಹುನ್ನಾರ ಭಯೋತ್ಪಾದಕರದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ನಾವೆಲ್ಲರೂ ತಲೆ ತಗ್ಗಿಸುವ ಘಟನೆ ನಡೆದಿದೆ. ಶಾಂತಿಯ ತೋಟವನ್ನು ಕೆಡಿಸುವ ಭಯೋತ್ಪಾದಕ ಚಟುವಟಿಕೆ ರಾಜಧಾನಿಯಲ್ಲಿ ನಡೆದಿದೆ. ರಾಮೇಶ್ವರ ಕೆಫೆಗೆ ದೇಶ, ವಿದೇಶಗಳ ಜನ ಬರುತ್ತಾರೆ. ಬೆಂಗಳೂರಿನ ಪ್ರಭಾವಳಿಯನ್ನು ಕಡಿಮೆ ಮಾಡಿ, ಬಂಡವಾಳ ಹೂಡಿಕೆ ಇಳಿಸಲು ಭಯೋತ್ಪಾದಕರು ಯೋಜಿಸಿದ್ದಾರೆ' ಎಂದು ಆರ್.ಅಶೋಕ ತಿಳಿಸಿದರು.

ಬಿ.ವೈ.ವಿಜಯೇಂದ್ರ ಮಾತನಾಡಿ, 'ವಿಧಾನಸೌಧದ ಆವರಣದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ವಿಚಾರದಲ್ಲಿ ಎಫ್‌ಎಸ್‌ಎಲ್ ವರದಿ ಬಂದ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಗೃಹ ಸಚಿವರು ಹೇಳಿದ್ದಾರೆ.



ಆರ್.ಅಶೋಕ

ಎಫ್‌ಎಸ್‌ಎಲ್ ವರದಿ ಶುಕ್ರವಾರ ಬೆಳಿಗ್ಗೆ ಬಂದಿದೆ. ಘೋಷಣೆ ಕೂಗಿದ್ದು ಸತ್ಯ ಎಂಬ ಅಂಶ ವರದಿಯಲ್ಲಿದೆ. ಅದನ್ನು ಮುಚ್ಚಿಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಎಫ್‌ಎಸ್‌ಎಲ್ ವರದಿ ತಿರುಚಿ ಬೋಗಸ್ ವರದಿ ಸಿದ್ಧಪಡಿಸಲಾಗುತ್ತಿದೆ' ಎಂದು ದೂರಿದರು.

ಕಲಬುರಗಿ ಜಿಲ್ಲೆಯಲ್ಲಿ ಬಿಜೆಪಿಯ ಇಬ್ಬರು ಕಾರ್ಯಕರ್ತರ ಹತ್ಯೆಗಳಾಗಿವೆ. ಈ ಸರ್ಕಾರ ಬಂದ ಬಳಿಕ ಕೊಲೆ ಪ್ರಕರಣಗಳು ಹೆಚ್ಚಾಗಿವೆ. ಕಾಂಗ್ರೆಸ್ ಸರ್ಕಾರದ ಮೃದು ಧೋರಣೆಯಿಂದ ರಾಜ್ಯದ ಸುರಕ್ಷತೆಗೆ ಗಂಡಾಂತರ ಉಂಟಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ವಿರೋಧಪಕ್ಷದ ಮುಖ್ಯಸಚೇತಕ ಎನ್.ರವಿಕುಮಾರ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಹರತಾಳು ಹಾಲಪ್ಪ, ಒಬಿಸಿ ಮೋರ್ಚಾ ರಾಜ್ಯ ಅಧ್ಯಕ್ಷ ರಘು ಕೌಟಿಲ್ಯ ಮತ್ತು ಇತರರು ಇದ್ದರು.

ಸಾರಿಗೆ ನಿಗಮಗಳ ಖಾಸಗೀಕರಣಕ್ಕೆ ವಿರೋಧ

5ರಂದು ನಗರದಲ್ಲಿ ಪ್ರತಿಭಟನೆ ● ವಿದ್ಯುತ್ ಚಾಲಿತ ಬಸ್‌ಗಳ ನೆಪದಲ್ಲಿ ಖಾಸಗೀಕರಣ ಯತ್ನ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯುತ್ ಚಾಲಿತ ಬಸ್‌ಗಳ ಹೆಸರಿನಲ್ಲಿ ಸಾರಿಗೆ ನಿಗಮಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್ ಆರೋಪಿಸಿದ್ದು, ಸರ್ಕಾರದ ಕ್ರಮವನ್ನು ಖಂಡಿಸಿ ಇದೇ 5ರಂದು ಬೆಳಿಗ್ಗೆ 11ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

'ಪರಿಸರ ಸಂರಕ್ಷಣೆ ಹಾಗೂ ಮಾಲಿನ್ಯ ನಿಯಂತ್ರಣದ ಹೆಸರಿನಲ್ಲಿ ಸರ್ಕಾರವು ಸಾರಿಗೆ ನಿಗಮಗಳಲ್ಲಿ ವಿದ್ಯುತ್ ಚಾಲಿತ ಬಸ್‌ಗಳನ್ನು ಕ್ರಮೇಣ ಹೆಚ್ಚಿಸುತ್ತಿದೆ. ಬಿಎಂಟಿಸಿಯಲ್ಲಿ 470 ವಿದ್ಯುತ್ ಚಾಲಿತ ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ. ಸದ್ಯದಲ್ಲೇ 921 ವಿದ್ಯುತ್ ಚಾಲಿತ ಬಸ್‌ಗಳು ನಿಗಮಕ್ಕೆ ಬರಲಿವೆ. ಅದಾದ ಮೇಲೆ 1,500 ಬಸ್‌ಗಳು ಸಾರಿಗೆ ನಿಗಮಕ್ಕೆ ಸೇರಲಿವೆ ಎಂಬ ಮಾಹಿತಿಯಿದೆ. ಈ ಬಸ್‌ಗಳಿಗೆ ನಮ್ಮ ವಿರೋಧವಿಲ್ಲ. ಆದರೆ, ಖಾಸಗಿ ಕಂಪನಿಗಳ ಬದಲಿಗೆ ಸಾರಿಗೆ ನಿಗಮವೇ ಈ ಬಸ್ ಖರೀದಿಸಿ ಓಡಿಸಬೇಕು' ಎಂದು ಅಧ್ಯಕ್ಷ ಎಚ್.ಡಿ.ರೇವಪ್ಪ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಹೇಳಿದರು.

'ಬಿಎಂಟಿಸಿ ಡಿಪೊಗಳ ಪೈಕಿ ಕೆಲವನ್ನು ಖಾಸಗಿ ವಿದ್ಯುತ್ ಕಂಪನಿಗಳಿಗೆ ನೀಡಲಾಗಿದೆ. ಅಲ್ಲಿದ್ದ ಬಿಎಂಟಿಸಿ ನಿಗಮಗಳ ಕಾರ್ಮಿಕರನ್ನು ಬೇರೆ ಡಿಪೊಗಳಿಗೆ ವರ್ಗಾವಣೆ ಮಾಡಲಾಗಿದೆ. ಇದೇ ರೀತಿ ಮುಂದುವರಿದರೆ ಮುಂದಿನ ನಾಲ್ಕು ವರ್ಷಗಳಲ್ಲಿ ಬಿಎಂಟಿಸಿ ಸಂಪೂರ್ಣವಾಗಿ ಖಾಸಗಿ ಬಸ್‌ಗಳಿಂದ ತುಂಬಿ ಹೋಗಲಿದೆ. ಆಗ, ಅದು ಸರ್ಕಾರಿ ನಿಗಮವಾಗಿ ಉಳಿಯುವ ಅಗತ್ಯವೇ ಇರುವುದಿಲ್ಲ. ಇನ್ನು ನಿಗಮದ ಕಾರ್ಮಿಕರು ಮತ್ತು ಡಿಪೊಗಳ ಅಗತ್ಯವೂ ಇರುವುದಿಲ್ಲ. ಬಿಎಂಟಿಸಿ ಸಂಪೂರ್ಣ ಖಾಸಗೀಕರಣಗೊಳ್ಳುತ್ತದೆ. ಇದೇ ಪರಿಸ್ಥಿತಿ ಕೆಎಸ್‌ಆರ್‌ಟಿಸಿ ಹಾಗೂ ಉಳಿದ ನಿಗಮಗಳಿಗೂ ಬರುವ ಸಾಧ್ಯತೆಯಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಪರಿಸರ ರಕ್ಷಣೆ, ಮಾಲಿನ್ಯ ತಡೆ ದೃಷ್ಟಿಯಿಂದ ಡೀಸೆಲ್ ಬಸ್‌ಗಳಿಗಿಂತ ವಿದ್ಯುತ್ ಚಾಲಿತ ಬಸ್‌ಗಳು ಸೂಕ್ತ. ಈ ಬಸ್‌ಗಳನ್ನು ಸರ್ಕಾರವೇ ಖರೀದಿಸಬೇಕು
ಎಚ್.ಡಿ.ರೇವಪ್ಪ, ಅಧ್ಯಕ್ಷ, ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್

ನಾಲ್ಕು ಸಾರಿಗೆ ನಿಗಮಗಳೂ ನಷ್ಟದಲ್ಲಿದ್ದು, ಕೇಂದ್ರ ಸರ್ಕಾರದ ಫೇಮ್–2 ಯೋಜನೆ ಅಡಿ ಎಲೆಕ್ಟ್ರಿಕ್ ಬಸ್ ಓಡಿಸಲಾಗುತ್ತಿತ್ತು. ಈಗ ಕೇಂದ್ರ ಸರ್ಕಾರವು ಯಾವುದೇ ಸಬ್ಸಿಡಿ ನೀಡುತ್ತಿಲ್ಲ.
ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಮುಖ್ಯಾಂಶಗಳು
- ನೌಕರರ ಆತಂಕಕ್ಕೆ ಕಾರಣ
- ಕ್ರಮೇಣ ಹೆಚ್ಚುತ್ತಿರುವ ಖಾಸಗಿ ಬಸ್‌ಗಳು
- ನಾಲ್ಕು ವರ್ಷಗಳಲ್ಲಿ ಖಾಸಗೀಕರಣ ಸಾಧ್ಯತೆ
- ಸಬ್ಸಿಡಿ ಹಣವೂ ಖಾಸಗಿ ಕಂಪನಿಗಳ ಪಾಲು

'ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಫೇಮ್ ಎಂಬ ಯೋಜನೆಯನ್ನು ಜಾರಿಗೆ ತಂದಿದೆ. ವಿದ್ಯುತ್ ಚಾಲಿತ ಬಸ್‌ಗಳನ್ನು ಕಾರ್ಯಾಚರಣೆ ಮಾಡುವ ಕಂಪನಿಗಳಿಗೆ ಪ್ರತಿ ಬಸ್‌ಗೆ ₹50 ಲಕ್ಷ ಸಬ್ಸಿಡಿ ನೀಡಲಾಗುತ್ತಿದೆ. ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿಯಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಕಂಪನಿಗಳವರು ಸಬ್ಸಿಡಿ ಪಡೆದುಕೊಳ್ಳುತ್ತಿದ್ದಾರೆ' ಎಂದು ಉಪಾಧ್ಯಕ್ಷ ಕೆ. ಪ್ರಕಾಶ್ ಹೇಳಿದರು.

'ಸಾರಿಗೆ ನಿಗಮಗಳಿಗೇ ಸಬ್ಸಿಡಿ ನೀಡಿದರೆ ಅನುಕೂಲ ಆಗಲಿದೆ. ನಿಗಮಗಳಿಗೆ ಸಬ್ಸಿಡಿ ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದರೂ ಜಾರಿಗೆ ತಂದಿಲ್ಲ. ಸಬ್ಸಿಡಿ ರಹಿತವಾಗಿ ವಿದ್ಯುತ್ ಚಾಲಿತ ಬಸ್‌ಗಳ ಖರೀದಿಗೆ ರಾಜ್ಯ ಸರ್ಕಾರ ಅಥವಾ ನಿಗಮಗಳು ಧೈರ್ಯ ತೋರುತ್ತಿಲ್ಲ' ಎಂದು ಆಪಾದಿಸಿದರು.

'ರಾಜ್ಯದಲ್ಲಿರುವ ಅತ್ಯುತ್ತಮ ಸಾರಿಗೆ ನಿಗಮಗಳನ್ನು ಒಳಗಿನಿಂದಲೇ ಖಾಸಗಿಯವರಿಗೆ ಹಸ್ತಾಂತರಿಸುವ ಹುನ್ನಾರವನ್ನು ಕೇಂದ್ರ ಸರ್ಕಾರದ ಫೇಮ್–2 ಯೋಜನೆ ಮೂಲಕ ಮಾಡಲಾಗುತ್ತಿದೆ. ಈ ಯೋಜನೆಯನ್ನು ರಾಜ್ಯ ಸರ್ಕಾರವು ಪ್ರತಿರೋಧವಿಲ್ಲದೆ ಜಾರಿಗೊಳಿಸುತ್ತಿದೆ' ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಮಂಜುನಾಥ್ ಹಾಜರಿದ್ದರು.

ಕಂಟೈನರ್‌ಗೆ ಬೆಂಕಿ: ಸುಟ್ಟು ಕರಕಲಾದ ದ್ವಿಚಕ್ರ ವಾಹನ

ಆನೇಕಲ್ : ಆನೇಕಲ್ ಗಡಿಗೆ ಹೊಂದಿಕೊಂಡಿರುವ ತಮಿಳುನಾಡಿನ ಉಳೀರನಹಳ್ಳಿ ಬಳಿ ಶುಕ್ರವಾರ ಎಲೆಕ್ಟ್ರಿಕ್ ಬೈಕ್ ಸಾಗಣೆ ಕಂಟೈನರ್‌ನಲ್ಲಿ ಬೆಂಕಿ ಹೊತ್ತಿಕೊಂಡು 20 ದ್ವಿಚಕ್ರ ವಾಹನಗಳು ಸಂಪೂರ್ಣ ಸುಟ್ಟು ಕರಕಲಾಗಿವೆ.

ಏಥರ್ ಕಂಪನಿಯ ವಿದ್ಯುತ್ ಬೈಕ್‌ಗಳನ್ನು ಕಂಟೈನರ್‌ನಲ್ಲಿ ಸಾಗಿಸಲಾಗುತ್ತಿತ್ತು. ಆಗ ಕಂಟೈನರ್ ಒಳಗೆ ಬೆಂಕಿ ಕಾಣಿಸಿಕೊಂಡು ಕಂಟೈನರ್ ಮೇಲ್ಭಾಗದಲ್ಲಿದ್ದ ಬೈಕ್‌ಗಳು ಸುಟ್ಟವು.

ಕೂಡಲೇ ವಾಹನ ನಿಲ್ಲಿಸಿದ ಚಾಲಕ ಡೆಂಕಣಿಕೋಟೆ ಅಗ್ನಿಶಾಮಕದಳಕ್ಕೆ ಮಾಹಿತಿ ನೀಡಿದರು. ಅಗ್ನಿಶಾಮಕ ದಳದವರು ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ತಮಿಳುನಾಡಿನ ಮತ್ತಿಗೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಭಾರತೀಯ ವಿಚಾರವಾದಿ ಸಂಘಗಳ ಒಕ್ಕೂಟ ನಗರದಲ್ಲಿ ಬುಧವಾರ ಆಯೋಜಿಸಿದ್ದ 'ವಿಚಾರಕ್ರಾಂತಿ' ರಾಜ್ಯಮಟ್ಟದ ಸಮಾವೇಶವನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಉದ್ಘಾಟಿಸಿದರು. ನೇಗಿಲಯೋಗಿ ಟ್ರಸ್ಟ್ ಅಧ್ಯಕ್ಷ ಎಚ್.ಆರ್.ಸ್ವಾಮಿ, ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ, ಭಾರತೀಯ ವಿಚಾರವಾದಿ ಸಂಘಗಳ ಒಕ್ಕೂಟದ ಅಧ್ಯಕ್ಷ ನರೇಂದ್ರ ನಾಯಕ್, ಸಂಸ್ಕೃತಿ ಚಿಂತಕ ಅಗ್ರಹಾರ ಕೃಷ್ಣಮೂರ್ತಿ, ವಕೀಲ ಅನಂತ್ ನಾಯಕ್ ಹಾಗೂ ಸವಿತಾ ಎಸ್.ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಹಣಕಾಸು ನಿರ್ವಹಣೆಯಲ್ಲಿ ವಿಫಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಹಣಕಾಸು ನಿರ್ವಹಣೆಯಲ್ಲಿ ವಿಫಲವಾಗಿದ್ದು, ಶೂನ್ಯ ಪ್ರಗತಿಯನ್ನೇ ಸಾಧನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಂಬಿಸುತ್ತಿರುವುದು ವಿಪರ್ಯಾಸ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳ ಉತ್ತರಕ್ಕೆ ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿದ್ದಾರೆ.

ಕಳೆದ ಬಜೆಟ್‌ಗಿಂತ ₹62 ಸಾವಿರ ಕೋಟಿ ಬಜೆಟ್ ಗಾತ್ರ ಹೆಚ್ಚಳ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಹೇಳಿದ್ದು, ಬಂಡವಾಳ ವೆಚ್ಚ ಕಳೆದ ವರ್ಷ ₹54 ಸಾವಿರ ಕೋಟಿಯಿತ್ತು. ಈ ವರ್ಷ ₹55 ಸಾವಿರ ಕೋಟಿ ಮಾತ್ರ ಇದೆ. ಕೇವಲ ₹1 ಸಾವಿರ ಕೋಟಿ ಹೆಚ್ಚಳವಾಗಿದೆ. ಒಟ್ಟು ರೆವಿನ್ಯೂ ಆದಾಯದಲ್ಲಿ ಶೇ 103 ಅನುತ್ಪಾದಕ ವೆಚ್ಚ ಮಾಡುತ್ತಿರುವ ಬಜೆಟ್ ಇದಾಗಿದೆ ಎಂದಿದ್ದಾರೆ.

ಬಜೆಟ್ ಗಾತ್ರ ಹೆಚ್ಚಿರುವುದು ಸರ್ಕಾರಿ ನೌಕರ ಸಂಬಳ, ಭತ್ಯೆ, ಪಿಂಚಣಿ, ಸಾಲದ ಮರುಪಾವತಿ, ಗ್ಯಾರಂಟಿಗಳು, ಇತರೆ ಸಬ್ಸಿಡಿಗಳಿಗೆ ಹೋಗುತ್ತಿದೆ. ₹1.05 ಲಕ್ಷ ಕೋಟಿ ಸಾಲದ ಹೊರೆಯನ್ನು ಜನರ ಮೇಲೆ ಹೊರೆಸಿರುವುದು ಎಷ್ಟರ ಮಟ್ಟಿಗೆ ನ್ಯಾಯ ಸಮ್ಮತ ಎಂದು ಹೇಳಿದ್ದಾರೆ.

₹27 ಸಾವಿರ ಕೋಟಿ ಕೊರತೆಯನ್ನು ಹೇಗೆ ನೀಗಿಸುತ್ತಾರೆ ಎನ್ನುವುದಕ್ಕೆ ಉತ್ತರವಿಲ್ಲ. ಇದು ಯೋಜನೆ, ಯೋಚನೆ ರಹಿತ ಮತ್ತು ಗುರಿ, ದಿಕ್ಕಿಲ್ಲದ ಒಂದು ಬಜೆಟ್ ಆಗಿದೆ ಎಂದು ಆರೋಪಿಸಿದ್ದಾರೆ.

'ದೇಶದಲ್ಲಿ 2014ಕ್ಕೆ ನಿಂತುಹೋದ ವೈಚಾರಿಕತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ನಂತರ ಭಾರತ ಅಭಿವೃದ್ಧಿ ಪಥದಲ್ಲಿ ಸಾಗಿತ್ತು. ವೈಚಾರಿಕತೆಯೂ ಬೆಳೆಯುತ್ತಾ ಬಂದಿತ್ತು. 2014ಕ್ಕೆ ಅಭಿವೃದ್ಧಿಯೂ, ವೈಚಾರಿಕ ಚಿಂತನೆಗಳೂ ನಿಂತುಹೋದವು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ವಿಜ್ಞಾನ ದಿನಾಚರಣೆಯ ಅಂಗವಾಗಿ ಭಾರತೀಯ ವಿಚಾರವಾದಿ ಸಂಘಗಳ ಒಕ್ಕೂಟ, ಮಾನವ ಬಂಧುತ್ವ ವೇದಿಕೆ, ನೇಗಿಲಯೋಗಿ ಟ್ರಸ್ಟ್, ಅಖಿಲ ಕರ್ನಾಟಕ ವಿಚಾರವಾದಿಗಳ ಟ್ರಸ್ಟ್ ಇತ್ತೀಚೆಗೆ ಹಮ್ಮಿಕೊಂಡಿದ್ದ 'ವಿಚಾರಕ್ರಾಂತಿ' ಒಂದು ದಿನದ ರಾಜ್ಯಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಎಲ್ಲರಲ್ಲಿಯೂ ವೈಚಾರಿಕತೆ ಮೂಡಿಸುವ, ಮೌಢ್ಯಮುಕ್ತರನ್ನಾಗಿ ಮಾಡುವ ಕಾರ್ಯದಲ್ಲಿ ನಮ್ಮ ಸಂಘಟನೆ ಕೆಲಸ ಮಾಡುತ್ತಿದೆ. 10–15 ವರ್ಷಗಳ ನಂತರ ಇದರ ಫಲ ಕಾಣಬಹುದು' ಎಂದರು.

ಸಂಸ್ಕೃತಿ ಚಿಂತಕ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, 'ಪಾಶ್ಚಾತ್ಯರ ಭೌತಿಕವಾದ ಭಾರತಕ್ಕೆ ಬಂದ ಬಳಿಕ ವಿಚಾರವಾದ ಬೆಳೆಯಿತು ಎಂಬುದು ಸಾಮಾನ್ಯ ತಿಳಿವಳಿಕೆ. ಆದರೆ, ಚಾರ್ವಾಕ ಅವರ ಕಾಲದಿಂದಲೇ ಇಲ್ಲಿ ವಿಚಾರವಾದ ಬೆಳೆದಿತ್ತು' ಎಂದರು.

ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು, 'ವಿಚಾರಕ್ರಾಂತಿ ಏಕಮುಖಿ, ಏಕರೇಖೆಯಲ್ಲಿ ಇರುವುದಲ್ಲ. ಸಮಾಜವಾದ, ನಾಸ್ತಿಕವಾದ, ಸಮಾನತೆ, ಮೌಢ್ಯವಿರೋಧಿ, ಜಾತಿ ವಿರೋಧಿ ಹೋರಾಟಗಳು ಸಂದರ್ಭಾನುಸಾರ ಮುನ್ನೆಲೆಗೆ ಬಂದಿರಬಹುದು. ವಿಚಾರ ಕ್ರಾಂತಿ ಇವುಗಳೆಲ್ಲ ಸೇರಿದ ಒಕ್ಕೂಟ' ಎಂದು ಪ್ರತಿಪಾದಿಸಿದರು.

ಭಾರತೀಯ ವಿಚಾರವಾದಿ ಸಂಘಗಳ ಒಕ್ಕೂಟದ ಅಧ್ಯಕ್ಷ ಪ್ರೊ. ನರೇಂದ್ರ ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಾಸಕ ಬಸವರಾಜ ಬೊಮ್ಮಾಯಿ ಬಣ್ಣನೆ ★ ರಾಮಲಿಂಗ ಶೆಟ್ಟಿ ಅವರ 'ಮಣ್ಣಿನ ಮಗ' ಪುಸ್ತಕ ಬಿಡುಗಡೆ

'ಎಚ್.ಡಿ.ದೇವೇಗೌಡರದು ಕರ್ಣನ ವ್ಯಕ್ತಿತ್ವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವೇಗೌಡರದು ಕರ್ಣನ ವ್ಯಕ್ತಿತ್ವವಾಗಿದ್ದು, ಅವರು 60 ವರ್ಷದ ರಾಜಕಾರಣದಲ್ಲಿ ಐದಾರು ವರ್ಷ ಮಾತ್ರ ಅಧಿಕಾರ ಮಾಡಿದ್ದಾರೆ. ಉಳಿದ ಅವಧಿಯಲ್ಲಿ ದೇಶ, ರಾಜ್ಯದ ಹಿತಕ್ಕಾಗಿ ಹೋರಾಟ ಮಾಡುತ್ತ ಬಂದಿದ್ದಾರೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನೇ.ಭ. ರಾಮಲಿಂಗ ಶೆಟ್ಟಿ ಅವರ 'ಮಣ್ಣಿನ ಮಗ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಮಹಾಭಾರತದ ಕೃಷ್ಣನ ಲೀಲೆಯಲ್ಲಿ ಅರ್ಜುನ ಮತ್ತು ಕರ್ಣನ ವ್ಯಕ್ತಿತ್ವಗಳು ಹೊರಹೊಮ್ಮುತ್ತವೆ. ಅರ್ಜುನ ಕಾರ್ಯಪ್ರವೃತನಾಗಲು ಧೀರ, ಶೂರನೆಂದು ಹೊಗಳಬೇಕಾಗುತ್ತದೆ. ಆದರೆ, ಕರ್ಣ ಇದಕ್ಕೆ ಅಪವಾದವಾಗಿದ್ದು, ಗುರಿಯನ್ನು ಸವಾಲಾಗಿ ಸ್ವೀಕರಿಸಿ ಕಾರ್ಯೋನ್ಮುಖನಾಗುತ್ತಾನೆ.



ಕಾರ್ಯಕ್ರಮದಲ್ಲಿ 'ಮಣ್ಣಿನ ಮಗ' ಪುಸ್ತಕದ ಪ್ರತಿಯನ್ನು ನಿರ್ಮಲಾನಂದನಾಥ ಸ್ವಾಮೀಜಿ ಅವರು ನೇ.ಭ. ರಾಮಲಿಂಗ ಶೆಟ್ಟಿ (ಬಲ ಬದಿ) ಅವರಿಗೆ ಹಸ್ತಾಂತರಿಸಿದರು. (ಎಡದಿಂದ) ಸಾಹಿತಿ ಹಂ.ಪ. ನಾಗರಾಜಯ್ಯ, ಬಸವರಾಜ ಬೊಮ್ಮಾಯಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹಾಗೂ ಬಿ.ಆರ್.ಸುದರ್ಶನ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ದೇವೇಗೌಡ ಅವರದ್ದೂ ಅದೇ ರೀತಿಯ ವ್ಯಕ್ತಿತ್ವವಾಗಿದೆ. ನನಗೆ ಅವರ ಜತೆಗೆ ಬಹಳ ಹತ್ತಿರದಿಂದ ಕೆಲಸ ಮಾಡುವ ಅವಕಾಶ ಸಿಕ್ಕಿತು' ಎಂದು ಹೇಳಿದರು.

'ರಾಜ್ಯದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ದೇವೇಗೌಡರ ಪಾತ್ರ ದೊಡ್ಡದು. ಕನ್ನಡದ ಬಾವುಟವನ್ನು ದೆಹಲಿ ಕೆಂಪು ಕೋಟೆಯ ಮೇಲೆ ಹಾರಿಸಿದ ಏಕೈಕ ಕನ್ನಡಿಗ ಅವರಾಗಿದ್ದು, ಅವರ ಬಗ್ಗೆ ಹೆಮ್ಮೆ ಇದೆ. ಅವರು ಸಂಬಂಧಗಳನ್ನು ರಾಜ್ಯದ ಹಿತಕ್ಕೆ ಬಳಸಿಕೊಳ್ಳುತ್ತಿದ್ದರು. ರಾಜಕೀಯವಾಗಿ ಅವರಿಂದ ಬಹಳಷ್ಟು ಕಲಿತಿದ್ದೇನೆ' ಎಂದು ತಿಳಿಸಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, 'ದೇವೇಗೌಡ ಅವರು ಕಡಿಮೆ ಅವಧಿಯಲ್ಲಿ ಅಧಿಕಾರದಲ್ಲಿ ಇದ್ದರೂ ನಾಡಿಗೆ ಕೊಟ್ಟ ಕೊಡುಗೆ ಅಪಾರ. ಆದರ್ಶಗಳ ಕೊರತೆ ಕಾಣುತ್ತಿರುವ ಈ ಕಾಲದಲ್ಲಿ ರಾಜಕಾರಣಕ್ಕೆ ಬರುವವರು ದೇವೇಗೌಡರನ್ನು ಅಧ್ಯಯನ ಮಾಡಬೇಕು. ಅವರಿಗೆ ವಯಸ್ಸಾದರೂ ಅವರ ಶಕ್ತಿ ಕುಂದಿಲ್ಲ. ಅವರ ಮನಸ್ಸು ದೇಹ ಮುನ್ನಡೆಸುತ್ತಿದೆ' ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ವಿ.ಆರ್. ಸುದರ್ಶನ್, 'ಜನತಾ ಪರಿವಾರದಲ್ಲಿ ಪ್ರತಿಭಾವಂತ ನಾಯಕರು ಇದ್ದರು. ಅವರು ರಾಜ್ಯದ ಬಗ್ಗೆ ಕನಸು ಹಾಗೂ ದೂರದೃಷ್ಟಿ ಹೊಂದಿದ್ದರು. ಆದರೆ, ಪಕ್ಷವನ್ನು ಕಟ್ಟಿದವರೇ ಕೆಡವಿದರು. ಇವತ್ತಿನ ರಾಜಕಾರಣದಲ್ಲಿ ದೇವೇಗೌಡ ಅವರು ಇಲ್ಲಿ ತೆಗೆದುಕೊಂಡ ನಿರ್ಧಾರವನ್ನು ಪ್ರಧಾನಿಯಾಗಿದ್ದಾಗ ತೆಗೆದುಕೊಂಡಿದ್ದರೆ ಇನ್ನೂ ಎರಡು ವರ್ಷ ಪ್ರಧಾನಿಯಾಗಿ ಇರುತ್ತಿದ್ದರು' ಎಂದು ತಿಳಿಸಿದರು.

ಬಿಬಿಎಂಪಿ ನೌಕರರ ಬೇಡಿಕೆ ಈಡೇರಿಕೆ ಭರವಸೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಬಹುತೇಕ ಬೇಡಿಕೆಗಳನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಈಡೇರಿಸಿದ್ದು, ನೌಕರರು ಪ್ರತಿಭಟನೆಯನ್ನು ವಾಪಸ್ ಪಡೆದಿದ್ದಾರೆ.

ಬೇಡಿಕೆಗಳ ಈಡೇರಿಸಲು ಒತ್ತಾಯಿಸಿ ಸಾಮೂಹಿಕ ರಜೆ ಹಾಕಿದ್ದ ಪಾಲಿಕೆ ಸಿಬ್ಬಂದಿ, ಶುಕ್ರವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟ ಆರಂಭಿಸಿದ್ದರು. ಮಧ್ಯಾಹ್ನ ಸ್ಥಳಕ್ಕೆ ಬಂದ ತುಷಾರ್ ಗಿರಿನಾಥ್ ಕೆಲ ಆದೇಶಗಳನ್ನು ಪ್ರಕಟಿಸಿದರು. ಜೊತೆಗೆ ಒಂದೆರಡು ದಿನಗಳಲ್ಲಿ ಬಹುತೇಕ ಭರವಸೆಗಳನ್ನು ಈಡೇರಿಸುವುದಾಗಿ ತಿಳಿಸಿದರು.

ಕಂದಾಯ ವಿಭಾಗದಲ್ಲಿ ಆಸ್ತಿ ತೆರಿಗೆ ಸಂಗ್ರಹದ ಹಲವರಿಗೆ ನೀಡಿದ್ದ ನೋಟಿಸ್‌ಗಳನ್ನು ವಾಪಸ್ ಪಡೆಯುವುದು, ಬಡ್ತಿಯಾಗಿದ್ದ ಕಂದಾಯ ವಿಭಾಗದ 10 ಮಂದಿಗೆ ಸ್ಥಳ ನಿಯೋಜಿಸಿ ಆದೇಶಿಸಲಾಗುತ್ತದೆ ಎಂದು ಭರವಸೆ ನೀಡಿದರು.

'ಮುಖ್ಯ ಆಯುಕ್ತರ ಭರವಸೆ ಹಿನ್ನೆಲೆಯಲ್ಲಿ ನಾವು ಹೋರಾಟವನ್ನು ನಿಲ್ಲಿಸಿದ್ದೇವೆ' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಕೋಲ್ಕತ್ತ ರೇಸ್

ಅಸ್ಕೊವಾಲ್, ಡಿಫ್ ಮೊದಲ ದಿನದ ಆಕರ್ಷಣೆ

ಜವಾರೆ ಎಸ್ ಪೂನಾವಾಲ ಸ್ಪ್ರಿಂಟರ್ಸ್ ಕಪ್ ಮತ್ತು ಡಾ| ಎಂ.ಎ.ಎಂ. ರಾಮಸ್ವಾಮಿ ಚೆಟ್ಟಿಯಾರ್ ಆಫ್ ಚೆಟ್ಟಿನಾಡ್ ಮೆಮೋರಿಯಲ್ ಸ್ಟೇಯರ್ಸ್ ಕಪ್ ಶನಿವಾರ ಕೋಲ್ಕತ್ತದಲ್ಲಿ ಏರ್ಪಡಿಸಿರುವ ಇನ್ವಿಟೇಶನ್ ಕಪ್ ರೇಸ್‌ಗಳ ಪ್ರಮುಖ ಆಕರ್ಷಣೆಗಳಾಗಿದ್ದು, ಅಸ್ಕೊವಾಲ್ ಮತ್ತು ಡಿಫ್ ಕ್ರಮವಾಗಿ ಈ ರೇಸ್‌ಗಳನ್ನು ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ವಿಲ್ಲಾನೆಲ್ 5, ಮೆಂಜೋಸ್ ಮೌಸ್ತಾಷ್ 2, ಡೊನಾ ಸಿಯೇನ 3
2ನೇ ರೇಸ್: ಸ್ಟಾರ್ ಪ್ರಾಸ್ಪೆರಿಟಿ 6, ಟ್ರೊಫೈತ್ 7, ಜೂಮಾ 3
3ನೇ ರೇಸ್: ರಾಯಲ್ ಮೈಸೂರು 10, ಫಾರ್ಚೂನೇಟ್ ಸನ್ 8, ಪ್ರಿನ್ಸ್ ಜಾಸ್ಟೈನ್ 5
4ನೇ ರೇಸ್: ಕಿಂಗ್ಸ್ ರೀಟ್ರೀಟ್ 5, ಚಿಲಿಲೇಡಿ 9, ಸ್ಪೆಕ್ಯುಲೇಟರ್ 11
5ನೇ ರೇಸ್: ಸ್ಟಾರ್ ಗ್ಲೋರಿ 2, ಹಿಡನ್ ಗೋಲ್ಡ್ 6, ಬ್ಲ್ಯಾಕ್ ಈಗಲ್ 7
6ನೇ ರೇಸ್: ಅಸ್ಕೊವಾಲ್ 1, ಸೀರ್ಯೂ ಕರೇಜಿಯಸ್ 7, ಮ್ಯಾಗಿಲೆಟೊ 6
7ನೇ ರೇಸ್: ಡಿಫ್ 1, ಚಾಮೊನಿಕ್ಸ್ 5, ಥರ್ಡ್ ಅವೆನ್ಯೂ 3
8ನೇ ರೇಸ್: ಹನಿಕೇಕ್ 14, ಡೈಮಂಡ್ ರೈನ್ 11, ಕ್ಯಾಸ್ಟಿಲೊ 2

ಉತ್ತಮ ಬೆಟ್: ಸ್ಟಾರ್ ಪ್ರಾಸ್ಪೆರಿಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ)

KSIIDC

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-01.

ಅಲ್ಪಾವಧಿ ಟೆಂಡರ್ ಪ್ರಕಟಣೆ-ಕರೆ-2

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ **https://kppp.karnataka.gov.in** ಮೂಲಕ)

ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು(ಕೆಎಸ್ಐಐಡಿಸಿ), ಡಿಜಿಸಿಎ ಸಿಎಆರ್ ಮತ್ತು ಐಸಿಎಓ 9137 ನಿಯಮಗಳು ಮತ್ತು ವಿವರಣೆಗಳ ಅನ್ವಯ ಮಧಭಾವಿ ಗ್ರಾಮ, ವಿಜಯಪುರ ಜಿಲ್ಲೆ ಯಲ್ಲಿರುವ ವಿಜಯಪುರ ವಿಮಾನ ನಿಲ್ದಾಣಕ್ಕೆ 2 ಸಂಖ್ಯೆಯ (ಎರಡು)ವಿಮಾನ ರಕ್ಷಣೆ ಮತ್ತು ಅಗ್ನಿಶಾಮಕ ವಾಹನಗಳ (2 Nos of Aircraft Resue &Fire Fighting Vehicles) (ARFFV-CAT-7)ಸರಬರಾಜಿಗೆ ಅರ್ಹ ಕಂಪನಿಗಳು/ಸಂಸ್ಥೆಗಳು/ಮಾಲೀಕತ್ವ ಹೊಂದಿರುವವರಿಂದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.

ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (**https://kppp.karnataka.gov.in**)ಮೂಲಕ ಟೆಂಡರ್ ದಸ್ತಾವೇಜುಗಳನ್ನು ಪಡೆಯಬಹುದಾಗಿದೆ. **ಪ್ರಮುಖ ದಿನಾಂಕಗಳು:** ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ : 01.03.2024ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ **ದಿನಾಂಕ: 05.03.2024 ಬೆಳಿಗ್ಗೆ 11.30 ಗಂಟೆಗೆ.** ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 11.03.2024 ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ವೆಬ್‌ಸೈಟ್ (**https://kppp.karnataka.gov.in**) ನಿಂದ ಪಡೆಯಬಹುದು. ಈ ಟೆಂಡರ್‌ಗೆ ಸಂಬಂಧಿಸಿದ ಯಾವುದೇ ಬದಲಾವಣೆಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸಂಪರ್ಕ ಸಂಖ್ಯೆ : AGM (IPD-1),080-22258123/9845520837 & e-mail : bic3@ksiidc.com & info@ksiidc.com

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ, ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು-570006.

ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ-ಟೆಂಡರ್ ಪ್ರಕಟಣೆ ಸಂಖ್ಯೆ. 31/2023-24 ದಿನಾಂಕ: 22.02.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 1ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ) **1)** ಅಂತರಸಂತೆ ಮತ್ತು ಇತರೆ 134 ಜನವಸತಿಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (DBOT basis under JJM) **2)** ಹಂಪಾಪುರ ಮತ್ತು ಇತರೆ 48 ಜನವಸತಿಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (DBOT basis under JJM) **3)** ಡಿ.ಬಿ.ಕುಪ್ಪೆ ಮತ್ತು ಇತರೆ 19 ಜನವಸತಿಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (DBOT basis under JJM) **4)** ಮನುಗನಹಳ್ಳಿ ಮತ್ತು ಇತರೆ 58 ಜನವಸತಿಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಯೋಜನೆ (DBOT basis under JJM). ಈ ಮೇಲಿನ ಒಟ್ಟು 04 ಕಾಮಗಾರಿಗಳಿಗೆ (ಅಂದಾಜು ಮೊತ್ತ ರೂ.13.83 to 101.73 ಕೋಟಿಗಳವರೆಗೆ) ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 22.02.2024 ರಿಂದ 02.03.2024 ರವರೆಗೆ, ಟೆಂಡರ್ ತೆರೆಯುವ ದಿ: 04.03.2024 ರಂದು ಬೆಳಿಗ್ಗೆ:11.00 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (kppp- portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.karnataka. gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ.0821-2460495) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

DIPR/DDMYS/KSMCA/1220/2023-24 ಸಹಿ/- ಕಾರ್ಯಪಾಲಕ ಅಭಿಯಂತರು

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು - 560 027.

ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಟೆಂಡರ್ ಶಾಖೆ/ಉ&ಖನಿ/17/2023-24 ದಿನಾಂಕ: 29.02.2024

ಟೆಂಡರ್ ಆಹ್ವಾನ ಪ್ರಕಟಣೆ

ಬೆಂ.ಮ.ಸಾ.ಸಂಸ್ಥೆಗೆ ಅವಶ್ಯಕವಿರುವ ಸರಕುಗಳನ್ನು ಪಡೆಯಲು KPPPನ ಮೂಲಕ ಟೆಂಡರ್ ಕರೆಯಲಾಗಿದ್ದು ಟೆಂಡರ್ ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ.
ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ವಿವರಣೆ	KPPP ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆ ದಿನಾಂಕ
ಅಲ್ಪಾವಧಿ ಟೆಂಡರ್			
1	BMTC/2023-24/ IND0063	ಸಾರ್ವಜನಿಕ ಪಾಸ್‌ಗಳ ಮುದ್ರಣ ಮತ್ತು ಪೂರೈಕೆ ಬಗ್ಗೆ	11.03.2024 @17.00 Hrs.

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ನಿಂದ ಪಡೆಯಬಹುದು.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ನಗರಸಭಾ ಕಾರ್ಯಾಲಯ ಕನಕಪುರ

ರಾಮನಗರ ಜಿಲ್ಲೆ. ದೂರವಾಣಿ : 080-2752 2428.

ಇಮೇಲ್: kanakapura_tmc@yahoo.co.in ವೆಬ್‌ಸೈಟ್: www.kanakapuratown.mrc.gov.in

ಸಂಖ್ಯೆ : ಕ.ನ.ಸ./ತಾಂ.ಶಾ.-1/ ಎಸ್.ಎಫ್.ಸಿ. (ವಿಶೇಷ)/ಸಿ.ಆರ್./15/2022-23 ದಿನಾಂಕ : 29-02-2024

ಟೆಂಡರ್ ಪ್ರಕಟಣೆ

(ದ್ವಿ-ಲಕೋಟೆ) (ಜಿ.ಓ.ಕೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2022-23 ನೇ ಸಾಲಿನ ಎಸ್.ಎಫ್.ಸಿ (ವಿಶೇಷ) ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು, ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಟೆಂಡರ್‌ಗಳ ಟೆಂಡರ್ ಆಹ್ವಾನಿಸಲಾಗಿದೆ. ಇಂಡೆಂಟ್ ನಂ. : **DMA/2023-24/OW/WORK_INDENT4948/CALL-2, ಅಂದಾಜು ಮೊತ್ತ ರೂ. 75.00, DMA/2023-24/OW/WORK_INDENT7055/CALL-2, ಅಂದಾಜು ಮೊತ್ತ ರೂ. 70.00 ಲಕ್ಷ, ಟೆಂಡರ್ ದಿನಾಂಕದ ವಿವರಗಳು ಹಾಗೂ ಇತರೆ ಮಾಹಿತಿಗಳು ಕೆಳಕಂಡಂತಿವೆ. ಟೆಂಡರ್ ಬಗ್ಗೆ ಮಾಹಿತಿ ದಿನಾಂಕ : 29-02-2024 ಬೆಳಿಗ್ಗೆ 10.00 ಗಂಟೆಯಿಂದ ದಿನಾಂಕ : 14-03-2024 ಸಂಜೆ 17.30 ರವರೆಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15-02-2024 ಸಂಜೆ 17.30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18-03-2024 ಬೆಳಿಗ್ಗೆ 11.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೊದನೆಯಾದ ನಂತರ ತೆರೆಯಲಾಗುವುದು,** ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಪ್ರಕಟಿಸಲಾಗುವುದು ಯಾವುದೇ ವಾರ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. **ಹೆಚ್ಚಿನ ವಿವರಗಳನ್ನು ಕಛೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.**

ಸಹಿ/- ಪೌರಾಯುಕ್ತರು, ನಗರಸಭೆ, ಕನಕಪುರ.

ಡಿಐಪಿಆರ್/ರಾಮನಗರ/535/ಮಣಿಪಾಲ್/2023-24

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು:ಸ.ಇಂ-1/ಟೆಂಡರ್/2023-24 ದಿ: 26.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 24/2023-24
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137- 283336.

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ 200.00 ಲಕ್ಷ ಗಳವರೆಗೆ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 12-03-2024 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 13-03-2024 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16-03-2024 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ:07-03-2024 ಸಂಜೆ 4.00 ಗಂಟೆಗೆ ವರೆಗೆ

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/595/KSMCA/2023-24

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಉಪ ನಿರ್ದೇಶಕರ ಕಛೇರಿ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ ಕೊಠಡಿ ಸಂ. 129, ಚಾಮರಾಜನಗರ-571313

ದೂರವಾಣಿ ಸಂ.: 08226-222445, 224720

E Mail : ddwcdchnagar@gmail.com

ಸಂಖ್ಯೆ : ಉನಿಚಾ:ಮಮಅ:ಮಿಶಯೋ:ತಿಪ್ರಕಟಣೆ:2023-24 ದಿನಾಂಕ : 29-02-2024

ತಿದ್ದುಪಡಿ ಪ್ರಕಟಣೆ

ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಚಾಮರಾಜನಗರ ಜಿಲ್ಲೆಗೆ ವಿವಿಧ ಹುದ್ದೆಗಳಿಗೆ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯು ದಿನಾಂಕ : 28-02-2024 ರಂದು ಪ್ರಕಟಗೊಂಡಿರುತ್ತದೆ. ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಈ ಕೆಳಕಂಡ ವೆಬ್ ಸೈಟ್ ಅನ್ನು ಸಂಪರ್ಕಿಸಬಹುದಾಗಿರುತ್ತದೆ.

WebsiteURL: https://chamarajanagar.nic.in/ನೇಮಕಾತಿ
DirectUrl:https://sevasindhuservices.karanataka.gov.in/directApply.do?serviceId=2151

ಸಹಿ/- ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:436:2023-24

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ಐ.ಎಫ್.ಟಿ. ಸಂ: 15/2023-24 ದಿನಾಂಕ: 28.02.2024

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್)-ಕೆ.ಡಬ್ಲ್ಯೂ-4

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆ.ಡಬ್ಲ್ಯೂ-4ರ ಅನ್ವಯ ಶಿವಮೊಗ್ಗ ಉಪವಿಭಾಗ ವ್ಯಾಪ್ತಿಯ 01 ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಅಂದಾಜು ಮೊತ್ತ ರೂ.140.00 ಲಕ್ಷಗಳಿರುತ್ತದೆ. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: https://kppp.karnataka.gov.in/ ನಲ್ಲಿ ದಿನಾಂಕ: 28.02.2024 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: 07.03.2024 ಇನ್ನುಳಿದಂತೆ ವೈಬ್ ಸೈಟ್ ನಲ್ಲಿರುವ ವಿವರಗಳೇ ಅಂತಿಮ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/252/03/23-24/1426

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಕ್ಕರೆ ನಗರ, ಮಂಡ್ಯ 571 402.

GM/AM(C)/Sug/93/2023-24 Date: 01.03.2024

Telephone:08232-224036

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿಯ ಉತ್ಪನ್ನವಾದ ಸಕ್ಕರೆ ಮಾರಾಟ ಮಾಡಲು ಅಲ್ಪಾವಧಿ ಇ-ಟೆಂಡರ್ ಪ್ರಕಟಣೆಯ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ : 01. ಸಾಮಗ್ರಿ ವಿವರ : **ಸಕ್ಕರೆ ಎಸ್-30ಉತ್ಪಾದನೆ 2023-24 ನೇ ಸಾಲು. ಮಾರಾಟದ ಪ್ರಮಾಣ : 5840 ಕ್ವಿಂಟಾಲ್.** ಇ.ಎಂ.ಡಿ ಹಣ (ಪ್ರತಿ ಕ್ವಿಂಟಾಲಿಗೆ) : **ರೂ.100.** ಟೆಂಡರ್ ಫೀ. : **ಇ- ಪೋರ್ಟ್‌ಲ್ ನಿಯಾಮಾವಳಿ.** ಸೂಚನೆ: ಬಿಡ್‌ದಾರರು ಮೈಸೂರು ಸಕ್ಕರೆ ಕಂಪನಿಯ, ಮಂಡ್ಯದ ಗೋದಾಮುಗಳಿಗೆ ಭೇಟಿ ನೀಡಿ, ಸಕ್ಕರೆ ಗುಣಮಟ್ಟವನ್ನು ಪರಿಶೀಲಿಸಿಕೊಂಡು ನಂತರ ದರವನ್ನು ನಮೂದಿಸುವುದು. ಇ- ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು **(https://Kppp.Karnataka.gov.in)** ತುಂಬುವುದು. ಇ-ಪೋರ್ಟ್‌ಲ್ ಟೆಂಡರ್‌ನ್ನು ತುಂಬಲು ಪ್ರಾರಂಭದ **ದಿನಾಂಕ:01.03.2024** ಮತ್ತು ಕೊನೆಯ ದಿನಾಂಕ:**15.03.2024 ರ 5.00 PM ಗಂಟೆ** ಆಗಿರುತ್ತದೆ. (1) ಆನ್‌ಲೈನ್‌ನಲ್ಲಿ ಬಿಡ್ ಮಾಡಲು ದಿನಾಂಕ:**16.03.2024 ಸಮಯ ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ** ಮಾತ್ರ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: **9844766773/7353328103.** ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ದಿನಾಂಕ:01.03.2024 ಸಹಿ/- ಪ್ರಧಾನ ವ್ಯವಸ್ಥಾಪಕರು.

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/614/2023-24

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 560 009

ಸಂಖ್ಯೆ: ಕೆಆರ್‌ಐಡಿಎಲ್/ಎಡಿಎಂ/ಇನ್‌ಶೂರೆನ್ಸ್/2023-24/01/ಕರೆ-2 ದಿನಾಂಕ: 01.03.2024

ಗುಂಪು ಆರೋಗ್ಯ ವಿಮೆ ಮತ್ತು ಗುಂಪು ವೈಯಕ್ತಿಕ ಅಪಘಾತ ವಿಮೆ ಒದಗಿಸಲು ಮರು ಟೆಂಡರ್ ಪ್ರಕಟಣೆ-ಕರೆ-2

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಳಕಂಡ ವಿಷಯಗಳಲ್ಲಿ ಸಾಕಷ್ಟು ಅನುಭವ ಹೊಂದಿರುವ ಆಸಕ್ತಿಯುಳ್ಳ ಬಿಡ್‌ದಾರರು/ ವೈದ್ಯಕೀಯ ವಿಮೆ ಪೂರೈಕೆದಾರರುಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಟೆಂಡರುಗಳನ್ನು ಆಹ್ವಾನಿಸಲಾಗಿದೆ: (1) ಕೆಆರ್‌ಐಡಿಎಲ್‌ನ ಎಲ್ಲಾ ಖಾಯಂ ನೌಕರರು/ಅಧಿಕಾರಿಗಳು ಮತ್ತು ಅವಲಂಬಿತ ಕುಟುಂಬ ಸದಸ್ಯರುಗಳಿಗೆ ಗುಂಪು ಆರೋಗ್ಯ ವಿಮೆ ಪಾಲಿಸಿ. (2) ಕೆಆರ್‌ಐಡಿಎಲ್‌ನ ಎಲ್ಲಾ ಖಾಯಂ ನೌಕರರು/ಅಧಿಕಾರಿಗಳಿಗೆ ಗುಂಪು ವೈಯಕ್ತಿಕ ಅಪಘಾತ ವಿಮೆ ಪಾಲಿಸಿ. ಟೆಂಡರ್‌ನ ಇಎಂಡಿ ಮೊತ್ತ: **ರೂ. 50,000/-.** ಟೆಂಡರ್ ಪ್ರಕಟಣೆಯ ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(www.kppp.karnataka.gov.in)** ಗೆ ಭೇಟಿನೀಡಿ ಮತ್ತು ಸಂಪರ್ಕಿಸಿ: **+91-8046010000, +91-8068948777.**

(1) ಸ್ಪಷ್ಟನೆ ಪಡೆಯುವ ಕಡೆಯ ದಿನಾಂಕ ಮತ್ತು ಸಮಯ: **12.03.2024 ರಂದು 14.00 ಗಂಟೆಯ ವರೆಗೆ.** (2) ಬಿಡ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ: **12.03.2024 ರಂದು 16.00 ಗಂಟೆಯ ವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **14.03.2024 ರಂದು 16.00 ಗಂಟೆಗೆ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **15.03.2024 ರಂದು 16.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

ಮುಖ್ಯ ಆಡಳಿತಾಧಿಕಾರಿ,

ಕೆಆರ್‌ಐಡಿಎಲ್, ಬೆಂಗಳೂರು-560009. ದೂರವಾಣಿ: 080-28015635/ 9482735123

ಸಹಿ/- ಮುಖ್ಯ ಆಡಳಿತಾಧಿಕಾರಿ, ಕೆಆರ್‌ಐಡಿಎಲ್, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,

ರಸ್ತೆ ಮೂಲ ಸೌಕರ್ಯ-ದಕ್ಷಿಣ ವಿಭಾಗ, ನಂ. 203, 2ನೇ ಮಹಡಿ, ಆರ್.ವಿ. ರಸ್ತೆ, ಸೌತ್ ಎಂಡ್ ಸರ್ಕಲ್, ಬೆಂಗಳೂರು-560011.

ಸಂಖ್ಯೆ: ಕಾಅ/ರಮೂಸೌ/ದಕ್ಷಿಣ/ಟೆಂಡರ್/04/2023-24 ದಿನಾಂಕ: 01-03-2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರವು ಈ ಕೆಳಗೆ ಪಟ್ಟಿ ಮಾಡಿರುವ ಕಾಮಗಾರಿಗಳನ್ನು ಕೈಗೊಳ್ಳಲು **ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಅಡಿಯಲ್ಲಿ ದಿನಾಂಕ: 21-03-2023 ರ ಜಿ.ಓ. ಸಂಖ್ಯೆ: ಯುಡಿಡಿ 65 ಎಂಎನ್‌ವೈ 2023** (ಇ) **ಬೆಂಗಳೂರು** ಅನುಸಾರ ತಾತ್ವಿಕ ಅನುಮೋದನೆ ನೀಡಿ ಬಜೆಟ್ ಮಂಜೂರು ಮಾಡಿದೆ.
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ - ದಕ್ಷಿಣ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ - ಕೆಡಬ್ಲ್ಯೂ4)

ಕ್ರ. ಸಂ.	ಕಾಮಗಾರಿಯ ಹೆಸರು
1	ಬಸವನಗುಡಿಯ ಆಯ್ದ ರಸ್ತೆಗಳಲ್ಲಿ ಡಾಂಬರೀಕರಣ ಮತ್ತು ಪಾದಚಾರಿಮಾರ್ಗ ರಚನೆ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 877.00 (18% ಜಿಎಸ್‌ಟಿ ಸೇರಿದಂತೆ), ಇ.ಎಂ.ಡಿ (ರೂ. ಲಕ್ಷಗಳಲ್ಲಿ): 13.20 (ರೂ. 1.00 ಲಕ್ಷ** ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ಬಾಕಿ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **04-03-2024 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಬಿಡ್ ಪೂರ್ವಭಾವಿ ಸಭೆ ದಿನಾಂಕ: **07-03-2024 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ರಸ್ತೆ ಮೂಲ ಸೌಕರ್ಯ) ಇಲ್ಲಿ ನಡೆಯುವುದು. 3)** ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **11-03-2024 ರಂದು 17.30 ಗಂಟೆವರೆಗೆ. 4)** ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **13-03-2024 ರಂದು 16.00 ಗಂಟೆಗೆ ವೆಬ್‌ಸೈಟ್: https://kppp.karnataka.gov.in** ನಲ್ಲಿ **ಕಾರ್ಯಪಾಲಕ ಅಭಿಯಂತರರ ಕಛೇರಿ, ದಕ್ಷಿಣ ವಿಭಾಗ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲ ಸೌಕರ್ಯ-ದಕ್ಷಿಣ ವಿಭಾಗ, ಬಿಬಿಎಂಪಿ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು-560 001, ಕರ್ನಾಟಕ, ಭಾರತ

ಫೋನ್: 25581383, 25589112, 25586520, ಫ್ಯಾಕ್ಸ್: 080-25586321

ಈ-ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

No. PCB 206 INFRA EPH 2023/6085 Date: 29.02.2024

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಕುಡುತಿನಿ ಗ್ರಾಮದ 538.43 ಎಕರೆ (217.899 ಹೆಕ್ಟೇರ್) ಪ್ರದೇಶದಲ್ಲಿ ಕುಡುತಿನಿ ಕೈಗಾರಿಕಾ ಪ್ರದೇಶ, 2ನೇ ಹಂತವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಪ್ರಸ್ತಾಪಿತ ಯೋಜನೆಗೆ ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆ ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರಿಂದ ಉಲ್ಲೇಖದ ನಿಯಮಗಳು (Terms of Reference, ToR) ಪತ್ರವನ್ನು File No. 10/45/2023-IA.III, ದಿನಾಂಕ. 01.09.2023 ರಂದು ಪಡೆದಿರುತ್ತಾರೆ ಮತ್ತು ಪ್ರವರ್ತಕರ ಪತ್ರ ಸಂಖ್ಯೆ. KIADB/BALLARI/EE/783/2023-24, ದಿನಾಂಕ 29.11.2023ರ ಹಾಗೂ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಬಳ್ಳಾರಿ ಇವರ ಪತ್ರ ಸಂಖ್ಯೆ: ಕರಾಮಾನಿಮಂ/ಪ್ರಾಕ(ಬ)/ಪ.ಸಾ.ಸಭೆ/2023-24/2082, ದಿನಾಂಕ: 14.02.2024ರ ಕೋರಿಕೆಯ ಪ್ರಕಾರ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ಮಾನ್ಯ ಬಳ್ಳಾರಿ ಜಿಲ್ಲಾಧಿಕಾರಿಗಳು ದಿನಾಂಕ: 02.04.2024 ಕ್ಕೆ ನಿಗದಿಪಡಿಸಿರುತ್ತಾರೆ. ಸದರಿ ವಿವರಗಳು ಈ ಕೆಳಕಂಡಂತಿವೆ.

1 ಸಂಸ್ಥೆಯ ಹೆಸರು ಮತ್ತು ವಿಳಾಸ: ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ವಲಯ ಕಛೇರಿ, ನಂ. ಸಿ.ಎ. -1, ಮುಂಡರಗಿ ಕೈಗಾರಿಕಾ ಪ್ರದೇಶ, 1ನೇ ಹಂತ, ಬೆಂಗಳೂರು ರಸ್ತೆ, ಬಳ್ಳಾರಿ - 251518.

2 ಉದ್ದೇಶಿತ ಯೋಜನೆಯ ಸ್ಥಳ: ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಕುಡುತಿನಿ ಗ್ರಾಮದ 538.43 ಎಕರೆ (217.899 ಹೆಕ್ಟೇರ್) ಪ್ರದೇಶದಲ್ಲಿ ಕುಡುತಿನಿ ಕೈಗಾರಿಕಾ ಪ್ರದೇಶ, 2ನೇ ಹಂತವನ್ನು ಅಭಿವೃದ್ಧಿ ಪಡಿಸುವ ಯೋಜನೆ ಹೊಂದಿದೆ.

3 ಯೋಜನೆಯ ಕಾರ್ಯಚಟುವಟಿಕೆ: ಕುಡುತಿನಿ ಗ್ರಾಮದ 538.43 ಎಕರೆ (217.899 ಹೆಕ್ಟೇರ್) ಪ್ರದೇಶದಲ್ಲಿ ಕುಡುತಿನಿ ಕೈಗಾರಿಕಾ ಪ್ರದೇಶ 2ನೇ ಹಂತವನ್ನು ಅಭಿವೃದ್ಧಿ ಪಡಿಸುವ ಕುರಿತು.

4 ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: 02ನೇ ಏಪ್ರಿಲ್ 2024 ರಂದು ಮಂಗಳವಾರ ಬೆಳಿಗ್ಗೆ 11.00 ಘಂಟೆಗೆ ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಕುಡುತಿನಿ ಗ್ರಾಮ, ಕುಡುತಿನಿ ಕೈಗಾರಿಕಾ ಪ್ರದೇಶ, 2ನೇ ಹಂತ.

5. ಯೋಜನೆಯ ವೆಚ್ಚ: ರೂ. 87.58 ಕೋಟಿ (ಒಟ್ಟು ಮೊತ್ತ)

6 ಯೋಜನೆಯ ದಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಷೆಗೆ ಇಡುವ ಸ್ಥಳ. (ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್ ಬಳ್ಳಾರಿ ಜಿಲ್ಲೆ. (ಇ) ತಹಶೀಲ್ದಾರ್ ಕಾರ್ಯಾಲಯ, ಬಳ್ಳಾರಿ. (ಈ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಜಿಲ್ಲೆ. (ಉ) ತಾಲ್ಲೂಕು ಪಂಚಾಯತ್ ಕಛೇರಿ, ಬಳ್ಳಾರಿ. (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಕುಡುತಿನಿ, ಬಳ್ಳಾರಿ ತಾಲ್ಲೂಕು. (ಋ) ಹಿರಿಯ ಪರಿಸರ ಅಧಿಕಾರಿಗಳು, ವಿಜಯನಗರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶ್ರೀ ಸಾಯಿ ಶರಣ್ ಪ್ಲಾಜ್ಹಾ, ನಂ. 71/ಎ, 2ನೇ ಮಹಡಿ, ಡ್ಯಾಂ ರಸ್ತೆ, ಹೊಸಪೇಟೆ -583203, ವಿಜಯನಗರ ಜಿಲ್ಲೆ. (ೠ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸರ್ವೆ ನಂ. 597 ಪಿ, ವಾರ್ಡ್ ಸಂಖ್ಯೆ. 25, 4ನೇ ಮುಖ್ಯರಸ್ತೆ, ಡಾ॥ ವಿಷ್ಣುವರ್ಧನ ಪಾರ್ಕ್, ಕುವೆಂಪುನಗರ, ಬಳ್ಳಾರಿ - 583104. (ಎ) ಸದಸ್ಯ ಕಾರ್ಯದರ್ಶಿ, ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕೊಠಡಿ ಸಂಖ್ಯೆ : 706, 7ನೇ ಮಾಹಡಿ, 4ನೇ ಗೇಟ್, ಎಂ.ಎಸ್. ಕಟ್ಟಡ, ಬೆಂಗಳೂರು. (ಏ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034. (ಐ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.

ಸೂಚನೆ:

ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ **(ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ)** ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ : http://kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/- ಸದಸ್ಯ ಕಾರ್ಯದರ್ಶಿ

" ಏಕ ಬಳಕೆ ಪ್ಲಾಸ್ಟಿಕ್ ಉಪಯೋಗಿಸುವುದನ್ನು ನಿಲ್ಲಿಸಿ"

ಪ್ರಾದೇಶಿಕ ಆಯುಕ್ತರವರ ಕಚೇರಿ, ಕಂದಾಯ ಇಲಾಖೆ, ಬೆಂಗಳೂರು ವಿಭಾಗ ಮತ್ತು ನೋಡಲ್ ಅಧಿಕಾರಿ, ಪದನಿಮಿತ್ತ ಕಾರ್ಯದರ್ಶಿ (ಆರ್ಥಿಕ ಅಪರಾಧಗಳು), ಬೆಂಗಳೂರು

ಬಿಎಂಟಿಸಿ ಬಿಲ್ಡಿಂಗ್, 2ನೇ ಮಹಡಿ, ಶಾಂತಿನಗರ, ಕೆ.ಎಚ್ ರಸ್ತೆ, ಬೆಂಗಳೂರು-560027

ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ /ಸೂಚನೆ

Pursuant to attachment of Immovable properties by the Government under the provisions of the Karnataka Protection of Interest of Depositors in Financial Establishments Act, 2004 (KPIDFE Act) and pursuant to the absolute attachment order by the Hon'ble Special Court the Special Officer & Competent Authority (under KPIDFE-IMA and other Scam), is issuing notice for e-auction of the immovable property through e-auction on 'as is where is and whatever there is basis'.
The intending bidders will be required to furnish Earnest Money Deposit (EMD) (as mentioned against each auction in the e-portal provided by the Service Provider/Karnataka Public Procurement Portal only).

Short description of the Immovable Property

Sl. No.	DETAILS OF THE PROPERTY	RESERVE PRICE (Rs)	EMD (Rs)	Bid Increase Value (Rs)	Clear Title
1.	Agricultural Land in Sy.No. 28 measuring 5 Acre 21 guntas (which is now converted for Non Agricultural purpose) of Chigaranahalli village in Koratagere Taluk of Tumkur District. Bounded by East by:Property of Shiraj Ahmed Shareef, West by: The Properties of Chandrashekar, Dastageer sab & Beebe Jaan, North by: Property of Narasimhaiah & Lakshmaiah, South by: Property of Muddaiah & Ramaiah Google Location: **https://maps.app.goo.gl/vdWFYAT6LTqHSjcp8** Latitude and Longitude: 13°29'02.0"N 77°15'42.4"E	1,93,37,500/-	3,86,750/-	1,00,000/-	RTC Stands in the Name of Competent Authority appointed by Government.
2.	Agricultural Land in Sy.No. 84/2 measuring 0-34 guntas of Hullegowdanahalli Village in Dasanapura Hobli of Bangalore North Taluk of Bangalore District. The said property is bounded by East by:Property of Muniyappa, Siddaramu & Venkatagiriyappa, West by: Property of Venkatappa & Children and Property of Muniyappa, North by: Government road, South by: Property of M. Muniyappa and road Google Location: **https://maps.app.goo.gl/HJKHsJKWaQoo4uxk6** Latitude and Longitude: 13°04'03.8"N 77°24'09.1"E	1,48,75,000/-	2,97,500/-	75,000/-	
3.	Agricultural Land in Sy.No. 26/2 measuring 0-18 guntas of Aralasandra Village in Kasaba Hobli of Nelamangala Taluk of Bangalore Rural District. The said property is bounded by East by: The agricultural land of K.A Ugrasimha Rao, West by: The agricultural land of Gangaiah, North by: The agricultural land of children of Imamsab & Rajakaluve, South by: Kumudvati river Google Location: **https://maps.app.goo.gl/84bNRiA27tc1uV66A** Latitude and Longitude: 13°07'43.8"N 77°19'09.9"	72,00,000/-	1,44,000/-	40,000/-	
4.	Agricultural Land in Sy.No. 37/2 measuring 3 Acres 14 guntas of Honnasandra Village in Dasanapura Hobli of Bangalore North Taluk of Bangalore District. The said property is bounded by East by: The agricultural land in Sy. No. 38, West by: The agricultural land of Sri Bailappa, North by: Public tank, South by: The agricultural land of Sri N Siddappa Google Location: **https://maps.app.goo.gl/TvyedKiXkciTSWBJ6** Latitude and Longitude: 13°07'08.2"N 77°26'30.8"E	5,83,70,400/-	11,67,410/-	3,00,000/-	
5.	Agricultural Land in Sy.No. 32/10 measuring 1 Acres 05 guntas of Honnasandra Village in Dasanapura Hobli of Bangalore North Taluk of Bangalore District. The said property is bounded by East by: The agricultural land in Sy. No. 32/6, West by: The agricultural land in Sy. No. 37/2, North by: The agricultural land in Sy. No. 34/1, South by: The agricultural land in Sy. No. 16/7 & 16/8 Google Location: **https://maps.app.goo.gl/mBHtpXLEhKwiMx7w5** Latitude and Longitude: 13°06'59.0"N 77°26'37.8"E	1,96,02,000/-	3,92,040/-	1,00,000/-	
6.	Agricultural Land in Sy.No. 38 measuring 0 Acres 38 guntas of Honnasandra Village in Dasanapura Hobli of Bangalore North Taluk of Bangalore District. The said property is bounded by East by: The agricultural land in Sy. No. 39, West by: The agricultural land in Sy. No. 37/2, North by: Public tank, South by: The agricultural land of Sri N Siddappa Google Location: **https://maps.app.goo.gl/AN79xtmqekXJKYSTA** Latitude and Longitude: 13°07'09.2"N 77°26'31.5"E	1,69,88,400/-	3,39,770/-	85,000/-	

For registration & Online Auction, you can login to **https://kppp.karnataka.gov.in** (Helpdesk no: 080-46010000, 080-68948777) The interested bidders who require auction related information can contact Additional Regional Commissioner, Office of the Regional Commissioner, 2nd floor, BMTC Building, KH road, Shantinagar, Bengaluru-560027, e-mail id: **arckauction@gmail.com** or Contact No. : **7760275682.**

ಸ್ಥಳ: ಬೆಂಗಳೂರು
ದಿನಾಂಕ: 02-03-2024

ಸಹಿ/- ಹೆಚ್ಚುವರಿ ಪ್ರಾದೇಶಿಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರ ಕಚೇರಿ, ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/4005/ZEN/2023-24

1,093 ನಕಲಿ ಕ್ಲಿನಿಕ್‌ಗಳಿಗೆ ಬೀಗ

ಒಂದನೇ ಪುಟದಿಂದ

ಆದರೆ, ಕೆಲವರು ನೋಂದಣಿ ಮಾಡಿಕೊಳ್ಳದೆಯೇ ಚಿಕಿತ್ಸೆ ಒದಗಿಸುತ್ತಿದ್ದಾರೆ. ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಇಲ್ಲದವರೂ ಅನಧಿಕೃತವಾಗಿ ಕ್ಲಿನಿಕ್ ಮತ್ತು ಪ್ರಯೋಗಾಲಯಗಳನ್ನು ನಡೆಸುತ್ತಿದ್ದಾರೆ. ಅಂತಹ ಕ್ಲಿನಿಕ್ ಹಾಗೂ ಪ್ರಯೋಗಾಲಯಗಳನ್ನು ಆರೋಗ್ಯ ಇಲಾಖೆ ಅಧಿಕಾರಿಗಳ ತಂಡ ಪರಿಶೀಲನೆ ನಡೆಸುತ್ತಿದೆ. ಈ ಪರಿಶೀಲನೆ ವೇಳೆ ಗುರುತಿಸಲಾದ ಕ್ಲಿನಿಕ್‌ಗಳಲ್ಲಿ ಹೆಚ್ಚಿನವು ಪರವಾನಗಿ ಹೊಂದಿರದೇ ಇರುವುದು ತಿಳಿದುಬಂದಿದೆ.

ಉ.ಕ. ಭಾಗದಲ್ಲಿ ಅಧಿಕ: ನಕಲಿ ಕ್ಲಿನಿಕ್‌ಗಳಲ್ಲಿ ಹೆಚ್ಚಿನವು ಉತ್ತರ ಕರ್ನಾಟಕ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಲಿನಿಕ್‌ಗಳಾಗಿವೆ. ಪತ್ತೆ ಮಾಡಲಾದ ನಕಲಿ ಕ್ಲಿನಿಕ್‌ಗಳಲ್ಲಿ 54 ಕ್ಲಿನಿಕ್‌ಗಳನ್ನು ಇಲಾಖೆ ಮುಟ್ಟುಗೋಲು ಹಾಕಿಕೊಂಡಿದೆ. 24 ನಕಲಿ ಕ್ಲಿನಿಕ್‌ಗಳ ವೈದ್ಯರಿಗೆ ದಂಡ ವಿಧಿಸಲಾಗಿದೆ. ನಕಲಿ ಕ್ಲಿನಿಕ್‌ಗೆ ಸಂಬಂಧಿಸಿದಂತೆ 143 ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗಿವೆ.

'ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಇಲ್ಲದವರೂ ಅನಧಿಕೃತವಾಗಿ ಕ್ಲಿನಿಕ್ ಮತ್ತು ಪ್ರಯೋಗಾಲಯಗಳನ್ನು ನಡೆಸುತ್ತಿದ್ದಾರೆ. ಕೆಲವರು ಪರವಾನಗಿ ಪಡೆಯದೆ ಕ್ಲಿನಿಕ್ ಪ್ರಾರಂಭಿಸಿದ್ದಾರೆ. ಇತ್ತೀಚೆಗೆ ನಕಲಿ ಕ್ಲಿನಿಕ್ ಮತ್ತು ವೈದ್ಯರ ಸಂಖ್ಯೆ ಹೆಚ್ಚಾಗುತ್ತಿದೆ. ಇಂತಹವರ ವಿರುದ್ಧ ಕಾನೂನಿನ ಅಡಿಯೂ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ' ಎಂದು ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

> ನಕಲಿ ಕ್ಲಿನಿಕ್‌ಗಳ ಮೇಲೆ ದಾಳಿ ನಡೆಸಲಾಗುತ್ತಿದೆ. ಭ್ರೂಣ ಹತ್ಯೆ ತಡೆಗೆ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯಪಡೆ ರಚಿಸಲಾಗಿದೆ
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಅಧಿಕ ನಕಲಿ ಕ್ಲಿನಿಕ್ ಪತ್ತೆಯಾದ ಜಿಲ್ಲೆಗಳು

ಜಿಲ್ಲೆ	ಕ್ಲಿನಿಕ್‌ಗಳು
ಬೀದರ್	411
ಕೋಲಾರ	273
ಬೆಳಗಾವಿ	184
ವಿಜಯಪುರ	130
ಶಿವಮೊಗ್ಗ	87
ಕಲಬುರಗಿ	82
ಬೆಂಗಳೂರು ನಗರ	81

ತಾಂತ್ರಿಕ ಸಮಿತಿ ರಚನೆ

ಕೆಪಿಎಂಇ ಕಾಯ್ದೆಯಡಿ ನೋಂದಣಿಯಾದ ವೈದ್ಯರು ನಿಧನರಾದ ಬಳಿಕ ಅವರ ನೋಂದಣಿ ಸಂಖ್ಯೆ ಬಳಸಿ ಬೇರೆಯವರಿಗೆ ಪ್ರಮಾಣ ಪತ್ರ ನೀಡಿರುವ ಪ್ರಕರಣಗಳ ಬಗ್ಗೆಯೂ ದೂರುಗಳು ಇಲಾಖೆಗೆ ಸಲ್ಲಿಕೆಯಾಗಿವೆ. ಗುರುತಿಸಲಾದ ನಕಲಿ ವೈದ್ಯರ ಪಟ್ಟಿಯಲ್ಲಿ ಅಲೋಪತಿ ವೈದ್ಯರ ಜತೆಗೆ ಹೋಮಿಯೋಪತಿ, ಆಯುರ್ವೇದ, ನ್ಯಾಚುರೋಪತಿ, ಯುನಾನಿ ಹಾಗೂ ಸಿದ್ಧ ವೈದ್ಯರೂ ಸೇರಿದ್ದಾರೆ. ಹೀಗಾಗಿ, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ ಅಡಿ ನೋಂದಣಿಯಾಗಿರುವ ವೈದ್ಯರ ಬಗ್ಗೆ ಪರಿಶೀಲಿಸಿ, ವರದಿ ನೀಡಲು ಇಲಾಖೆಯು ತಾಂತ್ರಿಕ ಸಲಹಾ ಸಮಿತಿ ರಚಿಸಿದೆ.

ಕುಡಿಯುವ ನೀರಿನ ಸಮಸ್ಯೆ ಉಲ್ಬಣ?

ಒಂದನೇ ಪುಟದಿಂದ

ಸಮಸ್ಯೆ ಬಂದ ಕೂಡಲೇ ಕುಡಿಯುವ ನೀರು ಪೂರೈಸಲಾಗುವುದು. 15 ದಿನಗಳಿಗೊಮ್ಮೆ ಖಾಸಗಿ ಕೊಳವೆಬಾವಿ ಮಾಲೀಕರಿಗೆ ಹಣಪಾವತಿ ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ರಾಜ್ಯದಲ್ಲಿ ಈಗ ನೀರಿನ ಸಮಸ್ಯೆ ಇರುವ 116 ಗ್ರಾಮಗಳಿಗೆ 175 ಟ್ಯಾಂಕರ್‌ಗಳ ಮೂಲಕ ಹಾಗೂ 382 ಗ್ರಾಮಗಳಿಗೆ 445 ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಪ್ರತಿ ದಿನ ನೀರು ಪೂರೈಸಲಾಗುತ್ತಿದೆ. 9 ನಗರ ಸ್ಥಳೀಯ ಸಂಸ್ಥೆಗಳಲ್ಲಿನ 57 ವಾರ್ಡ್‌ಗಳಿಗೆ 24 ಟ್ಯಾಂಕರ್‌ಗಳ ಮೂಲಕ 29 ವಾರ್ಡ್‌ಗಳಿಗೆ 17 ಖಾಸಗಿ ಕೊಳವೆಬಾವಿಗಳ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ ಎಂದು ಹೇಳಿದರು.

ಬರಘೋಷಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರು ಮತ್ತು ಮೇವು ಒದಗಿಸಲು ಶಾಸಕರ ಅಧ್ಯಕ್ಷತೆಯ ಕಾರ್ಯಪಡೆಯ ಸಭೆಯನ್ನು 15 ದಿನಗಳಿಗೊಮ್ಮೆ ನಡೆಸಲಾಗುತ್ತಿದ್ದು, ಡಿಸೆಂಬರ್‌ನಿಂದ ಈವರೆಗೆ ತಾಲ್ಲೂಕು ಮಟ್ಟದ 600 ಸಭೆಗಳನ್ನು ನಡೆಸಲಾಗಿದೆ. ಫೆಬ್ರುವರಿ ಒಂದೇ ತಿಂಗಳಲ್ಲಿ ಕಾರ್ಯಪಡೆಯ 154 ಸಭೆ ನಡೆಸಲಾಗಿದೆ. ಬರ ನಿರ್ವಹಣೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದರು.

ರಾಜ್ಯದಲ್ಲಿ 144 ಲಕ್ಷ ಟನ್ ಮೇವು ಲಭ್ಯವಿದ್ದು, ಮುಂದಿನ 27 ವಾರಗಳ ಬಳಕೆಗೆ ಸಾಕಾಗುತ್ತದೆ. ಅಲ್ಲದೆ, 25 ಜಿಲ್ಲೆಗಳಲ್ಲಿ ಮೇವು ಖರೀದಿಗೆ ಟೆಂಡರ್ ಕರೆಯಲಾಗಿದೆ ಎಂದೂ ಕೃಷ್ಣಬೈರೇಗೌಡ ಹೇಳಿದರು.

ಎಸ್‌.ಎಂ. ಕೃಷ್ಣ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ಮೈಸೂರು: 'ಮಾಜಿ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ, ಇಲ್ಲಿನ ಸುದರ್ಶನ ನರಸಿಂಹ ಕ್ಷೇತ್ರದ ಪೀಠಾಧಿಪತಿ ಭಾಷ್ಯಂ ಸ್ವಾಮೀಜಿ ಮತ್ತು ಬೆಂಗಳೂರಿನ ಗೋಕುಲ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಅವರನ್ನು ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡಲಾಗಿದೆ' ಎಂದು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ತಿಳಿಸಿದರು.

'ಮಾರ್ಚ್ 3ರಂದು ಬೆಳಿಗ್ಗೆ 10ಕ್ಕೆ ಕ್ರಾಫರ್ಡ್ ಭವನದಲ್ಲಿ ನಡೆಯುವ 104ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುವುದು. ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಭಾಗವಹಿಸುವರು' ಎಂದು ಶುಕ್ರವಾರ ಮಾಹಿತಿ ನೀಡಿದರು.

ಬಿಜೆಪಿ ಸಂಸದ ಜಾಧವ್ ಬೆಂಬಲಿಗನ ಕೊಲೆ


ಗಿರೀಶ್ ಚಕ್ರ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಸಾಗನೂರು ಗ್ರಾಮದ ನಿವಾಸಿ, ಬಿಜೆಪಿ ಸಂಸದ ಡಾ.ಉಮೇಶ್ ಜಾಧವ್ ಅವರ ಆಪ್ತ ಗಿರೀಶ್‌ಬಾಬು ಚಕ್ರ (31) ಅವರನ್ನು ಸ್ನೇಹಿತರು ಗುರುವಾರ ರಾತ್ರಿ ಹೊಲದಲ್ಲಿ ಕೊಲೆ ಮಾಡಿ ಪರಾರಿಯಾಗಿದ್ದಾರೆ.

ಸಂಸದರ ಶಿಫಾರಸಿನ ಮೇರೆಗೆ ಇತ್ತೀಚೆಗಷ್ಟೇ ಗಿರೀಶ್‌ಬಾಬು ಅವರನ್ನು ದೂರ ಸಂಪರ್ಕ ಇಲಾಖೆಯ ಕಲಬುರಗಿ ವಿಭಾಗದ ಸಲಹಾ ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿತ್ತು.

ಹೀಗಾಗಿ ಸ್ನೇಹಿತರು ಪಾರ್ಟಿ ಕೊಡುವುದಾಗಿ ಗಿರೀಶ್‌ಬಾಬು ಅವರನ್ನು ಜಮೀನಿಗೆ ಕರೆಸಿಕೊಂಡು ಕಣ್ಣಿಗೆ ಖಾರದ ಪುಡಿ ಎರಚಿ ಮಾರಕಾಸ್ತ್ರಗಳಿಂದ ಕೊಲೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಣಗಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ದುಷ್ಕೃತ್ಯದಲ್ಲಿ ನಾಲ್ವರು ಭಾಗಿಯಾಗಿರುವ ಶಂಕೆ ಇದೆ ಎಂದು ಕುಟುಂಬದವರು ದೂರಿದ್ದಾರೆ.

ಘಟನೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ಕಲಬುರಗಿ ಎಸ್ಪಿ ಅಕ್ಷಯ್ ಹಾಕೆ, 'ಗಿರೀಶ್‌ಬಾಬು ರಾತ್ರಿ 9.30ಕ್ಕೆ ಮನೆಯಿಂದ ಹೊರಗೆ ಹೋಗಿದ್ದರು. ರಾತ್ರಿ 11.30ರಿಂದ 12ರ ಅವಧಿಯಲ್ಲಿ ಮಾರಕಾಸ್ತ್ರಗಳಿಂದ ಮುಖ ಹಾಗೂ ದೇಹದ ಇತರ ಭಾಗಗಳಿಗೆ ಇರಿದು ಕೊಲೆ ಮಾಡಲಾಗಿದೆ. ತಪ್ಪಿತಸ್ಥರನ್ನು ಪತ್ತೆ ಹಚ್ಚಲು ಆಳಂದ ಡಿವೈಎಸ್ಪಿ ಹಾಗೂ ಅಫಜಲಪುರ ಪೊಲೀಸ್ ಇನ್‌ಸ್ಪೆಕ್ಟರ್, ಗಾಣಗಾಪುರ ಪಿಎಸ್‌ಐ ನೇತೃತ್ವದಲ್ಲಿ ಮೂರು ತಂಡಗಳನ್ನು ರಚಿಸಲಾಗಿದೆ' ಎಂದರು.

ನಿಧನ ವಾರ್ತೆ


ಮನೋಹರ ಪ್ರಸಾದ್



ಮಂಗಳೂರು: ಪತ್ರಕರ್ತ ಮನೋಹರ ಪ್ರಸಾದ್ (65) ಶುಕ್ರವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿ ನಿಧನರಾದರು.

ಕಾರ್ಕಳ ತಾಲ್ಲೂಕು ಕರ್ವಾಲು ಗ್ರಾಮದವರಾದ ಅವರು 'ನವ ಭಾರತ' ಪತ್ರಿಕೆಯಲ್ಲಿ ವೃತ್ತಿ ಜೀವನ ಆರಂಭಿಸಿದ್ದರು. ಉದಯವಾಣಿ ಪತ್ರಿಕೆಯಲ್ಲಿ ಮುಖ್ಯ ವರದಿಗಾರರಾಗಿ, ಬ್ಯೂರೊ ಮುಖ್ಯಸ್ಥರಾಗಿ, ಸಹಾಯಕ ಸಂಪಾದಕರಾಗಿ ಎರಡು ವರ್ಷಗಳ ಹಿಂದೆ ನಿವೃತ್ತರಾಗಿದ್ದರು.

ರಾಮ ಮನಗೂಳಿ



ಬಾಗಲಕೋಟೆ: ಪತ್ರಕರ್ತ ರಾಮ ಮನಗೂಳಿ (63) ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಬಾಗಲಕೋಟೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ, ರಾಜ್ಯ ಘಟಕದ ಉಪಾಧ್ಯಕ್ಷ, ಮಾಧ್ಯಮ ಅಕಾಡೆಮಿ ಸದಸ್ಯರಾಗಿದ್ದರು. ಮಾಧ್ಯಮ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗೆ ಪಾತ್ರರಾಗಿದ್ದರು.


ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಎಕ್ಸ್‌ಚೇಂಜ್ ಮೇಳ
₹8,000
ಫ್ಲಾಟ್ ಆಫ್ ಆನ್ ಹಳೆಯ ಎಸಿ*
ಬೃಹತ್ ಡಿಸ್ಕೌಂಟ್ಸ್
₹40,000
ವರೆಗೂ ಕಡಿತ, ಹೊಸ ಎಸಿ ಖರೀದಿ ಮೇಲೆ*
ಕೂಲೆಸ್ಟ್ ಸಮ್ಮರ್ ಸೇಲ್
UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ
1 ಇ.ಎಮ್.ಐ ಉಚಿತ
ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ ₹20,000
ಉಚಿತ ಇನ್‌ಸ್ಟಾಲೇಷನ್*
FINANCE POWERED BY Groww
0% EMI
MIN PRODUCT VALUE ₹10,000
MobiKwik 4% ಕ್ಯಾಶ್ ಬ್ಯಾಕ್* on UPI
MINIMUM TRANSACTION ₹500
MAXIMUM CASHBACK UPTO ₹1000
ಕೇವಲ ₹1 ಪಾವತಿಸಿ ಮನೆಗೆ ತೆಗೆದುಕೊಂಡು ಹೋಗಿ*
ಇನ್‌ಸ್ಟಂಟ್ ಅಪ್ರೂವಲ್ UPTO ₹4,00,000*
ಎಲ್ಲಾ LG ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು
BT SPEAKER
INDUCTION COOKER
STEAM IRON
KETTLE
DRY IRON
24 HOURS EXPRESS DELIVERY*
UNBEATABLE OFFERS ON AIR CONDITIONERS
DAIKIN 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹ 9,300
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹48,200
ಎಫೆಕ್ಟಿವ್ ಪ್ರೈಸ್ ₹30,900
ಪ್ರತಿ ದಿನ ಇಎಂಐ ₹86
BLUE STAR 1.5 TON 3 STAR INVERTER
ಗಿರಿಯಾಸ್ ರಿಯಾಯಿತಿ ₹21,200
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 3,000
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹63,500
ಎಫೆಕ್ಟಿವ್ ಪ್ರೈಸ್ ₹31,300
ಪ್ರತಿ ದಿನ ಇಎಂಐ ₹87
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
Godrej 564 ಲೀ ಸೈಡ್ ಬೈ ಸೈಡ್
ಇ.ಎಮ್.ಐ ₹5,474
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
SAMSUNG 653 ಲೀ ಸೈಡ್ ಬೈ ಸೈಡ್ RS76CG8113SLHL
ಇ.ಎಮ್.ಐ ₹4,990
Haier 4 TON TOWER AC
ಗಿರಿಯಾಸ್ ರಿಯಾಯಿತಿ ₹41,170
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹12,000
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹1,90,000
ಎಫೆಕ್ಟಿವ್ ಪ್ರೈಸ್ ₹1,28,830
ಪ್ರತಿ ದಿನ ಇಎಂಐ ₹358
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
Godrej 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹ 9,480
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,000
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹41,900
ಎಫೆಕ್ಟಿವ್ ಪ್ರೈಸ್ ₹23,420
ಪ್ರತಿ ದಿನ ಇಎಂಐ ₹65
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
LG 650 ಲೀ ಸೈಡ್ ಬೈ ಸೈಡ್ GL-B257EPZ3
ಇ.ಎಮ್.ಐ ₹4,999
Electrolux 529 ಲೀ BOTTOM FREEZER
ಇ.ಎಮ್.ಐ ₹6,083
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
Panasonic 280 ಲೀ ಫ್ರಾಸ್ಟ್ ಫ್ರೀ
ಇ.ಎಮ್.ಐ ₹2,724
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
WIDEST RANGE OF AIRCOOLERS & FANS
USHA V-GUARD Crompton KENSTAR Symphony VOLTAS BAJAJ HAVELLS
LG 1.5 TON 3 STAR INVERTER TS-Q18YNXE2
ಗಿರಿಯಾಸ್ ರಿಯಾಯಿತಿ ₹35,080
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹78,990
ಎಫೆಕ್ಟಿವ್ ಪ್ರೈಸ್ ₹34,410
ಪ್ರತಿ ದಿನ ಇಎಂಐ ₹96
LLOYD 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹16,440
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹49,990
ಎಫೆಕ್ಟಿವ್ ಪ್ರೈಸ್ ₹24,050
ಪ್ರತಿ ದಿನ ಇಎಂಐ ₹67
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
iPhone 14/15
₹58,900 ONWARDS
81 ಪ್ರತಿ ದಿನ ಇಎಂಐ
70% OFF ON DAMAGE PROTECTION
SAMSUNG S24/ S24Plus/ S24Ultra
₹70,999 ONWARDS
98 ಪ್ರತಿ ದಿನ ಇಎಂಐ
PAY ₹199 AND GET 1YR COMPLETE DAMAGE PROTECTION + WATCH WORTH ₹17,999
DELL hp Lenovo
SPEC- i5
10TH GEN/8GB/
1TB+ 256 GB SSD/
WIN10
STARTS FROM ₹36,990
ಉಚಿತ: ₹7999 ಮೌಲ್ಯದ ಸ್ಮಾರ್ಟ್ ವಾಚ್
LG ಓಎಲ್‌ಇಡಿ B3 77 4K SMART TV OLED77B3PSA
ಇ.ಎಮ್.ಐ ₹4,999
SAMSUNG 55 ಓಎಲ್‌ಇಡಿ 4K SMART TV 55S90C
ಇ.ಎಮ್.ಐ ₹3,990
SONY 55 4K ULTRA HD SMART ಓಎಲ್‌ಇಡಿ GOOGLE TV XR-55A80L
ಇ.ಎಮ್.ಐ ₹5,500
Panasonic 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹13,450
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 3,000
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹50,900
ಎಫೆಕ್ಟಿವ್ ಪ್ರೈಸ್ ₹26,450
ಪ್ರತಿ ದಿನ ಇಎಂಐ ₹73
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
VOLTAS 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹22,620
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹56,990
ಎಫೆಕ್ಟಿವ್ ಪ್ರೈಸ್ ₹24,820
ಪ್ರತಿ ದಿನ ಇಎಂಐ ₹69
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
BOSCH 8 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,799
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
Prestige
MIXER GRINDER ENDURA 1000W MIXER GRINDER + PRESSURE COOKER:SS POPULAR 3 LTR
OFFER PRICE: ₹8,290
COMBI MRP: ₹13,385
EUREKA FORBES WATER PURIFIERS:AQUAGUARD SUPERIO RO+UV+MTDS+SS
Butterfly PRESSURE COOKER:FRIENDLY COMBO PACK IB (2,3 & 5 LTR)
OFFER PRICE: ₹19,990
COMBI MRP: ₹31,249
LG SAMSUNG SONY Panasonic Haier NVY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 । ಅತ್ತಿಬೆಲೆ 99009 77747 । ಆರ್.ಟಿ.ನಗರ 91080 65665 । ಇಂದಿರಾನಗರ 9035499255 । ಉತ್ತರಹಳ್ಳಿ 90362 89563 । ಎಲೆಕ್ಟ್ರಾನಿಕ್‌ಸಿಟಿ 9591103536 । ಕತ್ರಿಗುಪ್ಪೆ 9035499288 । ಕನಕಪುರ ಮುಖ್ಯ ರಸ್ತೆ 90082 20739 । ಕುಣಿಗಲ್ 90362 89546 । ಕೆಂಗೇರಿ 99009 77712 । ಕೆಆರ್ ಪುರಂ 9019929881 । ಕೋರಮಂಗಲ 90354 11200 । ಕೋಲಾರ 90082 20791 । ಗಾಂಧಿನಗರ 9035499311 । ಗೌರಿಬಿದನೂರು 90354 99244 । ಚನ್ನಪಟ್ಟಣ 9035023186 । ಚಿಂತಾಮಣಿ 90362 89552 । ಚಿಕ್ಕಜಾಲ 95918 32080 । ಚಿಕ್ಕಬಳ್ಳಾಪುರ 9591561669 । ಜಯನಗರ 90354 99077 । ಜಾಲಹಳ್ಳಿ ಕ್ರಾಸ್ 9008220804 । ಜೆ.ಪಿ.ನಗರ 9606922698 । ತಿಪಟೂರು 90362 89548 । ತುಮಕೂರು 90082 18009 । ದೊಡ್ಡಬಳ್ಳಾಪುರ 77602 12888 । ನಾಗರಭಾವಿ 90354 99191 । ನೆಲಮಂಗಲ 9606922798 । ಬನಶಂಕರಿ 9035499199 । ಬನ್ನೇರುಘಟ್ಟ ರೋಡ್ 9035422500 । ಬಸವನಗುಡಿ 90354 99244 । ಬಾಗೇಪಲ್ಲಿ 9036289562 । ಭಾರ್ತಿಯಾ ಮಾಲ್ 70900 00981 । ಮಾದನಾಯಕನಹಳ್ಳಿ 90362 89550 । ಮಂತ್ರಿ ಮಾಲ್ 95919 25353 । ಮತ್ತಿಕೆರೆ 90352 22377 । ಮಲ್ಲೇಶ್ವರಂ 90354 99233 । ಮಾಗಡಿರಸ್ತೆ 90362 89557 । ಮಾರತ್‌ಹಳ್ಳಿ 90354 99011 । ಮಾಲೂರು 9036984484 । ಮೈಸೂರು ರಸ್ತೆ 90354 99188 । ಯಲಹಂಕ 9036001315 । ರಾಜಾಜಿನಗರ 9035499144 । ರಾಮನಗರ 9606922697 । ವಿಜಯನಗರ 96069 22795 । ಶಿರಾ 9035023188 । ಸದಾಶಿವನಗರ 9035499088 । ಸಹಕಾರನಗರ 90199 29882 । ಹಿರಿಯೂರು 9035023185 । ಹೆಚ್‌ಆರ್‌ಬಿಆರ್ ಲೇಔಟ್ 90354 99177 । ಹೆಬ್ಬಗೋಡಿ 90350 50023 । ಹೆಸರಘಟ್ಟ ಮುಖ್ಯ ರಸ್ತೆ 90362 89551 । ಹೊಸಕೋಟೆ 90362 89545 । ಹೊಸೂರು 04344 243633 । ಹೊಸೂರು ರಸ್ತೆ 9035499022
STORE LOCATOR
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.ಹಣಕಾಸು ಯೋಜನೆಗಳು ಫೈನಾನ್ಸ್ ಕಂಪನಿಯ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತವೆ. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ತನಕ ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ತನಕ ರಿಯಾಯಿತಿ. 3 ಇಎಂಐ ಅನ್ನು ಪೂರ್ಣಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಇಎಂಐ 9,12,18,24 ಮತ್ತು ಸ್ಥಿರ ಇಎಂಐ ಯೋಜನೆಗಳ ಆಧಾರದ ಮೇಲೆ ಮೇಲಿನ ಉತ್ಪನ್ನಗಳನ್ನು ನೀಡುತ್ತದೆ. ವಿನಿಮಯ ಕೊಡುಗೆಗಳು ಉತ್ತಮ ಕೆಲಸದ ಸ್ಥಿತಿಯ ಉತ್ಪನ್ನಗಳಲ್ಲಿ ಮತ್ತು ಇಎಂಐ ಬೆಲೆಯ ಮೇಲೆ ಮಾನ್ಯವಾಗಿರುತ್ತವೆ. ವಿನಿಮಯ ಕೊಡುಗೆಗಳು ಉತ್ತಮ ಕೆಲಸದ ಸ್ಥಿತಿಯ ಉತ್ಪನ್ನಗಳಲ್ಲಿ ಮತ್ತು ಎಂ.ಆರ್.ಪಿ ಬೆಲೆಯ ಮೇಲೆ ಮಾನ್ಯವಾಗಿರುತ್ತವೆ. ಹಳೆಯ ಸ್ಪ್ಲಿಟ್ ಎಸಿ ವಿನಿಮಯಕ್ಕಾಗಿ ಫ್ಲಾಟ್ ರೂ.8000 ರಿಯಾಯಿತಿ. ಉಚಿತ ಸ್ಮಾರ್ಟ್‌ವಾಚ್ ಆಫರ್‌ಗಳು ಕೇವಲ ರೂ.20000 ಮತ್ತು ಅದಕ್ಕಿಂತ ಹೆಚ್ಚಿನ ಆಯ್ದ ಮಾಡೆಲ್‌ಗಳು ಮತ್ತು ಬ್ರ್ಯಾಂಡ್‌ಗಳ ಖರೀದಿಗಳಿಗೆ ಮಾತ್ರ ಮಾನ್ಯವಾಗಿರುತ್ತವೆ.
154 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ





ಪ್ರತಿಭಾ

InspireInclusion ಈ ವರ್ಷದ ಮಹಿಳಾ ದಿನದ ಆಶಯವಾಗಿದೆ. ಇದನ್ನು ಬದುಕಿದವರು ತಮ್ಮ ಜೀವನದ ಅಮೃತ ಸಿಂಚನವನ್ನು ಇಲ್ಲಿ ಚರ್ಚಿಸಿದ್ದಾರೆ. ಒಳಗೊಳ್ಳುವಿಕೆಯನ್ನು ಪ್ರೇರೇಪಿಸುವ ಈ ನುಡಿಗಳು ಸಹಚರ್ಯ, ಸಾಂಗತ್ಯದಲ್ಲಿರಬೇಕಾದ ಗುಣಗಳನ್ನೂ ಹೇಳಿದ್ದಾರೆ. ಮಹಿಳಾದಿನ ಸಫಲವಾಗಲು ಪುರುಷರ ಹೆಂಗರುಳೂ ಅಷ್ಟೇ ಮುಖ್ಯ.

ಸಹಚರ್ಯದಿಂದ ಸಂಪ್ರೀತ ಬದುಕು...

ನಿರ್ವಹಣೆ: ಸುಶೀಲಾ ಡೋಣೂರ

ಮಾರ್ಚ್ ಎಂದರೆ ಹೆಣ್ಮಕ್ಕಳ ಮಾಸ.


ಮತ್ತೊಂದು ಮಹಿಳಾ ದಿನಾಚರಣೆ! ಮತ್ತೆಮತ್ತೆ ಅವವೇ ಘೋಷಣೆಗಳು, ನಮ್ಮ ಹಕ್ಕು, ನಮ್ಮ ಸ್ವಾತಂತ್ರ್ಯ, ಸ್ವಾವಲಂಬನೆ... ಅವೇ ಪದಪುಂಜಗಳು... ಅದ್ಧೂರಿ ಕಾರ್ಯಕ್ರಮಗಳು, ಭಾಷಣಗಳು, ಗೌರವ-ಸನ್ಮಾನಗಳು ಕೊಡುಗೆಗಳು... ಇತ್ಯಾದಿ ಇತ್ಯಾದಿ...

ಆದರೆ ಈ ಸಲದ ಥೀಮ್, 'InspireInclusion' ಇದೆಲ್ಲವನ್ನು ಮೀರಿದ ಸಂದೇಶವನ್ನು ಹೊಂದಿದೆ-ಅಂದರೆ ಪ್ರತಿ ಹಂತದಲ್ಲಿ ತಮ್ಮನ್ನು ತಾವು ಒಳ್ಳಗೊಳ್ಳುವುದು ಮತ್ತು ತಮ್ಮವರನ್ನು ಒಡಗೂಡಿಸಿಕೊಳ್ಳುವುದು... ಅವಳ ಬಾಳ ಪಯಣದಲ್ಲಿ, ಸಾಧನೆಯಲ್ಲಿ, ಸವಾಲುಗಳಲ್ಲಿ ಅವನೂ ಒಳಗೊಂಡಾಗ ಮಾತ್ರ ಆ ಬಾಳು ಪರಿಪೂರ್ಣ.

ಹೌದು, ಹೆಣ್ಮಕ್ಕಳ ಬದುಕು ಅರ್ಥಪೂರ್ಣಗೊಳ್ಳಬೇಕಾದರೆ ಮೊದಲು ಅದು ಸಹ್ಯಗೊಳ್ಳಬೇಕು. ಸಹ್ಯಗೊಳ್ಳುವುದು ಎಂದರೆ ಚಂದಗೊಳ್ಳುವುದು ಅಂತಲೇ ಅರ್ಥ. ಅದು ಚಂದಗೊಳ್ಳಬೇಕು ಅಂದರೆ ಅವನೂ ಜೊತೆ ನಿಲ್ಲಬೇಕು, ಒಳಗೊಳ್ಳಬೇಕು. ಇದೇ ಸಂದೇಶವನ್ನು ಈ ಸಲದ ಘೋಷವಾಕ್ಯ ಧ್ವನಿಸುತ್ತದೆ. #InspireInclusion ಅಂದರೆ #ಒಳಗೊಳ್ಳುವಿಕೆಗಾಗಿಪ್ರೇರೇಪಿಸಿ.

ಸಮಾನತೆಗಾಗಿ-ಸಾಧನೆಗಾಗಿ, ಅಸ್ತಿತ್ವಕ್ಕಾಗಿ-ಅಸ್ಮಿತೆಗಾಗಿ, ಪ್ರೀತಿಗಾಗಿ-ಸಾಂಗತ್ಯಕ್ಕಾಗಿ ಅವಳ ಆವೇಗ ಸಹಜ ಮತ್ತು ನಿರಂತರ. ಆದರೆ ಅವಳ ಈ ಎದೆಗುದಿ ತನ್ನದೂ ಎಂದು ಆತ ಗ್ರಹಿಸಿದಾಗ, ಜೊತೆಗೆ ನಿಂತಾಗ, ಕೈಜೋಡಿಸಿದಾಗ ಆ ಕಥೆಯ ಸೊಗಸೇ ಬೇರೆ. ಇದು ಯಾವುದೇ ಒಬ್ಬ ಮಹಿಳೆಯ ಅಥವಾ ಒಂದು ಮಹಿಳಾ ಸಂಘಟನೆಯ, ಒಂದು ಮಹಿಳಾ ಗುಂಪಿನ ಕಥನವಾಗಬಾರದು. ಇಬ್ಬರೂ, ಪ್ರತಿಯೊಬ್ಬರೂ ಅದನ್ನು ತಮ್ಮದೇ ಜಾವಾಬ್ದಾರಿ ಎಂದು ಗ್ರಹಿಸಿದಾಗ ಮಾತ್ರ ಈ ಬದಲಾವಣೆ ಸಾಧ್ಯ.

ಪ್ರತಿಯೊಂದು ಹಂತದಲ್ಲಿ, ಪ್ರತಿ ಹೆಜ್ಜೆಯಲ್ಲಿ, ಪ್ರತಿ ತಿರುವಿನಲ್ಲಿ ಅವಳ ಒಳಗೊಳ್ಳುವಿಕೆ ಮತ್ತು ಅವನ ಸಹಚರ್ಯ ಎರಡೂ ಮೇಳೈಸಬೇಕು.



ಅವಳನ್ನು ಅರ್ಥೈಸಿಕೊಳ್ಳುವ, ಗೌರವಿಸುವ ಮತ್ತು ಪ್ರೇರೇಪಿಸುವ ಅಗತ್ಯವನ್ನು ಅವನೂ ಅರ್ಥಮಾಡಿಕೊಳ್ಳಬೇಕು. ಹೀಗೆ ಬದುಕನ್ನು ಸಂಪ್ರೀತಗೊಳಿಸಿಕೊಳ್ಳುವ ಪ್ರಯತ್ನದಲ್ಲಿ ತಮ್ಮ ಕುಟುಂಬವನ್ನು, ತಮ್ಮ ಸುತ್ತಲಿನ ಜನರನ್ನು, ಪುರುಷ ಸಮಾಜವನ್ನು ಒಳಗೊಳ್ಳುವಂತೆ ಪ್ರೇರೇಪಿಸಿದ ಸಾಧಕಿಯರ ಒಡನುಡಿತಗಳ ಪಿಸುಮಾತುಗಳಿಗೆ ವೇದಿಕೆಯಾಗುವುದು ಈ ಸಂಚಿಕೆಯ ಒಳತುಡಿತ. ಸಮಾಜದ ಮುಖ್ಯವಾನಿಗೆ ಬಂದು ತಲುಪಿದ, ಮುಖ್ಯ ಹುದ್ದೆಗಳನ್ನು ಅಲಂಕರಿಸಿರುವ, ಆಡಳಿತದ ಚುಕ್ಕಾಣಿ ಹಿಡಿದಿರುವ ದಿಟ್ಟ ಮಹಿಳೆಯರ ಕಥನಗಳು, ಸ್ಫೂರ್ತಿದಾಯಕ ನುಡಿಗಳು ಇಲ್ಲಿವೆ

ಗಂಡುಮಕ್ಕಳು ಸಂವೇದನಾಶೀಲರಾಗಬೇಕು

#InspireInclusion ಎನ್ನುವುದು ಮನೆಯಿಂದಲೇ ಆರಂಭವಾಗಬೇಕು. ಇಬ್ಬರೂ ಒಂದು ಎನ್ನುವ ಧೋರಣೆ ಮನೆಯಿಂದಲೇ ಬೆಳೆದುಬರಬೇಕು. ನಮ್ಮ ಮನೆಯಲ್ಲಿ ನಮ್ಮ ತಂದೆ ಇಂತಹ ವೈಚಾರಿಕ ದೃಷ್ಟಿಕೋನವನ್ನು ಹೊಂದಿರುವುದರಿಂದಲೇ ನಾನು ಇಲ್ಲಿಯವರೆಗೂ ಬರಲು ಸಾಧ್ಯವಾಯಿತು.

ಅವನ ಬೆಂಬಲವಿಲ್ಲದೇ ಅವಳ ಸಾಧನೆ ಸಾಧ್ಯವೇ ಇಲ್ಲ ಅಂತಲ್ಲ. ಅವಳ ಕನಸು-ಅವಳ ಮಹಾತ್ವಾಕಾಂಕ್ಷೆ ಅವಳೊಬ್ಬಳದೇ, ಅದರಲ್ಲಿ ತನ್ನದೇನೂ ಪಾತ್ರವಿಲ್ಲ ಎಂದು ಗಂಡು ಪರಿಭಾವಿಸಿದಾಗ ಹೆಣ್ಣುಮಕ್ಕಳ ದಾರಿ ತುಸು ನಿಧಾನಗೊಳ್ಳುತ್ತದೆ, ಶ್ರಮಯೂ ಹೆಚ್ಚು. ಆದರೆ, ಅವಳ ಕನಸು ತನ್ನದೂ ಎಂದು ಆತ ಗ್ರಹಿಸಿದಾಗ ಅವಳ ದಾರಿ ಸುಲಲಿತವಾಗುತ್ತದೆ, ಸುಂದರವೂ ಆಗುತ್ತದೆ. ನಾನು ಸಾರ್ವಜನಿಕ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಬೇಕು ಎಂದು ಕನಸು ಕಂಡಾಗ ನನ್ನ ತಂದೆ ಆ ಕನಸನ್ನು ತಮ್ಮದೆಂದುಕೊಂಡರು ಮತ್ತು ಜೊತೆಗೇ ನಿಂತರು. ಮಗಳು ತಕ್ಕ ಮಟ್ಟಿಗೆ ಓದಿದ್ದಾಳೆ, ಕೈಯಲ್ಲಿ ಕೆಲಸವೂ ಇದೆ, ಆದರೂ ಯಾಕೆ ಇನ್ನೂ ಮದುವೆ ಮಾಡುತ್ತಿಲ್ಲ? ಎನ್ನುವ ನೂರಾರು ಅನುಮಾನಗಳನ್ನು, ಸವಾಲುಗಳನ್ನು, ಪ್ರಶ್ನೆಗಳನ್ನು ನಮ್ಮ ತಂದೆ ಬಹಳ ಗಟ್ಟಿಯಾಗಿ ನಿಂತು ನಿಭಾಯಿಸಿದರು. ಮುಂದೆ ನನ್ನ ಪತಿಯಿಂದಲೂ ಇಂಥದ್ದೇ ಪ್ರೋತ್ಸಾಹ-ಬೆಂಬಲ ದೊರೆಯಿತು. ಹೀಗಾಗಿ, ನಾನು ಧೃತಿಗೆಡುವ, ಅಧೈರ್ಯಗೊಳ್ಳುವ ಸಂದರ್ಭವೇ ಬರಲಿಲ್ಲ. 'ನಾನಿದ್ದೇನೆ ನಿನ್ನ ಜೊತೆ' ಎನ್ನುವ ಅಭಯ ನಮ್ಮವರಿಂದ ದೊರೆತಾಗ ಹೆಣ್ಣುಮಕ್ಕಳ ಆತ್ಮಬಲ ಹೆಚ್ಚುತ್ತದೆ. ಹೊರಗಿನಿಂದ ಎದುರಾಗುವ ಪ್ರತಿರೋಧಗಳನ್ನು ಆಕೆ ಹೆಚ್ಚು ದಿಟ್ಟವಾಗಿ, ಸಮರ್ಥವಾಗಿ ಎದುರುಗೊಳ್ಳಲು ಸಿದ್ಧಳಾಗುತ್ತಾಳೆ.

ಇನ್ನು ಸಮಾಜದ ಮನಸ್ಥಿತಿ, ನಿಲುವು, ವಾತಾವರಣದ ಬಗ್ಗೆ ಹೇಳಬೇಕೆಂದರೆ ಪುರುಷರು ಮನೆಯ ಆಚೆಗೆ ಇನ್ನೂ ಹೆಚ್ಚು ಸಂವೇದನಾಶೀಲರಾಗಿ ವರ್ತಿಸಬೇಕಾದ ಅಗತ್ಯವಿದೆ ಎಂದು ನನಗನಿಸುತ್ತದೆ. ಜೊತೆಯಲ್ಲಿ ದುಡಿಯುವ ಹೆಣ್ಣುಮಕ್ಕಳನ್ನು ತಮ್ಮ ಮನೆಯ ಹೆಣ್ಣುಮಕ್ಕಳೇ ಎಂದು ನೋಡುವ ಪ್ರಜ್ಞೆ ಅವರಲ್ಲಿ ಬೆಳೆಯಬೇಕು. ಆಡಳಿತ ಕ್ಷೇತ್ರದಲ್ಲಿ, ಮುಖ್ಯ ಹುದ್ದೆಯಲ್ಲಿದ್ದರೂ ನಾನು ಅಲ್ಲಲ್ಲಿ, ಆಗಾಗ ಪುರುಷರ ವಿರೋಧ, ಅಹಂಕಾರದ ವರ್ತನೆಗಳನ್ನು ಗಮನಿಸಿದ್ದಿದೆ. ಅಲ್ಲಲ್ಲೇ ಅವುಗಳಿಗೆ ತಕ್ಕ ಪ್ರತ್ಯುತ್ತರಗಳನ್ನೂ ರವಾನಿಸಿದ್ದಿದೆ. ಮಹಿಳೆಯರ ಬದುಕಿನಲ್ಲಿ ಪುರುಷರ ಒಳಗೊಳ್ಳುವಿಕೆ ಪ್ರೀತಿ-ವಿಶ್ವಾಸದಿಂದ ಒಡಮೂಡಬೇಕೇ ಹೊರತು, ಸಂಘರ್ಷದಿಂದ-ಹೋರಾಟದಿಂದ ಸಾಧ್ಯವಿಲ್ಲ.



ಕೆ.ಎಂ. ಜಾನಕಿ
ಬಾಗಲಕೋಟೆ ಜಿಲ್ಲಾಧಿಕಾರಿ

ಪ್ರೇರಣೆಯ ಆಸರೆ ಬೇಕು

#InspireInclusion ನಾವು, ನಮ್ಮ ದೈನಂದಿನ ಬದುಕಿನ ಪ್ರತಿ ಹೆಜ್ಜೆಯಲ್ಲಿಯೂ ಅಳವಡಿಸಿಕೊಳ್ಳಬೇಕಾದ ಸಂದೇಶವಿದು.

ಕಳೆದ ನಾಲ್ಕು ದಶಕಗಳಿಂದ ನಾನು ಉದ್ಯಮಶೀಲ ಮಹಿಳೆಯರೊಂದಿಗೆ ಕೆಲಸ ಮಾಡುತ್ತ, ಒಡನಾಡುತ್ತ ಬಂದಿದ್ದೇನೆ. ನಾನು ಗ್ರಹಿಸಿದಂತೆ, ನಾನು ಕಂಡಂತೆ, ನಾನು ಅನುಭವಿಸಿದಂತೆ ಹೇಳುವುದಾದರೆ ಇಂದಿನ ಮಹಿಳೆಗೆ ಪ್ರೇರಣೆ ಹಾಗೂ ಪ್ರೋತ್ಸಾಹದ ಅಗತ್ಯ ಹೆಚ್ಚಿದೆ. ಅದು ಒಳಗಿನಿಂದಲೂ ಬರಬೇಕು, ಜೊತೆಗಿರುವವರಿಂದಲೂ ಬರಬೇಕು. ಜೊತೆಗಿರುವವರು ಎಂದರೆ ಪತಿ, ತಂದೆ, ಸಹೋದರ, ಮಗ... ಇವರಷ್ಟೇ ಅಂತಲ್ಲ. ಜೊತೆಗೆ ಕೆಲಸ ಮಾಡುವ ಸಹೋದ್ಯೋಗಿಗಳಿಂದಲೂ, ಸ್ನೇಹಿತರಿಂದಲೂ, ಬಂಧುಗಳಿಂದಲೂ ಪ್ರೋತ್ಸಾಹದ ಒಂದು ಚಪ್ಪಾಳೆ, ಬೆನ್ನು ತಟ್ಟುವಿಕೆ ಅವಳ ಜೀವನದಲ್ಲಿ ಬಹಳ ದೊಡ್ಡ ವ್ಯತ್ಯಾಸವನ್ನು ತರಬಲ್ಲದು.



ಉಮಾ ರೆಡ್ಡಿ

80ರ ದಶಕದಲ್ಲಿ ಉದ್ಯಮಶೀಲರಾಗಲು ಮುಂದೆ ಬರುವ ಹೆಣ್ಣುಮಕ್ಕಳಿಗೆ ಇದ್ದ ಸವಾಲುಗಳಿಗೂ, ಇಂದಿನ ಮಹಿಳೆಯ ಮುಂದಿರುವ ಸವಾಲುಗಳಿಗೂ ಸಾಕಷ್ಟು ವ್ಯತ್ಯಾಸವಿದೆ. ಈ ಮಹಿಳೆಗೆ ಮಾಹಿತಿ-ತಂತ್ರಜ್ಞಾನ, ಆರ್ಥಿಕ, ಸಮಾಜಿಕ ಸವಾಲುಗಳಿಗಿಂತ ಸ್ವಪ್ರೇರಣೆ ಹಾಗೂ ತನ್ನವರ ಪ್ರೋತ್ಸಾಹದ ಅಗತ್ಯ ಹೆಚ್ಚಿದೆ.

ಇನ್ನು ಅವಳ ಮುಂದಿನ ಸವಾಲುಗಳ ಬಗ್ಗೆ ಹೇಳುವುದಾದರೆ, ಕಾಲ ಎಷ್ಟೇ ಬದಲಾದರೂ ಮಹಿಳೆ ತನ್ನ ಸಾಮರ್ಥ್ಯವನ್ನು, ತನ್ನ ಪ್ರತಿಭೆಯನ್ನು ತಾನು ನಿರಂತರವಾಗಿ, ಸಾಕ್ಷಿ ಸಮೇತ ಪ್ರಮಾಣೀಕರಿಸಬೇಕಾದ ಪರಿಸ್ಥಿದೆ ಇಂದಿಗೂ ಇದೆ. ಇದು ಬದಲಾಗಬೇಕು. ಅವಳ ಸಾಮರ್ಥ್ಯವನ್ನು-ಪ್ರತಿಭೆಯನ್ನು ನಂಬುವ-ವಿಶ್ವಾಸ ಮಾಡುವ ವಾತಾವರಣ ನಿರ್ಮಾಣವಾಗಬೇಕು. ಇದೇ ಅವರಿಗೆ ನೀಡಬಹುದಾದ ಗೌರವ.

ಮಹಿಳೆಯರ ಸಾಧನೆಯನ್ನು ಗುರುತಿಸುವ, ಪ್ರೇರೇಪಿಸುವ, ಪುಷ್ಟಿ ನೀಡುವ ಕೆಲಸವನ್ನು ಎಫ್‌ಕೆಸಿಸಿಐ ನಿರಂತರವಾಗಿ ಮಾಡುತ್ತ ಬಂದಿದೆ. ಪ್ರತಿಯೊಂದು ಸಂಘ-ಸಂಸ್ಥೆಗಳು, ಸರ್ಕಾರಗಳು ತಮ್ಮ ತಮ್ಮ ನಿಟ್ಟಿನಲ್ಲಿ ಮಹಿಳೆಯರ ಪ್ರಯತ್ನ ಹಾಗೂ ಶ್ರಮವನ್ನು ಗುರುತಿಸುವ, ಪ್ರೋತ್ಸಾಹಿಸುವ, ಅಭಿನಂದಿಸುವ ಹಾಗೂ ಗೌರವಿಸುವ ಮಹತ್ವವನ್ನು ಅರಿಯುವುದೇ ನಿಜವಾದ ಮಹಿಳಾದಿನ.

ಉಮಾ ರೆಡ್ಡಿ
ಉಪಾಧ್ಯಕ್ಷೆ, ಎಫ್‌ಕೆಸಿಸಿಐ

ಅವನೂ ಜೊತೆಗಿದ್ದಾಗಲೇ ಪರಿಪೂರ್ಣ

#InspireInclusion ಎಂದರೆ ಅವನು ಜೊತೆಗಿರುವುದರ ಮಹತ್ವವನ್ನು ಸಾರುವ ಸಂದೇಶ ಎಂದೇ ವ್ಯಾಖ್ಯಾನಿಸಲು ಬಯಸುತ್ತೇನೆ.

ನಾವು ಏನೇ ಮಾತಾಡಿದರೂ, ಎಷ್ಟೇ ಸ್ವತಂತ್ರವಾಗಿದ್ದರೂ ಅವನೂ ಜೊತೆಗಿದ್ದಾಗಲೇ ಬದುಕು ಪರಿಪೂರ್ಣ. ಒಂದು ಕಚೇರಿಯೇ ಆಗಿರಬಹುದು ಅಥವಾ ಕುಟುಂಬ... ಇಬ್ಬರೂ ಜೊತೆಯಾಗಿ-ಒಂದುಗೂಡಿ ಹೆಜ್ಜೆ ಹಾಕಿದರೆ ಮಾತ್ರ ಆ ದಾರಿ ಸುಗಮ, ಸುಲಲಿತ. ನಾವು ಒಬ್ಬರೇ ನಡೆದರೆ ಹೆಚ್ಚು ದೂರ ನಡೆಯಲಾಗದು; ಜೊತೆಗೂಡಿ ನಡೆದರೆ ಎಷ್ಟು ದೂರ ಬೇಕಾದರೂ ಕ್ರಮಿಸಬಹುದು ಹಾಗೂ ಆ ನಡಿಗೆ ಅಷ್ಟೇ ಚೇತೋಹಾರಿಯೂ ಆಗಿರುತ್ತದೆ.

ನಾನಿರೋದು ಗ್ಲಾಮರ್ ಕ್ಷೇತ್ರವಾಗಿರುವುದರಿಂದ ಹೆಣ್ಣು ಮಕ್ಕಳಿಗಾಗಿ, ಹೆಣ್ಮಕ್ಕಳ ಜೊತೆಗೇ ನನ್ನ ಕೆಲಸ. ಆ ಪ್ರತಿಯೊಬ್ಬರಿಗೂ ಅವರ ಸಂಗಾತಿ ಹಾಗೂ ಕುಟುಂಬದ ನೆರವು ಬೇಕೇ ಆಗುತ್ತದೆ.

ಅನೇಕ ಕಡೆ ಇದು ಸಿಗುವುದು ದುರ್ಬಲ. ಅಂಥವರಿಗೆ ಆತ್ಮಬಲ-ಧೈರ್ಯ-ಮಾರ್ಗದರ್ಶನ ನೀಡಿ ಅವರ ಕುಟುಂಬವೂ-ಸಂಗಾತಿಯೂ ಒಳಗೊಳ್ಳುವಂತೆ ಪ್ರೇರೇಪಿಸಲು ಪ್ರಯತ್ನ ಮಾಡುತ್ತಲೇ ಇರುತ್ತೇನೆ.

ಕುಟುಂಬದ ನೆರವಿಲ್ಲದೇ ಬರುವವರನ್ನು ಕೂರಿಸಿ ಬುದ್ಧಿ ಹೇಳಿ, ಅವರ ಮನವೊಲಿಸಿ, ಅವರ ಪ್ರೀತಿ-ವಿಶ್ವಾಸ ಗಳಿಸಿ, ಅನಂತರ ಬನ್ನಿ ಎಂದು ಹೇಳುತ್ತೇನೆ. ಯಾಕೆಂದರೆ ಮನೆಯವರ ವಿರೋಧದ ನಡುವೆ ಬರುವ ಅನೇಕರು ಅರ್ಧದಾರಿಯಲ್ಲೇ ಮರಳಿ ಹೋಗಿದ್ದನ್ನೇ ನಾನು ಹೆಚ್ಚು ಕಂಡಿದ್ದು.

ಮಹಿಳೆಯರ ಬದುಕಿನಲ್ಲಿ ಪುರುಷರ ಉಪಸ್ಥಿತಿ ಎಂತಹ ಬದಲಾವಣೆ ತರಬಲ್ಲದು, ಜೊತೆಗೆ ಅವನಿದ್ದಾನೆ ಎನ್ನುವ ಧೈರ್ಯ ಅವಳಲ್ಲಿ ಎಂತಹ ಆತ್ಮವಿಶ್ವಾಸ ತುಂಬಬಹುದು ಎನ್ನುವುದನ್ನು ಕಂಡಿದ್ದೇನೆ. ಈ ಕ್ಷೇತ್ರದಲ್ಲಿರುವ ಹೆಣ್ಣು ಮಕ್ಕಳ ಬೆನ್ನ ಹಿಂದೆ ಒಂದು ಶಕ್ತಿಯಾಗಿ, ಸ್ಫೂರ್ತಿಯಾಗಿ ನಿಲ್ಲುವ ಪುರುಷರನ್ನು ಅಭಿನಂದಿಸಲು, ಗೌರವಿಸಲು 'Best Husband' ಟೈಟಲ್ ನೀಡುತ್ತ ಬಂದಿದ್ದೇನೆ. ಅವಳ ಸಾಧನೆಯಲ್ಲಿ ಅವಳ ಪರಿಶ್ರಮ-ಪ್ರತಿಭೆ ಎಷ್ಟು ಮುಖ್ಯವೊ, ನಿನ್ನ ಬೆಂಬಲವೂ ಅಷ್ಟೇ ಮುಖ್ಯ ಎನ್ನುವುದನ್ನು ತಿಳಿಸುವುದು ಇದರ ಉದ್ದೇಶ.

ಅಡೆತಡೆಗಳು ಸವಾಲುಗಳು ಹೆಣ್ಣುಮಕ್ಕಳಿಗೆ ಮನೆಯಿಂದಲೇ ಆರಂಭವಾಗುವುದು. ಅದರಲ್ಲೂ ನಮ್ಮದು ಗ್ಲಾಮರ್ ಕ್ಷೇತ್ರವಾಗಿರುವುದರಿಂದ ಇಲ್ಲಿ ಮಹಿಳೆ ಕಾಲಿಡುವುದೇ ಒಂದು ಸವಾಲು. ಮನೆಯವರಿಂದ, ಬಂಧುಗಳಿಂದ, ಸಮಾಜದಿಂದ ಹಲವಾರು ಪ್ರಶ್ನೆಗಳು, ನಿಬಂಧನೆಗಳು, ಶರತ್ತುಗಳು, ಅನುಮಾನಗಳು, ಅಪನಂಬಿಕೆಗಳು ಎದುರಾಗುತ್ತವೆ. ಆದರೆ ನಿಜವಾದ ಪ್ರತಿಭೆ ಹಾಗೂ ಮನೋಬಲ ಇದ್ದಲ್ಲಿ ಇದ್ಯಾವುದು ಅಡ್ಡಿಯಾಗಲಾರದು. 'ನಿನ್ನಿಂದ ಏನೂ ಆಗುವುದಿಲ್ಲ' ಎನ್ನುವವರು ನೂರು ಜನ ಇರಲಿ, ಒಂದಿಬ್ಬರಾದರೂ, 'ನೀನು ಏನಾದರೂ ಮಾಡಬಲ್ಲೆ' ಎನ್ನುವವರು ಬೆನ್ನ ಹಿಂದೆ ಇದ್ದರೆ ಸಾಕು. ನಾವು ನಮ್ಮ ಗಮ್ಯವನ್ನು ತಲುಪಬಹುದು.

ಪ್ರತಿಭಾ ಸಂಶಿಮಠ
ಮಿಸೆಸ್ ಇಂಡಿಯಾ ಕರ್ನಾಟಕ ಸ್ಪರ್ಧೆಯ ಆಯೋಜಕಿ



ಸ್ಪಂದನ

ಡಾ. ವೀಣಾ ಎಸ್. ಭಟ್

ವಿಪರೀತ ವಾಂತಿ, ಸುಸ್ತಿಗೆ ಪರಿಹಾರವೇನು?

ನನಗೆ 29 ವರ್ಷಗಳು. ಮದುವೆಯಾಗಿ 10 ತಿಂಗಳು. ಮೊದಲ ಬಾರಿಗೆ ಗರ್ಭನಿಂತು ಎರಡು ತಿಂಗಳಾಗಿದೆ. ಮಾತ್ರೆ ತೆಗೆದುಕೊಂಡರೂ ಒಂದು ಬಾರಿ ಅಡ್ಮಿಟ್ ಆದರೂ ವಾಂತಿ ಹಾಗೂ ವಿಪರೀತ ಸುಸ್ತಾಗುವುದು ಕಡಿಮೆಯಾಗಿಲ್ಲ. ನನಗೆ ಈ ಗರ್ಭವೇ ಬೇಡವೆನಿಸಿದೆ.

ಸರಳ, ಚೆನ್ನರಾಯಪಟ್ಟಣ.

ಉತ್ತರ: ಗರ್ಭಧರಿಸಿದ ಮುಕ್ಕಾಲುಪಾಲು ಮಹಿಳೆಯರಲ್ಲಿ ಗರ್ಭಧಾರಣೆಯ ಆರಂಭದಲ್ಲಿ ವಾಕರಿಕೆ, ಪದೇಪದೇ ವಾಂತಿಯಾಗುವುದು, ಹೊಟ್ಟೆತೊಳೆಸುವಿಕೆ, ನಿತ್ರಾಣ, ಸುಸ್ತು, ತಲೆಸುತ್ತಿದ ಅನುಭವ, ವಾಂತಿಯೊಂದಿಗೆ ರಕ್ತ ಬರುವುದು ಕೂಡ ಆಗಬಹುದು. ಬೆಳಗಿನ ಸಮಯದಲ್ಲಿಯೇ ಈ ರೀತಿಯ ತೊಂದರೆ ಹೆಚ್ಚಾಗುವುದರಿಂದ ಇದನ್ನ ಮಾರ್ನಿಂಗ್ ಸಿಕ್‌ನೆಸ್ (ಬೆಳಗಿನ ಸಂಕಟ) ಅಂತಲೂ ಕರೆಯುತ್ತಾರೆ.

ಗರ್ಭಧರಿಸಿ ನಾಲ್ಕರಿಂದ ಆರುವಾರದೊಳಗೆ ಆರಂಭವಾಗಿ 12 ರಿಂದ 14 ವಾರದೊಳಗೆ ಈ ರೀತಿಯ ಸಮಸ್ಯೆ ಮುಂದುವರಿದು ನಂತರ ಹೆಚ್ಚಿನವರಲ್ಲಿ ಸರಿ ಹೋಗುತ್ತದೆ. ಕೆಲವರಲ್ಲಿ ಇಡೀ ಗರ್ಭಧಾರಣೆಯಲ್ಲೂ ವಾಂತಿ ಮುಂದುವರಿಯಬಹುದು. ತೀವ್ರತರವಾದ ವಾಂತಿ ಆಗಿ ನಿರ್ಜಲೀಕರಣ ಉಂಟಾದರೆ ವೈದ್ಯಕೀಯ ಪರಿಭಾಷೆಯಲ್ಲಿ ಇದನ್ನು ಹೈಪರ್ ಎಮಿಸಿಸ್ ಗ್ರಾವಿಡೇರಂ ಎನ್ನುತ್ತಾರೆ.

ಈ ಪರಿಸ್ಥಿತಿಗೆ ನಿರ್ದಿಷ್ಟ ಕಾರಣ ತಿಳಿದಿಲ್ಲವಾದರೂ ಗರ್ಭಧಾರಣೆಯಲ್ಲಿ ಹೆಚ್ಚಾಗುವ ಎಚ್.ಸಿ.ಜಿ ಹಾರ್ಮೋನು ಮತ್ತು ಕೆಲವೊಮ್ಮೆ ಎಚ್. ಪೈಲೋರಿ ಎಂಬ ಸೂಕ್ಷ್ಮಾಣು ಜೀವಿಯ ಸೋಂಕು ಜಠರದಲ್ಲಿದ್ದಾಗ, ಥೈರಾಯಿಡ್ ಹಾರ್ಮೋನಿನ ಕಾರಣ ಇತ್ಯಾದಿಗಳನ್ನು ಸಂಭವನೀಯ ಕಾರಣಗಳೆಂದು ತಿಳಿಯಲಾಗಿದೆ. ವಾಂತಿಯಾಗುವುದು ಕೆಲವು ಆಹಾರ ತ್ಯಜಿಸಲು ಆ ಮೂಲಕ ವಿಷಕಾರಿ ವಸ್ತುಗಳ ವಿರುದ್ಧ ಭ್ರೂಣವನ್ನು ರಕ್ಷಿಸುವ ವಿಶೇಷಲಕ್ಷಣ ಎನ್ನುವ ವಾದವು ಇದೆ. ಗರ್ಭಪಾತ ಮಾಡಿಸಬೇಕೆಂಬ ಯೋಚನೆಯನ್ನು ತಲೆಯಿಂದ ತೆಗೆದುಹಾಕಿ. ಇವೆಲ್ಲ ಸಮಸ್ಯೆಗಳು ಇನ್ನು ಕೆಲವೇ ದಿನದಲ್ಲಿ ಸಂಪೂರ್ಣ ಕಡಿಮೆಯಾಗುತ್ತದೆ.

ವೈದ್ಯರ ಸಲಹೆಯ ಮೇರೆಗೆ ಔಷಧ ಸೇವಿಸುವುದು ಜತೆಗೆ ಹೀಗೆ ಮಾಡಿ.

- ರಾತ್ರಿಯೇ ಹಲ್ಲುಜ್ಜಿ ಮಲಗಿಬಿಡಿ. ಬೆಳಿಗ್ಗೆ ಹಾಸಿಗೆಯಿಂದ ಬೇಗನೆ ಎದ್ದು ಹೊರಹೋಗದೆ, ಉಗುರು ಬೆಚ್ಚಗಿನ ನೀರಲ್ಲಿ ಬಾಯಿ ಮುಕ್ಕಳಿಸಿ ವೈದ್ಯರು ಕೊಟ್ಟಿರುವ ಮಾತ್ರೆಯನ್ನ ಖಾಲಿ ಹೊಟ್ಟೆಯಲ್ಲಿ ಸೇವಿಸಿ (ಸ್ವಲ್ಪವೇ ನೀರನ್ನು ಬಳಸಿ) ಒಂದು ಗಂಟೆಯ ಬಳಿಕ ಏಳಿ.
- ಒಮ್ಮೆಲೇ ಅತಿ ಹೆಚ್ಚು ಆಹಾರವನ್ನು ಸೇವಿಸದೆ ಆಗಾಗ ಸ್ವಲ್ಪ ಸ್ವಲ್ಪ ಆಹಾರವನ್ನು ಸೇವಿಸುವುದು ಒಳ್ಳೆಯದು.
- ಅತಿಯಾದ ಖಾರ ಮಸಾಲೆಯುಕ್ತ, ಜಿಡ್ಡಿನ ಅಂಶವುಳ್ಳ ಪದಾರ್ಥಗಳನ್ನು ಕಡಿಮೆ ಸೇವಿಸಬೇಕು ಆಹಾರದಲ್ಲಿ ಹೆಚ್ಚು ಹಣ್ಣು ತರಕಾರಿಗಳಿರಲಿ.
- ಕೆಲವರಿಗೆ ಅಡುಗೆ ಮನೆಯ ಅನ್ನ ಬೇಳೆ ಬೆಂದ ವಾಸನೆಯಿಂದ ವಾಂತಿ ಹೆಚ್ಚಾಗಬಹುದು. ಅಡುಗೆ ಮನೆಗೆ ಹೋಗದೇ ಬೇರೆಯವರ ಸಹಾಯ ಪಡೆಯಿರಿ.
- ಶುಂಠಿಯ ಸೇವನೆ ಗರ್ಭಿಣಿಯರ ಬೆಳಗಿನ ಸಂಕಟಕ್ಕೆ ತುಂಬಾ ಒಳ್ಳೆಯದು. ಶುಂಠಿಯ ಸಣ್ಣಸಣ್ಣ ತುಂಡುಗಳನ್ನು ಬಾಯಲ್ಲಿಟ್ಟು ಅಗಿಯಬಹುದು ಅಥವಾ ಶುಂಠಿ ರಸ, ನಿಂಬೆರಸದೊಂದಿಗೆ ಉಗುರು ಬೆಚ್ಚಗಿನ ನೀರಲ್ಲಿ ಸ್ವಲ್ಪ ಉಪ್ಪು , ಸ್ವಲ್ಪ ಸಕ್ಕರೆ ಹಾಕಿ ಸೇವಿಸುವುದು ಉತ್ತಮ. ಶುಂಠಿಯಲ್ಲಿರುವ ಜಿಂಜೆರಾಲ್ ಎಂಬ ಅಂಶ ಮಿದುಳಿನ ಮಟ್ಟದಲ್ಲಿ ಡೋಪಮಿನ್ ಮತ್ತು ಸೆರಟೋನಿನ್ ಬಿಡುಗಡೆ ಮಾಡಿ ಸಕಾರಾತ್ಮಕ ಸಂದೇಶ ರವಾನಿಸಲು ಸಹಾಯವಾಗುತ್ತದೆ. ಜಠರಾಮ್ಲ ಹೆಚ್ಚಾಗುವುದನ್ನು ತಡೆಯುತ್ತದೆ.
- ಕೃತಕ ಪೇಯಗಳನ್ನು, ಅತಿಯಾಗಿ ಸಕ್ಕರೆ ಹಾಕಿದ ಹಣ್ಣಿನ ಜ್ಯೂಸುಗಳನ್ನು ಕುಡಿಯಲೇಬೇಡಿ. ಆಗಾಗ್ಗೆ ದ್ರವಾಹಾರ ಸೇವಿಸಿ, ನೀರು, ನಿಂಬೆ ಮತ್ತು ಶುಂಠಿ ಜ್ಯೂಸು, ಜೀರಾಗೋಲಿ, ಒಣದ್ರಾಕ್ಷಿ ಸೇವನೆ ಐಸ್‌ಕ್ಯೂಬ್ ಬಾಯಲ್ಲಿಟ್ಟು ಚೀಪೋದು, ಬ್ಲಾಕ್ ಟೀ ಸೇವನೆ ಇತ್ಯಾದಿ ಮಾಡಬಹುದು. ಪಿರಿಡಾಕ್ಸಿನ್ ಹೆಚ್ಚಿರುವ ಅಕ್ಕಿ, ಬೀನ್ಸ್, ಬಟಾಣಿ ಇತ್ಯಾದಿಗಳನ್ನ ಸೇವಿಸಬಹುದು.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಸೋಲಿಸದಿರು ಗೆಲಿಸಯ್ಯ

ಪೂರ್ಣಿಮಾ ಗೊಂದೆನಾಯ್ಕರ

ಸಾಧಕಿ

ಬಡತನವಿರಲಿ, ಸವಾಲುಗಳು ಎದುರಾಗಲಿ, ಸಾಧಿಸುವ ಛಲ, ಪಾಲಕರ ಪ್ರೋತ್ಸಾಹ, ಗುರುವಿನ ಮಾರ್ಗದರ್ಶನ ಇದ್ದರೆ ಎಂಥಹ ಸಾಧನೆಯ ಶಿಖರವನ್ನು ಹತ್ತಿ ನಿಲ್ಲಬಹುದು ಎನ್ನುವುದಕ್ಕೆ ಹುಬ್ಬಳ್ಳಿಯ ನೈರುತ್ಯ ರೈಲ್ವೆಯಲ್ಲಿ ಎಲೆಕ್ಟ್ರಿಷಿಯನ್ ವಿಭಾಗದ ಮುಖ್ಯ ಕಚೇರಿ ವ್ಯವಸ್ಥಾಪಕಿಯಾಗಿರುವ ಕ್ರೀಡಾಪಟು ಕಮಲಾ ಸಿದ್ದಿ ಕ್ರೀಡಾಪಟುಗಳಿಗೆ ಮಾದರಿಯಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನ ಮಂಚಿಕೇರಿ ಮತ್ತು ಚಿಕ್ಕೋಟ್ಟಿ ಗ್ರಾಮದ ಕಮಲಾ, ಸರ್ಕಾರಿ ಶಾಲೆಯಲ್ಲಿ 1ರಿಂದ 4ರ ವರೆಗೆ ವಿದ್ಯಾಭ್ಯಾಸ ಆರಂಭಿಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮಂಚಿಕೇರಿಯ ಹಾಸ್ಟೆಲ್ ಸೇರಿಕೊಂಡರು. ಅಲ್ಲಿಂದ ಚಿಗುರೊಡೆದ ಕ್ರೀಡಾಸಕ್ತಿಗೆ ನೀರು ಎರೆದು ಪೋಷಿಸಿದವರು ಪಾಲಕರು ಮತ್ತು ಶಿಕ್ಷಕ ಜಯಪ್ಪ.

ರಾಜ್ಯ, ದೇಶ, ಅಂತಾರಾಷ್ಟ್ರೀಯ ಮಟ್ಟ ಅಷ್ಟೇ ಅಲ್ಲದೆ ಎಂಟು ವಿಶೇಷ ಒಲಂಪಿಕ್ (ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿದ)ನಲ್ಲಿ ಭಾಗವಹಿಸಿದ ಹಿರಿಮೆ ಕಮಲಾ ಅವರದ್ದು. ದೇಶ, ವಿದೇಶಗಳಲ್ಲಿ ಉತ್ತಮ ಸಾಧನೆ ಪ್ರದರ್ಶಿಸಿ, ಶ್ರೇಷ್ಠ ಹಡಲ್ಸ್ ಕ್ರೀಡಾಪಟುವಾಗಿ 1999ರಿಂದ 2000ರ ವರೆಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ ಒಟ್ಟು 22 ಬಂಗಾರ, 10 ಬೆಳ್ಳಿ ಮತ್ತು 3 ಕಂಚಿನ ಪದಕ ಪಡೆದುಕೊಂಡಿದ್ದಾರೆ. ಹೈ ಜಂಪ್, ಲಾಂಗ್ ಜಂಪ್, ಶಾಟ್ ಪುಟ್, ರನ್ನಿಂಗ್, ಜಾವಲಿನ್, ಹರ್ಡಲ್ಸ್ , ಕೊಕ್ಕೊ ಆಟಗಳಲ್ಲಿ ಸೈ ಎನಿಸಿಕೊಂಡು ಪದಕ ಬಾಚಿಕೊಂಡಿದ್ದಾರೆ.

ಕೇರಳ, ದೆಹಲಿ, ನಿಜಾಮಾಬಾದ್, ಓಡಿಸ್ಸಾ, ಚಂಡಿಗಡ್, ತಂಜಾವೂರ್, ಯುಎಸ್ ಕ್ಯಾಲಿಫೋರ್ನಿಯಾ ಸೇರಿದಂತೆ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲೂ ನಡೆಯುವ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ಗೆದ್ದಿದ್ದಾರೆ.

ಕ್ರೀಡಾ ಕೋಟಾದಲ್ಲಿಯೇ ಪೊಲೀಸ್ ಇಲಾಖೆ, ರೈಲ್ವೆ ಇಲಾಖೆಯಲ್ಲಿ ನೌಕರಿ ಹುಡುಕಿಕೊಂಡು ಬಂದವು. ಪತಿ, ಮಕ್ಕಳು ಕೂಡ ಕ್ರೀಡಾಪಟುಗಳಾಗಿದ್ದಾರೆ. ಕಮಲಾ ಸಿದ್ಧಿ ಈಗ ಹಲವಾರು ಕ್ರೀಡಾಪಟುಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.



ಬೇಸಿಗೆ ಭೋಜನೆ ತಂಬುಳೀಂ ಚೈವ...

ಬೇಸಿಗೆಯಲ್ಲಿ ತಂಬುಳಿ ಇಲ್ಲದೆ ಊಟ ಪೂರ್ಣವಲ್ಲ. ಅದಕ್ಕೆ, 'ಭೋಜನೆ ತಂಬುಳೀಂ ಚೈವ, ಶಯನೆ ಕಂಬಳಿ ಪ್ರಿಯಂ' ಎಂಬ ಮಾತಿದೆ. ಊಟಕ್ಕೆ ತಂಬುಳಿ, ನಿದ್ದೆಗೆ ಕಂಬಳಿ ಎರಡೂ ಇರಲೇಬೇಕು ಎನ್ನುವುದು ಇದರರ್ಥ. ಬಿರು ಬೇಸಿಗೆಯಲ್ಲಿ ತಂಪಾಗಿರಲು ಯಾವೆಲ್ಲಾ ತಂಬುಳಿಗಳನ್ನು ಮಾಡಬಹುದು ಎನ್ನುವ ಮಾಹಿತಿ ನೀಡಿದ್ದಾರೆ ಪವಿತ್ರಾ ಭಟ್

ಬಸಳೆ ಸೊಪ್ಪಿನ ತಂಬುಳಿ



ಬೇಕಾಗುವ ಸಾಮಗ್ರಿ: ಬಸಳೆ ಸೊಪ್ಪು- 7,8 ಎಲೆಗಳು, ಜೀರಿಗೆ-1/2 ಚಮಚ, ಶುಂಠಿ-ಸಣ್ಣ ಚೂರು, ಮೊಸರು ಅಥವಾ ಮಜ್ಜಿಗೆ-1\2 ಕಪ್,ತೆಂಗಿನ ತುರಿ- 1\2 ಕಪ್, ಹಸಿ ಮೆಣಸಿನಕಾಯಿ- 1-2, ಉಪ್ಪು- ರುಚಿಗೆ ತಕ್ಕಷ್ಟು ಒಗ್ಗರಣೆಗೆ- ಎಣ್ಣೆ, ಸಾಸಿವೆ, ಕರಿಬೇವು

ಮಾಡುವ ವಿಧಾನ: ಮೊದಲಿಗೆ ಬಸಳೆ ಸೊಪ್ಪನ್ನು ತೊಳೆದು ಕತ್ತರಿಸಿಕೊಳ್ಳಿ. ಬಾಣಲೆಗೆ 1 ಚಮಚ ಎಣ್ಣೆ ಹಾಕಿ ಬಸಳೆ ಸೊಪ್ಪನ್ನು ಬಾಡಿಸಿಕೊಳ್ಳಿ. ನಂತರ ಬಸಳೆ ಸೊಪ್ಪು, ಜೀರಿಗೆ, ಶುಂಠಿ, ತೆಂಗಿನ ತುರಿ, ಹಸಿ ಮೆಣಸಿನ ಕಾಯಿ ಸೇರಿಸಿ ರುಬ್ಬಿಕೊಳ್ಳಿ. ಬಾಣಲೆಗೆ 2 ಚಮಚ ಎಣ್ಣೆ ಹಾಕಿ. ಸಾಸಿವೆ ಕರಿಬೇವು ಹಾಗೂ ರುಬ್ಬಿದ ಮಿಶ್ರಣವನ್ನು ಹಾಕಿ ಮಿಕ್ಸ್ ಮಾಡಿ. ಕೊನೆಯಲ್ಲಿ ಇದಕ್ಕೆ ಅರ್ಧ ಕಪ್ ಮಜ್ಜಿಗೆ ಅಥವಾ ಮೊಸರು ಸೇರಿಸಿದರೆ ಬಸಳೆ ಸೊಪ್ಪಿನ ತಂಬುಳಿ ಸವಿಯಲು ಸಿದ್ಧ

ಮಾವಿನ ಹೂವಿನ ತಂಬುಳಿ

ರಸಸ್ವಾದ



ಬೇಕಾಗುವ ಸಾಮಗ್ರಿ: ಮಾವಿನ ಹೂವು -5\6, ಜೀರಿಗೆ- 1 ಚಮಚ, ಎಳ್ಳು-1 ಚಮಚ, ಮೊಸರು\ ಮಜ್ಜಿಗೆ- 1/2 ಕಪ್, ತೆಂಗಿನ ತುರಿ – 1/2 ಕಪ್, ಹಸಿ ಮೆಣಸಿನಕಾಯಿ-1, ರುಚಿಗೆ ತಕ್ಕಷ್ಟು ಉಪ್ಪು ಒಗ್ಗರಣೆಗೆ– ಎಣ್ಣೆ, ಸಾಸಿವೆ, ಇಂಗು, ಎಳ್ಳು

ಮಾಡುವ ವಿಧಾನ: ಮಾವಿನ ಹೂವನ್ನು ಚೆನ್ನಾಗಿ ತೊಳೆದು ಬೇರ್ಪಡಿಸಿಕೊಳ್ಳಿ. ನಂತರ ಬಾಣಲೆಗೆ ಎಣ್ಣೆ ಹಾಕಿ ಮಾವಿನ ಹೂವು, ಅರ್ಧ ಚಮಚ ಎಳ್ಳು, ಜೀರಿಗೆ ಹಾಕಿ 1 ನಿಮಿಷ ಹುರಿದುಕೊಳ್ಳಿ. ಬಳಿಕ ಹುರಿದಿಟ್ಟ ಮಾವಿನ ಹೂವಿನ ಮಿಶ್ರಣ, ತೆಂಗಿನ ತುರಿ, ಹಸಿಮೆಣಸು, ಉಪ್ಪು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿಕೊಂಡ ಮಿಶ್ರಣಕ್ಕೆ ಮೊಸರು ಸೇರಿಸಿ. ಒಗ್ಗರಣೆಗೆ ಎಣ್ಣೆ, ಸಾಸಿವೆ, ಚಿಟಿಕೆ ಇಂಗು, ಎಳ್ಳು ಸೇರಿಸಿ ಮಿಶ್ರಣಕ್ಕೆ ಹಾಕಿದರೆ ರುಚಿಯಾದ ಮಾವಿನ ಹೂವಿನ ತಂಬುಳಿ ಸಿದ್ಧ

‘ಕೇಂದ್ರಕ್ಕೆ ರೈತರ ಬದಲು ಚುನಾವಣೆಯದ್ದೇ ಚಿಂತೆ’

ರೈತ ಮುಖಂಡ ಸರವಣ ಸಿಂಗ್ ಟೀಕೆ

ಚಂಡೀಗಢ (ಪಿಟಿಐ): ಮುಂಬರುವ ಲೋಕಸಭೆ ಚುನಾವಣೆಯನ್ನು ಗೆಲ್ಲುವುದರತ್ತ ಚಿತ್ತ ಹರಿಸಿರುವ ಕೇಂದ್ರ ಸರ್ಕಾರ, ರೈತರ ಬೇಡಿಕೆಗಳನ್ನು ಈಡೇರಿಸಲು ಗಮನ ಹರಿಸುತ್ತಿಲ್ಲ ಎಂದು ರೈತ ಮುಖಂಡ ಸರವಣ ಸಿಂಗ್ ಪಂಧೇರ್ ಟೀಕಿಸಿದ್ದಾರೆ.

ಎಲ್ಲ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಖಾತರಿಗೆ ಕಾಯ್ದೆ ರೂಪಿಸುವುದೂ ಸೇರಿದಂತೆ, ರೈತರು ಮುಂದಿಟ್ಟಿರುವ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು ಎಂದು ಶುಕ್ರವಾರ ಆಗ್ರಹಿಸಿದರು.

ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ಮುಂದುವರಿಯಲಿದೆ ಎಂಬುದನ್ನು ಅವರು ಪುನರುಚ್ಚರಿಸಿದರು.

ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ‘ದೆಹಲಿ ಚಲೋ’ ಪ್ರತಿಭಟನೆ ನಡೆಸುತ್ತಿದೆ. ರೈತ ಮುಖಂಡರು ಮಾತುಕತೆ ನಡೆಸಿ ಮುಂದಿನ ನಡೆ ಕುರಿತು ತೀರ್ಮಾನಿಸಲಿದ್ದಾರೆ ಎಂದು ಅವರು ಹೇಳಿದರು.

ಫೆಬ್ರುವರಿ 21ರಂದು ಪಂಜಾಬ್–ಹರಿಯಾಣದ ಖನೌರಿ ಗಡಿಯಲ್ಲಿ ರೈತರು ಮತ್ತು ಪೊಲೀಸರ ನಡುವಣ ಘರ್ಷಣೆಯಲ್ಲಿ ಯುವ ರೈತ ಶುಭಕರಣ್ ಸಿಂಗ್ ಮೃತಪಟ್ಟಿದ್ದರು. ಇದರಿಂದ ರೈತ ಮುಖಂಡರು ‘ದೆಹಲಿ ಚಲೋ’ಗೆ ವಿರಾಮ ಘೋಷಿಸಿದ್ದರು. ಮುಂದಿನ ತೀರ್ಮಾನವನ್ನು ಫೆ.29 ರಂದು ಪ್ರಕಟಿಸುವುದಾಗಿ ಹೇಳಿದ್ದರೂ, ಇದುವರೆಗೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.

‘ದೆಹಲಿ ಚಲೋ’ ಪ್ರತಿಭಟನೆಯ ಭಾಗವಾಗಿ ಸಾವಿರಾರು ರೈತರು ಪಂಜಾಬ್ ಮತ್ತು ಹರಿಯಾಣ ನಡುವಿನ ಖನೌರಿ ಮತ್ತು ಶಂಭು ಗಡಿ ಭಾಗದಲ್ಲಿ ಬೀಡುಬಿಟ್ಟಿದ್ದಾರೆ.

ಶುಭಕರಣ್‌ಗೆ ಶ್ರದ್ಧಾಂಜಲಿ ಸಲ್ಲಿಸಲು ಅವರ ಹುಟ್ಟೂರು ಬಠಿಂಡಾದ ಬಲೋಹ್ ಗ್ರಾಮದಲ್ಲಿ ಮಾರ್ಚ್ 3 ರಂದು ಸಭೆ ಆಯೋಜಿಸಲಾಗಿದೆ. ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪಂಧೇರ್ ತಿಳಿಸಿದರು.

ಹಿಮಾಚಲ ಪ್ರದೇಶ: ಪಕ್ಷಕ್ಕೆ ದ್ರೋಹ ಬಗೆದವರು ಬೆಲೆ ತೆರುತ್ತಾರೆ– ಮುಖ್ಯಮಂತ್ರಿ ಸುಖು

‘ಶಮನ’ ತಾತ್ಕಾಲಿಕ: ಹೈಕಮಾಂಡ್‌ಗೆ ಸಂದೇಶ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಹಿಮಾಚಲ ಪ್ರದೇಶದಲ್ಲಿ ಬಂಡಾಯವೆದ್ದಿದ್ದ ಆರು ಶಾಸಕರನ್ನು ಅನರ್ಹಗೊಳಿಸುವ ಮೂಲಕ ಕಾಂಗ್ರೆಸ್ ತನ್ನ ಸರ್ಕಾರವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಆದರೆ ಒಳಬೇಗುದಿ ಇನ್ನೂ ಶಮನವಾಗಿಲ್ಲ.

ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರು ಬಂಡಾಯ ಶಾಸಕರ ವಿರುದ್ಧ ಹರಿಹಾಯ್ದಿದ್ದಾರೆ. ಇನ್ನೊಂದೆಡೆ, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪ್ರತಿಭಾ ಸಿಂಗ್ ಹಾಗೂ ಅವರ ಪುತ್ರ, ಸಚಿವ ವಿಕ್ರಮಾದಿತ್ಯ ಸಿಂಗ್ ಅವರು, ಈಗಿನ ‘ಕದನ ವಿರಾಮ’ ತಾತ್ಕಾಲಿಕ ಎಂಬ ಮಾತನ್ನು ಪಕ್ಷದ ನಾಯಕತ್ವಕ್ಕೆ ಶುಕ್ರವಾರ ಮತ್ತೊಮ್ಮೆ ರವಾನಿಸಿದ್ದಾರೆ.

ಹೀಗಾಗಿ, ಮುಖ್ಯಮಂತ್ರಿ ಸುಖು ಹಾಗೂ ವಿಕ್ರಮಾದಿತ್ಯ ಸಿಂಗ್ ನಡುವಿನ ತಿಕ್ಕಾಟ ಇನ್ನೂ ತಣಿದಿಲ್ಲ ಎನ್ನುವಂತಾಗಿದೆ.

ಸೋಲನ್ ಜಿಲ್ಲೆಯ ಕಸೌಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಧರಂಪುರ ಎಂಬಲ್ಲಿ ಶುಕ್ರವಾರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸುಖು, ‘ಕಾಂಗ್ರೆಸ್‌ನ ಕೆಲ ಶಾಸಕರು ತಮ್ಮ ಆತ್ಮಸಾಕ್ಷಿಯನ್ನೇ ಮಾರಾಟ ಮಾಡಿಕೊಂಡಿದ್ದಾರೆ. ಪಕ್ಷದ ನಿಯಮಗಳಿಗೆ ವಿರುದ್ಧವಾಗಿ ಅಡ್ಡಮತ ಹಾಕಿರುವ ಇವರು ಬೆಲೆ ತೆರುತ್ತಾರೆ’ ಎಂದು ವಾಗ್ದಾಳಿ ನಡೆಸಿದ್ದಾರೆ.

‘ಪಕ್ಷಕ್ಕೆ ದ್ರೋಹ ಬಗೆದು, ತಮ್ಮನ್ನು ಆಯ್ಕೆ ಮಾಡಿದ ಜನರ ಭಾವನೆಗಳೊಂದಿಗೆ ಆಟವಾಡಿದವರಿಗೆ ದೇವರು ಶಿಕ್ಷಿಸದೇ ಬಿಡುವುದಿಲ್ಲ’ ಎಂದೂ ಹೇಳಿದ್ದಾರೆ.

ಬಿಜೆಪಿ ವಿರುದ್ಧವೂ ಟೀಕಾಪ್ರಹಾರ ನಡೆಸಿದ ಅವರು, ‘ರಾಜ್ಯದಲ್ಲಿ ಭ್ರಷ್ಟಾಚಾರ ಮಟ್ಟ ಹಾಕುವ ಜೊತೆಗೆ, ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿರುವುದು ಬಿಜೆಪಿಯವರನ್ನು ಕಂಗೆಡಿಸಿದೆ’ ಎಂದರು.



ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರು ತಮ್ಮ ಸಂಪುಟ ಸಹೋದ್ಯೋಗಿಗಳು ಹಾಗೂ ಶಾಸಕರೊಂದಿಗೆ ಶಿಮ್ಲಾದಲ್ಲಿ ಶುಕ್ರವಾರ ವಿಧಾನಸಭೆ ಅಧ್ಯಕ್ಷ ಕುಲದೀಪ್ ಸಿಂಗ್ ಪಠಾನಿಯಾ ಅವರನ್ನು ಭೇಟಿ ಮಾಡಿ ಹೊರಬಂದರು –ಪಿಟಿಐ ಚಿತ್ರ

ಅನರ್ಹಗೊಂಡಿರುವ ಶಾಸಕರು ಕೋರ್ಟ್ ಮೆಟ್ಟಿಲೇರಲು ನಿರ್ಧರಿಸಿರುವುದರಲ್ಲಿ ತಪ್ಪಿಲ್ಲ. ನ್ಯಾಯಕ್ಕಾಗಿ ಹೋರಾಟ ಅವರ ಹಕ್ಕು

ಪ್ರತಿಭಾ ಸಿಂಗ್
ಹಿಮಾಚಲ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ

ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಿದ ತಮ್ಮ ಪಕ್ಷಕ್ಕೆ ದ್ರೋಹ ಬಗೆಯುವವರನ್ನು ವಿಷ ಸರ್ಪಗಳೆಂದು ಕರೆಯಲಾಗುತ್ತದೆ

ಸುಖ್ವಿಂದರ್ ಸಿಂಗ್ ಸುಖು
ಹಿಮಾಚಲ ಪ್ರದೇಶ ಮುಖ್ಯಮಂತ್ರಿ

‘ರಾಜ್ಯದ ಸಂಪತ್ತನ್ನು ಯಾವುದೇ ಕಾರಣಕ್ಕೂ ಲೂಟಿ ಮಾಡಲು ಬಿಡುವುದಿಲ್ಲ. ನನ್ನ ಜನರೇ ನನ್ನ ಶಕ್ತಿ. ನನ್ನ ಕೊನೆ ಉಸಿರುವವರೆಗೂ ನನ್ನ ಜನರ ಸೇವೆ ಮಾಡಲು ಬದ್ಧ’ ಎಂದು ಹೇಳಿದ್ದಾರೆ.

ಸಂದೇಶ ರವಾನೆ: ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪ್ರತಿಭಾ ಸಿಂಗ್ ಹಾಗೂ ಅವರ ಪುತ್ರ, ಸಚಿವ ವಿಕ್ರಮಾದಿತ್ಯ ಅವರು, ಅನರ್ಹಗೊಂಡಿರುವ ಪಕ್ಷದ 6 ಶಾಸಕರನ್ನು ಹರಿಯಾಣದ ಪಂಚಕುಲದಲ್ಲಿ ಶುಕ್ರವಾರ ಭೇಟಿ ಮಾಡಿದ್ದಾರೆ.

‘ವೀಕ್ಷಕರ ಮಾತಿಗೆ ಮಹತ್ವ ಇದೆಯೇ?’

ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ನೇತೃತ್ವದ ಸರ್ಕಾರ ಐದು ವರ್ಷಗಳ ಅವಧಿಯನ್ನು ಪೂರ್ಣಗೊಳಿಸುತ್ತದೆ ಎಂಬುದಾಗಿ ಪಕ್ಷದ ವೀಕ್ಷಕರು ಪ್ರತಿಪಾದಿಸಿದ್ದರೂ, ಅವರ ಮಾತಿಗೆ ಪ್ರತಿಭಾ ಸಿಂಗ್ ಹೆಚ್ಚಿನ ಮಹತ್ವ ನೀಡಿಲ್ಲ ಎಂದೂ ಹೇಳಲಾಗುತ್ತಿದೆ.

‘ವೀಕ್ಷಕರು ಮಾತಿಗೆ ಮಹತ್ವದ ಇದೆಯೇ? ಸುಖು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು ಎಂದು ವೀಕ್ಷಕರು ಬಯಸುತ್ತಾರೆ. ಆದರೆ, ಅಂತಿಮವಾಗಿ ಜನರ ಅಪೇಕ್ಷೆ ಏನಿದೆ ಹಾಗೂ ಮುಂದೆ ಏನಾಗಲಿದೆ ಎಂಬುದು ಮುಖ್ಯ’ ಎಂದು ಹೇಳುವ ಮೂಲಕ ಪ್ರತಿಭಾ ಸಿಂಗ್ ಅವರು ಸುಖು ನೇತೃತ್ವದ ಸರ್ಕಾರದ ಮೇಲೆ ಅನಿಶ್ಚಿತತೆ ಕತ್ತಿ ತೂಗುತ್ತಿರುವುದು ನಿಂತಿಲ್ಲ ಎಂಬುದನ್ನು ಸೂಚ್ಯವಾಗಿ ಹೇಳಿದ್ದಾರೆ ಎನ್ನಲಾಗುತ್ತಿದೆ.

‘ಪಕ್ಷದ ಕೇಂದ್ರ ನಾಯಕತ್ವದ ಮಧ್ಯಪ್ರವೇಶದಿಂದ ರಾಜ್ಯ ಘಟಕದಲ್ಲಿನ ಈ ಕದನ ವಿರಾಮ ತಾತ್ಕಾಲಿಕ. ನನ್ನ ಬಣದ ಅಹವಾಲುಗಳಿಗೆ ತ್ವರಿತವಾಗಿ ಪರಿಹಾರ ನೀಡಬೇಕು’ ಎಂಬ ಸಂದೇಶ ರವಾನಿಸುವ ಪ್ರಯತ್ನವನ್ನು ಪ್ರತಿಭಾ ಸಿಂಗ್ ಮಾಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ಅನರ್ಹಗೊಂಡಿರುವ ಶಾಸಕರನ್ನು ಹಾಗೂ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುತ್ತಿರುವುದಾಗಿ ವಿಕ್ರಮಾದಿತ್ಯ ನನಗೆ ತಿಳಿಸಿದ್ದಾರೆ. ಮುಂದೆ ಯಾವ ಬೆಳವಣಿಗೆ ಆಗುತ್ತವೆ ಎಂದು ಕಾದು ನೋಡೋಣ. ಸದ್ಯಕ್ಕಂತೂ ನನ್ನ ಸರ್ಕಾರಕ್ಕೆ ಯಾವುದೇ ಬೆದರಿಕೆ ಇಲ್ಲ’ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಮತ್ತೊಂದೆಡೆ, ಪ್ರತಿಭಾ ಸಿಂಗ್ ಪ್ರಸಕ್ತ ರಾಜಕೀಯ ಬೆಳವಣಿಗೆಗಳ ಕುರಿತು ಪ್ರತಿಕ್ರಿಯಿಸಿದ್ದು, ‘ಬರುವ ದಿನಗಳಲ್ಲಿ ಏನಾಗಲಿದೆ ಎಂಬುದು ದೇವರಿಗೇ ಗೊತ್ತು’ ಎನ್ನುವ ಮೂಲಕ ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ.

ಗ್ಯಾನವಾಪಿ: ಹೈಕೋರ್ಟ್ ಆದೇಶ ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದ ಮಸೀದಿ ಸಮಿತಿ

ಅರ್ಜಿ ವಿಚಾರಣೆಗೆ ‘ಸುಪ್ರೀಂ’ ಒಪ್ಪಿಗೆ

ನವದೆಹಲಿ(ಪಿಟಿಐ): ವಾರಾಣಸಿಯ ಗ್ಯಾನವಾಪಿ ಮಸೀದಿ ಇರುವ ಜಾಗದಲ್ಲಿ ದೇವಸ್ಥಾನದ ಪುನರ್ ನಿರ್ಮಾಣ ಆಗಬೇಕು ಎಂಬ ಕುರಿತ ವ್ಯಾಜ್ಯದ ವಿಚಾರಣೆಗೆ ಅನುಮತಿ ನೀಡಿದ್ದ ಅಲಹಾಬಾದ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಒಪ್ಪಿಗೆ ಸೂಚಿಸಿದೆ.

‘ಈ ಅರ್ಜಿಯನ್ನು ಮುಖ್ಯ ಪ್ರಕರಣದೊಂದಿಗೆ ಸೇರಿಸುತ್ತೇವೆ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠ ಹೇಳಿತು.

ಗ್ಯಾನವಾಪಿ ಮಸೀದಿಯ ಆಡಳಿತ ನಿರ್ವಹಣೆಯ ಹೊಣೆ ಹೊತ್ತಿರುವ ಅಂಜುಮನ್ ಇಂತೆಜಾಮಿಯಾ ಸಮಿತಿಯು ಈ ಅರ್ಜಿ ಸಲ್ಲಿಸಿತ್ತು.

ಮಸೀದಿ ಇರುವ ಜಾಗದಲ್ಲಿ ದೇವಸ್ಥಾನದ ಪುನರ್ ನಿರ್ಮಾಣ ಆಗಬೇಕು ಎಂಬ ಮನವಿ ಹೊಂದಿರುವ, 1991ರಲ್ಲಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಪ್ರಶ್ನಿಸಿ ಮಸೀದಿ ಸಮಿತಿ ಮತ್ತು ಉತ್ತರ ಪ್ರದೇಶ ಕೇಂದ್ರ ಸುನ್ನಿ ವಕ್ಫ್ ಮಂಡಳಿ ಸಲ್ಲಿಸಿದ್ದ 5 ಅರ್ಜಿಗಳನ್ನು ಅಲಹಾಬಾದ್ ಹೈಕೋರ್ಟ್ ಕಳೆದ ಡಿ. 19ರಂದು ತಿರಸ್ಕರಿಸಿತ್ತು. ಸ್ಥಳವೊಂದರ ಧಾರ್ಮಿಕ ಸ್ವರೂಪವನ್ನು ನ್ಯಾಯಾಲಯ ಮಾತ್ರ ನಿರ್ಧರಿಸಬಹುದು ಎಂದು ತಿಳಿಸಿತ್ತು.

ವಿವಾದಿತ ಪ್ರದೇಶದ ಮಾಲೀಕತ್ವವನ್ನು ಹಾಗೂ ಅಲ್ಲಿ ಪೂಜೆಗೆ ಅವಕಾಶ ನೀಡುವಂತೆ ಮನವಿ ಮಾಡಿರುವ ಸಿವಿಲ್ ಅರ್ಜಿಗೆ ‘ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ 1991’ ಅಡ್ಡಿ ಉಂಟುಮಾಡುವುದಿಲ್ಲ ಎಂದೂ ಸ್ಪಷ್ಟಪಡಿಸಿತ್ತು.

ಶಿವಸೇನಾ: ವಿಚಾರಣೆ 7ಕ್ಕೆ

ನವದೆಹಲಿ (ಪಿಟಿಐ): ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಬಣವನ್ನು ‘ನೈಜ ರಾಜಕೀಯ ಪಕ್ಷ’ ಎಂದು ಘೋಷಿಸಿದ್ದ ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರ ಆದೇಶವನ್ನು ಪ್ರಶ್ನಿಸಿ ಉದ್ಧವ್ ಠಾಕ್ರೆ ಬಣ ಸಲ್ಲಿಸಿರುವ ಅರ್ಜಿಯನ್ನು ಮಾರ್ಚ್ 7ರಂದು ವಿಚಾರಣೆಗಾಗಿ ಪಟ್ಟಿ ಮಾಡುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

ಠಾಕ್ರೆ ಬಣದ ಅರ್ಜಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠದ ಮುಂದೆ ಮಾರ್ಚ್ 1 ರಂದು ವಿಚಾರಣೆಗಾಗಿ ಪಟ್ಟಿ ಮಾಡಬೇಕಿತ್ತು. ಆದರೆ ಅದು ಪಟ್ಟಿಯಲ್ಲಿ ಇಲ್ಲ ಎಂದು ಠಾಕ್ರೆ ಬಣದ ಪರ ವಕೀಲ ಕಪಿಲ್ ಸಿಬಲ್ ನ್ಯಾಯಪೀಠದ ಗಮನಕ್ಕೆ ತಂದರು.

ಈ ಕುರಿತ ಅರ್ಜಿಯನ್ನು ಮಾರ್ಚ್ 7ರಂದು ಪಟ್ಟಿ ಮಾಡುವಂತೆ ಸಿಬಲ್ ಅವರು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರನ್ನು ಒಳಗೊಂಡ ಪೀಠಕ್ಕೆ ಮನವಿ ಮಾಡಿದರು. ಇದಕ್ಕೆ ಪೀಠವು ಸಮ್ಮತಿ ಸೂಚಿಸಿತು.

ಅಸಾರಾಂ ಅರ್ಜಿ ತಿರಸ್ಕಾರ

ನವದೆಹಲಿ (ಪಿಟಿಐ): ಅತ್ಯಾಚಾರ ಪ್ರಕರಣ ದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಸ್ವಯಂಘೋಷಿತ ದೇವಮಾನವ ಅಸಾರಾಂ ಅವರು, ಶಿಕ್ಷೆಯನ್ನು ವೈದ್ಯಕೀಯ ಕಾರಣಗಳಿಂದ ರದ್ದುಗೊಳಿಸಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

ಆರೋಗ್ಯ ಹದಗೆಡುತ್ತಿರುವುದರಿಂದ ಶಿಕ್ಷೆ ರದ್ದುಗೊಳಿಸಬೇಕು ಎಂದು ಅಸಾರಾಂ ಕೋರಿದ್ದರು. ‘ಶಿಕ್ಷೆಯಿಂದ ವಿನಾಯಿತಿ ಕೋರಿ ರಾಜಸ್ಥಾನ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ’ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತಾ ಅವರು, ಅಸಾರಾಂ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರಿಗೆ ಸೂಚಿಸಿತು.

‘ಮಹಾರಾಷ್ಟ್ರದ ಮಾಧವ್‌ಭಾಗ್ ಹೃದಯಾಲಯದಲ್ಲಿ ಚಿಕಿತ್ಸೆಗೆ ಸಂಬಂಧಿಸಿದಂತೆ ಅನುಮತಿಗಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ. ಅದನ್ನು ಕಾನೂನಿನ ಪ್ರಕಾರ ಪರಿಗಣಿಸಲಾಗುತ್ತದೆ’ ಎಂದೂ ಹೇಳಿತು.

‘ಅಸಾರಾಂ ಅವರಿಗೆ ಹಲವು ಬಾರಿ ಹೃದಯಾಘಾತ ಸಂಭವಿಸಿದೆ. ರಕ್ತಹೀನತೆ ಮತ್ತ ಇತರ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದ ಅವರಿಗೆ ಚಿಕಿತ್ಸೆಯ ಅಗತ್ಯವಿದೆ’ ಎಂದು ಅಸಾರಾಂ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಪ್ರಕರಣವನ್ನು ತ್ವರಿತವಾಗಿ ವಿಚಾರಣೆ ನಡೆಸುವಂತೆ ಹೈಕೋರ್ಟ್‌ಗೆ, ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

‘ಅಕ್ರಮ ನಿರ್ಮಾಣಕ್ಕೆ ಯೋಜನೆ ಲೋಪವೇ ಕಾರಣ’

ನವದೆಹಲಿ (ಪಿಟಿಐ): ‘ನಗರ ವಸತಿ ಯೋಜನೆಗಳಲ್ಲಿರುವ ಲೋಪಗಳಿಂದಾಗಿ ಅಕ್ರಮ ನಿರ್ಮಾಣಗಳು ಹೆಚ್ಚುತ್ತಿವೆ. ಕೈಗೆಟಕುವ ದರದಲ್ಲಿ ವಸತಿ ಕಲ್ಪಿಸದ ಸರ್ಕಾರಗಳ ವೈಫಲ್ಯವೂ ಇದಕ್ಕೆ ಕಾರಣ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಸೂರು ಹೊಂದುವುದು ವ್ಯಕ್ತಿಯ ಮೂಲಭೂತ ಹಕ್ಕು. ಆದರೆ, ಆರ್ಥಿಕವಾಗಿ ದುರ್ಬಲ ವರ್ಗಗಳ ವಸತಿ ಬೇಡಿಕೆ ಮತ್ತು ಸರ್ಕಾರ ಕೆಳಮಟ್ಟದಲ್ಲಿ ಜಾರಿಗೊಳಿಸುತ್ತಿರುವ ನೀತಿಗಳಿಗೂ ಅಜಗಜಾಂತರ ಅಂತರವಿದೆ’ ಎಂದೂ ಅಭಿಪ್ರಾಯಪಟ್ಟಿತು. ಲಖನೌದ ಅಕ್ಬರ್ ನಗರದಲ್ಲಿ ವಾಣಿಜ್ಯ, ವಸತಿ ನಿರ್ಮಾಣಗಳ ನೆಲಸಮ ಕಾರ್ಯಾಚರಣೆಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ದೀಪಂಕರ್ ದತ್ತಾ ಅವರಿದ್ದ ನ್ಯಾಯಪೀಠ ಹೀಗೆ ಹೇಳಿತು.

ತುಂಡಾ ದೋಷಮುಕ್ತ ಸಿಬಿಐ ಅರ್ಜಿ

ನವದೆಹಲಿ (ಪಿಟಿಐ): 1993ರ ಸರಣಿ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಅಬ್ದುಲ್ ಕರೀಮ್ ತುಂಡಾನನ್ನು ದೋಷಮುಕ್ತಗೊಳಿಸಿರುವ ಅಜ್ಮೀರ್ ವಿಶೇಷ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸಿಬಿಐ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

‘ಪ್ರಕರಣದಲ್ಲಿ 12 ಜನ ಆರೋಪಿಗಳಿದ್ದು, ಪ್ರಕರಣದ ಕುರಿತು ಗುರುವಾರ ತೀರ್ಪು ನೀಡಿದ ಟಾಡಾ ನ್ಯಾಯಾಲಯದ ನ್ಯಾಯಾಧೀಶರಾದ ಮಹಾವೀರ್ ಪ್ರಸಾದ್ ಗುಪ್ತಾ ಅವರು ಅದರಲ್ಲಿ ಇಬ್ಬರಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ. ಆದರೆ ಪ್ರಮುಖ ಆರೋಪಿ ತುಂಡಾನನ್ನು ದೋಷ ಮುಕ್ತಗೊಳಿಸಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1993 ರಲ್ಲಿ ಲಖನೌ, ಕಾನ್ಪುರ, ಹೈದರಾಬಾದ್, ಸೂರತ್ ಮತ್ತು ಮುಂಬೈ ನಗರಗಳಲ್ಲಿ ಸರಣಿ ಬಾಂಬ್ ಸ್ಫೋಟ ಸಂಭವಿಸಿ ಹಲವರು ಗಾಯಗೊಂಡಿದ್ದರು, ಬಾಬ್ರಿ ಮಸೀದಿ ಧ್ವಂಸಗೊಂಡು ಒಂದು ವರ್ಷ ಪೂರ್ಣಗೊಂಡ ದಿನದಂದೇ ಸರಣಿ ಸ್ಫೋಟ ನಡೆದಿತ್ತು.

ಸಂಕ್ಷಿಪ್ತ ಸುದ್ದಿ

ಕುಲಪತಿಗಳ ವೇತನ ತಡೆಗೆ ಆದೇಶ

ಪಟ್ನಾ (ಪಿಟಿಐ): ಶಿಕ್ಷಣ ಇಲಾಖೆ ಎರಡು ದಿನಗಳ ಹಿಂದೆ ಕರೆದಿದ್ದ ಪರಿಶೀಲನಾ ಸಭೆಗೆ ಗೈರಾದ ಬಿಹಾರದ ಎಲ್ಲ ಸರ್ಕಾರಿ ವಿಶ್ವವಿದ್ಯಾಲಯಗಳ ಕುಲಪತಿಗಳ ವೇತನವನ್ನು ಬಿಹಾರ ಸರ್ಕಾರ ತಡೆಹಿದಿದೆ. ಅಲ್ಲದೆ ಅವರು ಪ್ರತಿನಿಧಿಸುವ ಎಲ್ಲ ಸರ್ಕಾರಿ ವಿಶ್ವವಿದ್ಯಾಲಯಗಳ ಬ್ಯಾಂಕ್‌ಗಳ ಖಾತೆ ಸ್ಥಗಿತಗೊಳಿಸುವಂತೆ ಸರ್ಕಾರ ಆದೇಶಿಸಿದೆ.

ವಿಶ್ವವಿದ್ಯಾಲಯಗಳಲ್ಲಿನ ಬಾಕಿ ಪರೀಕ್ಷೆಗಳ ಸ್ಥಿತಿಗತಿ ಮತ್ತು ಇತರ ವಿಷಯಗಳ ಕುರಿತು ಚರ್ಚಿಸಲು ಸಭೆ ಕರೆಯಲಾಗಿತ್ತು. ಈ ಸಭೆಗೆ ಹಾಜರಾಗದಿರುವುದಕ್ಕೆ ಕಾರಣ ನೀಡಿ ಎಂದು ಇಲಾಖೆ ಕುಲಪತಿಗಳಿಗೆ ಪತ್ರ ಬರೆದಿದೆ.

‘ಎರಡು ದಿನಗಳೊಳಗೆ ತೃಪ್ತಿದಾಯಕ ಉತ್ತರ ನೀಡದಿದ್ದರೆ, ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುತ್ತದೆ’ ಎಂದು ಪತ್ರದಲ್ಲಿ ಎಚ್ಚರಿಸಲಾಗಿದೆ. ಈ ಕುರಿತು ಶಿಕ್ಷಣ ಕಾರ್ಯದರ್ಶಿ ಬೈದ್ಯನಾಥ್ ಯಾದವ್ ಅವರು ಪತ್ರ ಹೊರಡಿಸಿದ್ದು, ಮಗಧ್ ವಿಶ್ವವಿದ್ಯಾಲಯ ಮತ್ತು ಕಾಮೇಶ್ವರ ಸಿಂಗ್ ದರ್ಭಾಂಗ್ ಸಂಸ್ಕೃತ ವಿಶ್ವವಿದ್ಯಾಲಯ ಹೊರತುಪಡಿಸಿ ಉಳಿದ ಎಲ್ಲ ಸರ್ಕಾರಿ ವಿ.ವಿಗಳ ಪರೀಕ್ಷಾ ನಿಯಂತ್ರಕರಿಗೂ ರವಾನಿಸಲಾಗಿದೆ.

ರಕ್ಷಣಾ ವ್ಯವಸ್ಥೆ: ₹39 ಸಾವಿರ ಕೋಟಿ ಮೌಲ್ಯದ ಖರೀದಿಗೆ ಒಪ್ಪಂದ

ನವದೆಹಲಿ(ಪಿಟಿಐ): ಮಿಗ್–29 ಯುದ್ಧವಿಮಾನ ಸೇರಿದಂತೆ ₹39,125 ಕೋಟಿ ಮೌಲ್ಯದ ಶಸ್ತ್ರಾಸ್ತ್ರಗಳ ಖರೀದಿಗೆ ಸಂಬಂಧಿಸಿದ ಒಪ್ಪಂದಗಳಿಗೆ ರಕ್ಷಣಾ ಸಚಿವಾಲಯ ಶುಕ್ರವಾರ ಸಹಿ ಹಾಕಿದೆ.

ಮಿಗ್–29 ಯುದ್ಧ ವಿಮಾನ ಪೂರೈಕೆಗಾಗಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಜೊತೆಗಿನ ಒಡಂಬಡಿಕೆ ಸೇರಿದಂತೆ ಒಟ್ಟು ಐದು ಒಪ್ಪಂದಗಳಿಗೆ ಸಹಿ ಹಾಕಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಡ್ರೋನ್ ಹಾಗೂ ಇತರ ವೈಮಾನಿಕ ಸಾಧನಗಳ ಮೂಲಕ ನಡೆಸುವ ದಾಳಿಗೆ ಪ್ರತಿರೋಧ ಒಡ್ಡಬಲ್ಲ ವ್ಯವಸ್ಥೆ (ಸಿಐಡಬ್ಲ್ಯುಎಸ್) ಹಾಗೂ ರಾಡಾರ್ ಪೂರೈಕೆಗಾಗಿ ಎಲ್ ಅಂಡ್ ಟಿ ಜೊತೆ ಎರಡು ಒಪ್ಪಂದ ಮಾಡಿಕೊಳ್ಳಲಾಗಿದೆ. ಬ್ರಹ್ಮೋಸ್ ಕ್ಷಿಪಣಿಗಳ ಪೂರೈಕೆಗಾಗಿ ಬ್ರಹ್ಮೋಸ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ 2 ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ತಿಳಿಸಿದೆ.

ಈ ಒಪ್ಪಂದಗಳು ಸೇನೆಯ ಸಾಮರ್ಥ್ಯಗಳಿಗೆ ಮತ್ತಷ್ಟು ಬಲ ತುಂಬಲಿವೆ. ಶಸ್ತ್ರಾಸ್ತ್ರಗಳಿಗಾಗಿ ವಿದೇಶಿ ಮೂಲದ ತಯಾರಕರ ಮೇಲಿನ ಅವಲಂಬನೆ ತಗ್ಗಿಸಲಿವೆ ಎಂದು ಸಚಿವಾಲಯ ಹೇಳಿದೆ.

‘ಪಕ್ಷಪಾತಿ ಧೋರಣೆಯ ನಿರ್ಣಯ’

ಚುರಾಚಾಂದಪುರ (ಪಿಟಿಐ): ಕುಕಿ–ಜೋ ಗುಂಪುಗಳೊಂದಿಗೆ ‘ಕಾರ್ಯಾಚರಣೆ ಸ್ಥಗಿತಗೊಳಿಸುವ’ (ಎಸ್‌ಒಒ) ಒಪ್ಪಂದವನ್ನು ರದ್ದುಗೊಳಿಸುವಂತೆ ಕೇಂದ್ರವನ್ನು ಒತ್ತಾಯಿಸುವ ಕುರಿತು ವಿಧಾನಸಭೆಯು ಅಂಗೀಕರಿಸಿರುವ ನಿರ್ಣಯವನ್ನು ಮಣಿಪುರದ ಹತ್ತು ಮಂದಿ ಬುಡಕಟ್ಟು ಶಾಸಕರು ಖಂಡಿಸಿದ್ದಾರೆ. ಇದೊಂದು ‘ಪಕ್ಷಪಾತ’ ಧೋರಣೆಯ ನಿರ್ಣಯ ಎಂದು ಅವರು ದೂರಿದ್ದಾರೆ.

ರಷ್ಯಾದಲ್ಲಿ ಭಾರತೀಯ ಯುವಕರ ಒತ್ತೆ: ಕಾಂಗ್ರೆಸ್ ಕಿಡಿ

ನವದೆಹಲಿ (ಪಿಟಿಐ): ರಷ್ಯಾದ ಸೇನೆಯಲ್ಲಿ 20 ಭಾರತೀಯರು ಸಹಾಯಕ ಸಿಬ್ಬಂದಿಯಾಗಿ ಒತ್ತೆಯಾಳುಗಳ ರೀತಿ ಕೆಲಸ ಮಾಡುತ್ತಿರುವುದಕ್ಕೆ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಶುಕ್ರವಾರ ತೀವ್ರ ವಾಗ್ದಾಳಿ ನಡೆಸಿದೆ.

ದೇಶದಲ್ಲಿ ಹೆಚ್ಚುತ್ತಿರುವ ನಿರುದ್ಯೋಗದೊಂದಿಗೆ ‘ಮೃತ ಕಾಲ’ ಮತ್ತೆ ಮೇಲುಗೈ ಸಾಧಿಸಿದೆ. ಅನ್ಯದಾರಿ ಇಲ್ಲದೆ, ಭಾರತೀಯ ಯುವಕರು ಅಲ್ಲಿ ಒತ್ತೆಯಾಳುಗಳಾಗಿ ದುಡಿಯುತ್ತಿದ್ದಾರೆ ಎಂದು ಆರೋಪಿಸಿದೆ.

ಎಐಸಿಸಿ ಪ್ರಧಾನ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ಕನ್ಹಯ್ಯಾ ಕುಮಾರ್, ‘ರಷ್ಯಾದಲ್ಲಿ ಭಾರತೀಯರನ್ನು ಒತ್ತೆಯಾಳುಗಳಾಗಿ ಇರಿಸಲಾಗಿದೆ. ಅಲ್ಲಿ ನಾಗರಿಕ ಕೆಲಸ ಮಾಡುತ್ತಿದ್ದ ಗುಜರಾತ್‌ನ ಒಬ್ಬ ವ್ಯಕ್ತಿಯ ಹತ್ಯೆಯಾಗಿದೆ. ಆತನ ಸಾವಿನ ಬಗ್ಗೆ ಸರ್ಕಾರ ಯಾಕೆ ಬಾಯಿಬಿಡುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ದೇಶದ ಯುವಕರು ತಮ್ಮ ದೇಶಕ್ಕಾಗಿ ಹುತಾತ್ಮರಾದರೆ ಅದು ದೇಶಪ್ರೇಮ. ಆದರೆ, ಭಾರತೀಯ ಯುವಕರು ಬೇರೆ ದೇಶಕ್ಕಾಗಿ ಹೋರಾಡಲು ಏಕೆ ಹೋಗಬೇಕು? ದೇಶದಲ್ಲಿ ಯುವಕರ ಭವಿಷ್ಯದ ಜತೆ ಆಟವಾಡುತ್ತಿರುವುದರಿಂದ ಈ ಪರಿಸ್ಥಿತಿ ಬಂದಿದೆ. ದೇಶದಲ್ಲಿ ನಿರುದ್ಯೋಗ ದರ ಕಳೆದ 10 ವರ್ಷಗಳಲ್ಲಿ ದ್ವಿಗುಣವಾಗಿದೆ. ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಲಕ್ಷಗಟ್ಟಲೆ ಹುದ್ದೆಗಳು ಖಾಲಿ ಇವೆ. ಸರ್ಕಾರಿ ವಲಯಗಳ ಸ್ಥಿತಿಯೂ ತೀರಾ ಹದಗೆಟ್ಟಿದೆ’ ಎಂದು ದೂರಿದರು.

‘ದೇಶದಲ್ಲಿ ಯುವಕರಿಗೆ ‘ಮೃತ ಕಾಲ’ (ವಿನಾಶಕಾರಿ ಸಮಯ) ಇರುವುದರಿಂದ ಭಾರತೀಯ ಯುವಕರನ್ನು ರಷ್ಯಾದಲ್ಲಿ ಒತ್ತೆಯಾಳಾಗಿ ಇರಿಸಲಾಗಿದೆ. ಮೋದಿ ಸರ್ಕಾರವು ಪ್ರತಿ ವರ್ಷ 2 ಕೋಟಿ ಉದ್ಯೋಗಗಳನ್ನು ನೀಡಿದ್ದರೆ, ಯುವಕರು ಉದ್ಯೋಗ ಅರಸಿ ವಿದೇಶಕ್ಕೆ ಹೋಗಬೇಕಾಗಿರಲಿಲ್ಲ’ ಎಂದು ಕನ್ಹಯ್ಯಾ ಟೀಕಿಸಿದ್ದಾರೆ.



❦ ಸುಭಾಷಿತ ❦

ಜ್ಞಾನ ಹೊಂದುವುದು ಪ್ರದರ್ಶನ ಮಾಡುವುದಕ್ಕಲ್ಲ.
-ಚೇತನ್ ಭಗತ್

‘ಬ್ರ್ಯಾಂಡ್ ಬೆಂಗಳೂರು’ ಘೋಷಣೆ ಉತ್ಸಾಹ ಅನುಷ್ಠಾನದಲ್ಲೂ ಇರಲಿ

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಮೊದಲ ಬಜೆಟ್ ಮಂಡನೆಯಾಗಿದೆ. ಕಾಂಗ್ರೆಸ್ ಚುಕ್ಕಾಣಿ ಹಿಡಿದ ನಂತರ ‘ಬ್ರ್ಯಾಂಡ್ ಬೆಂಗಳೂರು’ ಹೆಸರಿನ ಕಾರ್ಯಕ್ರಮಗಳು ಹೆಚ್ಚು ಸದ್ದು ಮಾಡುತ್ತಿವೆ. ಬಿಬಿಎಂಪಿಯ 2024–25ನೇ ಸಾಲಿನ ಬಜೆಟ್ ಅದರ ಮುಂದುವರಿದ ಭಾಗದಂತಿದೆ. ‘ಬ್ರ್ಯಾಂಡ್ ಬೆಂಗಳೂರು’ ಶೀರ್ಷಿಕೆಯಡಿ, ‘ವೈಬ್ರಂಟ್’ ಬೆಂಗಳೂರು, ಟೆಕ್ ಬೆಂಗಳೂರು, ಸುಗಮ ಸಂಚಾರ ಬೆಂಗಳೂರು, ಸ್ವಚ್ಛ ಬೆಂಗಳೂರು, ನೀರಿನ ಭದ್ರತೆ ಬೆಂಗಳೂರು, ಆರೋಗ್ಯಕರ ಬೆಂಗಳೂರು, ಶಿಕ್ಷಣ ಬೆಂಗಳೂರು, ಹಸಿರು ಬೆಂಗಳೂರು ಹೆಸರಿನ ಎಂಟು ವಿಭಾಗಗಳಡಿ ವಿವಿಧ ಕಾರ್ಯಕ್ರಮಗಳನ್ನು ಪ್ರಕಟಿಸಲಾಗಿದೆ. ಆದರೆ, ಈ ಯೋಜನೆಗಳಿಗೆ ಮೀಸಲಿಟ್ಟ ಅನುದಾನದ ಪ್ರಮಾಣ ನಿರಾಶೆ ಮೂಡಿಸುತ್ತದೆ. ₹ 12,371 ಕೋಟಿ ಗಾತ್ರದ ಬಜೆಟ್‌ನಲ್ಲಿ ಬ್ರ್ಯಾಂಡ್ ಬೆಂಗಳೂರು ಕಾರ್ಯಕ್ರಮಗಳಿಗೆ ದಕ್ಕಿದ್ದು ಬರೀ ₹ 1,580 ಕೋಟಿ. ಸ್ಕೈ-ಡೆಕ್ ನಿರ್ಮಾಣದ ಅಂದಾಜು ವೆಚ್ಚ ₹ 350 ಕೋಟಿ. ಆದರೆ, ಅದಕ್ಕೆ ಈ ಸಾಲಿನಲ್ಲಿ ಒದಗಿಸಿರುವುದು ₹ 50 ಕೋಟಿ ಮಾತ್ರ. ಕಸ ವಿಲೇವಾರಿಯು ನಗರದ ಬಹುದೊಡ್ಡ ಸಮಸ್ಯೆ. ಬಜೆಟ್‌ನ ಗಣನೀಯ ಪ್ರಮಾಣದ ಮೊತ್ತ ಇದಕ್ಕೇ ವಿನಿಯೋಗವಾಗುತ್ತಿದೆ. ಕಸ ವಿಲೇವಾರಿ ವ್ಯವಸ್ಥೆಯನ್ನು ವಿಕೇಂದ್ರೀಕರಿಸುವಂತೆ ತಜ್ಞರು ಹೇಳುತ್ತಲೇ ಇದ್ದಾರೆ. ಅದಕ್ಕೆ ವ್ಯತಿರಿಕ್ತವಾಗಿ, ಕಸ ಸಂಸ್ಕರಣೆಗೆ ನಗರದ ನಾಲ್ಕು ಕಡೆಗಳಲ್ಲಿ ಜಮೀನು ಖರೀದಿಸಲು ಬಿಬಿಎಂಪಿಯು ₹ 100 ಕೋಟಿ ತೆಗೆದಿರಿಸಿದೆ. ವಿಶಾಲ ಪ್ರದೇಶದಲ್ಲಿ ಕಸ ಸಂಸ್ಕರಣೆ ಮಾಡುವುದರಿಂದ ಮತ್ತಷ್ಟು ಸಮಸ್ಯೆ ಸೃಷ್ಟಿಯಾಗುವ ಸಾಧ್ಯತೆ ಇದೆ. ಇದರ ಬದಲು ಐದಾರು ವಾರ್ಡ್‌ಗಳಿಗೊಂದು ಪುಟ್ಟ ಕಸ ವಿಲೇವಾರಿ ಘಟಕವನ್ನು ಹೊಂದುವುದು ಜಾಣ್ಮೆಯ ನಡೆ. ಬೇಗೂರಿನ ರಮಣಶ್ರೀ ಬಡಾವಣೆಯಲ್ಲಿ 250 ಮನೆಗಳ ಹಸಿಕಸವನ್ನು ಅಲ್ಲೇ ಸಾವಯವ ಗೊಬ್ಬರವನ್ನಾಗಿಸುವ ಪ್ರಸ್ತಾಪ ಬಜೆಟ್‌ನಲ್ಲಿದೆ. ಇಂತಹ ಪರಿಹಾರೋಪಾಯಗಳ ಅಗತ್ಯ ಹೆಚ್ಚು ಇದೆ. ನೇರ ನೇಮಕಾತಿಯಡಿ ಪೌರಕಾರ್ಮಿಕರ ನೇಮಕ ಹಾಗೂ ಅವರಿಗೆ ‘ಶರಣೆ ಸತ್ಯಕ್ಕ’ ಪ್ರಶಸ್ತಿ ನೀಡುವ ಪ್ರಸ್ತಾವಗಳು ಅವರ ಸೇವೆಯನ್ನು ಗುರುತಿಸಲು ನೆರವಾಗಲಿವೆ. ಆದರೆ ಅರ್ಹರ ಆಯ್ಕೆಗೆ ನಿಖರ ಮಾನದಂಡಗಳನ್ನು ರೂಪಿಸಬೇಕು. ಮಹಿಳೆಯರಿಗಾಗಿ ನೂರು ಕಡೆ ‘ಶಿ ಟಾಯ್ಲೆಟ್’ಗಳನ್ನು ನಿರ್ಮಿಸಲು ಉದ್ದೇಶಿಸಿರುವುದು ಸ್ವಾಗತಾರ್ಹ. ಆದರೆ, ಇದು ಕಾಲಮಿತಿಯಲ್ಲಿ ಅನುಷ್ಠಾನಗೊಳ್ಳಬೇಕು.




ಆದ್ಯತೆಗಳನ್ನು ಸರಿಯಾಗಿ ಗುರುತಿಸಿ, ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಮುತುವರ್ಜಿ ವಹಿಸಬೇಕು

ಕಂದಾಯ ವಿಭಾಗದಿಂದ ವಾರ್ಷಿಕ ₹ 6 ಸಾವಿರ ಕೋಟಿ ಸಂಗ್ರಹಿಸಲು ಉದ್ದೇಶಿಸಿರುವ ಬಿಬಿಎಂಪಿ, ಏಪ್ರಿಲ್ 1ರಿಂದ ಮಾರ್ಗಸೂಚಿ ದರದ ಆಧಾರದಲ್ಲಿ ಆಸ್ತಿ ತೆರಿಗೆ ಸಂಗ್ರಹ ನಿಯಮ ಜಾರಿಗೊಳಿಸುವುದಾಗಿ ಹೇಳಿದೆ. ಇದಕ್ಕೆ ಪೂರ್ವಸಿದ್ಧತೆ ನಡೆದಿದೆಯೇ ಎಂಬುದು ಪ್ರಶ್ನೆ. ಡ್ರೋನ್ ಆಧಾರಿತ ನಗರ ಸರ್ವೆಯ ಮೂಲಕ ಸಂಗ್ರಹಿಸಲಾದ ಆಸ್ತಿಗಳ ಡಿಜಿಟಲ್ ನಕ್ಷೆಗಳನ್ನು ಹಾಗೂ ಇತರ ವಿವರಗಳನ್ನು ತೆರಿಗೆ ಸಂಗ್ರಹದ ಉದ್ದೇಶಕ್ಕೂ ಬಳಸಿಕೊಳ್ಳಲಾಗುತ್ತದೆ. ಆದರೆ, ಸದ್ಯಕ್ಕೆ ಬಿಬಿಎಂಪಿ ಬಳಿ 225 ವಾರ್ಡ್‌ಗಳ ಪೈಕಿ 163 ವಾರ್ಡ್‌ಗಳ ಡಿಜಿಟಲ್ ನಕ್ಷೆಗಳು ಮತ್ತು ಮಾಹಿತಿಗಳು ಮಾತ್ರ ಇವೆ. ಪ್ರೀಮಿಯಂ ಎಫ್‌ಎಆರ್ ಮೂಲಕ ₹ 1 ಸಾವಿರ ಕೋಟಿ ಸಂಗ್ರಹಿಸುವುದಾಗಿ ಬಿಬಿಎಂಪಿ ಹೇಳಿದೆ. ಇದಕ್ಕೆ ಮಾಹಿತಿ ತಂತ್ರಜ್ಞಾನ ಆಧಾರಿತ ವಿತರಣೆ, ಬಳಕೆ ಹಾಗೂ ನಿರ್ವಹಣೆ ವ್ಯವಸ್ಥೆಯನ್ನು ಬಳಸಿದರೂ ಒಂದೇ ವರ್ಷದಲ್ಲಿ ಇಷ್ಟೊಂದು ಗುರಿ ಸಾಧನೆ ಸಾಧ್ಯವೇ ಎಂಬುದು ಪ್ರಶ್ನೆ. ಹೈಕೋರ್ಟ್ ಮಧ್ಯಪ್ರವೇಶದಿಂದಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊರಾಂಗಣ ಜಾಹೀರಾತು ಹಾವಳಿ ತಕ್ಕಮಟ್ಟಿಗೆ ಹದ್ದುಬಸ್ತಿಗೆ ಬಂದಿತ್ತು. ಜಾಹೀರಾತಿನಿಂದ ವಾರ್ಷಿಕ ₹ 500 ಕೋಟಿ ವರಮಾನ ಗಳಿಸುವ ಗುರಿ ಹೊಂದಿರುವ ಬಿಬಿಎಂಪಿ, ನವದೆಹಲಿ ಮುನ್ಸಿಪಲ್ ಕಾರ್ಪೊರೇಷನ್‌ನ ಜಾಹೀರಾತು ನೀತಿಯ ಮಾದರಿಯಲ್ಲಿ ಹೊಸ ಜಾಹೀರಾತು ನೀತಿ ರೂಪಿಸುವುದಾಗಿ ಹೇಳಿದೆ. ಇದು, ನಗರದ ಅಂದಗೆಡಿಸುವ ಅವಕಾಶ ನೀಡದಂತೆ ಎಚ್ಚರ ವಹಿಸಬೇಕು. ನಗರದ ಹೊರವಲಯದಲ್ಲಿ ರಾಜಕಾಲುವೆಗಳ ಪಕ್ಕದಲ್ಲಿ, ಸ್ಕೈಲ್ ಪಥ ಹಾಗೂ ಪಾರ್ಕ್‌ಗಳ ಮಾರ್ಗ ನಿರ್ಮಿಸುವ ಪ್ರಸ್ತಾವ ಸ್ವಾಗತಾರ್ಹ. ಆದರೆ, ಈ ಉದ್ದೇಶಕ್ಕೆ ರಾಜಕಾಲುವೆಗಳ ಮೀಸಲು ಪ್ರದೇಶವನ್ನು ಟಿಡಿಆರ್ ನೀಡಿ ಸ್ವಾಧೀನಪಡಿಸಿಕೊಳ್ಳುವುದು ಏಕೆ? ರಾಜಕಾಲುವೆಗಳ ಮೀಸಲು ಪ್ರದೇಶ ಪಾಲಿಕೆಯದೇ ಸ್ವತ್ತು. ಅದು ಒತ್ತುವರಿಯಾಗದಂತೆ ತಡೆಯುವ ಕೆಲಸ ಆಗಬೇಕು. ಟಿಡಿಆರ್ ಹೆಸರಿನಲ್ಲಿ ಅಕ್ರಮಗಳಿಗೆ ಅವಕಾಶ ಆಗಬಾರದು. ನಗರದಲ್ಲಿ 2 ಲಕ್ಷ ಸಸಿಗಳನ್ನು ನೆಟ್ಟು ಬೆಳೆಸುವುದು ಜರೂರಾಗಿ ಆಗಬೇಕಾದ ಕೆಲಸ. ಕೆರೆಗಳ ಪುನರುಜ್ಜೀವನದ ಜೊತೆ, ತೆರೆದ ಬಾವಿ, ಕಲ್ಯಾಣಿಗಳ ಪುನರುಜ್ಜೀವನಕ್ಕೆ ಕ್ರಮವಹಿಸುವ ಉದ್ದೇಶವು ಉತ್ತಮ ನಡೆ. ಬೆಂಗಳೂರಿಗೆ ಪ್ರತ್ಯೇಕ ಆರೋಗ್ಯ ಆಯುಕ್ತರ ಹುದ್ದೆ ಸೃಷ್ಟಿಸಲು ಯೋಜಿಸಲಾಗಿದೆ. ಇದಕ್ಕೆ ಪೂರಕವಾಗಿ ಆರೋಗ್ಯ ಮೂಲಸೌಕರ್ಯ ಬಲಪಡಿಸುವ ಕಡೆಗೂ ಬಿಬಿಎಂಪಿ ಕಾಳಜಿ ವಹಿಸಬೇಕು. ಪಾಲಿಕೆ ಸೇವೆ ಯಾವ ಹಂತದಲ್ಲಿದೆ ಎಂಬ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಲು ‘ಸೇವಾ ವೇದಿಕೆ’ಯನ್ನು ರೂಪಿಸುವುದಾಗಿ ಬಿಬಿಎಂಪಿ ಹೇಳಿದೆ. ಈ ಹಿಂದೆ ಜಾರಿಗೊಳಿಸಿದ್ದ ಸಹಾಯ ಆ್ಯಪ್ ಇದೇ ಉದ್ದೇಶವನ್ನು ಹೊಂದಿತ್ತು. ‘ಸೇವಾ ವೇದಿಕೆ’ಯು ಸಹಾಯ ಆ್ಯಪ್‌ನಂತೆ ವ್ಯರ್ಥ ಪ್ರಯತ್ನ ಆಗದಿರಲಿ. 2015ರ ಪರಿಷ್ಕೃತ ನಗರ ಮಹಾಯೋಜನೆಯಲ್ಲಿ ಉಲ್ಲೇಖಿಸಿರುವ ರಸ್ತೆಗಳ ಅಭಿವೃದ್ಧಿಗೆ ₹ 130 ಕೋಟಿ ಮೀಸಲಿರಿಸಲಾಗಿದೆ. ಇಷ್ಟರಲ್ಲೇ ಮತ್ತೊಂದು ನಗರ ಮಹಾಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕಿತ್ತು. ಅದರ ಬದಲು, ಹತ್ತು ವರ್ಷ ಹಿಂದಿನ ಯೋಜನೆಯ ರಸ್ತೆಗಳಿಗೆ ಈಗ ಅನುದಾನ ನೀಡುತ್ತಿರುವುದು ಆಡಳಿತ ವ್ಯವಸ್ಥೆ ಎಷ್ಟು ಜಡ್ಡುಗಟ್ಟಿದೆ ಎಂಬುದಕ್ಕೆ ಸಾಕ್ಷಿ.

ದಿನದ ಟ್ವೀಟ್


ಅಪಾರ್ಥಕ್ಕೆ ಆಸ್ಪದ ಬೇಡ



ಕನ್ನಡ ಫಲಕ ಕಡ್ಡಾಯ ಎಂಬ ಕಾನೂನು ಜಾರಿಯಾಗುತ್ತಿರುವ ಈ ಸಂತಸದ ಸಂದರ್ಭದಲ್ಲಿ, ಕನ್ನಡೇತರರಿಗೆ ಮತ್ತು ಕೆಲವು ಕನ್ನಡಿಗರಿಗೂ ಮನವಿ. ಕಾಟಾಚಾರಕ್ಕೆ ಕನ್ನಡ ಬಳಸುವಂತೆ ಆಗಬಾರದು. ದಯಮಾಡಿ ಫಲಕ- ಬರಹಗಳಲ್ಲಿ ತಪ್ಪುಗಳು ಇಲ್ಲದಂತೆ ಎಚ್ಚರವಹಿಸಿ. ಕನ್ನಡ ಬಳಸುವುದಷ್ಟೇ ಮುಖ್ಯವಾದದ್ದು ಅದು ಅಪಾರ್ಥವಾಗದಂತೆ ಸರಿಯಾಗಿ ಬಳಸುವುದು.

ನಾಗತಿಹಳ್ಳಿ ಚಂದ್ರಶೇಖರ, ಚಲನಚಿತ್ರ ನಿರ್ದೇಶಕ

ಕಿಡಿನುಡಿ



ವಿರೋಧ ಪಕ್ಷಗಳು ಅವುಗಳನ್ನು ಬಳಸಬಾರದು...

(ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ಗುರುದ್ವಾರಗಳು ಅಥವಾ ಇತರ ಪ್ರಾರ್ಥನಾ ಸ್ಥಳಗಳನ್ನು ಚುನಾವಣಾ ಕಾರ್ಯಕ್ಕೆ ಅಥವಾ ಚುನಾವಣಾ ಪ್ರಚಾರಕ್ಕೆ ಬಳಸಬಾರದು ಎಂಬ ಚುನಾವಣಾ ಆಯೋಗದ ಸಲಹೆಗೆ ಪ್ರತಿಕ್ರಿಯೆ)

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಮಂಗಳವಾರ, 2-3-1999

● **ಸಂಪುಟ ಸಭೆಗೆ ದೇವೇಗೌಡರ ಬೆಂಬಲಿಗರ ಗೈರುಹಾಜರು**

ಬೆಂಗಳೂರು, ಮಾರ್ಚ್ 1– ಸಂಪುಟ ವಿಸ್ತರಣೆ ಹಾಗೂ ಖಾತೆಗಳ ಮರು ಹಂಚಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಕೈಗೊಂಡಿರುವ ನಿರ್ಧಾರದಿಂದ ತೀವ್ರ ಅಸಮಾಧಾನಗೊಂಡಿರುವ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಬೆಂಬಲಿಗ ಸಚಿವರು ಇಂದು ನಡೆದ ಸಂಪುಟ ಸಭೆಗೆ ಗೈರುಹಾಜರಾಗಿದ್ದರು.

ದೇವೇಗೌಡರ ಬೆಂಬಲಿಗರೆಂದೇ ಗುರುತಿಸಲಾಗಿರುವ ಹಿಂದುಳಿದ ವರ್ಗಗಳ ಸಚಿವ ಮಾಲೀಕಯ್ಯ ಗುತ್ತೇದಾರ್, ಸಣ್ಣ ನೀರಾವರಿ ಸಚಿವ ತಿಪ್ಪೇಸ್ವಾಮಿ, ಗೌಡರ ಪುತ್ರ ಹಾಗೂ ವಸತಿ ಸಚಿವ ಎಚ್.ಡಿ. ರೇವಣ್ಣ, ಸಣ್ಣ ಉಳಿತಾಯ ಸಚಿವ ಬಿ. ಸತ್ಯನಾರಾಯಣ ಮೊದಲಾದವರು ಇಂದಿನ ಸಂಪುಟ ಸಭೆಗೆ ಗೈರುಹಾಜರಾಗಿರುವುದು ಮಹತ್ವದ ಬೆಳವಣಿಗೆ.

● **ಪಂಚಾಯ್ತಿ ಸದಸ್ಯರ ಅಧಿಕಾರ ಮುಂದುವರಿಕೆಗೆ ನಿರ್ಧಾರ**

ಬೆಂಗಳೂರು, ಮಾರ್ಚ್ 1– ಗ್ರಾಮ ಪಂಚಾಯ್ತಿಗಳಿಗೆ ಮತ್ತೆ ಚುನಾವಣೆ ನಡೆಯುವವರೆಗೆ ಆಯಾ ಪಂಚಾಯ್ತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರನ್ನೇ ನಾಮಕರಣ ಮಾಡುವ ಮೂಲಕ ಮುಂದುವರಿಸಲು ಇಂದು ಇಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಗ್ರಾಮ ಪಂಚಾಯ್ತಿ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಹಾಗೂ ಕ್ಷೇತ್ರಗಳನ್ನು ಪುನರ್ವಿಂಗಡಿಸಲು ಸರ್ಕಾರ ಸುಗ್ರೀವಾಜ್ಞೆ ಮೂಲಕ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತಂದಿರುವುದರಿಂದ ಚುನಾವಣೆ ಮುಂದಕ್ಕೆ ಹೋಗಿದೆ.

50 ವರ್ಷಗಳ ಹಿಂದೆ

ಶನಿವಾರ, 2-3-1974

● **ಉತ್ತರಪ್ರದೇಶದಲ್ಲಿ ಕಾಂಗ್ರೆಸ್ಸಿಗೆ ನಿಚ್ಚಳ ಬಹುಮತ**

ಲಖನೌ, ಮಾರ್ಚ್ 1– ಉತ್ತರಪ್ರದೇಶ ವಿಧಾನಸಭೆಯ 425 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಇಂದು ನಿಚ್ಚಳ ಬಹುಮತ ಗಳಿಸಿತು.

ಬಸ್ತಿ ಚುನಾವಣಾ ಕ್ಷೇತ್ರದಿಂದ ಕಾಂಗ್ರೆಸ್ ಜಯದ ಕೊನೆಯ ಫಲಿತಾಂಶ ಬಂದಿತಲ್ಲದೆ, ಇದರಿಂದ ಕಾಂಗ್ರೆಸ್ 213 ಸ್ಥಾನ ಗಳಿಸಿದಂತಾಯಿತು. 1962ರಿಂದೀಚೆಗೆ ಇಲ್ಲಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತ ಗಳಿಸಿರುವುದು ಇದೇ ಮೊದಲು.

● **ಗುಜರಾತ್: ಚಿಮಣಭಾಯಿ ಉಚ್ಚಾಟನೆ**

ನವದೆಹಲಿ, ಮಾರ್ಚ್ 1– ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಗುಜರಾತ್ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ಚಿಮಣಭಾಯಿ ಪಟೇಲ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಆರು ವರ್ಷ ಕಾಲ ಉಚ್ಚಾಟನೆ ಮಾಡಲಾಗಿದೆ.

ರಾಜ್ಯ ರಾಜಕಾರಣದ ಮೇಲೆ ಈ ಫಲಿತಾಂಶ ದೀರ್ಘಾವಧಿಯ ಪರಿಣಾಮ ಬೀರಲಿದೆ

ಲೋಕಸಭೆ ಚುನಾವಣೆ: ಹೀಗೊಂದು ನೋಟ



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

2019ರ ಲೋಕಸಭಾ ಚುನಾವಣೆ ವೇಳಾಪಟ್ಟಿಯ ಮಾದರಿಯಲ್ಲಿಯೇ 2024ರ ಚುನಾವಣೆಯೂ ನಡೆಯುತ್ತದೆ ಎಂದು ಭಾವಿಸುವುದಾದಲ್ಲಿ, ಮೊದಲ ಸುತ್ತಿನ ಮತದಾನ ನಡೆಯುವುದಕ್ಕೆ ಇನ್ನು 40ಕ್ಕಿಂತ ತುಸುವೇ ಹೆಚ್ಚು ದಿನಗಳು ಉಳಿದಿವೆ. ಕರ್ನಾಟಕದಲ್ಲಿ ರಾಜಕೀಯ ವಾತಾವರಣ ಕಾವು ಪಡೆದುಕೊಳ್ಳುತ್ತಿದೆ. ಬಿಜೆಪಿ (ಮತ್ತು ಮಿತ್ರಪಕ್ಷ ಜೆಡಿಎಸ್) ಹಾಗೂ ಕಾಂಗ್ರೆಸ್ ತಮ್ಮೆಲ್ಲ ಸಂಪನ್ಮೂಲಗಳನ್ನು ಬಳಸಿಕೊಂಡು ಜನರ ಬೆಂಬಲ ಗಿಟ್ಟಿಸಲು ಮುಂದಾಗಿವೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಲೋಕಸಭಾ ಚುನಾವಣೆಯ ಐದು ಆಯಾಮಗಳು ನಮ್ಮ ಗಮನಸೆಳೆಯುವಂತೆ ಇವೆ.

ಕರ್ನಾಟಕದ ಫಲಿತಾಂಶದ ವೈಶಿಷ್ಟ್ಯ: ವಿಧಾನಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆಯನ್ನು ಕರ್ನಾಟಕದ ಮತದಾರರು ಯಾವತ್ತಿಗೂ ಭಿನ್ನವಾಗಿಯೇ ನೋಡುತ್ತಾ ಬಂದಿದ್ದಾರೆ. ಇದು ಮೊದಲು ಸಾಬೀತಾಗಿದ್ದು 1984–85ರಲ್ಲಿ. ಆಗ ರಾಜ್ಯದಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಪಕ್ಷ ಆಡಳಿತ ನಡೆಸುತ್ತಿತ್ತು. ಲೋಕಸಭಾ ಚುನಾವಣೆಯಲ್ಲಿ ಆ ಪಕ್ಷವು ಕಳಪೆ ಸಾಧನೆ ತೋರಿತು. ಆದರೆ ಕೆಲವೇ ತಿಂಗಳ ನಂತರ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆಯಿತು. ಕೆಲವು ವರ್ಷ (1989, 1999, 2004) ಲೋಕಸಭೆಗೆ ಹಾಗೂ ವಿಧಾನಸಭೆಗೆ ಏಕಕಾಲದಲ್ಲಿ ಚುನಾವಣೆ ನಡೆದ ನಂತರ ಕರ್ನಾಟಕದಲ್ಲಿ ಕಳೆದ ಮೂರು ಬಾರಿ (2008-09, 2013-14, 2018-19) ವಿಧಾನಸಭಾ ಚುನಾವಣೆ ನಡೆದ ಒಂದೇ ವರ್ಷದಲ್ಲಿ ಲೋಕಸಭಾ ಚುನಾವಣೆ ಎದುರಾಗಿದೆ. ಈ ಬಾರಿಯೂ ಅದೇ ರೀತಿ ಆಗುತ್ತಿದೆ. ವಿಧಾನಸಭಾ ಚುನಾವಣೆ ಫಲಿತಾಂಶಕ್ಕಿಂತ ಲೋಕಸಭಾ ಚುನಾವಣೆಯ ಫಲಿತಾಂಶವು ಭಿನ್ನವಾಗಿರ ಬಹುದೇ ಎಂಬ ಕುತೂಹಲ ಕೆರಳಿಸಿದೆ. 2008ರಲ್ಲಿ ಬಿಜೆಪಿಯು ವಿಧಾನಸಭಾ ಚುನಾವಣೆಯಲ್ಲಿ ಬಹುಮತಕ್ಕೆ ಬಹಳ ಸನಿಹ ಬಂದಿತ್ತು (ಮೂರು ಸ್ಥಾನಗಳ ಕೊರತೆ ಎದುರಿಸಿತು), ಪಕ್ಷೇತರರ ಬೆಂಬಲದೊಂದಿಗೆ ಸರ್ಕಾರ ರಚಿಸಿತು. ಮಾರನೆಯ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ಮೂರನೆಯ ಎರಡರಷ್ಟು ಸ್ಥಾನಗಳನ್ನು ಗೆದ್ದುಕೊಂಡಿತು.

2013ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆಯಿತು, ಸಿದ್ದರಾಮಯ್ಯ ಮುಖ್ಯಮಂತ್ರಿ ಯಾದರು. ಬಿಜೆಪಿಯಿಂದ ಹೊರನಡೆದು ಬಿ.ಎಸ್. ಯಡಿಯೂರಪ್ಪ ಅವರು ಕೆಜೆಪಿ ಸ್ಥಾಪಿಸಿದ್ದರು, ಬಿಜೆಪಿ ಹೋಳಾಗಿತ್ತು. ಮಾರನೆಯ ವರ್ಷ, ಅಂದರೆ 2014ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಹೆಚ್ಚಿನ ಸ್ಥಾನಗಳನ್ನು ಬಿಜೆಪಿ ಗೆದ್ದುಕೊಂಡಿತು. ಲೋಕನೀತಿ–ಸಿಎಸ್‌ಡಿಎಸ್ 2014ರ ಚುನಾವಣೆ ನಂತರ ನಡೆಸಿದ ಸಮೀಕ್ಷೆಯು, ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜನಪ್ರಿಯವಾಗಿದ್ದರೂ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರು ನಿರ್ಣಾಯಕ ಅಂಶವಾಗಿದ್ದರು ಎಂದು ಹೇಳಿತು. ಅಲ್ಲದೆ, ಲೋಕಸಭಾ ಚುನಾವಣೆಗೂ ಮೊದಲು ಯಡಿಯೂರಪ್ಪ ಬಿಜೆಪಿಗೆ ಮರಳಿದ್ದರು. 2018ರ ವಿಧಾನಸಭಾ ಚುನಾವಣೆಯಲ್ಲಿ ಯಾರಿಗೂ ಬಹುಮತ ಸಿಗಲಿಲ್ಲ, ಕಾಂಗ್ರೆಸ್ ಮತ್ತು ಜೆಡಿಎಸ್ ಒಟ್ಟಾಗಿ ಸರ್ಕಾರ ರಚಿಸಿದವು. 2019ರ ಲೋಕಸಭಾ ಚುನಾವಣೆಯನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಒಟ್ಟಾಗಿ ಎದುರಿಸಿದರೂ, ತಲಾ ಒಂದು ಸ್ಥಾನದಲ್ಲಿ ಮಾತ್ರ ಗೆಲುವು ಕಂಡವು. ಆ ಚುನಾವಣೆಯಲ್ಲಿ ಬಿಜೆಪಿ ಅತ್ಯುತ್ತಮ ಸಾಧನೆ ತೋರಿತು.

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿತು. ಹಿಂದಿನ ಫಲಿತಾಂಶಗಳನ್ನು ಗಮನಿಸಿದರೆ, 2024ರ ಲೋಕಸಭಾ ಚುನಾವಣೆಯಲ್ಲಿ ಎರಡು ಪ್ರಮುಖ ಸ್ಪರ್ಧಾಳುಗಳ ನಡುವೆ ಮುಕ್ತ ಸ್ಪರ್ಧೆಯೊಂದು ನಡೆಯಲಿರುವುದು ಗೊತ್ತಾಗುತ್ತದೆ.

ಮೈತ್ರಿಯ ಹುಟ್ಟು: ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಬಿಜೆಪಿಯು ಚುನಾವಣಾ ಹಣಾಹಣಿಯನ್ನು ಕಾಂಗ್ರೆಸ್ ಜೊತೆಗಿನ ನೇರ ಸ್ಪರ್ಧೆಯನ್ನಾಗಿ ಪರಿವರ್ತಿಸಿದೆ. ಜೆಡಿಎಸ್ ಜೊತೆಗಿನ ಹೊಂದಾಣಿಕೆಯು ಬಿಜೆಪಿ ಪಾಲಿಗೆ ಒಂದು ಹಂತ ಕೆಳಕ್ಕೆ ಬಂದಂತಾಗಿದ್ದರೂ, ಅದನ್ನು ಎರಡು ದೃಷ್ಟಿಕೋನಗಳಿಂದ ಗಮನಿಸಬೇಕು. ಮೊದಲನೆಯದಾಗಿ, ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ಜೊತೆ ನೇರ ಚುನಾವಣಾ ಹಣಾಹಣಿ ಇರಲಿದೆ. ಹೀಗಾದಾಗ ಕಾಂಗ್ರೆಸ್ ಪಕ್ಷಕ್ಕೆ ಸವಾಲು ಒಡ್ಡುವುದಕ್ಕೆ ಸಹಾಯವಾಗುತ್ತದೆ. ಬಿಜೆಪಿಯು ದೇಶದಾದ್ಯಂತ ಕಾಂಗ್ರೆಸ್ಸನ್ನು ರಾಜಕೀಯವಾಗಿ ಗುರಿಯಾಗಿಸಿಕೊಂಡಿರುವ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿನ ಕಾರ್ಯತಂತ್ರವನ್ನು ಕಾಣಬೇಕು.

ಎರಡನೆಯದಾಗಿ, ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ, ಮಹತ್ವದ್ದಾಗಿರುವ ಒಕ್ಕಲಿಗ ಮತಗಳನ್ನು ಬುಟ್ಟಿಗೆ ಹಾಕಿಕೊಂಡು ಬಿಜೆಪಿಯು ಹಳೆ ಮೈಸೂರು ಭಾಗದಲ್ಲಿ ಸಂಘಟನೆಯನ್ನು ಬಲಪಡಿಸಿಕೊಳ್ಳುವ ಬಯಕೆಯನ್ನು ಹೊಂದಿದೆ. ಬಿಜೆಪಿಯು ಪ್ರಾದೇಶಿಕ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಂಡಾಗಲೆಲ್ಲ, ಆ ಪಕ್ಷದ ಮತಗಳು ಬಿಜೆಪಿ ಕಡೆ ಬಹಳ ಸುಲಭವಾಗಿ ಬಂದಿವೆ ಎಂಬುದನ್ನು ಹಿಂದಿನ ನಿದರ್ಶನಗಳು ಹೇಳುತ್ತವೆ. ಆದರೆ, ಬಿಜೆಪಿಯ ಮತಗಳು ಮೈತ್ರಿಪಕ್ಷಕ್ಕೆ ಎಲ್ಲ ಬಾರಿಯೂ ಸರಾಗವಾಗಿ ಹರಿದಿಲ್ಲ.

ಪ್ರಮುಖ ಪಕ್ಷಗಳಿಗೆ ಮಹತ್ವದ್ದು: ಕರ್ನಾಟಕದ ಚುನಾವಣಾ ಕಣವು ಮೂರೂ ಪಕ್ಷಗಳಿಗೆ ಬಹಳ ಮಹತ್ವದ್ದು. ಬಿಜೆಪಿಗೆ ‘ವಿಷನ್ 370’ ಗುರಿಯನ್ನು ಸಾಧಿಸಲು ಕರ್ನಾಟಕದಲ್ಲಿ ಸ್ಥಾನಗಳನ್ನು ಉಳಿಸಿಕೊಳ್ಳುವುದು ಮಹತ್ವದ್ದಾಗಿದೆ. ಕಾಂಗ್ರೆಸ್ಸಿಗೆ ಕರ್ನಾಟಕದಲ್ಲಿ ಬಿಜೆಪಿಗೆ ಎದುರಾಗಿ ಒಳ್ಳೆಯ ಸ್ಪರ್ಧೆ ಒಡ್ಡುವುದು ರಾಜ್ಯದಲ್ಲಿನ ಸರ್ಕಾರದ ಭವಿಷ್ಯದ ದೃಷ್ಟಿಯಿಂದ ಮಹತ್ವದ್ದು. ಜೆಡಿಎಸ್ ಪಕ್ಷವು ಈ ಚುನಾವಣೆಯನ್ನು ಅಳಿವು-ಉಳಿವಿನ ಪ್ರಶ್ನೆಯಾಗಿ ಸ್ವೀಕರಿಸಿದೆ. ಹೀಗಾಗಿ, ಈ ಲೋಕಸಭಾ ಚುನಾವಣೆಯ ಫಲಿತಾಂಶವು ರಾಜ್ಯದ ರಾಜಕಾರಣದ ಮೇಲೆ ದೀರ್ಘಾವಧಿಯ ಪರಿಣಾಮವನ್ನು ಬೀರಲಿದೆ ಎಂಬುದು ಸ್ಪಷ್ಟ.


ಪ್ರಮುಖ ಪಕ್ಷಗಳ ಕಾರ್ಯತಂತ್ರ: ಬಿಜೆಪಿ ನಾಲ್ಕು ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ಚುನಾವಣೆ ಎದುರಿಸುವ ಸಾಧ್ಯತೆ ಇದೆ. ನರೇಂದ್ರ ಮೋದಿ ಅವರ ಹೆಸರು, ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧ ಆಕ್ರಮಣಕಾರಿ ನಿಲುವು, ರಾಷ್ಟ್ರವ್ಯಾಪಿಯಾಗಿ ತಾನು ಹೇಳುತ್ತಿರುವ ಸಂಗತಿಗಳನ್ನು ಇಲ್ಲಿಯೂ ಉಲ್ಲೇಖಿಸುವುದು ಹಾಗೂ ರಾಮ ಮಂದಿರ ಆ ವಿಷಯಗಳು. ಈ ವಿಷಯಗಳಲ್ಲಿ ಯಾವುದಕ್ಕೆ ಎಷ್ಟು ಆದ್ಯತೆಯನ್ನು ಬಿಜೆಪಿ ನೀಡಲಿದೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಿದೆ.

ಕಾಂಗ್ರೆಸ್ ಪಕ್ಷವು ಸ್ಥಳೀಯ ಸಂಗತಿಗಳನ್ನು ಮುಂದಿರಿಸಿಕೊಂಡು ಚುನಾವಣೆಯನ್ನು ಎದುರಿಸಲಿದೆ ಎಂಬುದು ಸ್ಪಷ್ಟ. ರಾಜ್ಯವನ್ನು ಗುರಿಯಾಗಿಸಿಕೊಂಡು ಕೇಂದ್ರವು ಎಸಗುತ್ತಿರುವ ತಾರತಮ್ಯದ ವಿರುದ್ಧ ಮುಖ್ಯಮಂತ್ರಿಯವರು ಮೊಳಗಿಸಿರುವ ಕಹಳೆಯು ಕಾಂಗ್ರೆಸ್ಸಿನ ಪ್ರಮುಖ ವಿಷಯವಾಗಿರುತ್ತದೆ ಎಂಬಂತೆ ಕಾಣುತ್ತಿದೆ. ಐದು ಗ್ಯಾರಂಟಿಗಳ ವಿಚಾರವಾಗಿ ಜನಸಾಮಾನ್ಯರಲ್ಲಿ ಪೂರಕವಾದ ಭಾವನೆಯೊಂದನ್ನು ಬೆಳೆಸಲು ಪಕ್ಷವು ಹೆಚ್ಚಿನ ಆದ್ಯತೆ ನೀಡಲಿದೆಯೇ ಎಂಬುದನ್ನು ಗಮನಿಸಬೇಕಿದೆ. ಮೊದಲನೆಯ ವಿಷಯಕ್ಕಿಂತ ಎರಡನೆಯ ವಿಷಯ ಹೆಚ್ಚು ಶಕ್ತಿಯುತವಾದುದು ಎಂದು ಅನಿಸುತ್ತದೆ.

ಅಭ್ಯರ್ಥಿಗಳ ಬದಲಾವಣೆ: ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಅಭ್ಯರ್ಥಿಗಳ ಆಯ್ಕೆಯಲ್ಲಿ ಬಹಳ ಬದಲಾವಣೆಗಳನ್ನು ತರಬಹುದು. ಬಿಜೆಪಿಯು ಹಲವರನ್ನು ಬದಲಾಯಿಸಲಿದೆ ಎಂಬ ಮಾತುಗಳು ಈಗಾಗಲೇ ಇವೆ. 2019ರಲ್ಲಿ ಕಣಕ್ಕೆ ಇಳಿದಿದ್ದ ಅಭ್ಯರ್ಥಿಗಳ ಪೈಕಿ ಯಾರನ್ನೆಲ್ಲ ಅಭ್ಯರ್ಥಿಗಳನ್ನಾಗಿ ಮುಂದುವರಿಸಬೇಕು ಎಂಬ ವಿಚಾರದಲ್ಲಿ ಕಾಂಗ್ರೆಸ್ಸಿನಲ್ಲಿ ವಿಸ್ತೃತ ಚರ್ಚೆಗಳು ನಡೆದಿವೆ. ಜೆಡಿಎಸ್ ಪಾಲಿಗೆ ಇದು ಪಕ್ಷವು ಎಷ್ಟು ಸ್ಥಾನಗಳಲ್ಲಿ ಕಣಕ್ಕೆ ಇಳಿಯಲಿದೆ ಎಂಬುದನ್ನು ಆಧರಿಸಿರಲಿದೆ.

ಎಲ್ಲ ಪಕ್ಷಗಳಲ್ಲಿ ಕಾಣುತ್ತಿರುವ ಒಂದು ಪರಿವರ್ತನೆ ಬಹಳ ಸ್ಪಷ್ಟವಾಗಿದೆ. ಮೂರೂ ಪಕ್ಷಗಳಲ್ಲಿನ ಅಭ್ಯರ್ಥಿಗಳು ರಾಷ್ಟ್ರ ರಾಜಕಾರಣ ಪ್ರವೇಶಿಸುವುದಕ್ಕಿಂತಲೂ ರಾಜ್ಯದ ರಾಜಕಾರಣದಲ್ಲಿ ಮುಂದುವರಿಯಲು ಹೆಚ್ಚು ಆಸ್ಥೆ ವಹಿಸುತ್ತಿದ್ದಾರೆ. ಸರ್ಕಾರದಲ್ಲಿ ಪ್ರಮುಖ ಹುದ್ದೆಗಳು ಸಿಗಬಹುದು ಎಂಬ ಭರವಸೆ ಇಲ್ಲದಿದ್ದರೆ ಅಥವಾ ವಿರೋಧ ಪಕ್ಷದಲ್ಲಿ ಪ್ರಮುಖ ಜವಾಬ್ದಾರಿಗಳು ಸಿಗಬಹುದು ಎಂಬ ಭರವಸೆ ಮೂಡದಿದ್ದಲ್ಲಿ ಅವರು ಲೋಕಸಭಾ ಚುನಾವಣೆಯ ಕಣಕ್ಕೆ ಇಳಿಯಲು ಮನಸ್ಸು ಮಾಡುತ್ತಿಲ್ಲ. ರಾಜ್ಯದ ಸಂಸದರ ಕಾರ್ಯಕ್ಷಮತೆಯ ಬಗ್ಗೆ ಈಚೆಗೆ ನಡೆದ ಒಂದು ಮೌಲ್ಯಮಾಪನವು ಸದನದಲ್ಲಿ ಅವರು ಬಹಳ ಸೀಮಿತ ಪ್ರಮಾಣದಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ತೋರಿಸಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಸ್ಪರ್ಧೆಯು ಚುರುಕು ಪಡೆದುಕೊಳ್ಳುತ್ತಿದೆ. ಮುಂದಿನ ಎರಡು ತಿಂಗಳು ರಾಜ್ಯದಲ್ಲಿ ಬಹಳ ತುರುಸಿನ ರಾಜಕೀಯ ಚಟುವಟಿಕೆಗಳು ನಡೆಯಲಿವೆ.



ಚುರುಮುರಿ



ತಿಂಡಿ 24/7

● ನಾರಾಯಣ ರಾಯಚೂರ್

‘ರೀ... ಬೆಂಗಳೂರ್‌ನಲ್ಲಿ ಇರೋಷ್ಟು ವೆರೈಟಿ ಹೋಟೆಲ್‌ಗಳು ಭಾರತದ ಯಾವ ನಗರದಲ್ಲೂ ಇಲ್ಲವಂತೆ ರೀ! ಸೌತ್ ಇಂಡಿಯನ್ನು, ನಾರ್ತ್ ಇಂಡಿಯನ್ನು, ಚೈನೀಸು... ಏನು ಕೇಳಿದ್ರೆ ಅದು, ಕುಳಿತು ತಿನ್ನೋ ಹೋಟ್ಲು, ನಿಂತು ತಿನ್ನೋ ದರ್ಶಿನಿಗಳು ಜೊತೆಗೆ ಸಜ್ಜನರಾವ್ ಸರ್ಕಲ್‌ನಲ್ಲಿ ‘ಈಟ್ ಸ್ಟ್ರೀಟ್’ ಬರ್ತಾ ಇದೆ. ಅಷ್ಟೇಅಲ್ಲ, ತಿಂಡಿಪೋತರಿಗೆ ಇನ್ನೊಂದು ಬಂಪರ್ ಸುದ್ದಿ- ಹೊಸ ಬಜೆಟ್ ಪ್ರಕಾರ ಹೋಟೆಲ್‌ಗಳನ್ನ ರಾತ್ರಿ 1 ಗಂಟೆವರೆಗೂ ತೆರೆಯೋದಕ್ಕೆ ಅನುಮತಿಯನ್ನೂ ಕೊಡಲಾಗಿದೆಯಂತೆ’.

‘ಸರಿ ಬಿಡಿ, 1 ಗಂಟೆವರೆಗೂ ಹೋಟ್ಲು, ಆಮೇಲೆ ನಾಲಕ್ಕು ಗಂಟೆ ಅಷ್ಟೊತ್ತಿಗೆ ಸರ್ಕಲ್‌ಗಳಲ್ಲಿ ಇಡ್ಲಿ, ವಡೆ, ದೋಸೆ ಸಮಾರಾಧನೆ, ಅಂತೂ 24/7 ತಿಂಡಿಯ ರಾಜ್ಯ ಅಂತಲೂ ಕರೆಸಿಕೊಳ್ಳಬಹುದು’.

‘ಹಸಿವುಮುಕ್ತ ರಾಜ್ಯ’ ಅಂತ ಫ್ಲೆಕ್ಸ್‌ಗಳಲ್ಲಿ, ಜಾಹೀರಾತುಗಳಲ್ಲಿ ನೋಡ್ತಾನೇ ಇರ್ತೀವಲ್ಲ. ಮೊನ್ನೆ ಹೋಟೆಲ್‌ಗಳ ಬಗ್ಗೆನೇ ಇನ್ನೂ ಒಂದು ಸುದ್ದಿ ಓದ್ತಾಯಿದ್ದೆ. ಇನ್ಮೇಲೆ ಹೋಟೆಲ್‌ಗಳಲ್ಲಿ ಹರಟೆ ಹೊಡೀತಾ, ಕಾಲಹರಣ ಮಾಡೋ ಹಾಗಿಲ್ವಂತೆ. ನೀವೂ ಆ ಪಾರ್ಟಿ, ಈ ಪಾರ್ಟಿ, ಕಿಟ್ಟಿ ಪಾರ್ಟಿ ಅಂತ ಟೈಮ್ ವೇಸ್ಟ್ ಮಾಡೋ ಹಂಗಿಲ್ಲ. ಕೆಲವರಂತೂ ಬೈ-ಟು-ಕಾಫಿ ತಗೊಂಡು ಬಾಯಿತುಂಬಾ ಹರಟುತ್ತಿರ್ತಾರೆ, ಹಾಗೆ ಮಾಡೋಹಾಗಿಲ್ಲ’.

‘ಎರಡು ಇಡ್ಲಿ- 12 ನಿಮಿಷ, ವಡೆ- 8 ನಿಮಿಷ, ದೋಸೆ- 16 ನಿಮಿಷ ಅಂತೆಲ್ಲ ತಿಂಡಿ ದರದ ಬೋರ್ಡ್‌ನಲ್ಲೇ ಒಂದು ತಿಂಡಿ ತಿನ್ನೋಕೆ ಇಂತಿಷ್ಟು ಸಮಯಾವಕಾಶ ಅಂತ ಹಾಕಿಬಿಡ್ತಾರೇನೊ’.

‘ಬೇಗ ತಿನ್ನಿ, ತಿನ್ನಬೇಕೆನ್ನುವವರಿಗೆ ಜಾಗ ಬಿಟ್ಟು ಕೊಡಿ- ಇನ್ನೂ ಬಹಳಷ್ಟು ಜನ ವೇಟ್ ಮಾಡುತ್ತಿದ್ದಾರೆ’ ಅಂತಲೂ ಬೋರ್ಡ್ ಹಾಕಬಹುದು’.

‘ನಿಧಾನವಾಗಿ ತಿನ್ನಿ, ನಿಧಾನವಾಗಿ ಊಟ ಮಾಡಿ ಅಂತ ಹೇಳ್ತಿದ್ದ ನಾವು, ಇನ್ಮೇಲೆ ಬೇಗ ಬೇಗ ತಿನ್ನೋದನ್ನ ಅಭ್ಯಾಸ ಮಾಡ್ಕೊಬೇಕು. ಬ್ರೇಕ್‌ಫಾಸ್ಟನ್ನ ಫಾಸ್ಟ್ ಆಗಿ ತಿನ್ನೋರಿಗೆ ಒಂದು ಜಾಮೂನ್ ಉಚಿತ ಅಂತನ್ನೊ ಆಫರ್ರೂ ಬರಬಹುದು!’

ಸಂಗತ

ಸಾಂಸ್ಕೃತಿಕ ಹೊರೆ ಮತ್ತು ರಾಜಕೀಯ ಲಾಭ

ಅಧಿಕಾರ ರಾಜಕಾರಣದ ಅಸೂಕ್ಷ್ಮ ನಡೆಯು ಸಮಾಜದ ಎಲ್ಲ ಸ್ತರಗಳಿಗೂ ವ್ಯಾಪಿಸಿದ್ದು, ಅವು ಮೂಲ ಸ್ಥಾಯಿ ಸ್ವರೂಪವನ್ನು ಕಳೆದುಕೊಳ್ಳುವಂತೆ ಮಾಡಿದೆ

● ನಾ.ದಿವಾಕರ

ಸಮಕಾಲೀನ ಭಾರತದ ರಾಜಕೀಯ ಪಲ್ಲಟಗಳ ಹಿನ್ನೆಲೆಯಲ್ಲಿ ನೋಡಿದಾಗ, ಇಲ್ಲಿನ ಅಧಿಕಾರ ರಾಜಕಾರಣವು ಸಂಪೂರ್ಣವಾಗಿ ಸಾಂಸ್ಕೃತಿಕ ನೆಲೆಯಲ್ಲಿ ನಿರ್ವಹಿಸಲ್ಪಡುತ್ತಿರುವುದು ಸ್ಪಷ್ಟವಾಗುತ್ತದೆ. ಜೊತೆಗೇ ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ನಂತರದಲ್ಲಿ ಧಾರ್ಮಿಕ ಅಸ್ಮಿತೆಗಳು ಹಾಗೂ ಮತಾಚರಣೆಯ ವಿಭಿನ್ನ ಆಯಾಮಗಳು ಚುನಾವಣಾ ರಾಜಕಾರಣವನ್ನೂ ನಿರ್ದೇಶಿಸುವ ಲಕ್ಷಣಗಳು ಕಾಣುತ್ತಿವೆ. ಸಾಂಸ್ಕೃತಿಕ ರಾಜಕಾರಣ ತನ್ನ ಪರಾಕಾಷ್ಠೆ ತಲುಪಿದೆ. ಸಾಹಿತ್ಯ, ಸಂಗೀತ, ಚಲನಚಿತ್ರರಂಗ, ರಂಗಭೂಮಿಯಂತಹ ಕಲಾ ಪ್ರಕಾರಗಳನ್ನೂ ಆವರಿಸಿರುವ ಈ ರಾಜಕೀಯ ಲಕ್ಷಣವು ಭಾರತದ ಸಾಂಸ್ಕೃತಿಕ ಭೂನಕ್ಷೆಯನ್ನೇ ಬದಲಾಯಿಸುವ ಸಾಧ್ಯತೆಗಳು ನಿಚ್ಚಳವಾಗಿವೆ.

ಇಂತಹ ಸನ್ನಿವೇಶದಲ್ಲಿ ಭಾರತದ ಬಹುಸಾಂಸ್ಕೃತಿಕ ನೆಲೆಗಳನ್ನು ಪ್ರತಿನಿಧಿಸುವ ಮತ್ತು ಬಲವಾಗಿ ಪ್ರತಿಪಾದಿಸುವ ಯಾವುದೇ ರಾಜಕೀಯ ಪಕ್ಷದ ಮುಂದೆ ಇರುವ ಬಹುದೊಡ್ಡ ಜವಾಬ್ದಾರಿ ಎಂದರೆ, ಈ ದೇಶದ ಬಹುಧರ್ಮೀಯ-ಬಹುತ್ವದ ಸಾಂಸ್ಕೃತಿಕ ಸಮನ್ವಯವನ್ನು ಕಾಪಾಡಿಕೊಳ್ಳುವುದು. ಈ ಜವಾಬ್ದಾರಿಯನ್ನು ಮರೆತು ಅಥವಾ ನಿರ್ಲಕ್ಷಿಸಿ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದು ಆತ್ಮದ್ರೋಹ ಆಗುತ್ತದೆ. ಏಕೆಂದರೆ, ಸಾಮಾಜಿಕ ನ್ಯಾಯಕ್ಕಾಗಿ ನಿರಂತರ ಹೋರಾಡುತ್ತಲೇ ಇರುವ ಕೋಟ್ಯಂತರ ಸಂಖ್ಯೆಯ ತಳಸಮುದಾಯದವರಿಗೆ ಬಹುತ್ವವೇ ಪ್ರಧಾನ ತಳಹದಿಯಾಗಿರುತ್ತದೆ. ಭಾರತದ ಸಂವಿಧಾನ ಅಪೇಕ್ಷಿಸುವ ಸ್ವಾತಂತ್ರ್ಯ-ಸಮಾನತೆ-ಭ್ರಾತೃತ್ವ, ಈ ಮೂರೂ ಉನ್ನತಾದರ್ಶಗಳ ತಾತ್ವಿಕ ಮೂಲ ತಳಸಮಾಜದ ಸಾಂಸ್ಕೃತಿಕ ನೆಲೆಗಳಲ್ಲೇ ಅಡಗಿದೆ.

ಹಾಗಾಗಿ, ಸಾಮಾಜಿಕ ನ್ಯಾಯ ಮತ್ತು ಸಾಂವಿಧಾನಿಕ ನಿಷ್ಠೆಯನ್ನು ಪ್ರತಿಪಾದಿಸುವ ಒಂದು ಚುನಾಯಿತ ಸರ್ಕಾರಕ್ಕೆ ಈ ಬಹುಸಾಂಸ್ಕೃತಿಕ ತಳಪಾಯವನ್ನು ಮತ್ತಷ್ಟು ಬಲಪಡಿಸುವುದು ಮುಖ್ಯ ಕಾರ್ಯಸೂಚಿಯಾಗಿ ಇರಬೇಕಾಗುತ್ತದೆ. ಸಂವಿಧಾನ ಪೀಠಿಕೆಯ ಪಠಣ ಅಥವಾ ಸಂವಿಧಾನ ಜಾಗೃತಿ ಜಾಥಾದಂತಹ ಕಾರ್ಯಕ್ರಮಗಳು ಆಕರ್ಷಣೀಯವಾಗಿ ಕಾಣುತ್ತವಾದರೂ ಈ ಅಭಿಯಾನಗಳು ಅಂತಿಮವಾಗಿ ಕಟ್ಟಕಡೆಯ ವ್ಯಕ್ತಿಯನ್ನೂ ತಲುಪುವಂತೆ ಎಚ್ಚರ ವಹಿಸಬೇಕಾದದ್ದು ಸರ್ಕಾರದ ಆದ್ಯತೆಯಾಗಬೇಕು. ಸಾಮಾನ್ಯವಾಗಿ ತಳಸಮುದಾಯಗಳಿಗೆ ಅಥವಾ ಮಹಿಳಾ ಸಂಕುಲಕ್ಕೆ ಸಾಂವಿಧಾನಿಕ ನಿಯಮಗಳ ಅನುಸಾರ ಕಲ್ಪಿಸಲಾಗುವ ಸಮಾನ ಅವಕಾಶಗಳನ್ನೇ ‘ಸಮಾನತೆ’ ಎಂದು ಬಿಂಬಿಸಲಾಗುತ್ತದೆ. ಆಡಳಿತಾತ್ಮಕವಾಗಿ, ಶಾಸನಬದ್ಧತೆಯಿಂದ ಕಲ್ಪಿಸಲಾಗುವ ‘ಸಮಾನ ಅವಕಾಶಗಳು’ ಸಮಾನತೆಯೆಡೆಗೆ ಸಾಗಲು ನೆರವಾಗುವ ಸಾಧನಗಳಷ್ಟೇ ಎನ್ನುವುದು ವಾಸ್ತವ.

ಈ ಸಮಾನ ಅವಕಾಶಗಳು ಕಟ್ಟಕಡೆಯ ವ್ಯಕ್ತಿಗೆ ಅಥವಾ ಅತ್ಯಂತ ನಿಕೃಷ್ಟವಾಗಿ ಕಾಣಲಾಗುವ ಸಮುದಾಯಗಳಿಗೆ, ಅತ್ಯಂತ ದಯನೀಯ ಸ್ಥಿತಿಯಲ್ಲಿ ಇರುವ ಸಮಾಜಕ್ಕೆ ತಲುಪುವಂತೆ ಮಾಡಲು ತಳಮಟ್ಟದ ಸಾಂಸ್ಕೃತಿಕ ನೆಲೆಗಳನ್ನು ಬಲಪಡಿಸಬೇಕಾಗುತ್ತದೆ. ಚಿತ್ರಕಲೆ, ದೃಶ್ಯಕಲೆ, ಸಾಹಿತ್ಯ, ಸಂಗೀತ, ರಂಗಭೂಮಿ, ಚಲನಚಿತ್ರರಂಗ ಹಾಗೂ ಇತರ ಸಂವಹನ ಸಾಧನಗಳು ತಮ್ಮದೇ ಆದ ಸೃಜನಶೀಲ ಪ್ರಯತ್ನಗಳ ಮೂಲಕ ಜನಸಾಮಾನ್ಯರಲ್ಲಿ ಸಮನ್ವಯ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಲು ನೆರವಾಗುತ್ತವೆ. ಹಿಂದಿನ ಮೂರು ದಶಕಗಳ ಸಾಂಸ್ಕೃತಿಕ ರಾಜಕಾರಣದ ಪರಿಣಾಮ ಈ ಎಲ್ಲ ವಲಯಗಳೂ ಇಂದು ಬಹುಸಂಖ್ಯಾವಾದದ ರಾಜಕಾರಣದಿಂದ ಪ್ರಭಾವಿತವಾಗಿ ತಮ್ಮ ಮೂಲ ಸ್ಥಾಯಿ ಸ್ವರೂಪವನ್ನು ಕಳೆದುಕೊಂಡಿವೆ. ಈ ವಲಯಗಳನ್ನು ಪ್ರತಿನಿಧಿಸುವ ವಿದ್ವತ್ ವಲಯವೂ ಸೈದ್ಧಾಂತಿಕವಾಗಿ ಇಬ್ಭಾಗವಾಗಿದೆ. ಇಲ್ಲಿರಬೇಕಾದ ಸೃಜನಶೀಲತೆಯು ಹಂತಹಂತವಾಗಿ ಶಿಥಿಲಗೊಳ್ಳುತ್ತಿದೆ.

ಈ ಸನ್ನಿವೇಶದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಾಂವಿಧಾನಿಕ ಬದ್ಧತೆಯನ್ನು ಪ್ರತಿಪಾದಿಸುವ ಒಂದು ಚುನಾಯಿತ ಸರ್ಕಾರ ತನ್ನ ಸಾಂಸ್ಕೃತಿಕ ಜವಾಬ್ದಾರಿಯನ್ನು ಅರಿತು ಹೆಜ್ಜೆ ಇಡಬೇಕಾಗುತ್ತದೆ. ಅಧಿಕಾರ ರಾಜಕಾರಣದ ಚೌಕಟ್ಟುಗಳನ್ನು ಕಾಪಾಡಿಕೊಳ್ಳಲು ಹಾಗೂ ಚುನಾವಣಾ ರಾಜಕಾರಣದ ಅವಶ್ಯಕತೆಗಳನ್ನು ನೀಗಿಸಲು ನೆರವಾಗುವ ವಿವಿಧ ಸ್ತರಗಳ-ಕ್ಷೇತ್ರಗಳ ಅಧಿಕಾರ ಕೇಂದ್ರಗಳತ್ತ ಗಮನಹರಿಸುವುದಕ್ಕೆ ರಾಜಕೀಯ ಒತ್ತಾಸೆಗಳೂ ಕಾರಣವಾಗಿರಬಹುದು. ಹಾಗಾಗಿಯೇ ನಿಗಮ-ಮಂಡಳಿಗಳ ಮುಖ್ಯಸ್ಥರನ್ನು ನೇಮಿಸುವ ಪ್ರಕ್ರಿಯೆಗೆ ಆದ್ಯತೆ ನೀಡಲಾಗಿದೆ. ಆದರೆ ಇದಕ್ಕೂ ಮೀರಿದ ನೈತಿಕ ಜವಾಬ್ದಾರಿ ಸಾಂಸ್ಕೃತಿಕ ವಲಯದಲ್ಲಿ ಕಾಣಬೇಕಲ್ಲವೇ? ರಾಜ್ಯ ಸರ್ಕಾರ ಬಹುಶಃ ತನ್ನ ಈ ಜವಾಬ್ದಾರಿಯನ್ನು ಮರೆತಿದೆ ಎನ್ನಿಸುತ್ತದೆ.



ಸಾಹಿತ್ಯ, ಲಲಿತಕಲೆ, ದೃಶ್ಯಕಲೆ, ರಂಗಭೂಮಿಯನ್ನು ಒಳಗೊಂಡ ಸಾಂಸ್ಕೃತಿಕ ನೆಲೆಗಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಉದ್ದೀಪನಗೊಳಿಸುವ ಮೂಲಕ ಮಾತ್ರವೇ ಈ ಹೊಣೆಯನ್ನು ನಿರ್ವಹಿಸಲು ಸಾಧ್ಯ. ಆದರೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಒಂಬತ್ತು ತಿಂಗಳ ಆಡಳಿತದ ನಂತರವೂ ಈ ಬಗ್ಗೆ ಗಮನಹರಿಸಿದಂತಿಲ್ಲ. ಸಾಹಿತ್ಯವಷ್ಟೇ ಅಲ್ಲದೆ ಇತರ ಎಲ್ಲ ಸಾಂಸ್ಕೃತಿಕ ಅಕಾಡೆಮಿಗಳನ್ನು, ರಂಗಸಮಾಜ ಮತ್ತು ರಂಗಾಯಣಗಳನ್ನು ಪ್ರಜಾತಂತ್ರದ ಮೌಲ್ಯಗಳ ನೆಲೆಯಲ್ಲಿ ಮರುಕಟ್ಟುವ ಅವಶ್ಯಕತೆಯನ್ನು ಮನಗಂಡಿದ್ದರೂ, ಸರ್ಕಾರವು ಈ ಕ್ಷೇತ್ರದಲ್ಲಿ ಅಗತ್ಯವಾಗಿ ಕೈಗೊಳ್ಳಬೇಕಿದ್ದ ಉಪಕ್ರಮಗಳನ್ನು ನಿರ್ಲಕ್ಷಿಸಿರುವುದು ಅಸೂಕ್ಷ್ಮ ನಡೆ ಎಂದೇ ಹೇಳಬೇಕಿದೆ.

ಇಲ್ಲಿ ಚುನಾವಣಾ ಲಾಭ-ನಷ್ಟಗಳಿಗಿಂತಲೂ ಮುಖ್ಯವಾಗುವುದು ತಳಮಟ್ಟದ ಸಮಾಜದಲ್ಲಿ ಶಿಥಿಲವಾಗುತ್ತಿರುವ ಬಹುಸಾಂಸ್ಕೃತಿಕ ಮೌಲ್ಯಗಳನ್ನು ಪುನರುಜ್ಜೀವನಗೊಳಿಸಬೇಕಾದ ನೈತಿಕ ಜವಾಬ್ದಾರಿ. ಇನ್ನಾದರೂ ಸರ್ಕಾರ ಈ ಕುರಿತು ಯೋಚಿಸುವುದೇ?

ವಾಚಕರ ವಾಣಿ

ಮಹತ್ವಾಕಾಂಕ್ಷೆಗೆ ತಕ್ಕಂತೆ ಲಭ್ಯವಾಗದ ಸ್ಥಾನ

ಇತ್ತೀಚೆಗೆ ನಿಧನರಾದ ನಟ, ರಾಜಕಾರಣಿ ಕೆ.ಶಿವರಾಂ ಅವರನ್ನು ಕನ್ನಡಿಗರು ಹೆಮ್ಮೆಯಿಂದ ನೆನೆಯಲೇಬೇಕು. ಅವರು ತುಂಬ ಮಹತ್ವಾಕಾಂಕ್ಷಿಯಾಗಿದ್ದರು. ಕನ್ನಡದಲ್ಲಿಯೇ ಯುಪಿಎಸ್‌ಸಿ ಪರೀಕ್ಷೆ ಬರೆದು, ಉತ್ತೀರ್ಣರಾಗಿ ಐಎಎಸ್ ಅಧಿಕಾರಿಯಾದ ಮೊದಲಿಗರು ಎನಿಸಿಕೊಂಡರು. ಕನ್ನಡದ ಮಟ್ಟಿಗೆ ಇದು ನಿಜಕ್ಕೂ ಹೆಮ್ಮೆಯ ಸಂಗತಿ. ಐಎಎಸ್‌ನಂಥ ಸ್ಪರ್ಧಾತ್ಮಕ ಪರೀಕ್ಷೆಗೆ ಇಂಗ್ಲಿಷ್ ಭಾಷಾ ಪರಿಣತಿ ಬೇಕೇ ಬೇಕು ಎಂಬ ವಾತಾವರಣ ಇದ್ದಾಗ, ಅದಕ್ಕೆ ಸಡ್ಡು ಹೊಡೆದು, ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆದು ಯಶಸ್ವಿಯಾಗಿ, ಕನ್ನಡ ಭಾಷಾ ಸಾಮರ್ಥ್ಯವನ್ನು ಎತ್ತಿಹಿಡಿದವರು ಅವರು. ಆದರೆ ರಾಜಕೀಯದಲ್ಲಿ ಶಿವರಾಂ ಅವರನ್ನು ಕೆಲವು ಪಕ್ಷಗಳು ಬಳಸಿಕೊಂಡವೇ ವಿನಾ ಅವರ ಮಹತ್ವಾಕಾಂಕ್ಷೆಗೆ ತಕ್ಕಂತೆ ಅವಕಾಶ ನೀಡಲಿಲ್ಲ. ರಾಜಕೀಯ ಒಳಸುಳಿಗಳಲ್ಲಿ ಅವರಿಗೆ ಅನ್ಯಾಯವಾಯಿತು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪರೀಕ್ಷೆ: ಧೈರ್ಯವೇ ಮೂಲಮಂತ್ರವಾಗಲಿ

ಇದು, ಶಾಲಾ ಕಾಲೇಜು ಮಕ್ಕಳಿಗೆ ಪರೀಕ್ಷೆಯ ಕಾಲ. ಈಗಾಗಲೇ ಕೆಲವು ಪರೀಕ್ಷೆಗಳು ಪ್ರಾರಂಭವಾಗಿವೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಓದುವ ಮಕ್ಕಳ ಮನಸ್ಸಿನಲ್ಲಿ ಸಾಮಾನ್ಯವಾಗಿ ಪರೀಕ್ಷೆಯ ಕುರಿತು ಭಯ, ದುಗುಡ, ಆತಂಕ, ಒತ್ತಡ ನಿರ್ಮಾಣವಾಗಿರುತ್ತದೆ. ಪೋಷಕರು ಅವುಗಳನ್ನು ನಿವಾರಿಸಬೇಕು. ಮಕ್ಕಳಲ್ಲಿ ವಿಶ್ವಾಸ ತುಂಬಬೇಕು. ಸೋಲು- ಗೆಲುವು, ಯಶಸ್ಸು- ಹಿನ್ನಡೆಯ ಕುರಿತು ಮಕ್ಕಳು ಸದೃಢ ಮನಸ್ಸು ಹೊಂದಿರಬೇಕು.

ಬದುಕಿಗೆ ಪರೀಕ್ಷೆಯ ಅಂಕಗಳೇ ಮಾನದಂಡ ಎನ್ನುವ ರೀತಿಯಲ್ಲಿ ಪೋಷಕರು ಮಕ್ಕಳನ್ನು ಬೆಳೆಸಬಾರದು. ಧೈರ್ಯ ಮತ್ತು ತಾಳ್ಮೆ ಎಂಬ ಮೂಲಮಂತ್ರದೊಂದಿಗೆ ಅವರು ಪರೀಕ್ಷೆಯನ್ನು ಎದುರಿಸುವಂತೆ ಆಗಬೇಕು. ಒಂದು ವೇಳೆ ಪರೀಕ್ಷೆಯಲ್ಲಿ ನಿರೀಕ್ಷಿತ ಫಲಿತಾಂಶ ಲಭ್ಯವಾಗದಿದ್ದರೆ, ಹತಾಶರಾಗದೆ, ಪುಸ್ತಕದ ಪರೀಕ್ಷೆಗಿಂತಲೂ ಮಿಗಿಲಾಗಿ ಮುಂದೆ ಮೌಲ್ಯವರ್ಧಿತ ಬದುಕಿನ ಪರೀಕ್ಷೆ ಇದೆ ಎಂಬುದನ್ನು ಮಕ್ಕಳು ಮನಗಾಣುವಂತೆ ಆಗಬೇಕು.

ಮಲ್ಲಿಕಾರ್ಜುನ ತೇಲಿ, ಜಮಖಂಡಿ

ನಾಂದಿ!

ಒಂದು ಕಡೆ ಬಾಲರಾಮ
ಮತ್ತೊಂದು ಕಡೆ ಪ್ರಬುದ್ಧ ಕೃಷ್ಣ!
(ಆಬಾಲವೃದ್ಧಪ್ರಿಯರು)–
ಇಬ್ಬರನ್ನೂ ಪೂಜಿಸಿದ, ಧ್ಯಾನಿಸಿದ
ಪ್ರಧಾನಿ ಮುತ್ಸದ್ದಿ ಮೋದಿ
ಕೃತಾರ್ಥರೆನ್ನಬಹುದೆ?
ಅಂತೂ ಹಿಡಿದದ್ದು ಹೊಸ ಹಾದಿ!
(ಹಾಡಿದ್ದು ನಾಂದಿ).

ಸಿ.ಪಿ.ಕೆ., ಮೈಸೂರು

ನಿರ್ವಾಹಕರ ಬವಣೆ ತಪ್ಪಿಸಿ

ರಾಜ್ಯ ಕಾಂಗ್ರೆಸ್ ನೇತೃತ್ವದ ಸರ್ಕಾರದ ಗ್ಯಾರಂಟಿಗಳಲ್ಲಿ ಒಂದಾದ, ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಒದಗಿಸುವ ‘ಶಕ್ತಿ’ ಯೋಜನೆಯಿಂದ ಬಹಳಷ್ಟು ಮಹಿಳೆಯರಿಗೆ ಅನುಕೂಲವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ನಿಗದಿತ ಸ್ಥಳಕ್ಕೆ ಉಚಿತ ಟಿಕೆಟ್ ಪಡೆದ ಮಹಿಳೆಯರು ಕೆಲವೊಮ್ಮೆ ಮಧ್ಯದಲ್ಲೇ ಇಳಿಯಬೇಕಾಗಿ ಬರುತ್ತದೆ. ಆಗ ಅವರು ಅದನ್ನು ನಿರ್ವಾಹಕರ ಗಮನಕ್ಕೆ ತರಬೇಕಾಗುತ್ತದೆ. ಹಾಗೆ ಮಾಡದೇ ಅವರು ಇಳಿದುಹೋದಲ್ಲಿ, ಮಾರ್ಗಮಧ್ಯೆ ತಪಾಸಣಾ ತಂಡದವರೇನಾದರೂ ಬಂದು ತಪಾಸಣೆ ನಡೆಸಿದರೆ, ಟಿಕೆಟ್‌ಗಳು ತಾಳೆಯಾಗದೆ ಅವರು ನಿರ್ವಾಹಕರ ಮೇಲೆ ಕ್ರಮ ಜರುಗಿಸುತ್ತಾರೆ. ತಾನು ಮಾಡದ ತಪ್ಪಿಗೆ ನಿರ್ವಾಹಕ ಶಿಕ್ಷೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ಮಹಿಳಾ ಪ್ರಯಾಣಿಕರು ಹಾಗೂ ನಿರ್ವಾಹಕರಿಗೆ ತೊಂದರೆಯಾಗದ ರೀತಿಯಲ್ಲಿ ಸಾರಿಗೆ ಸಚಿವರು ಈ ಬಗ್ಗೆ ಸೂಕ್ತ ಆದೇಶ ಹೊರಡಿಸಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಚಲನಚಿತ್ರ ಅಕಾಡೆಮಿ: ರಾಜಕೀಯ ಪ್ರಭಾವ ಸಲ್ಲ

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರನ್ನಾಗಿ ಸಾಧು ಕೋಕಿಲ ಅವರನ್ನು ನೇಮಿಸಿರುವುದನ್ನು ತಿಳಿದು ಆಘಾತವಾಯಿತು. ಅಕಾಡೆಮಿಯು ನಿಗಮ ಅಥವಾ ಮಂಡಳಿ ಅಲ್ಲ. ಸಾಧು ಕೋಕಿಲ ಅವರು ಕೆಲವು ಚಿತ್ರಗಳನ್ನು ನಿರ್ದೇಶಿಸಿದ್ದಾರಾದರೂ ಮೂಲತಃ ಅವರು ಒಬ್ಬ ಹಾಸ್ಯನಟ. ಅಕಾಡೆಮಿಯ ಉದ್ದೇಶವಾದ ‘ಶಿಕ್ಷಣದಲ್ಲಿ ಸಿನಿಮಾ, ಸಿನಿಮಾದಲ್ಲಿ ಶಿಕ್ಷಣ’ಕ್ಕೂ ಅವರಿಗೂ ಸಂಬಂಧ ಇಲ್ಲ. ಹೀಗಾಗಿ, ಇದೊಂದು ಅಪಾರದರ್ಶಕ ರಾಜಕೀಯ ಉದ್ದೇಶದ ನೇಮಕ ಎಂದೇ ಹೇಳಬೇಕಾಗುತ್ತದೆ. ಅಕಾಡೆಮಿಗೆ ಅಧ್ಯಕ್ಷರಾಗಿ ನೇಮಕಗೊಂಡವರಲ್ಲಿ ಹೆಚ್ಚಿನವರು ತಾವು ಗುರುತಿಸಿಕೊಂಡಿದ್ದ ರಾಜಕೀಯ ಪಕ್ಷದ ವಕ್ತಾರರಂತೆಯೇ ವರ್ತಿಸಿದ್ದಾರೆ. ತಮ್ಮ ಕಡೆಯವರನ್ನು ಮೆರೆಸುವಂತಹ ಕಾರ್ಯಗಳಿಗೆ ಅಕಾಡೆಮಿಯನ್ನು ಬಳಸಿಕೊಂಡಿದ್ದಾರೆ.

ಒಟ್ಟಿನಲ್ಲಿ, ಅಕಾಡೆಮಿಯು ಹೀಗೆ ಪಕ್ಷಭೇದವಿಲ್ಲದೆ ರಾಜಕೀಯ ಪ್ರಭಾವಕ್ಕೆ ಒಳಗಾಗಿ ರೋಗಗ್ರಸ್ತ ಸ್ಥಿತಿ ತಲುಪಿದೆ. ಅಸ್ತಿತ್ವಕ್ಕೆ ಬಂದು 14 ವರ್ಷಗಳಾದರೂ ತನ್ನ ಉದ್ದೇಶದ ಹತ್ತಿರ ಕೂಡ ಹೋಗಲು ಅದಕ್ಕೆ ಸಾಧ್ಯವಾಗಿಲ್ಲ. ಎಂ.ಎಸ್. ಸತ್ಯು ಅವರು ಆಶಿಸಿದಂತೆ, ಈ ಕಾರ್ಯ ತಡವಾಗಿಯಾದರೂ ನಡೆದಿಲ್ಲ. ಇದಕ್ಕೆ ಕಾರಣವೆಂದರೆ, ಅಧ್ಯಕ್ಷರ ನೇಮಕಾತಿ ಪ್ರಕ್ರಿಯೆಗೆ ಸೂಕ್ತ ಮಾನದಂಡವೇ ಇಲ್ಲದಿರುವುದು. ಪಶ್ಚಿಮ ಬಂಗಾಳ, ಕೇರಳದಲ್ಲೂ ಇಂಥ ರಾಜಕೀಯ ನೇಮಕ ಇದೆಯಾದರೂ ಅಲ್ಲಿನ ಚಲನಚಿತ್ರಗಳು ಗಮನಸೆಳೆಯುತ್ತಿವೆ. ಕನ್ನಡ ಚಿತ್ರರಂಗ ಈಗ ದಕ್ಷಿಣ ಭಾರತದಲ್ಲೇ ಕೊನೆಯ ಸ್ಥಾನದಲ್ಲಿದೆ. ರಾಜಕೀಯದವರು ತಮ್ಮನ್ನು ಒಡೆಯದಂತೆ ಚಿತ್ರಪ್ರೇಮಿಗಳು ಎಚ್ಚರ ವಹಿಸಬೇಕಾಗಿದೆ. ಮುಖ್ಯಮಂತ್ರಿಯವರು ಈ ನೇಮಕಾತಿಯ ಬಗ್ಗೆ ಮರುಪರಿಶೀಲನೆ ನಡೆಸಬೇಕು. ಈ ಸಂಬಂಧದ ಆಕ್ಷೇಪಗಳನ್ನು ಆಲಿಸಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸಿಹಿ-ಖಾರ

ಅಂತೂ ಇಂತೂ
ಮಾಡಿತು ಸರ್ಕಾರ
ಜಾತಿ ಗಣತಿಯ ಸ್ವೀಕಾರ
ಒಬ್ಬೊಬ್ಬರದು ಒಂದೊಂದು
ರೀತಿಯ ಲೆಕ್ಕಾಚಾರ...
ಎನಿಸಲೂಬಹುದು
ಕೆಲವರಿಗೆ ಸಿಹಿ
ಹಲವರಿಗೆ ಖಾರ!

ಮ.ಗು.ಬಸವಣ್ಣ
ನಂಜನಗೂಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಾರ್ಚ್ 3 ವಿಶ್ವ ಶ್ರವಣ ದಿನ

ಎಲ್ಲರೂ ಇಲ್ಲಿ ಕೇಳಿ ಕೇಳಿಸಿಕೊಳ್ಳಲು ನೆರವಾಗಿ

ಪ್ರಜಾವಾಣಿ ವಾರ್ತೆ


ಇದೇ ಭಾನುವಾರದ ಮಾರ್ಚ್ 3ರಂದು ವಿಶ್ವ ಶ್ರವಣ ದಿನವನ್ನು ಆಚರಿಸಲಾಗುತ್ತದೆ. ಶ್ರವಣ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ದೊರೆತು, ಅವರೂ ಎಲ್ಲರಂತೆ ಕೇಳಿಸಿಕೊಳ್ಳುವಂತಾಗಬೇಕು ಎಂಬುದು ವಿಶ್ವ ಶ್ರವಣ ದಿನದ ಪ್ರಧಾನ ಉದ್ದೇಶ. 2024ನೇ ಸಾಲಿನ ವಿಶ್ವ ಶ್ರವಣ ದಿನಕ್ಕೆ, 'ಮನಃಸ್ಥಿತಿಯ ಬದಲಾವಣೆ'ಯನ್ನು ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಶ್ರವಣ ಸಮಸ್ಯೆಗೆ ಸಂಬಂಧಿಸಿದಂತೆ ಆ ಸಮಸ್ಯೆಯಿಂದ ಬಳಲುತ್ತಿರುವವರು, ಅವರ ಜತೆಗೆ ಇರುವವರು ಮತ್ತು ಸಮಾಜದಲ್ಲಿನ ಎಲ್ಲರ ಮನಸ್ಥಿತಿಯನ್ನು ಬದಲಿಸಬೇಕು ಎಂಬುದು ಈ ಬಾರಿಯ ಗುರಿ.

ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ ವಿಶ್ವದಾದ್ಯಂತ ಶ್ರವಣ ಸಮಸ್ಯೆಯಿಂದ ಬಳಲುತ್ತಿರುವವರಲ್ಲಿ 43 ಕೋಟಿಯಷ್ಟು ಜನರಿಗೆ ಈಗ ಚಿಕಿತ್ಸೆ ನೀಡಬೇಕಿದೆ. ಚಿಕಿತ್ಸೆ ನೀಡುವ ಮೂಲಕ ಅವರೂ ಎಲ್ಲರಂತೆ ಕೇಳಿಸಿಕೊಳ್ಳುವಂತೆ ಮಾಡಲು ಅವಕಾಶವಿದೆ. ಆದರೆ ಈ ಸಮಸ್ಯೆಯ ಬಗ್ಗೆ ಇರುವ ತಪ್ಪು ತಿಳಿವಳಿಕೆಗಳು ಮತ್ತು ಚಿಕಿತ್ಸೆಯ ಬಗ್ಗೆ ಅರಿವು ಇಲ್ಲದೇ ಇರುವ ಕಾರಣ ಅಷ್ಟು ಮಂದಿಗೆ ಚಿಕಿತ್ಸೆ ಕೊಡಿಸುವುದಕ್ಕೆ ತೊಡಕಾಗುತ್ತಿದೆ. ಇದು ಹೀಗೇ ಮುಂದುವರಿದರೆ 2050ರ ವೇಳೆಗೆ, ಹೀಗೆ ಚಿಕಿತ್ಸೆ ಅನಿವಾರ್ಯವಿರುವವರ ಸಂಖ್ಯೆ 70 ಕೋಟಿಗೆ ಏರಿಕೆಯಾಗಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ.

ವಿಶ್ವದಾದ್ಯಂತ ಶ್ರವಣ ಸಮಸ್ಯೆ ಎದುರಿಸುತ್ತಿರುವವರಲ್ಲಿ ಈಗಲೂ ಶೇ 80ರಷ್ಟು ಮಂದಿ ಯಾವುದೇ ರೀತಿಯ ಚಿಕಿತ್ಸೆ ತೆಗೆದುಕೊಳ್ಳುತ್ತಿಲ್ಲ. ಇದರಿಂದ ಶಿಕ್ಷಣ, ಕೆಲಸದ ಸ್ಥಳಗಳಲ್ಲಿ ಅವರ ಉತ್ಪಾದಕತೆಯನ್ನು ಕುಂಠಿತಗೊಂಡಿದೆ. ಅಂದಾಜುಗಳ ಪ್ರಕಾರ ಇದರಿಂದ ವಿಶ್ವದಾದ್ಯಂತ ವಾರ್ಷಿಕ ₹85 ಲಕ್ಷ ಕೋಟಿಯಷ್ಟು ನಷ್ಟ ಉಂಟಾಗುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

ಶ್ರವಣ ಸಮಸ್ಯೆಯು ಒಂದು ಆರೋಗ್ಯದ ಸಮಸ್ಯೆ ಅಷ್ಟೆ. ಅದು ಗೋಚರವಾಗದ ಅಂಗವೈಕಲ್ಯ. ಆದರೆ ಇದನ್ನು ಒಂದು ಮಾನಸಿಕ ಸಮಸ್ಯೆ ಎಂದು ನೋಡುವವರ ಪ್ರಮಾಣವೇ ಹೆಚ್ಚು. ಅಲ್ಲದೆ, ತಮಗೆ ಈ ಸಮಸ್ಯೆ ಇದೆ ಎಂದು ಹಲವರು ಹೇಳಿಕೊಳ್ಳಲೇ ಹಿಂಜರಿಯುತ್ತಾರೆ. ಇದರಿಂದ ಅವರು ಮನೆಯಲ್ಲಿ, ಕೆಲಸದ ಸ್ಥಳಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಬೆರೆಯಲು ಸಾಧ್ಯವಾಗುವುದಿಲ್ಲ. ಅಲ್ಲದೆ ಇಂತಹ ಸಮಸ್ಯೆ ಎದುರಿಸುತ್ತಿರುವವರಿಗೆ ಕೆಲಸದ ಅವಕಾಶವೂ ಕಡಿಮೆ. ಈ ಎಲ್ಲಾ ಕಾರಣಗಳಿಂದ ಅಂತಹ ವ್ಯಕ್ತಿಗಳು ಆರ್ಥಿಕ ಸಮಸ್ಯೆ ಎದುರಿಸುತ್ತಾರೆ ಮತ್ತು ದೇಶದ ಆರ್ಥಿಕತೆಗೂ ನಷ್ಟವಾಗುತ್ತದೆ. ಅವರಿಗೆ ಚಿಕಿತ್ಸೆ ಕೊಡಿಸಿ ಅಥವಾ ಚಿಕಿತ್ಸೆ ಮಾಡಿಸಿಕೊಳ್ಳುವಂತೆ ಮನವೊಲಿಸಬೇಕಿದೆ. ಆ ಮೂಲಕ ಅವರೂ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗುವಂತೆ ಮಾಡಬಹುದಾಗಿದೆ. ಈ ಸಾಲಿನ ವಿಶ್ವ ಶ್ರವಣ ದಿನದ ಗುರಿಯೂ ಇದೇ ಆಗಿದೆ.

ಆಧಾರ: ವಿಶ್ವ ಆರೋಗ್ಯ ಸಂಸ್ಥೆ



250 ಕೋಟಿ 2050ರ ವೇಳೆಗೆ ವಿಶ್ವದಾದ್ಯಂತ ಶ್ರವಣ ಸಮಸ್ಯೆಯಿಂದ ಬಳಲಿರುವ ಜನರ ಅಂದಾಜು ಸಂಖ್ಯೆ

43 ಕೋಟಿ ಈಗ ವಿಶ್ವದಾದ್ಯಂತ ಶ್ರವಣ ದೋಷಕ್ಕೆ ಚಿಕಿತ್ಸೆ ಪಡೆಯಬೇಕಿರುವ ಜನರ ಸಂಖ್ಯೆ

3.5 ಕೋಟಿ ಈಗ ವಿಶ್ವದಾದ್ಯಂತ ಶ್ರವಣ ದೋಷಕ್ಕೆ ಚಿಕಿತ್ಸೆ ಪಡೆಯಬೇಕಿರುವ ಮಕ್ಕಳ ಸಂಖ್ಯೆ

ಗುರಿಗಳು

- ಶ್ರವಣ ಸಮಸ್ಯೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಸಮುದಾಯದ ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ನಡೆಸುವುದು. ಇದರಲ್ಲಿ ಚಿಕಿತ್ಸಕರು, ಚಿಕಿತ್ಸೆ ಒದಗಿಸುತ್ತಿರುವ ಸಂಸ್ಥೆಗಳು, ಚಿಕಿತ್ಸೆ ಪಡೆಯುತ್ತಿರುವವರು ಮತ್ತು ಸಮುದಾಯಗಳು ಸಕ್ರಿಯವಾಗಿ ಭಾಗಿಯಾಗಬೇಕು
- ಸಾಮಾನ್ಯ ಜನರಲ್ಲಿ ಈ ಸಮಸ್ಯೆ ಕುರಿತು ಜಾಗೃತಿ ಮೂಡಿಸಲು ಮತ್ತು ಚಿಕಿತ್ಸೆಯ ಅಗತ್ಯವನ್ನು ಮನವರಿಕೆ ಮಾಡಿಕೊಡಲು ದತ್ತಾಂಶ ಮತ್ತು ಸಾಕ್ಷ್ಯ ಆಧಾರಿತ ಕಾರ್ಯಕ್ರಮಗಳನ್ನು ರೂಪಿಸಬೇಕು

'ತಪ್ಪು ಕಲ್ಪನೆಗಳು ಬದಲಾಗಬೇಕಿದೆ'

● ಎಂ.ಎಸ್.ಜೆ.ನಾಯಕ್



ಕಿವಿ ಕೇಳಿಸದೇ ಇರುವುದು ಇಂದು ಭಾರತ ಮಾತ್ರವಲ್ಲ, ವಿಶ್ವದಾದ್ಯಂತ ಸಾಮಾಜಿಕ ಆರೋಗ್ಯ ಸಮಸ್ಯೆಯಾಗಿದೆ. ಭಾರತದಲ್ಲಿ ಈಗ ಅಂದಾಜು 6.3 ಕೋಟಿಯಷ್ಟು ಜನರು ಶ್ರವಣದೋಷದಿಂದ ಬಳಲುತ್ತಿದ್ದಾರೆ. ಅವರಲ್ಲಿ ಬಹುತೇಕರಿಗೆ ಚಿಕಿತ್ಸೆಯ ನಂತರ ಆ ಸಮಸ್ಯೆ ಬಗೆಹರಿಯುವ ಸಾಧ್ಯತೆ ಇದೆ. ಆದರೆ ಆ ಬಗ್ಗೆ ಅರಿವಿನ ಕೊರತೆ ಇರುವ ಕಾರಣದಿಂದ, ಚಿಕಿತ್ಸೆಯಿಂದ ದೂರ ಉಳಿಯುತ್ತಿದ್ದಾರೆ.

ಕೆಲವೇ ಕೆಲವು ಮಂದಿಗಷ್ಟೇ ಹುಟ್ಟಿದಂದಿನಿಂದಲೇ ಇಂತಹ ಸಮಸ್ಯೆ ಇರುತ್ತದೆ. ಹೆಚ್ಚಿನ ಮಂದಿಗೆ ನಂತರದ ದಿನಗಳಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುತ್ತಾ ಹೋಗುತ್ತದೆ. ಜೀವಿತಾವಧಿಯಲ್ಲಿ ಕಿವಿ-ತಲೆಗೆ ಪೆಟ್ಟು ಬೀಳುವುದರಿಂದ, ಕಿವಿಸೋಂಕು, ಶಬ್ದಮಾಲಿನ್ಯ, ಇಲ್ಲವೇ ಆನುವಂಶಿಕ ಕಾರಣಗಳಿಂದ ಶ್ರವಣ ಸಮಸ್ಯೆ ತಲೆದೋರಬಹುದು. ಈ ಎಲ್ಲಾ ಸಮಸ್ಯೆಗಳಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಿದರೆ, ಅವುಗಳನ್ನು ನಿವಾರಿಸಬಹುದಾಗಿದೆ. ಆದರೆ ಈ ಸಮಸ್ಯೆಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳೇ, ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಚಿಕಿತ್ಸೆಯಿಂದ ದೂರ ಇರಿಸಿವೆ.

ರಕ್ತಸಂಬಂಧದಲ್ಲಿ ವಿವಾಹವಾಗುವುದನ್ನು ಹೊರತುಪಡಿಸಿ ವಂಶಪಾರಂಪರ್ಯವಾಗಿ ಬರುವ ಶ್ರವಣ ಸಮಸ್ಯೆಯು ಅತ್ಯಂತ ವಿರಳ. ಕಿವಿ ಕೇಳದವರಿಗೆ ಮಾತೂ ಬರುವುದಿಲ್ಲ ಎನ್ನಲಾಗುತ್ತದೆ. ಆದರೆ, ಚಿಕ್ಕ ವಯಸ್ಸಿನಲ್ಲೇ ಕೇಳುವ ಅವಕಾಶದಿಂದ ವಂಚಿತರಾಗುವ ಕಾರಣದಿಂದ ಅಂತಹವರು ಮಾತು ಕಲಿತಿರುವುದಿಲ್ಲ ಅಷ್ಟೆ. ಅವರ ಧ್ವನಿಪೆಟ್ಟಿಗೆ, ಮಿದುಳಿನ ಬೆಳವಣಿಗೆಯಲ್ಲಿ ಯಾವ ಕೊರತೆಯೂ ಇರುವುದಿಲ್ಲ. ಹೀಗಾಗಿ ಅಂತಹವರು ಮೂಕರೂ ಅಲ್ಲ, ಮೂರ್ಖರೂ ಅಲ್ಲ.

ಕಿವಿ ಕೇಳದ ವ್ಯಕ್ತಿ ಕೆಲವೊಮ್ಮೆ ಅಸಂಬದ್ಧ ಜವಾಬು ನೀಡಿರುತ್ತಾರೆ. ಅದನ್ನೇ ಮುಂದುಮಾಡಿಕೊಂಡು, ಅಂತಹವರ ಬೌದ್ಧಿಕ ಸಾಮರ್ಥ್ಯವನ್ನು ಪ್ರಶ್ನಿಸುವಂತಹ ವರ್ತನೆಗಳು ಸಮಾಜದಲ್ಲಿ, ಸಿನಿಮಾಗಳಲ್ಲಿ, ಕಡೆಗೆ ಮಾಧ್ಯಮಗಳಲ್ಲೂ ವ್ಯಕ್ತವಾಗುತ್ತಿವೆ. ಇದರ ಪರಿಣಾಮವಾಗಿ, ಕಿವಿ ಕೇಳದವರಿಗೆ ತಲೆಯೂ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂಬ ತಪ್ಪು ಅಭಿಪ್ರಾಯ ಸಮಾಜದಲ್ಲಿ ಗಟ್ಟಿಯಾಗಿ ನೆಲೆನಿಂತಿದೆ. ಜತೆಗೆ, ಕಿವುಡ ಎಂದು ಮೂದಲಿಸುವುದಕ್ಕೂ ಜನರು ಹಿಂಜರಿಯುವುದಿಲ್ಲ. ಈ ಮುಂದುವರಿದ ಕಾಲದಲ್ಲೂ ಕಿವಿ ಕೇಳಿಸದವರ ಬಗ್ಗೆ ಜನರು ಇಂತಹ ಅಭಿಪ್ರಾಯವನ್ನು ಉಳಿಸಿಕೊಂಡಿರುವುದು ವಿಪರ್ಯಾಸ.

ಈ ಎಲ್ಲಾ ಕಾರಣಗಳಿಂದ ಶ್ರವಣ ಸಮಸ್ಯೆಯು ತೀವ್ರ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಈ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸುವ ಮೂಲಕ, ಶ್ರವಣ ಸಮಸ್ಯೆ ಎದುರಿಸುತ್ತಿರುವವರು ಚಿಕಿತ್ಸೆ ಪಡೆಯುವಂತೆ ಮಾಡಬೇಕಿದೆ. ಆಗ ಆ ಜನರೂ ಜನಸಾಮಾನ್ಯರಂತೆ ಸಮಾಜದಲ್ಲಿ ಬದುಕು ನಡೆಸಲು ಸಾಧ್ಯವಾಗುತ್ತದೆ. ಅಂತಹದ್ದೊಂದು ಪರಿಸ್ಥಿತಿಯನ್ನು ರೂಪಿಸುವ ಜವಾಬ್ದಾರಿ ನಮ್ಮ-ನಿಮ್ಮೆಲ್ಲರ ಮೇಲೆ ಇದೆ.

ಲೇಖಕ: ಭಾರತೀಯ ವಾಕ್-ಶ್ರವಣ ಸಂಘದ ಬೆಂಗಳೂರು ಶಾಖೆಯ ಅಧ್ಯಕ್ಷ

ಶ್ರವಣ 'ಸಾಧನೆ'ಯ ಸುತ್ತ

● ಪ್ರಿಯಾ



ನನಗೆ ಚೆನ್ನಾಗಿ ನೆನಪಿದೆ. ಹರ್ಷನಿಗೆ ಆಗಿನ್ನೂ ಮೂರೂವರೆ ವರ್ಷ. ಅವನಿಗೆ ಸ್ವಲ್ಪ ಬುದ್ಧಿ ಮೂಡುವಾಗಲೇ ಹೇಳಿದ್ದೆ. 'ನೋಡು ನಿನಗೆ ಕಿವಿ ಕೇಳಿಸೋಲ್ಲ ಅನ್ನೋದು ಯಾರಿಗೂ ಗೊತ್ತಾಗಬಾರದು. ಹೊರಗಡೆ ಹೋಗುವಾಗ ಆಕಸ್ಮಾತ್ ನಾನು ಮರೆತರೂ ನೀನು ಕಿವಿಗೆ ಟೋಪಿ ಹಾಕ್ಕೋಳೋದನ್ನ ಮರಿಬಾರದು, ಗೊತ್ತಾಯ್ತಾ? ಯಾರ ಜೊತೆನೂ ಹೆಚ್ಚು ಮಾತನಾಡೋಕೆ ಹೋಗಬೇಡ,' ಎಂದು ಎಲ್ಲವನ್ನು ಬಿಡಿಸಿ ಬಿಡಿಸಿ ಅವನಿಗೆ ಅರ್ಥವಾಗುವಂತೆ ಮನದಟ್ಟು ಮಾಡಿದ್ದೆ. ನನ್ನ ಮಗ ಒಬ್ಬ 'ಕಿವುಡ' ಎಂದು ತೋರಿಸಿಕೊಳ್ಳುವಲ್ಲಿ ನನಗೆ ಅತಿಯಾದ ಹಿಂಜರಿಕೆಯಿತ್ತು. ಸಮಾಜ ಆಡಿಕೊಳ್ಳುವುದೆಂಬ ಭಯವಿತ್ತು.

ಹರ್ಷ ಹುಟ್ಟಿದ ಒಂದೂವರೆ ವರ್ಷ ಎಲ್ಲಾ ಚೆನ್ನಾಗಿಯೇ ಇತ್ತು. ಒಮ್ಮೆ ಅವನನ್ನು ಕಾಡಿದ ಅತಿಯಾದ ಜ್ವರದ ನಂತರ ಬೆಳವಣಿಗೆಯಲ್ಲಿ ವ್ಯತ್ಯಾಸವಾಯಿತು. ಜ್ವರಕ್ಕೆ ಚಿಕಿತ್ಸೆ ಪಡೆದು ಬಂದ ಪ್ರಾರಂಭದಲ್ಲಿ ಯಾವುದೇ ವ್ಯತ್ಯಾಸ ಗೊತ್ತಾಗಲಿಲ್ಲ. ಆದರೆ, ಮೊದಲಿಗಿಂತ ಅವನ ಚಟುವಟಿಕೆ ಕಡಿಮೆಯಾಗಿತ್ತು. ತನ್ನಷ್ಟಕ್ಕೆ ತಾನೇ ಆಟವಾಡಿಕೊಳ್ಳುತ್ತಿದ್ದ. ಹತ್ತಿರ ಹೋಗಿ ಮಾತನಾಡಿದರಷ್ಟೇ ಸ್ವಲ್ಪ ಪ್ರತಿಕ್ರಿಯೆ ನೀಡುತ್ತಿದ್ದ. ಜ್ವರದ ಪರಿಣಾಮವಿರಬಹುದೆಂದು ಸುಮ್ಮನಾಗಿದ್ದೆವು. ಆದರೆ, ವಾರಗಳ ನಂತರ, ಒಮ್ಮೆ ನನ್ನ ಅಮ್ಮ, ಹರ್ಷನ ಕೇಳಿಸಿಕೊಳ್ಳುವ ಸಾಮರ್ಥ್ಯದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಳು. ಮನೆಯಲ್ಲಿ ಯಾವುದೇ ಸದ್ದಿಗಾಗಲೀ, ಪಾತ್ರೆ-ಪಗಡಗಳ ಗದ್ದಲಕ್ಕಾಗಲೀ ಹರ್ಷ ಬೆಚ್ಚುತ್ತಿರಲಿಲ್ಲ. ಒಂದೂವರೆ ವರ್ಷದ ಮಗುವಿಗೆ ಸದ್ದು-ಗಲಾಟೆಗಳಿಗೆ ಗಾಬರಿಯಾಗಬೇಕಲ್ಲವೇ?

ಅನುಮಾನ ನಿಜವಾಗದಿರಲಿ ಎಂಬ ಪ್ರಾರ್ಥನೆಯೊಂದಿಗೆ ಹರ್ಷನ ಕಿವಿ ಪರೀಕ್ಷೆಗೆ ನಿಂತೆವು. ಆಟಿಕೆಗಳೊಂದಿಗೆ ಅವನು ಆಟವಾಡುವಾಗ ಸ್ವಲ್ಪ ದೂರದಲ್ಲಿ ಪಾತ್ರೆಯೊಂದನ್ನು ಜೋರಾಗಿ ಬೀಳಿಸಿದೆ. ಹರ್ಷನಿಂದ ಯಾವುದೇ ಪ್ರತಿಕ್ರಿಯೆಯೇ ಬರಲಿಲ್ಲ. ಮತ್ತೊಂದೆರಡು ಇಂತಹುದೇ ಪರೀಕ್ಷೆಗಳನ್ನು ಮಾಡಿದೆವು. ಮತ್ತದೇ ಫಲಿತಾಂಶ. ಅಲ್ಲಿಗೆ ಅವನಿಗೆ ಕಿವಿಯ ಸಮಸ್ಯೆ ಇದೆ ಎಂಬುದು ದೃಢವಾಯಿತು,. ನನ್ನ ಅಮ್ಮನನ್ನು ಹಿಡಿದುಕೊಂಡು ಜೋರಾಗಿ ಅತ್ತುಬಿಟ್ಟೆ. ಜ್ವರದಿಂದಾಗಿ ಅವನಿಗೆ ಸಹಜವಾಗಿ ಕೇಳಿಸಿಕೊಳ್ಳುವ ಶಕ್ತಿ ಹೊರಟುಹೋಗಿತ್ತು. ನಾನು ಧೃತಿಗೆಟ್ಟೆ. ಆದರೆ, ಪತಿ ಭರತ್, ಹರ್ಷನನ್ನು ವಾಕ್-ಶ್ರವಣ ಸಂಸ್ಥೆಗೆ ಕರೆದುಕೊಂಡು ಹೋಗಿ ತೋರಿಸೋಣವೆಂದರು. ನಮಗೆ ತಿಳಿದದ್ದು ಹರ್ಷನಿಗೆ ಶ್ರವಣ ಹಾಗೂ ಮಾತಿನ ತರಬೇತಿ ಕೊಡಿಸಬೇಕು, ಅದಕ್ಕಿಂತ ಮುಖ್ಯವಾಗಿ ಅವನಿಗೆ ಕಿವಿ ಕೇಳಿಸುವಂತಾಗಲು ಇದ್ದ ಒಂದೇ ಒಂದು ಆಯ್ಕೆ 'ಶ್ರವಣ ಸಾಧನ' ಧರಿಸುವುದು.

ಅಂದರೆ, ನನ್ನ ಮಗನಿಗೆ ಕಿವಿ ಕೇಳಿಸುವುದಿಲ್ಲವೆಂದು ಎಲ್ಲರಿಗೂ ತಿಳಿದು ಹೋಗತ್ತೆ. ನೆರೆಯವರು, ನನ್ನ ಸ್ನೇಹಿತರು, ನೆಂಟರಿಷ್ಟರು 'ಹೋ, ಪ್ರಿಯಾಳ ಮಗನಿಗೆ ಕಿವಿ ಕೇಳಿಸುವುದಿಲ್ಲವಂತೆ, ಛೆ, ಪಾಪ ಅಲ್ವಾ' ಎಂದು ಆಡಿಕೊಳ್ಳುತ್ತಾರೆ. ಎಷ್ಟು ಅವಮಾನ, ನೋವು, ಛೇ, ನನಗೆ ಹೀಗಾಗಬೇಕೇ, ನನ್ನ ಮಗನಿಗೇ ಯಾಕೀ ಶಿಕ್ಷೆ' ಎಂದು ಸಾವಿರಾರು ಬಾರಿ ಕೇಳಿಕೊಂಡಿದ್ದೆ.

ಆದರೆ, ಎದುರಾಗಿದ್ದ ಪರಿಸ್ಥಿತಿಯನ್ನು ಸ್ವೀಕರಿಸಲೇಬೇಕಿತ್ತು. ಹರ್ಷನಿಗೆ ಚಿಕಿತ್ಸೆ ಕೊಡಿಸಿ, ಶ್ರವಣ ಸಾಧನವನ್ನು ಹಾಕಿಸಿದೆವು. ಪರಿಸ್ಥಿತಿ ಮೊದಲಿಗಿಂತ ಉತ್ತಮವಾಯಿತು. ಹರ್ಷ ನಿಧಾನವಾಗಿ ಅದಕ್ಕೆ ಹೊಂದಿಕೊಳ್ಳುತ್ತಲಿದ್ದ. ಆದರೆ, ಸುತ್ತಮುತ್ತಲಿನವರು ಆಡಿಕೊಳ್ಳುತ್ತಾರೆಂದು ಅವನನ್ನು ಹೊರಗೆ ಇತರ ಮಕ್ಕಳ ಜೊತೆ ಆಟವಾಡಲು ಬಿಡುತ್ತಿರಲಿಲ್ಲ. ಹೊರಗಡೆ ಹೋಗಬೇಕಾದಾಗಲೆಲ್ಲ ಅವನ ಶ್ರವಣ ಸಾಧನ ಇತರರಿಗೆ ಕಾಣಬಾರದೆಂದು ಕಿವಿಗೆ ಟೋಪಿ ಹಾಕಲಾಗುತ್ತಿತ್ತು. ಸಮಾರಂಭಗಳು, ಕಾರ್ಯಕ್ರಮಗಳಿಗೆ ಹೋಗುವುದನ್ನು ನಿಲ್ಲಿಸಿದೆವು. 'ಮಗನಿಗೆ ಕಿವಿ ಕೇಳಿಸುವುದಿಲ್ಲವಂತೆ, ಮಾತಾದ್ರೂ ಆಡ್ತಾನಾ?' ಈ ಪ್ರಶ್ನೆಗಳು ಎದುರಾಗುವ ಭಯದಿಂದಲೇ ಸಮಾಜದಿಂದ ಒಂದಷ್ಟು ವರ್ಷಗಳು ದೂರ ಉಳಿದದ್ದಾಗಿತ್ತು. ಶ್ರವಣದೋಷದ ಸಮಸ್ಯೆ ಇದ್ದುದರಿಂದ ವಿಶೇಷ ಮಕ್ಕಳ ಶಾಲೆಯೊಂದೇ ನಮಗಿದ್ದ ಆಯ್ಕೆ. ಆದರೆ ಒಮ್ಮೆ: ಆಗ ಹರ್ಷನಿಗೆ ಐದು ವರ್ಷ. ಅದೊಂದು ಸಂಜೆ ಮನೆಗೆ ತುಂಬಾ ಹತ್ತಿರದಲ್ಲೇ ಇದ್ದ ಅಂಗಡಿಯೊಂದಕ್ಕೆ ಸಾಮಾನು ತರಲು ಹೋಗಿದ್ದೆ. ಅದು ಕೇವಲ ಎರಡು ನಿಮಿಷದ ಕೆಲಸವಾದ್ದರಿಂದ 'ಬೇಗ ಬಂದುಬಿಡುತ್ತೇನೆ' ಎಂದು ಹೇಳಿ ಅವನನ್ನು ಮನೆಯಲ್ಲೇ ಬಿಟ್ಟು ಹೋಗಿದ್ದೆ. ಆದರೆ, ಜನ ಹೆಚ್ಚಾಗಿದ್ದುದರಿಂದ ಅಂಗಡಿಯಲ್ಲಿ ಸ್ವಲ್ಪ ತಡವಾಗಿತ್ತು. ಅಂಗಡಿ ಸಾಮಾನು ತೆಗೆದುಕೊಂಡು ತಿರುಗಿದಾಗ ಹರ್ಷ ಮಧ್ಯ ರಸ್ತೆಯಲ್ಲಿ ಹೋಗುತ್ತಿದ್ದ, ಅವನ ಹಿಂದೆ ವೇಗವಾಗಿ ಲಾರಿಯೊಂದು ಹೋಗುತ್ತಿತ್ತು. ಕತ್ತಲಲ್ಲಿ ಪುಟ್ಟ ಹರ್ಷ ಡ್ರೈವರ್‌ಗೆ ಕಾಣುತ್ತಿರಲಿಲ್ಲವೇನೋ. ನಾನು ಕೂಗಿ ಕೊಳ್ಳಲು ಶುರು ಮಾಡಿದೆ. ಹರ್ಷನಿಗೆ ನನ್ನ ಧ್ವನಿ ಕೇಳಲಿಲ್ಲ, ಆದರೆ, ಆ ಲಾರಿ ಡ್ರೈವರ್ ನನ್ನ ಕೂಗು ಕೇಳಿ ತಕ್ಷಣ ಎಚ್ಚೆತ್ತು ಬ್ರೇಕ್ ಹಾಕಿದ. ನಾನು ಓಡಿ ಬಂದು ಹರ್ಷನನ್ನು ಭದ್ರವಾಗಿ ಹಿಡಿದು ಪಕ್ಕಕ್ಕೆ ಎಳೆದು ತಂದೆ. ಹರ್ಷ ಪೆಚ್ಚಾಗಿ, ಗಾಬರಿಯಿಂದ ಅಳಲು ಶುರು ಮಾಡಿದ.

ನಾನು ಅವನನ್ನು ಸಮಾಧಾನಪಡಿಸಿ, ಮುದ್ದಿಸಿ, ಮನೆಗೆ ಕರೆದುಕೊಂಡು ಹೋದೆ. ಮನೆಗೆ ಹೋದ ಮೇಲೆ ಹರ್ಷನ ಕಿವಿಗಳನ್ನು ಗಮನಿಸಿದೆ. ಅವನು ಹಿಯರಿಂಗ್ ಏಡ್ ಹಾಕಿರಲಿಲ್ಲ. ನನಗೆ ಕೋಪ ಬಂತು. ತಕ್ಷಣ ಅಲ್ಲೇ ಇದ್ದ ಮಿಷನನ್ನು ಅವನ ಕಿವಿಗೆ ಹಾಕಿ, 'ಕಿವಿ ಮಿಷನ್ ಯಾಕೆ ಹಾಕಿಕೊಂಡಿರಲಿಲ್ಲ, ನೋಡು ಹೇಗಾಯ್ತು' ಎಂದು ಜೋರಾಗಿ ರೇಗಿದೆ. ಹರ್ಷ ಅಳುಮುಖ ಮಾಡಿಕೊಂಡು ಹೇಳಿದ. 'ನಾನು ಕಿವಿ ಮಿಷನ್ ಹಾಕೊಂಡ್ರೆ ಎಲ್ಲರಿಗೂ ಕಾಣುತ್ತಲ್ಲಮ್ಮ, ನಾನು ಕಿವುಡ ಅಂತ ಗೊತ್ತಾಗತ್ತಲ್ಲ. ನಿನಗೆ ಅದು ಇಷ್ಟ ಆಗೋಲ್ವಲ್ಲ. ಅಲ್ದೆ, ನನಗೆ ಇಲ್ಲೆಲ್ಲೂ ಟೋಪಿ ಕಾಣಿಸ್ಲಿಲ್ಲ, ಅದರ ಮೇಲೆ ಹಾಕೊಳ್ಳೊಕೇ, ಅದಕ್ಕೆ ಹಾಗೇ ಬಂದ್ಬಿಟ್ಟೆ, ಸಾರಿ ಅಮ್ಮ' ಎಂದು ಗದ್ಗದಿತನಾದ.

ಹರ್ಷನ ಮಾತು ಕೇಳಿ ನನಗೆ ತೀರಾ ನೋವುಂಟಾಯಿತು. ಈ ಸಣ್ಣ ಮಗುವಿನಲ್ಲಿ ನಾನೆಂತಾ ಕೀಳರಿಮೆ ಬೆಳೆಸುತ್ತಿದ್ದೇನೆ? ಹೌದು, ನನ್ನನ್ನು ಹಾಗೂ ನನ್ನ ಮಗನನ್ನು ಸಮಾಜ ಆಡಿಕೊಳ್ಳುವುದೆಂಬ ಭಯದಿಂದ ಆ ಪುಟ್ಟ ಹೃದಯದಲ್ಲಿ ಕೀಳರಿಮೆ ಮೂಡಿಸಿ ಅವನ ಜೀವಕ್ಕೆ ಕುತ್ತು ತಂದು ಬಿಡುತ್ತಿದ್ದೆನಲ್ಲ ಎಂದು ಒಂದು ಕ್ಷಣ ಮನಸ್ಸು ತಲ್ಲಣಿಸಿತು. ಜೀವ ಮಾತ್ರವಲ್ಲ, ಈ ಕೀಳರಿಮೆಯಿಂದಾಗಿ ನಿಧಾನವಾಗಿ ಅವನ ಜೀವನವನ್ನು ಕತ್ತಲಿನ ಕೂಪಕ್ಕೆ ದೂಡುತ್ತಿದ್ದೆ. ಹೌದು, ಶಾಲೆಯನ್ನು ಹೊರತುಪಡಿಸಿ ಹರ್ಷ ಸ್ವತಂತ್ರವಾಗಿ ಯೋಚಿಸಿ, ಮಾತನಾಡಲು ನಾನು ಎಲ್ಲಿಯೂ ಅವಕಾಶವನ್ನೇ ಕೊಡುತ್ತಿರಲಿಲ್ಲ. ಇದರಿಂದಾಗಿ, ಇತರರೊಂದಿಗೆ ಬೆರೆಯಲು ಸಾಧ್ಯವಾಗದೇ ಮಾತು-ಭಾಷೆಯ ಕಲಿಕೆಯಲ್ಲಿ ಹರ್ಷ ಹಿಂದುಳಿಯತೊಡಗಿದ್ದ. ಆದರೆ, ಈ ಘಟನೆಯ ನಂತರ ನಾನು ಮಾಡುತ್ತಿದ್ದ ತಪ್ಪು ನನಗೆ ಸ್ಪಷ್ಟವಾಗಿ ಗೋಚರಿಸತೊಡಗಿತ್ತು.

ಮನಸ್ಸು ಜಾಗೃತವಾಯಿತು. ಅಲ್ಲಿಂದಾಚೆಗೇ ಹರ್ಷ ಸ್ವತಂತ್ರವಾಗಿ ಯೋಚಿಸಲು, ಅನಿಸಿದ್ದನ್ನು ಇತರರೊಂದಿಗೆ ತನಗೆ ತಿಳಿದ ರೀತಿಯಲ್ಲೇ ಮಾತನಾಡಲು ಅವಕಾಶ ಮಾಡಿಕೊಟ್ಟೆ. ಹೊರಗಡೆ ಹೋದಾಗ ಅಂಗಡಿಗಳಲ್ಲಿ ಅವನು ತನಗೆ ಬೇಕಾದ್ದನ್ನು ಕೇಳಿ ಪಡೆಯುವಂತೆ ಮಾಡಿದೆ. ಅಕ್ಕ-ಪಕ್ಕದ ಮಕ್ಕಳೊಡನೆ ಬೆರೆಯಲು ತಿಳಿಸಿದೆ. ಹರ್ಷ ಮಾತನಾಡಿದ್ದು ಅವರಿಗೆ ಅರ್ಥ ಆಗದಿದ್ದಾಗ, ನಾನೇ ತಿಳಿಸಿ ಹೇಳಿದೆ. ಅವನು ತೊಡುವ ಶ್ರವಣ ಸಾಧನದ ಕುರಿತು ಅವರಿಗೆ ಅರ್ಥ ಮಾಡಿಸಿದೆ ಹಾಗೂ ಅದನ್ನು ಹಾಕಿಕೊಳ್ಳುವುದರಿಂದಲೇ ಹರ್ಷನಿಗೆ ಶಬ್ದಗಳನ್ನು ಮಾತುಗಳನ್ನು ಕೇಳಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಅಷ್ಟು ವರ್ಷ ಸಭೆ-ಸಮಾರಂಭಗಳಿಗೆ ಹೋಗುವುದನ್ನು ತಡೆಹಿಡಿದಿದ್ದ ನಾನು, ನಿಧಾನವಾಗಿ ಮಗನೊಂದಿಗೆ ಎಲ್ಲಾ ಕಾರ್ಯಕ್ರಮಗಳಿಗೆ ಹಾಜರಾಗುವುದನ್ನು ರೂಢಿಸಿಕೊಂಡೆ. ಎಲ್ಲರೊಂದಿಗೆ ಹೆಚ್ಚೆಚ್ಚು ಸಂಭಾಷಣೆ ನಡೆಸಲು ಹರ್ಷನನ್ನು ಪ್ರೋತ್ಸಾಹಿಸತೊಡಗಿದೆ.

ಇವೆಲ್ಲಕ್ಕಿಂತ ಮುಖ್ಯವಾಗಿ ನನ್ನಲ್ಲಿ ಬದಲಾವಣೆ ಮೂಡಿಸಿದ್ದು ಹರ್ಷನನ್ನು ಸೇರಿಸಿದ್ದ ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆಯ 'ವಿಶೇಷ ಶಾಲೆ'. ಅಲ್ಲಿ ಎಲ್ಲ ಮಕ್ಕಳನ್ನು ಗಮನಿಸತೊಡಗಿದೆ. ಅಲ್ಲಿನ ಶಿಕ್ಷಕರ ಸಹಾಯ ಪಡೆದು ಹರ್ಷನಿಗೆ ಸಹಾಯವಾಗುವಂತಹ ಕೆಲವು ಬದಲಾವಣೆಗಳನ್ನು ಅಳವಡಿಸಿಕೊಂಡೆ. ಶಾಲೆಯಲ್ಲಿ ಹೇಳಿಕೊಡುವ ಮಾತು-ಭಾಷೆಯ ತರಬೇತಿಯನ್ನು ಮನೆಯಲ್ಲೂ ಮುಂದುವರಿಸಿದೆ. ವರ್ಷಗಳ ನಂತರ ಹರ್ಷನಲ್ಲಿ ಬಹಳ ಸುಧಾರಣೆ ಕಂಡುಬಂತು. ಪಾಠಗಳಲ್ಲಿ ಮಾತ್ರವಲ್ಲದೆ, ಪಠ್ಯೇತರ ಚಟುವಟಿಕೆ, ಸಾಮಾಜಿಕ ಜೀವನದಲ್ಲೂ ಉತ್ತಮ ಬದಲಾವಣೆ ಉಂಟಾಯಿತು.

ಈಗ ಹರ್ಷ ಮುಖ್ಯವಾಹಿನಿಯ ಶಾಲೆಗೆ ಪ್ರವೇಶ ಪಡೆಯಲು ಸಜ್ಜಾಗಿದ್ದಾನೆ. ಸ್ನೇಹಿತರೊಡನೆ, ಅಕ್ಕ-ಪಕ್ಕದ ಮಕ್ಕಳೊಡನೆ ಹಿಂಜರಿಕೆಯಿಲ್ಲದೆ ಸಹಜವಾಗಿ ಮಾತನಾಡುತ್ತಾನೆ. ಹೊರಗಡೆ ಹೋದಾಗ ತನಗೆ ಬೇಕಾದ್ದನ್ನು ತಾನೇ ಕೇಳಿ ಪಡೆಯುತ್ತಾನೆ. ಸಮಾಜದ ಇತರರೊಂದಿಗೆ ಬೆರೆಯುತ್ತಾನೆ. ಎಲ್ಲರಂತೆ ತಾನು ಏನನ್ನಾದರೂ ಸಾಧಿಸಬಲ್ಲೆ ಎಂಬ ಆತ್ಮವಿಶ್ವಾಸ ಅವನಲ್ಲಿ ಮೂಡಿದೆ. ಶ್ರವಣ ಸಾಧನವನ್ನು ಧರಿಸುವುದು ಅವಮಾನವಲ್ಲ ಎಂಬುದು ನನಗೀಗ ಅರಿವಾಗಿದೆ. ಹರ್ಷನಿಗೆ ಸಹ ಅದರ ಬಗ್ಗೆ ಯಾವುದೇ ಹಿಂಜರಿಕೆಯಿಲ್ಲ. ನನ್ನ ಹರ್ಷನಿಗೆ ಶ್ರವಣ ಸಾಧನದ ಬಗ್ಗೆ ಜಿಗುಪ್ಸೆ ಮೂಡುವಂತೆ ಮಾಡಿದ್ದರ ಬಗ್ಗೆ ನನಗೆ ವಿಷಾದವಿದೆ. 'ಶ್ರವಣ ಸಾಧನ'ವೇ ನನ್ನ ಹರ್ಷನ 'ಸಾಧನೆ'ಯ ಬುನಾದಿ ಎಂದು ಹೇಳಲು ಈಗ ನನಗೆ ಹೆಮ್ಮೆಯಿದೆ, ಖುಷಿಯಿದೆ.

ನಿರೂಪಣೆ: ನಿತ್ಯಶ್ರೀ ಆರ್., ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆಯ ಕಿರಿಯ ತಾಂತ್ರಿಕ ಬರವಣಿಗೆ ಸಿಬ್ಬಂದಿ



ಮತ್ತಷ್ಟು ಸಿನಿಮಾ ಸುದ್ದಿಗಳಿಗಾಗಿ www.prajavani.net

ನೇರಕಥೆಯ ದುಬೈ ಪ್ರಸಂಗ

ನಾವು ನೋಡಿದ ಸಿನಿಮಾ

ಪುರುಷೋತ್ತಮನ ಪ್ರಸಂಗ

- **ನಿರ್ಮಾಣ:** ವಿ. ರವಿಕುಮಾರ್
- **ನಿರ್ದೇಶನ:** ದೇವದಾಸ್ ಕಾಪಿಕಾಡ್
- **ತಾರಾಗಣ:** ಅಜಯ್ ಪೃಥ್ವಿ, ರಿಷಿಕಾ ನಾಯಕ್, ದೀಪಿಕಾ, ದೇವದಾಸ್ ಕಾಪಿಕಾಡ್, ನವೀನ್ ಡಿ. ಪಡೀಲ್, ಅರವಿಂದ ಬೋಳಾರ್, ಭೋಜರಾಜ ವಾಮಂಜೂರು, ಸಾಯಿಕೃಷ್ಣ ಕುಡ್ಲ, ಶೋಭರಾಜ್ ಪಾವೂರು, ದೀಪಕ್ ರೈ ಪಾಣಾಜೆ, ಚೇತನ್ ರೈ ಮಾಣಿ, ಜ್ಯೋತಿಷ್ ಶೆಟ್ಟಿ ಮತ್ತಿತರರು

ದಕ್ಷಿಣ ಕನ್ನಡ, ಕಾಸರಗೋಡು ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ 'ದುಬೈ' ಮೋಹ ಕೊಂಚ ಹೆಚ್ಚೇ ಇದೆ. ಇಲ್ಲಿನ ಊರುಗಳಲ್ಲಿ ಕನಿಷ್ಠ ನಾಲ್ಕೈದು ಮಂದಿಯಾದರೂ ದುಬೈನಲ್ಲಿ ದುಡಿಯುವವರು ಸಿಗುತ್ತಾರೆ. ಹೀಗೆ ದುಬೈಗೆ ಹೋದವರು ಎರಡು ವರ್ಷದ ಬಳಿಕ ಮರಳಿ ಊರಿನಲ್ಲಿಯೇ ಇದ್ದ ಹೆಂಚಿನ ಮನೆಯನ್ನು ಟೆರೇಸ್ ಮನೆಯಾಗಿ ಪುನರ್‌ನಿರ್ಮಾಣ ಮಾಡಿದ್ದೂ ಇದೆ. ಇದು ಆ ಊರಿನ ಮತ್ತಷ್ಟು ಯುವಕರಿಗೆ 'ದುಬೈ' ಆಸೆ ತರಿಸಿದ್ದೂ ಇದೆ. ಈ ಸರಳವಾದ ವಿಷಯದ ಸುತ್ತವೇ ಕಥೆ ಹೆಣೆದು ಸಿನಿಮಾ ರೂಪ ಕೊಟ್ಟಿದ್ದಾರೆ ದೇವದಾಸ್ ಕಾಪಿಕಾಡ್.


ದಕ್ಷಿಣ ಕನ್ನಡದ ಬ್ಯಾಕ್‌ಡ್ರಾಪ್‌ನಲ್ಲಿ ಸಿನಿಮಾದ ಕಥೆಯಿದೆ. ಡಿಗ್ರಿ ಪೂರ್ಣಗೊಳಿಸಿರುವ 'ಪುರುಷೋತ್ತಮ'ನಿಗೆ ದುಬೈನಲ್ಲಿ ಕೆಲಸ ಮಾಡುವ ಕನಸು. ಕನಸಿನಲ್ಲಿಯೂ ಮಂಗಳೂರನ್ನೇ ದುಬೈ ಮಾಡಿದವನು ಆತ. ಇದ್ದ ಕೆಲಸವನ್ನೂ ಬಿಟ್ಟು ದುಬೈನಲ್ಲಿ ಕೆಲಸಕ್ಕಾಗಿ ಏಜೆಂಟ್ ಮೂಲಕ ಅರ್ಜಿ ಹಾಕುತ್ತಾನೆ. ಮಗನ ಆಸೆಗೆ ಜೊತೆಯಾಗುವ ತಂದೆ, ಮಗಳ ಮದುವೆಗೆ ತೆಗೆದಿಟ್ಟ ₹7 ಲಕ್ಷವನ್ನು ಏಜೆಂಟ್‌ಗೆ ನೀಡುತ್ತಾನೆ. ತನ್ನ ಕನಸನ್ನೇ ಆದ್ಯತೆಯಾಗಿಸಿಕೊಂಡ ಪುರುಷೋತ್ತಮ ಪ್ರೇಯಸಿಯನ್ನು ಬಿಟ್ಟು ದುಬೈಗೆ ಹಾರುತ್ತಾನೆ. ಕನಸಿನಲ್ಲಿ ಕಂಡ ದುಬೈನ ವಾಸ್ತವವೇನು, ಅಕ್ಕನ ಮದುವೆ ಏನಾಗುತ್ತದೆ? ಈ ಹಾದಿಯಲ್ಲಿ ಪುರುಷೋತ್ತಮನ ಪಯಣವೇ ಚಿತ್ರದ ಮುಂದಿನ ಕಥೆ.

ತುಳುವಿನಲ್ಲಿ ಹತ್ತಾರು ನಾಟಕಗಳು, ಜೊತೆಗೆ ಒಂಬತ್ತು ಸಿನಿಮಾಗಳನ್ನು ನಿರ್ದೇಶಿಸಿರುವ ದೇವದಾಸ್ ಕಾಪಿಕಾಡ್ ಅವರ ನಿರ್ದೇಶನದ ಮೊದಲ ಕನ್ನಡ ಚಿತ್ರವಿದು. ಹಾಸ್ಯವೇ ದೇವದಾಸ್ ಕಾಪಿಕಾಡ್ ಅವರ ಅಸ್ತ್ರ. ನಿರ್ದೇಶಕನಾಗಷ್ಟೇ ಅಲ್ಲದೆ, ನಟನೆ, ಹಾಡುಗಾರಿಕೆಯಲ್ಲೂ ಅವರದ್ದು ಮೇಲುಗೈ. 'ವೆಂಕಟ ಇನ್ ಸಂಕಟ' ಸಿನಿಮಾದಲ್ಲಿ ಇದನ್ನು ಕಾಣಬಹುದು. ಆದರೆ ಈ ಸಿನಿಮಾದಲ್ಲಿ ಹಾಸ್ಯವೆಂಬ ಅಸ್ತ್ರದ ಬಳಕೆ ಕಡಿಮೆಯಿದೆ. ಅಲ್ಲೊಂದು ಇಲ್ಲೊಂದು ಹಾಸ್ಯಮಿಶ್ರಿತ ಸಂಭಾಷಣೆಗಳನ್ನು ಹೊರತುಪಡಿಸಿದರೆ, ಶೀರ್ಷಿಕೆಗೆ ತಕ್ಕಂತೆ ಸಿನಿಮಾದಲ್ಲಿ ಯಾವುದೇ ಪ್ರಸಂಗವಿಲ್ಲ. ನಗು ಉಕ್ಕಿಬರುವಂತಹ ದೃಶ್ಯಗಳಿಲ್ಲ. ಮಂಗಳೂರಿನಲ್ಲೇ ದುಬೈಯನ್ನು ಅದ್ಭುತವಾಗಿ ಸೃಷ್ಟಿಸಿದ ಸಿನಿಮಾದ ಆರಂಭಿಕ ದೃಶ್ಯಗಳು ಸಿನಿಮಾದ ಮೇಲೆ ಭರವಸೆ ಮೂಡಿಸಿದರೂ ಇದನ್ನು ಸಿನಿಮಾದುದ್ದಕ್ಕೂ ಉಳಿಸಿಕೊಳ್ಳುವಲ್ಲಿ ನಿರ್ದೇಶಕರು ವಿಫಲರಾಗುತ್ತಾರೆ. ಕೆಲವೆಡೆ ದೃಶ್ಯಗಳು ಬಹಳ ಕೃತಕವಾಗಿ ಎಳೆದಾಡಿದಂತೆ ಕಾಣಿಸುತ್ತವೆ. ಕ್ಲೈಮ್ಯಾಕ್ಸ್ ಕಥೆ ಹೆಣಿಗೆಯಲ್ಲಿ ಮತ್ತಷ್ಟು ಗಟ್ಟಿತನವಿರಬೇಕಿತ್ತು. ತಮ್ಮ ನೆಚ್ಚಿನ ಜಾನರ್ ಬಿಟ್ಟು ಬಹಳ ನೇರವಾಗಿ ಕಥೆಯನ್ನು ಹೆಣೆಯುತ್ತಾ ಸಾಗಿದ್ದಾರೆ ನಿರ್ದೇಶಕ. ಹೀಗಾಗಿ ಇಡೀ ಸಿನಿಮಾ ದಶಕದ ಹಿಂದಿನ ಚಲನಚಿತ್ರದ ಶೈಲಿಯಲ್ಲಿದೆ.

ಸಿನಿಮಾ ಕರಾವಳಿ ಭಾಗದ ಕಥೆಯಾಗಿದ್ದು, ಆ ಮಣ್ಣಿನ ಸೊಗಡನ್ನು ಇನ್ನಷ್ಟು ಸೆರೆಹಿಡಿಯಬೇಕಿತ್ತು. ಸಿನಿಮಾದುದ್ದಕ್ಕೂ ಮಂಗಳೂರು ಕನ್ನಡದ ಬಳಕೆ ಸೊಗಸಾಗಿದೆ. ಅಜಯ್, ರಿಷಿಕಾ ತಮ್ಮ ಪಾತ್ರಗಳಲ್ಲಿ ಜೀವಿಸಿದ್ದಾರೆ. ಉಳಿದೆಲ್ಲ ಕಲಾವಿದರು ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಹಾಡುಗಳ ಸಾಹಿತ್ಯ ಸೆಳೆಯುವಂತಿದ್ದು, ನಕುಲ್ ಅಭಯಂಕರ್ ಸಂಗೀತವೂ ಇಂಪಾಗಿದೆ.

ಅಭಿಲಾಷ್ ಪಿ.ಎಸ್.

ಪದಬಂಧ 5608 - ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಇದು ಪೂರ್ವಕಥೆ ಅಥವಾ ಚರಿತ್ರೆ (4)
3.ಚಿಲಕದ ಹತ್ತಿರವಿರಿಸಿದ ಉಕ್ಕಿನ ಕವಚ (4)
4.ಪ್ರತ್ಯೇಕವಾಗಿ ತೆಗೆದಿರಿಸಿದ ವಸ್ತು (3)
5.ಅಪೂರ್ವವೂ ಆಗಿರುವ ವಿರಳತೆ (4)
7.ಕರುವಿನಲ್ಲಿ ಕಾಣಿಸಿದ ಅಶ್ರು (3)
9.ಎರಡಾಗಿ ಸೀಳಿದುದುದು (3)
10.ರಾಣಿವಾಸವನ್ನು ಹೀಗೂ ಹೇಳುತ್ತಾರೆ (3)
11.ಓದುಬರಹ ಬಾರದವರಿಗಾಗಿ ಬರೆದು ಕೊಟ್ಟಿದ್ದು (3)
13.ಹೆಣ್ಣುದುಂಬಿ ಇಲ್ಲಿದೆ (4)
14.ಆಕಾಶ ಇಲ್ಲಿ ಕಾಣುತ್ತಿದೆ (3)
15.ಕೊನೆಗೆ ವಿಕ್ರಯಿಸಿದ್ದಕ್ಕೇ ಈ ಅಸ್ತವ್ಯಸ್ತತೆ! (4)
16.ಈತ ನಾಶ ಮಾಡುವವನು (4)

ಮೇಲಿಂದ ಕೆಳಕ್ಕೆ

2.ಹತ್ತಿರಕ್ಕೊಂದು ಪರ್ಯಾಯ ಪದ (3)
3.ಬಾಗಿಲನ್ನು ಭದ್ರ ಪಡಿಸುವ ಕೊಂಡಿ (3)
6.ಬೇರೆಯವರನ್ನು ಅವಲಂಬಿಸಿರುವುದು (5)
8.ದುಃಖಾಂತವಾದ ಪ್ರಹಸನ (5)
12.ಹಡಗನ್ನು ಬಂದರಿನಲ್ಲಿ ನಿಲ್ಲಿಸಲು ಬಳಸುವ ಸಾಧನ (3)
13.ಮನದಿಂದ ಮಾಡಿಕೊಂಡಿರುವ ಅರಿಕೆ (3)

5607ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದ್ದಾಮ 3.ಇಂಚರ
5.ಜನಾನುರಾಗಿ 6.ಗವಿ
8.ಮಾಸ 9.ಕರ
10.ಕಸು
14.ಮರ್ಮಭೇದಕ 15.ತಬಲ
16.ವಠಾರ

ಮೇಲಿಂದ ಕೆಳಕ್ಕೆ
1.ಉಪಯೋಗ 2.ಮಜಲು
3.ಇಂಗಿತ 4.ರಸಾಭಾಸ
7.ವಿಧುರ 8.ಮಾಪಕ
9.ಕರಜಾತ 11.ಸುಕುಮಾರ
12.ಕಮಲ 13.ಕಕವ

ಸುಡೊಕು 5993

	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5				7			
9		1		5	8	2		4


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5992 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಮಾರ್ಚ್ 2, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣಷಷ್ಠಿ ಗಂ. 07-54 ನಕ್ಷತ್ರ: ವಿಶಾಖಾ ಗಂ. 14-42 ಯೋಗ: ವ್ಯಾಘಾತ ಗಂ. 18-06 ಕರಣ: ವಣಿಜ ಗಂ. 07-54, ಕುಂಭ ಮಾಸದ 18 ನೇ ದಿನ, ಮಳೆನಕ್ಷತ್ರ: ಶತಭಿಷ 4.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-49 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 20 ಶಬನ್
ಅದೃಷ್ಟ ಸಂಖ್ಯೆ : 4, 1

ಮೇಷ: ಸ್ನೇಹಿತರೊಂದಿಗೆ ಸಂತೋಷ ಕೂಟಗಳಲ್ಲಿ, ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು. ಮನಸ್ಸನ್ನು ಜಾಗೃತವಾಗಿಟ್ಟುಕೊಳ್ಳುವುದು ಕಷ್ಟವೆನಿಸಲಿದೆ. ಮನೆಯವರೊಂದಿಗೆ ಸಿಡುಕುತನ ಬೇಡ.

ವೃಷಭ: ಅನುಮಾನಕ್ಕೆ ಎಡೆ ಮಾಡಿಕೊಡುವ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಳ್ಳುವಿರಿ. ಅನವಶ್ಯಕವಾಗಿ ಮಕ್ಕಳಿಂದ ಖರ್ಚು ಹೆಚ್ಚಾಗುವ ಸಂಭವ ಇದೆ. ಕುಟುಂಬ ವರ್ಗದವರಲ್ಲಿ ಸುಖ, ಸಂತೋಷ ಕಂಡು ಬರುವುದು.

ಮಿಥುನ: ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಬೇಕಾದ ಪ್ರಯತ್ನಗಳನ್ನು ನಡೆಸಿ. ಗೃಹ ನಿರ್ಮಾಣ ಅಥವಾ ನಿವೇಶನ ಖರೀದಿಯ ಕೆಲಸ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಬಹುದು.

ಕರ್ಕಾಟಕ: ವ್ಯಕ್ತಿತ್ವಕ್ಕೆ ಅನುಗುಣವಾಗಿ ಸಮಾಜದಲ್ಲಿ ಗೌರವ ದೊರೆಯಲಿದೆ. ವೃತ್ತಿಪರವಾಗಿ ಬಹಳ ದಿನಗಳ ನಿರೀಕ್ಷಿತ ಕಾರ್ಯಕ್ಕೆ ಈ ದಿನ ಸಲಹೆ ದೊರಕುವುದು.ಭರವಸೆಯಂತೆ ನಡೆದುಕೊಳ್ಳುವಿರಿ.

ಸಿಂಹ: ರೈತರು ಬೆಳೆದ ತರಕಾರಿ ಮತ್ತು ಹಣ್ಣಿನ ಬೆಳೆಗೆ ನಿರೀಕ್ಷಿತ ಲಾಭ ದೊರೆಯುತ್ತದೆ. ದುರ್ಜನರ ಸಹವಾಸದ ದುಷ್ಫಲ ಅನುಭವಕ್ಕೆ ಬರಲಿದೆ. ರಕ್ತ ಸಂಬಂಧೀ ಕಾಯಿಲೆ ಹೊಂದಿದವರು ಪರೀಕ್ಷೆ ಮಾಡಿಸುವುದು ಒಳ್ಳೆಯದು.

ಕನ್ಯಾ: ಈಗಾಗಲೇ ಆರಂಭಿಸಿರುವ ಕೆಲಸವು ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತದೆ. ಉಲ್ಲಾಸ ಹಾಗೂ ಕಾರ್ಯಪ್ರವೃತ್ತಿ ಹೊಂದುತ್ತೀರಿ. ವಿದ್ಯಾಭ್ಯಾಸದಲ್ಲಿನ ಪ್ರಗತಿಯ ಫಲವಾಗಿ ವಿದ್ಯಾ ಸಂಸ್ಥೆಗಳಿಂದ ಮನ್ನಣೆ ಪಡೆಯುವಿರಿ.

ತುಲಾ: ಸ್ವಂತ ಮನೆ ಮಾಡುವ ಬಗ್ಗೆ ಯೋಚಿಸಿ ಹಾಗೂ ಮುಖ್ಯ ಕೆಲಸಗಳಿಗೆ ಆಪ್ತರ ಸಲಹೆ ಸ್ವೀಕರಿಸುವುದು ಅಗತ್ಯ. ಅತಿ ತಿರುಗಾಟದಿಂದಾಗಿ ವಿಶ್ರಾಂತಿ ಬಯಸುವಿರಿ. ನಿಮ್ಮ ಗೌರವ ಪ್ರತಿಷ್ಠೆ ಹೆಚ್ಚಲು ಇನ್ನೂ ಸಮಯ ಬೇಕಿದೆ.

ವೃಶ್ಚಿಕ: ಖಾಸಗಿ ಸಂಸ್ಥೆಗಳ ಆಡಳಿತಾಧಿಕಾರಿಗಳೊಡನೆ ಫಲಪ್ರದ ಮಾತುಕತೆಗಳು ನಡೆಸುವಂತಾಗುವುದು. ವ್ಯಕ್ತಿಯೊಬ್ಬರ ಪರಿಚಯ ಜೀವನದ ಶೈಲಿಯನ್ನೇ ಬದಲಿಸಲಿದೆ. ಬಹು ನಿರೀಕ್ಷಿತ ಧನ ಕೈ ಸೇರುವುದು.


ಧನು: ಹೊಸ ಯೋಜನೆಗೆ ಹೊಸ ರೂಪ ನೀಡಲು ಇಂದು ಬಹಳಷ್ಟು ಅವಕಾಶಗಳು ಎದುರಾಗುವುದು. ನಶಿಸಿ ಹೋಗಿದ್ದ ಪ್ರೇರಣೆಯು ಮತ್ತೆ ಮರಳುವುದು. ಹೆಚ್ಚಿನ ಆತ್ಮವಿಶ್ವಾಸದಿಂದ ಈ ದಿನವನ್ನು ಆರಂಭಿಸಿ.

ಮಕರ: ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ಭಾವನೆ ಸರಿಯಾಗಿದೆ. ಮಗಳಿಂದ ಸಂತೋಷದ ಸುದ್ದಿ ಕೇಳಲಿರುವಿರಿ. ಹಣಕಾಸಿನ ವಿಚಾರದಲ್ಲಿ ಪ್ರಬಲರಾಗಿರುವಿರಿ. ಆರೋಗ್ಯ ಉತ್ತಮಗೊಳ್ಳಲಿದೆ.

ಕುಂಭ: ಇತರರೊಂದಿಗೆ ಸಾಧ್ಯವಾದಷ್ಟು ಬೆರೆಯಲು ಪ್ರಯತ್ನಿಸಿ. ಅದರಿಂದ ಪ್ರಾಪಂಚಿಕ ಜ್ಞಾನ ವೃದ್ಧಿಯಾಗಲಿದೆ. ಒಳ್ಳೆಯತನ ಹಾಗೂ ಸರಳತೆಯು ದುರುಪಯೋಗವಾಗದಂತೆ ಎಚ್ಚರ ವಹಿಸಿ.

ಮೀನ: ಗೆಳೆಯರ ಅಭಿಪ್ರಾಯಕ್ಕೆ ಅಥವಾ ಗೆಳೆತನಕ್ಕೆ ಸಂಬಂಧಿಸಿದ ವಿಷಯಗಳಿಗೆ ಪೋಷಕರಿಂದ ಬಹಳಷ್ಟು ಪ್ರೋತ್ಸಾಹ ಸಿಗುವುದು. ವೃತ್ತಿಯ ಕೆಲಸಗಳಿಗಾಗಿ ಹೆಚ್ಚಿನ ಓಡಾಟ ನಡೆಸಬೇಕಾಗಬಹುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,982
ಇಂದಿನ ಅಂತ್ಯ	22,338
▲	355
ದಿನದ ಗರಿಷ್ಠ	22,353

ವಿನಿಮಯ ದರ

$ ಡಾಲರ್	82.91
£ ಪೌಂಡ್	104.70
€ ಯುರೊ	89.67
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹930 (930)
ಸೂರ್ಯಕಾಂತಿ (ರಿಫೈನ್ಡ್)	₹930 (925)
ಪಾಮೋಲಿನ್	₹880 (875)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹282-455

ದ್ವಿತಳಿ (ಬಿ.ವಿ) ₹235-541

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹163
ಆರ್‌ಎಸ್‌ಎಸ್-5	₹158
ಗುಡ್ ಲಾಟ್	₹145

ಈರುಳ್ಳಿ

(ಕ್ವಿಂಟಲ್‌ಗೆ)

ದಪ್ಪ	₹1600-2200
ಮಧ್ಯಮ	₹1000-1600
ಸಣ್ಣ	₹500-1000

ಮುಂಬೈ ಧಾರಣೆ

ಶೇಂಗಾ

01-03-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	920 (920)
ಪಾಮ್ ವಾರದ ಡೆಲಿವರಿ	878 (873)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,550 (61,750)
ಬೆಳ್ಳಿ ಕೆ.ಜಿ ₹69,850 (69,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8680-9400
ಪುತ್ತೂರು	₹7400-9800

₹2 ಸಾವಿರ ಮುಖಬೆಲೆ: ಶೇ 97.62ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ಶೇ97.62ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದ್ದು, ಇನ್ನೂ ₹8,470 ಕೋಟಿ ಮೌಲ್ಯದ ನೋಟುಗಳು ಸಾರ್ವಜನಿಕರ ಬಳಿ ಇವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿದೆ.

ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಂಚೆ ಮೂಲಕವೂ ಈ ಪ್ರಾದೇಶಿಕ ಕಚೇರಿಗಳಿಗೆ ನೋಟುಗಳನ್ನು ಕಳುಹಿಸಿ ಬದಲಾಯಿಸಿಕೊಳ್ಳಬಹುದಾಗಿದೆ.

ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	18000-28500
ಹೊಸತು	28500-34500
ಹಳತು	34500-42500
ಕಾರ್ಕಳ	
ಹೊಸತು	25000-34500
ಹಳತು	30000-43500
ಪುತ್ತೂರು	
ಹೊಸತು	26500-34000
ಶಿವಮೊಗ್ಗ	
ಬೆಟ್ಟೆ	43099-52899
ಗೊರಬಲು	16309-33289
ರಾಶಿ	20000-48259
ಸರಕು	51009-80800
ಕುಮಟ	
ಚಿಪ್ಪು	24699-28999
ಕೋಕ	14569-26019
ಫ್ಯಾಕ್ಟರಿ	11509-21299
ಹಳೆಚಾಲಿ	32899-35899
ಹೊಸಚಾಲಿ	30099-33499
ಸಿದ್ದಾಪುರ	
ಬಿಳಿಗೋಟು	24319-27889
ಚಾಲಿ	34299-37099
ಕೋಕ	24299-31879
ಹೊಸಚಾಲಿ	30869-33869
ಕೆಂಪುಗೋಟು	30469-37599
ರಾಶಿ	42109-46399
ತಟ್ಟಿಬೆಟ್ಟೆ	38209-45719
ಶಿರಸಿ	
ಬೆಟ್ಟೆ	34699-43699
ಬಿಳಿಗೋಟು	24099-30009
ಚಾಲಿ	34550-38872
ಕೆಂಪುಗೋಟು	28018-36698
ರಾಶಿ	43808-47299
ಯಲ್ಲಾಪುರ	
ಅಪಿ	55555-57369
ಬಿಳಿಗೋಟು	20805-32306
ಚಾಲಿ	32521-37851
ಕೋಕ	13109-30269
ಕೆಂಪುಗೋಟು	24099-36919
ರಾಶಿ	43410-53299
ತಟ್ಟಿಬೆಟ್ಟೆ	36699-43000

ಸೆನ್ಸೆಕ್ಸ್ 1,245 ಅಂಶ ಜಿಗಿತ • ಹೂಡಿಕೆದಾರರ ಸಂಪತ್ತು ₹4 ಲಕ್ಷ ಕೋಟಿ ವೃದ್ಧಿ

ಷೇರುಪೇಟೆಯಲ್ಲಿ ಗೂಳಿ ಓಟ



ಮುಂಬೈ (ಪಿಟಿಐ): ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿವೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ನಿರೀಕ್ಷೆ ಮೀರಿ ಜಿಗಿತ ಕಂಡಿರುವುದು ಹಾಗೂ ವಿದೇಶಿ ಬಂಡವಾಳದ ಒಳಹರಿವಿನ ಹೆಚ್ಚಳವು ಗೂಳಿ ಓಟಕ್ಕೆ ಉತ್ತೇಜನ ನೀಡಿತು.

ವಾರದಿಂದಲೂ ಏರಿಳಿತಕ್ಕೆ ಸಾಕ್ಷಿಯಾಗಿದ್ದ ಸೂಚ್ಯಂಕಗಳು ಬೆಳಿಗ್ಗಿನ ವಹಿವಾಟಿನಲ್ಲಿ ಏರಿಕೆಯ ಹಾದಿ ಹಿಡಿದವು. ಜಾಗತಿಕ ಮಾರುಕಟ್ಟೆಯಲ್ಲಿ ನಡೆದ ಸ್ಥಿರ ವಹಿವಾಟು ಕೂಡ ಈ ಏರಿಕೆಗೆ ಕಾರಣವಾಗಿದೆ ಎಂದು ವರ್ತಕರು ಹೇಳಿದ್ದಾರೆ.

ಸೆನ್ಸೆಕ್ಸ್ ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದ್ದು, ವಹಿವಾಟುದಾರರ ಪಾಲಿಗೆ ವರದಾನವಾಯಿತು. ಹೂಡಿಕೆದಾರರ ಸಂಪತ್ತಿನ ಮೌಲ್ಯವು ₹4.29 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,245 ಅಂಶ ಜಗಿತ ಕಂಡು (ಶೇ 1.72) 73,475 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ದಿನದ ವಹಿವಾಟಿನಲ್ಲಿ 1,318 ಅಂಶ ಏರಿಕೆ ಕಂಡು, 73,819ಕ್ಕೆ ತಲುಪಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 355 ಅಂಶ ಏರಿಕೆ ಕಂಡು 22,338ಕ್ಕೆ ಮುಟ್ಟಿದೆ. ದಿನದ ವಹಿವಾಟಿನಲ್ಲಿ 370 ಅಂಶ ಏರಿಕೆ ಕಂಡು, 22,353ಕ್ಕೆ ತಲುಪಿತ್ತು.

ಗಳಿಕೆ ಕಂಡ ಕಂಪನಿಗಳು

ಟಾಟಾ ಸ್ಟೀಲ್	6.46%
ಜೆಎಸ್‌ಡಬ್ಲ್ಯು	4.46%
ಐಸಿಐಸಿಐ	3.18%
ಎಸ್‌ಬಿಐ	2.67%
ಎಚ್‌ಡಿಎಫ್‌ಸಿ	2.02%

ಸೆನ್ಸೆಕ್ಸ್ ಗುಚ್ಛದಲ್ಲಿರುವ ಟಾಟಾ ಸ್ಟೀಲ್ ಷೇರಿನ ಮೌಲ್ಯ ಶೇ 6.46 ಹಾಗೂ ಜೆಎಸ್‌ಡಬ್ಲ್ಯು ಷೇರಿನ ಮೌಲ್ಯ ಶೇ 4.46ರಷ್ಟು ಹೆಚ್ಚಳವಾಗಿದೆ. ಪೇಟಿಎಂ ಷೇರಿನ ಮೌಲ್ಯ ಶೇ 5ರಷ್ಟು ಏರಿಕೆ ಆಗಿದೆ. ಲಾರ್ಸನ್ ಆ್ಯಂಡ್ ಟರ್ಬೊ, ಟೈಟನ್, ಮಾರುತಿ, ಇಂಡಸ್‌ಇಂಡ್ ಇಂಡ್, ಐಸಿಐಸಿಐ ಬ್ಯಾಂಕ್ ಹಾಗೂ ಟಾಟಾ ಮೋಟರ್ಸ್ ಗಳಿಕೆ ಕಂಡಿವೆ.

ಎಚ್‌ಸಿಎಲ್ ಟೆಕ್ನಾಲಜೀಸ್, ಇನ್ಫೊಸಿಸ್ ಮತ್ತು ಟೆಕ್ ಮಹೀಂದ್ರ ಷೇರುಗಳು ಇಳಿಕೆ ಕಂಡಿವೆ. ಟೋಕಿಯೊ, ಶಾಂಘೈ ಹಾಗೂ ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲೂ ಸಕಾರಾತ್ಮಕ ವಹಿವಾಟು ನಡೆದಿದೆ. ಅಮೆರಿಕದ ಷೇರು ಮಾರುಕಟ್ಟೆಯೂ ಗಳಿಕೆ ಕಂಡಿದೆ.

ವಿದೇಶಿ ಹೂಡಿಕೆದಾರರು ಗಮನಾರ್ಹ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡಿದ್ದು, ಒಟ್ಟು ₹3,568 ಕೋಟಿ ಮೊತ್ತದ ಷೇರುಗಳನ್ನು ಖರೀದಿಸಿದ್ದಾರೆ ಎಂದು ಷೇರುಪೇಟೆಯ ಅಂಕಿ ಅಂಶಗಳು ತಿಳಿಸಿವೆ.

ಜಿಡಿಪಿ ಪ್ರಗತಿ ವರದಾನ

2023–24ನೇ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಶೇ 8.4ರಷ್ಟು ಪ್ರಗತಿ ದಾಖಲಿಸಿದೆ. ಅಲ್ಲದೆ, ಈ ಹಣಕಾಸು ವರ್ಷದಲ್ಲಿ ಆರ್ಥಿಕತೆಯು 7.6ರಷ್ಟು ಬೆಳವಣಿಗೆ ಕಾಣಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಇಲಾಖೆಯ ವರದಿ ಹೇಳಿದೆ.

ಮತ್ತೊಂದೆಡೆ ಫೆಬ್ರುವರಿಯಲ್ಲಿ ತಯಾರಿಕಾ ವಲಯದ ಚಟುವಟಿಕೆಗಳು ಏರಿಕೆ ಕಂಡಿವೆ. ಈ ಅಂಶಗಳು ಷೇರುಪೇಟೆ ಏರಿಕೆಗೆ ಕಾರಣವಾಗಿವೆ.

ಅಮೆರಿಕದಲ್ಲಿ ಹಣದುಬ್ಬರ ಇಳಿಕೆಯಾಗಿದೆ. ಹಾಗಾಗಿ, ಫೆಡರಲ್ ರಿಸರ್ವ್ ಬ್ಯಾಂಕ್, ಜೂನ್‌ನಲ್ಲಿ ಬಡ್ಡಿದರ ಕಡಿತಗೊಳಿಸುವ ಸಾಧ್ಯತೆಯಿದೆ. ಇದು ಹೂಡಿಕೆದಾರರ ಉತ್ಸಾಹ ಹೆಚ್ಚಿಸಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯಸ್ಥ (ಸಂಶೋಧನೆ) ವಿನೋದ್ ನಾಯರ್ ಹೇಳಿದ್ದಾರೆ.

ಮಾರುತಿ ಷೇರು ಏರಿಕೆ

ಪ್ರಯಾಣಿಕ ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾದ ಷೇರಿನ ಮೌಲ್ಯ ಶೇ 3ರಷ್ಟು ಏರಿಕೆ ಆಗಿದೆ. ಇದರಿಂದ ಕಂಪನಿಯು ಒಂದೇ ದಿನ ₹10,648 ಕೋಟಿ ಗಳಿಸಿಕೊಂಡಿದೆ.

ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯವು ₹3.64 ಲಕ್ಷ ಕೋಟಿಗೆ ಮುಟ್ಟಿದೆ. ಫೆಬ್ರುವರಿಯಲ್ಲಿ ಕಂಪನಿ ವಾಹನಗಳ ಮಾರಾಟವು ಹೆಚ್ಚಳವಾಗಿರುವುದರಿಂದ ಷೇರಿನ ಮೌಲ್ಯ ಏರಿಕೆ ಕಂಡಿದೆ.

ವಿದೇಶಿ ಅಡಿಕೆ ಲಗ್ಗೆ ನಿಯಂತ್ರಣಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ



ಶಿರಸಿ: ತೆರಿಗೆ ರಹಿತ ವಿದೇಶಿ ಅಡಿಕೆಯು ರಾಜ್ಯದ ಕರಾವಳಿ, ಮಲೆನಾಡು ಭಾಗದ ಮಾರುಕಟ್ಟೆಗೆ ಲಗ್ಗೆ ಇಟ್ಟಿರುವ ಪರಿಣಾಮ ಪ್ರಮುಖ ಮಾರುಕಟ್ಟೆಗಳಲ್ಲಿ ಸ್ಥಳೀಯ ಅಡಿಕೆ ದರ ಹಿಮ್ಮುಖವಾಗಿದೆ.

ಈ 'ವಿದೇಶಿ ಕಳ್ಳ ಮಾರ್ಗ'ಕ್ಕೆ ಕಡಿವಾಣ ಹಾಕುವಂತೆ ಕೋರಿ ಅಡಿಕೆ ವಹಿವಾಟು ನಡೆಸುವ ಸಂಸ್ಥೆಗಳು, ಕೇಂದ್ರ ಸರ್ಕಾರಕ್ಕೆ ಒತ್ತಡ ಹೇರಲು ತೀರ್ಮಾನಿಸಿವೆ.


ಹಲವು ದಿನಗಳಿಂದ ಮಂಗಳೂರು, ಶಿವಮೊಗ್ಗ ಮಾರುಕಟ್ಟೆಗಳಲ್ಲಿ ಕೆಂಪಡಿಕೆ ಮತ್ತು ಚಾಲಿ ಅಡಿಕೆ ದರ ಗಣನೀಯವಾಗಿ ಇಳಿದಿದೆ. ಕ್ವಿಂಟಲ್ ಚಾಲಿ ಅಡಿಕೆ ₹37 ಸಾವಿರ ಮತ್ತು ಕೆಂಪಡಿಕೆಗೆ ₹48 ಸಾವಿರ ಇದ್ದ ದರವು ವಾರದಿಂದ ಈಚೆಗೆ ಸರಾಸರಿ ₹5 ಸಾವಿರ ಕುಸಿತ ಕಂಡಿದೆ. ಎರಡು ವರ್ಷಗಳಿಂದ ಸ್ಥಿರವಾಗಿದ್ದ ಅಡಿಕೆ ದರವು, ಉತ್ಪನ್ನ ಮಾರಾಟದ ಹಂಗಾಮಿನಲ್ಲಿ ಏಕಾಏಕಿ ಇಳಿಮುಖವಾಗಿದ್ದು, ಬೆಳೆಗಾರರಲ್ಲಿ ಆತಂಕ ಮೂಡಿಸಿದೆ.

'ಸ್ಥಳೀಯ ಅಡಿಕೆ ಜೊತೆ ವಿದೇಶಿ ಅಡಿಕೆಯನ್ನು ಮಿಶ್ರಣ ಮಾಡಿ ಮಂಗಳೂರು ಮೂಲಕ ಉಳಿದ ಮಾರುಕಟ್ಟೆಗಳಿಗೆ ಪೂರೈಸಲಾಗುತ್ತಿದೆ. ಇದು ಕರಾವಳಿ ಮಾರುಕಟ್ಟೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಇದನ್ನು ನಿಯಂತ್ರಿಸದಿದ್ದರೆ, ಭವಿಷ್ಯದಲ್ಲಿ ರಾಜ್ಯದ ಎಲ್ಲೆಡೆ ಇದೇ ಸ್ಥಿತಿ ತಲೆದೋರುವ ಅಪಾಯವಿದೆ' ಎಂದು ಮಾರುಕಟ್ಟೆ ತಜ್ಞರು ಹೇಳುತ್ತಾರೆ.

'ಪ್ರಮುಖ ಅಡಿಕೆ ಮಾರುಕಟ್ಟೆಗಳಲ್ಲಿ ಒಂದಾದ ಶಿರಸಿಯಲ್ಲಿ, ದರದಲ್ಲಿ ಹೆಚ್ಚು ವ್ಯತ್ಯಾಸವಾಗಿಲ್ಲ. ಮೂರು ತಿಂಗಳಿನಿಂದ ದರ ₹1 ಸಾವಿರದಷ್ಟು ಏರುಪೇರು ಆಗುತ್ತಿದೆ. ಉತ್ತಮ ಗುಣಮಟ್ಟದ ಅಡಿಕೆ ಬಂದಾಗ ಸಹಜವಾಗಿ ದರ ಏರುತ್ತದೆ. ಉಳಿದಂತೆ ಸರಾಸರಿ ದರ ನೀಡಲಾಗುತ್ತದೆ. ಆದರೂ ವಿದೇಶಿ ಅಡಿಕೆ ಒಳನುಸುಳುವಿಕೆ ಸಂಬಂಧ ಸರ್ಕಾರದ ಮೇಲೆ ಒತ್ತಡ ತರಲು, ರಾಜ್ಯದ ಪ್ರಮುಖ ಅಡಿಕೆ ವಹಿವಾಟು ಸಂಘ, ಸಂಸ್ಥೆಗಳ ಪ್ರಮುಖರು ಸಭೆ ನಡೆಸಿ ತೀರ್ಮಾನಿಸಿದ್ದಾರೆ' ಎಂದು ಟಿಎಸ್‌ಎಸ್ ಸಹಕಾರಿ ಸಂಸ್ಥೆಯ ಮುಖ್ಯಸ್ಥ ಗೋಪಾಲಕೃಷ್ಣ ವೈದ್ಯ ತಿಳಿಸಿದರು.

ಜಿಎಸ್‌ಟಿ ವರಮಾನ ಸಂಗ್ರಹ

(ಫೆಬ್ರುವರಿ 2024)
(ಕೋಟಿಗಳಲ್ಲಿ)



₹1.68 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ 2023–24ನೇ ಹಣಕಾಸು ವರ್ಷದ ಫೆಬ್ರುವರಿಯಲ್ಲಿ ₹1.68 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಫೆಬ್ರುವರಿಯಲ್ಲಿ ಸಂಗ್ರಹವಾಗಿದ್ದ ವರಮಾನಕ್ಕೆ ಹೋಲಿಸಿದರೆ ಶೇ 12.5ರಷ್ಟು ಏರಿಕೆಯಾಗಿದೆ. ಆದರೆ, ಪ್ರಸಕ್ತ ವರ್ಷದ ಜನವರಿಯಲ್ಲಿ ಸಂಗ್ರಹವಾಗಿದ್ದ ₹1.72 ಲಕ್ಷ ಕೋಟಿಗೆ ಹೋಲಿಸಿದರೆ ಇಳಿಕೆ ಆಗಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಫೆಬ್ರುವರಿವರೆಗೆ ಒಟ್ಟು ₹18.40 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. 2022–23ನೇ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 11.7ರಷ್ಟು ಏರಿಕೆಯಾಗಿದೆ.

ಕಳೆದ ಹನ್ನೊಂದು ತಿಂಗಳಿನಲ್ಲಿ ಸರಾಸರಿ ಸಂಗ್ರಹವು ₹1.67 ಲಕ್ಷ ಕೋಟಿ ಆಗಿದೆ. ಕಳೆದ ಹಣಕಾಸು ವರ್ಷದಲ್ಲಿ ಸರಾಸರಿ ಸಂಗ್ರಹ ₹1.5 ಲಕ್ಷ ಕೋಟಿ ಇತ್ತು ಎಂದು ಸಚಿವಾಲಯವು ವಿವರಿಸಿದೆ.

ಪ್ರಯಾಣಿಕ ವಾಹನ ಮಾರಾಟ ಹೆಚ್ಚಳ



ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಮೋಟರ್ಸ್, ಎಂ.ಜಿ. ಮೋಟರ್ಸ್, ಟೊಯೊಟ, ಹುಂಡೈ ಸೇರಿದಂತೆ ದೇಶದ ಪ್ರಮುಖ ಕಂಪನಿಗಳ ಪ್ರಯಾಣಿಕ ವಾಹನಗಳ ಮಾರಾಟವು ಫೆಬ್ರುವರಿಯಲ್ಲಿ ಏರಿಕೆ ಕಂಡಿದೆ.

ದೇಶೀಯ ವಾಹನಗಳ ಮಾರಾಟವು ಪ್ರಗತಿ ದಾಖಲಿಸಿದ್ದು, ರಫ್ತು ಕೂಡ ಉತ್ತಮವಾಗಿದೆ. ಆದರೆ, ವಾಣಿಜ್ಯ ವಾಹನಗಳ ಮಾರಾಟದಲ್ಲಿ ಇಳಿಕೆಯಾಗಿದೆ.

ಟೊಯೊಟ ಶೇ 61ರಷ್ಟು ಹೆಚ್ಚಳ: ಟೊಯೊಟ ಕಿರ್ಲೋಸ್ಕರ್ ಮೋಟರ್‌ನ 25,220 ವಾಹನಗಳು ಮಾರಾಟವಾಗಿವೆ. ಕಳೆದ ವರ್ಷದ ಫೆಬ್ರುವರಿಯಲ್ಲಿ 15,685 ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಶೇ 61ರಷ್ಟು ಏರಿಕೆ ಆಗಿದೆ.

ಮಹೀಂದ್ರ ಶೇ 24ರಷ್ಟು ಏರಿಕೆ: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ 72,923 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 58,801 ವಾಹನಗಳು ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಮಾರಾಟದಲ್ಲಿ ಶೇ 24ರಷ್ಟು ಏರಿಕೆ ಆಗಿದೆ.

ಟಾಟಾ ಮೋಟರ್ಸ್ ಏರಿಕೆ: ಟಾಟಾ ಮೋಟರ್ಸ್‌ನ 86,406 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 79,705 ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಮಾರಾಟದದಲ್ಲಿ ಶೇ 8ರಷ್ಟು ಹೆಚ್ಚಳವಾಗಿದೆ. ದೇಶೀಯ ವಾಹನಗಳ ಮಾರಾಟ ಶೇ9ರಷ್ಟು ಬೆಳವಣಿಗೆ ಕಂಡಿದೆ. ವಾಣಿಜ್ಯ ವಾಹನಗಳ ಮಾರಾಟದಲ್ಲಿ ಶೇ4ರಷ್ಟು ಇಳಿಕೆ ಆಗಿದೆ.

ಎಂ.ಜಿ ಮೋಟರ್ ಇಂಡಿಯಾ: ಎಂ.ಜಿ ಮೋಟರ್ ಇಂಡಿಯಾದ ವಾಹನ ಮಾರಾಟವು ಶೇ 8ರಷ್ಟು ಏರಿಕೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 4,193 ವಾಹನಗಳು ಮಾರಾಟವಾಗಿದ್ದರೆ, ಪ್ರಸಕ್ತ ಅವಧಿಯಲ್ಲಿ 4,532 ಮಾರಾಟವಾಗಿವೆ.

ಮಾರುತಿ ಸುಜುಕಿ: ಮಾರುತಿ ಸುಜುಕಿ ಇಂಡಿಯಾದ ವಾಹನಗಳ ಮಾರಾಟವು ಶೇ 15ರಷ್ಟು ಏರಿಕೆ ಆಗಿದೆ. ಒಟ್ಟು 1,97,471 ವಾಹನಗಳು ಮಾರಾಟವಾಗಿವೆ. ಯುಟಿಲಿಟಿ ವಾಹನ ಮಾರಾಟದಲ್ಲಿ ಶೇ82ರಷ್ಟು ಏರಿಕೆಯಾಗಿದೆ.

ಟಿವಿಎಸ್ ದಾಖಲೆ: ಟಿವಿಎಸ್ ಮೋಟರ್ ವಾಹನಗಳ ಮಾರಾಟವು ಶೇ 33ರಷ್ಟು ಏರಿಕೆ ಆಗಿದೆ. ಹಿಂದಿನ ವರ್ಷದ ಫೆಬ್ರುವರಿಯಲ್ಲಿ 2,76,150 ವಾಹನಗಳು ಮಾರಾಟವಾಗಿದ್ದರೆ, ಪ್ರಸಕ್ತ ಅವಧಿಯಲ್ಲಿ 3,68,424 ವಾಹನಗಳು ಮಾರಾಟವಾಗಿವೆ.

ಹುಂಡೈ ಮೋಟರ್: ಹುಂಡೈ ಮೋಟರ್ ಇಂಡಿಯಾದ 60,501 ವಾಹನಗಳು ಮಾರಾಟವಾಗಿವೆ. ದೇಶೀಯ ವಾಹನ ಮಾರಾಟದಲ್ಲಿ ಶೇ7ರಷ್ಟು ಏರಿಕೆಯಾಗಿದೆ.

ತಯಾರಿಕಾ ಚಟುವಟಿಕೆ ಏರಿಕೆ

ನವದೆಹಲಿ (ಪಿಟಿಐ): ಫೆಬ್ರುವರಿ ತಿಂಗಳಿನಲ್ಲಿ ದೇಶದ ತಯಾರಿಕಾ ವಲಯದ ಬೆಳವಣಿಗೆಯು ಐದು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ. ಉತ್ಪಾದನೆ ಮತ್ತು ಮಾರಾಟದಲ್ಲಿ ಹೆಚ್ಚಳ ಸೇರಿದಂತೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ವೃದ್ಧಿಸಿರುವುದರಿಂದ ಈ ಉತ್ತಮ ಬೆಳವಣಿಗೆ ಸಾಧ್ಯವಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ತಿಳಿಸಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕದ (ಪಿಎಂಐ) ವರದಿ ಪ್ರಕಾರ ಜನವರಿಯಲ್ಲಿ 56.5ರಷ್ಟಿದ್ದ ಸೂಚ್ಯಂಕವು, ಫೆಬ್ರುವರಿಯಲ್ಲಿ 56.9ಕ್ಕೆ ಏರಿಕೆಯಾಗಿದೆ. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಿಂದ ಆರೋಗ್ಯ ವಲಯದಲ್ಲಿ ಸಾಕಷ್ಟು ಸುಧಾರಣೆಯಾಗಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ದೇಶದಲ್ಲಿ ಕಳೆದ ಐದು ತಿಂಗಳ ಅವಧಿಯಲ್ಲಿ ಉತ್ಪಾದನಾ ಚಟುವಟಿಕೆಗಳು ಕ್ಷಿಪ್ರಗತಿಯಲ್ಲಿ ಏರಿಕೆ ಕಂಡಿವೆ. ಇದಕ್ಕೆ ಪೂರಕವಾಗಿ ಮಾರಾಟವೂ ವಿಸ್ತರಣೆಯಾಗಿದೆ. ಹೊಸ ರಫ್ತು ಆರ್ಡರ್‌ಗಳ ವಿಸ್ತರಣೆಯೂ ಹೆಚ್ಚಾಗಿದೆ ಎಂದು ವಿವರಿಸಿದೆ.

ಭಾರತದಲ್ಲಿ ತಯಾರಾಗುವ ಉತ್ಪನ್ನಗಳಿಗೆ ಆಸ್ಟ್ರೇಲಿಯಾ, ಬಾಂಗ್ಲಾದೇಶ, ಬ್ರೆಜಿಲ್, ಕೆನಡಾ, ಇಂಡೊನೇಷ್ಯಾ, ಅಮೆರಿಕ, ಯುಎಇಯಲ್ಲಿ ಬೇಡಿಕೆ ಹೆಚ್ಚಿದೆ. ಹಾಗಾಗಿ, ಈ ದೇಶಗಳಿಂದ ಹೊಸ ರಫ್ತು ಆರ್ಡರ್‌ಗಳ ಸಂಖ್ಯೆಯೂ ಹೆಚ್ಚಾಗಿದೆ ಎಂದು ತಿಳಿಸಿದೆ.

'ಆಹಾರಕ್ಕಾಗಿ ಕೈಚಾಚಿದವರ ಮೇಲೆ ಗುಂಡಿನ ದಾಳಿ'

ಗಾಜಾ: 100ಕ್ಕೂ ಹೆಚ್ಚು ಜನ ಸಾವು–ಆರೋಗ್ಯ ಸಚಿವಾಲಯ

ಪ್ಯಾರಿಸ್(ಎಎಫ್‌ಪಿ): ಉತ್ತರ ಗಾಜಾಪಟ್ಟಿಯಲ್ಲಿ ಆಹಾರ ಸಾಮಗ್ರಿ ಪಡೆಯಲು ನಿಂತಿದ್ದ ಪ್ಯಾಲಿಸ್ಟೀನ್ ಜನರ ಮೇಲೆ ಇಸ್ರೇಲ್ ಪಡೆಗಳು ಗುರುವಾರ ಗುಂಡಿನ ದಾಳಿ ನಡೆಸಿದ್ದು, 100ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಗಾಜಾಪಟ್ಟಿಯ ಆರೋಗ್ಯ ಸಚಿವಾಲಯ ತಿಳಿಸಿದೆ.

ಆದರೆ ಈ ಆರೋಪವನ್ನು ಅಲ್ಲಗಳೆದಿರುವ ಇಸ್ರೇಲ್ ಸೇನಾ ಪಡೆ, 'ನೆರವು ಸಾಮಗ್ರಿ ಹೊತ್ತು ತಂದಿದ್ದ 38 ಟ್ರಕ್‌ಗಳ ಸುತ್ತ ಸಾವಿರಾರು ಜನರು ಸುತ್ತುವರಿದಾಗ 'ಕಾಲ್ತುಳಿತ' ಸಂಭವಿಸಿತು. ಇದರಿಂದಾಗಿ ಕೆಲವರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ' ಎಂದು ಹೇಳಿದೆ.

ಕಿಕ್ಕಿರಿದು ನೆರೆದಿದ್ದ ಜನರನ್ನು ಗುರಿಯಾಗಿಸಿಕೊಂಡು ಸೇನಾ ಪಡೆ ಗುಂಡಿನ ದಾಳಿ ನಡೆಸಿತು ಎಂದು ಇಸ್ರೇಲ್ ಮೂಲವೊಂದು ತಿಳಿಸಿದೆ.

'ನರಮೇಧ'ವನ್ನು ಖಂಡಿಸಿರುವ ಗಾಜಾ ಆರೋಗ್ಯ ಸಚಿವಾಲಯವು, 'ಘಟನೆಯಲ್ಲಿ 112 ಮಂದಿ ಹತ್ಯೆಗೀಡಾಗಿದ್ದಾರೆ ಮತ್ತು 750ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ' ಎಂದು ಹೇಳಿದೆ.

ಭಾರಿ ಖಂಡನೆ: ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್, ಇಸ್ರೇಲ್–ಹಮಾಸ್ ಮಧ್ಯೆ ಕದನ ವಿರಾಮ ಒಪ್ಪಂದ ಏರ್ಪಡುವ ಸಾಧ್ಯತೆ ಮತ್ತಷ್ಟು ಕ್ಷೀಣಿಸಿದೆ. ಈ ಘಟನೆಯು ಎಚ್ಚರಿಕೆಯ ಗಂಟೆಯಾಗಿದೆ ಎಂದು ಹೇಳಿದ್ದಾರೆ.



ಬಾಂಬ್ ದಾಳಿಯಲ್ಲಿ ಗಾಯಗೊಂಡ ಮಗುವನ್ನು ಮಹಿಳೆಯೊಬ್ಬರು ಆಸ್ಪತ್ರೆಗೆ ಹೊತ್ತೊಯ್ದರು —ಎಎಫ್‌ಪಿ ಚಿತ್ರ

'ಘಟನೆಯು ಆಘಾತವನ್ನು ಉಂಟುಮಾಡಿದೆ' ಎಂದು ಚೀನಾ ಹೇಳಿದೆ. ಫ್ರಾನ್ಸ್ ವಿದೇಶಾಂಗ ಸಚಿವಾಲಯವು, 'ಆಹಾರ ಅರಸುತ್ತಿದ್ದವರ ಮೇಲೆ ಗುಂಡಿನ ದಾಳಿ ನಡೆಸಿರುವುದು ಸಮರ್ಥನೀಯ ಅಲ್ಲವೇ ಅಲ್ಲ' ಎಂದು ಹೇಳಿದೆ.

ಟರ್ಕಿ ವಿದೇಶಾಂಗ ಸಚಿವಾಲಯವು, 'ಇಸ್ರೇಲ್ ಮಾನವೀಯತೆ ವಿರುದ್ಧ ಮತ್ತೊಂದು ಘೋರ ಅಪರಾಧ ಎಸಗಿದೆ. ಪ್ಯಾಲೆಸ್ಟೀನ್ ಜನರನ್ನು ಕೊಲ್ಲಲು ಇಸ್ರೇಲ್ ಪ್ರಜ್ಞಾಪೂರ್ವಕವಾಗಿ ಯತ್ನಿಸುತ್ತಿದೆ ಎಂಬುದಕ್ಕೆ ಇದು ಉದಾಹರಣೆ' ಎಂದು ಆರೋಪಿಸಿದೆ.

ಕೊಲಂಬಿಯಾ, ಇಟಲಿ, ಇರಾನ್ ಸಹ ಇಸ್ರೇಲ್ ನಡೆಯನ್ನು ಖಂಡಿಸಿವೆ.

ಢಾಕಾದಲ್ಲಿ ಅಗ್ನಿ ಅವಘಡ: 46 ಸಾವು

ಢಾಕಾ(ಪಿಟಿಐ): ಇಲ್ಲಿನ ಏಳು ಅಂತಸ್ತಿನ ವಾಣಿಜ್ಯ ಕಟ್ಟಡದಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಕನಿಷ್ಠ 46 ಜನರು ಮೃತಪಟ್ಟು, 22 ಮಂದಿ ಗಾಯಗೊಂಡಿದ್ದಾರೆ ಎಂದು ಬಾಂಗ್ಲಾದೇಶದ ಆರೋಗ್ಯ ಸಚಿವ ಸಮಂತ ಲಾಲ್ ಸೇನ್ ಶುಕ್ರವಾರ ತಿಳಿಸಿದರು.

ಪ್ರಧಾನಿ ಶೇಖ್ ಹಸೀನಾ ಅವರು ಘಟನೆ ಬಗ್ಗೆ ಮಾಹಿತಿ ಪಡೆದಿದ್ದಾರೆ ಎಂದೂ ಹೇಳಿದರು.

ಕಟ್ಟಡದ ಮೊದಲ ಮಹಡಿಯಲ್ಲಿರುವ 'ಕಚ್ಚಿ ಭಾಯಿ' ರೆಸ್ಟೋರೆಂಟ್‌ನಲ್ಲಿ ಗುರುವಾರ ರಾತ್ರಿ 9.50ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ನಂತರ ಅದು ವೇಗವಾಗಿ ಇತರ ಮಹಡಿಗಳಿಗೂ ವ್ಯಾಪಿಸಿತ್ತು ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದರು.

ಮೃತರೂ ಸೇರಿದಂತೆ 75 ಜನರನ್ನು ಕಟ್ಟಡದಿಂದ ರಕ್ಷಣೆ ಮಾಡಲಾಗಿದ್ದು, ಗಾಯಾಳುಗಳ ಸ್ಥಿತಿ ಗಂಭೀರವಾಗಿದೆ ಎಂದೂ ಅವರು ಮಾಹಿತಿ ನೀಡಿದರು.

'ಪ್ರತಿ ಮಹಡಿಗಳಲ್ಲೂ ಅನಿಲ ಗ್ಯಾಸ್ ಸಿಲಿಂಡರ್‌ಗಳು ಇದ್ದವು. ಅನಿಲ ಸೋರಿಕೆಯಿಂದಲೇ ಅಗ್ನಿ ಅವಘಡ ಸಂಭವಿಸಿರಬಹುದು. ಅಲ್ಲದೆ, ಕಟ್ಟಡದ ಒಂದು ಕಡೆ ಮಾತ್ರ ನಿರ್ಗಮನ ದ್ವಾರವಿತ್ತು' ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಘಟನೆ ಬಗ್ಗೆ ತನಿಖೆಗೆ ಐವರು ಸದಸ್ಯರ ಸಮಿತಿಯನ್ನು ರಚನೆ ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

'ಮಾ. 9ಕ್ಕೆ ಪಾಕ್ ಅಧ್ಯಕ್ಷೀಯ ಚುನಾವಣೆ'

ಇಸ್ಲಾಮಾಬಾದ್ (ಪಿಟಿಐ): 'ದೇಶದ ಅಧ್ಯಕ್ಷರ ಆಯ್ಕೆಗಾಗಿ ಇದೇ 9ರಂದು ಚುನಾವಣೆ ನಡೆಸಲಾಗುವುದು' ಎಂದು ಪಾಕಿಸ್ತಾನದ ಚುನಾವಣಾ ಆಯೋಗ ಶುಕ್ರವಾರ ಘೋಷಿಸಿದೆ.

'ನ್ಯಾಷನಲ್ ಅಸೆಂಬ್ಲಿ ಹಾಗೂ ಎಲ್ಲ ಪ್ರಾಂತೀಯ ಅಸೆಂಬ್ಲಿಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಚುನಾವಣೆ ನಡೆಯಲಿದೆ. ಮಾಜಿ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರೂ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು, ಅವರೇ ಗೆಲುವು ಸಾಧಿಸುವುದು ಬಹುತೇಕ ಖಚಿತವಾಗಿದೆ. ಜರ್ದಾರಿ ಅವರು ಚುನಾವಣೆಯಲ್ಲಿ ಗೆದ್ದರೆ 11 ವರ್ಷದ ಬಳಿಕ ಅವರು ಮತ್ತೆ ಅಧ್ಯಕ್ಷರಾಗಲಿದ್ದಾರೆ' ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.


'ಚುನಾವಣೆಗೆ ಸ್ಪರ್ಧಿಸಬಯಸುವ ಅಭ್ಯರ್ಥಿಗಳು ಶನಿವಾರ ಮಧ್ಯಾಹ್ನದೊಳಗಾಗಿ ಲಾಹೋರ್, ಕರಾಚಿ, ಪೆಶಾವರ ಹಾಗೂ ಕ್ವೆಟ್ಟಾದ ಚುನಾವಣಾ ಅಧಿಕಾರಿಗಳಿಗೆ ತಮ್ಮ ನಾಮಪತ್ರಗಳನ್ನು ಸಲ್ಲಿಸಬೇಕು. ಮಾ. 4ರ ವೇಳೆಗೆ ಅಧಿಕಾರಿಗಳು ನಾಮಪತ್ರಗಳನ್ನು ಪರಿಶೀಲಿಸುವರು. ಅದೇ ದಿನದಂದು ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುವುದು. ಇದಾದ ಒಂದು ದಿನದ ಬಳಿಕ ಅಭ್ಯರ್ಥಿಗಳು ಉಮೇದುವಾರಿಕೆಯನ್ನು ಹಿಂಪಡೆಯಬಹುದು' ಎಂದು ಚುನಾವಣಾ ಆಯೋಗ ತಿಳಿಸಿದೆ.

ಪಾಕ್: ಪಿಟಿಐ ಅಧ್ಯಕ್ಷರಾಗಿ ಗೋಹರ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಪಕ್ಷದ ಅಧ್ಯಕ್ಷರಾಗಿ ಗೋಹರ್ ಖಾನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪಕ್ಷವು ಗುರುವಾರ ಘೋಷಿಸಿದೆ.

ಗೋಹರ್ ಖಾನ್ ಹೊರತುಪಡಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಇಬ್ಬರು ನಾಮಪತ್ರ ವಾಪಸ್ ಪಡೆದಿದ್ದರಿಂದ, ಖಾನ್ ಅವಿರೋಧವಾಗಿ ಆಯ್ಕೆಯಾದರು. ಪಕ್ಷದ ಅಧ್ಯಕ್ಷರಾಗಿ ಎರಡು ಬಾರಿ ಆಯ್ಕೆಯಾದ ಏಕೈಕ ನಾಯಕ ಗೋಹರ್ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.

ಡಾ.ಯಾಸ್ಮಿನ್ ರಶೀದ್, ಅಲಿ ಅಮೀನ್ ಗಂಡಾಪುರ ಹಾಗೂ ಹಲೀಮ್ ಆದಿಲ್ ಶೇಖ್ ಅವರು ಕ್ರಮವಾಗಿ ಪಂಜಾಬ್, ಖೈಬರ್ ಪಖ್ತುಂಖ್ವಾ ಮತ್ತು ಸಿಂಧ್ ಘಟಕದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಪಶ್ಚಿಮ ಬಂಗಾಳದ ಇಂದಿನ ಸನ್ನಿವೇಶವನ್ನು ಇಡೀ ದೇಶವೇ ನೋಡುತ್ತಿದೆ: ಪ್ರಧಾನಿ

ಟಿಎಂಸಿ ವಿರುದ್ಧ ಮೋದಿ ವಾಗ್ದಾಳಿ

ಆರಂಭಾಗ್ (ಪಶ್ಚಿಮ ಬಂಗಾಳ) (ಪಿಟಿಐ): ಸಂದೇಶ್‌ಖಾಲಿಯಲ್ಲಿ ನಡೆದ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಟಿಎಂಸಿ ನೇತೃತ್ವದ ಸರ್ಕಾರದ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ವಾಗ್ದಾಳಿ ನಡೆಸಿದರು. ಈ ವಿಷಯವಾಗಿ ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ' ಮೌನ ವಹಿಸಿದೆ ಎಂದೂ ಅವರು ಕಿಡಿಕಾರಿದರು.

ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಬಂಗಾಳದ ಇಂದಿನ ಸನ್ನಿವೇಶವನ್ನು ಇಡೀ ದೇಶವೇ ನೋಡುತ್ತಿದೆ. ಸಂದೇಶ್‌ಖಾಲಿಯ ಸಹೋದರಿಯರಿಗೆ ಆದ ಅನ್ಯಾಯವನ್ನು ತಿಳಿದು ಇಡೀ ದೇಶವೇ ಕ್ರೋಧಗೊಂಡಿದೆ' ಎಂದು ಹೇಳಿದರು.

'ಟಿಎಂಸಿ ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷವನ್ನು ಸೋಲಿಸಿ' ಎಂದು ಕರೆ ನೀಡಿದರು.

ಟಿಎಂಸಿಯು ಅಲ್ಪಸಂಖ್ಯಾತರ ಬೆಂಬಲವಿದೆ ಎಂಬ ವಿಶ್ವಾಸದಲ್ಲಿದೆ, ಆದರೆ ಮುಸ್ಲಿಮರೂ ಟಿಎಂಸಿಯ ವಿರುದ್ಧ ಮತ ಚಲಾಯಿಸಲಿದ್ದಾರೆ ಎಂದು ಹೇಳಿದರು.

'ಸಂದೇಶ್‌ಖಾಲಿ ಸಹೋದರಿಯರಿಗೆ ಆದ ಸ್ಥಿತಿ ಕಂಡು ಸಮಾಜ ಸುಧಾರಕ ರಾಜಾ ರಾಮ್ ಮೋಹನ್ ರಾಯ್ ಅವರ ಆತ್ಮವು ಅಳುತ್ತಿರಬಹುದು, ಕಲ್ಲಾಗಿ ಹೋಗಿರಬಹುದು. ದೌರ್ಜನ್ಯದ ಬಗ್ಗೆ ಟಿಎಂಸಿ ಉತ್ತರ ಕೊಡಲೇಬೇಕು' ಎಂದು ಆಗ್ರಹಿಸಿದರು.



ಪ್ರಧಾನಿ ನರೇಂದ್ರ ಮೋದಿ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೋಲ್ಕತ್ತದಲ್ಲಿ ಶುಕ್ರವಾರ ಮಾತುಕತೆ ನಡೆಸಿದರು – ಪಿಟಿಐ ಚಿತ್ರ

'ಇಂಡಿಯಾ ಮೈತ್ರಿಕೂಟದ ನಾಯಕರು, ಟಿಎಂಸಿಯಿಂದ ದೌರ್ಜನ್ಯ ಅನುಭವಿಸಿದವರ ಪರವಾಗಿ ನಿಲ್ಲುವ ಬದಲಾಗಿ ಭ್ರಷ್ಟ ಮತ್ತು ಓಲೈಕೆ ರಾಜಕಾರಣದ ಪರ ನಿಂತಿದ್ದಾರೆ' ಎಂದು ಹರಿಹಾಯ್ದರು.

'ಅವರು ('ಇಂಡಿಯಾ' ನಾಯಕರು) ಬೆಂಗಳೂರು, ಮುಂಬೈ ಮತ್ತಿತರ ಕಡೆಗಳಲ್ಲಿ ಸಭೆ ನಡೆಸುವುದರಲ್ಲಿ ನಿರತರಾಗಿದ್ದಾರೆ. ಅವರಿಗೆ ನಮ್ಮ ತಾಯಂದಿರು, ಸಹೋದರಿಯರ ಬಗ್ಗೆ ಕಾಳಜಿ ಇಲ್ಲ. ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಬಂಗಾಳದಲ್ಲಿ ಇಂಥ ಘಟನೆಗಳು ನಡೆಯುತ್ತಿರುತ್ತವೆ' ಎಂದರು. ಇದು ಬಂಗಾಳಕ್ಕೆ ಮಾಡಿದ ಅವಮಾನ ವಲ್ಲವೇ' ಎಂದು ಪ್ರಶ್ನಿಸಿದರು.

ಟಿಎಂಸಿ ಸರ್ಕಾರದ ವಿರುದ್ಧ ಪ್ರತಿಭಟನೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸರ್ಕಾರದ ವಿರುದ್ಧ ದೆಹಲಿ ಬಿಜೆಪಿ ಘಟಕವು ತೀನ್ ಮೂರ್ತಿ ಚೌಕ್‌ನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿತು.

ತೀನ್ ಮೂರ್ತಿ ಚೌಕ್‌ನಲ್ಲಿ ಸೇರಿದ್ದ ಬಿಜೆಪಿ ಕಾರ್ಯಕರ್ತರು ಹಾಗೂ ನಾಯಕರು, 'ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿ ಅವರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಮತ್ತು ಗ್ರಾಮಸ್ಥರ ಭೂಮಿ ಕಸಿದಿರುವ ಪ್ರಕಣದ ಪ್ರಮುಖ ಆರೋಪಿ ಹಾಗೂ ಟಿಎಂಸಿ ಮುಖಂಡ ಶಹಜಹಾನ್ ಶೇಖ್ ಅವರನ್ನು ಗುರುವಾರ ಬಂಧಿಸಿದ ಬೆನ್ನಲ್ಲೇ ಬಿಜೆಪಿ ಈ ಪ್ರತಿಭಟನೆ ನಡೆಸಿದೆ.

ಶಹಜಹಾನ್ ಬಂಧನಕ್ಕೊಳಗಾದ ತಕ್ಷಣವೇ ಆರು ವರ್ಷಗಳ ಕಾಲ ಅವರನ್ನು ಟಿಎಂಸಿ ಪಕ್ಷದಿಂದ ಅಮಾನತುಗೊಳಿಸಲಾಗಿದೆ.

'ಡಬಲ್ ಎಂಜಿನ್ ದುರಾಡಳಿತಕ್ಕೆ ಗುಜರಾತ್ ಉದಾಹರಣೆ'

ನವದೆಹಲಿ: ಕಳೆದ ಮೂರು ವರ್ಷಗಳಲ್ಲಿ ಗುಜರಾತ್‌ನಲ್ಲಿ 25 ಸಾವಿರ ಜನ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಗುಜರಾತ್ ಸರ್ಕಾರದ ವಿರುದ್ಧ ಕಿಡಿಕಾರಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಇದು ಬಿಜೆಪಿಯ ಡಬಲ್ ಎಂಜಿನ್ ದುರಾಡಳಿತಕ್ಕೆ ಮತ್ತೊಂದು ಉದಾಹರಣೆ' ಎಂದರು.



ಮಲ್ಲಿಕಾರ್ಜುನ ಖರ್ಗೆ

ಗುಜರಾತ್‌ನಲ್ಲಿ 2020ರಿಂದ 2023ರವರೆಗೆ 495 ವಿದ್ಯಾರ್ಥಿಗಳು ಸೇರಿದಂತೆ 25,578 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಗುಜರಾತ್ ಸರ್ಕಾರ ಸೋಮವಾರ ವಿಧಾನಸಭೆಗೆ ನೀಡಿದ ಮಾಹಿತಿ ಕುರಿತು ಪ್ರತಿಕ್ರಿಯಿಸಿದ ಖರ್ಗೆ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

'ತವರು ರಾಜ್ಯದಲ್ಲಿ ನಡೆಯುತ್ತಿರುವ ದುರಂತದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮೌನವಾಗಿರುವುದು ಏಕೆ ಎಂದು ಪ್ರಶ್ನಿಸಿದ ಅವರು, ನಾಗರಿಕರ ರಕ್ಷಣೆ ಮತ್ತು ಆತ್ಮಹತ್ಯೆ ಹೆಚ್ಚಳಕ್ಕೆ ಕಾರಣವಾಗಿರುವ ಸಮಸ್ಯೆಗಳ ನಿವಾರಣೆ ಮಾಡುವಲ್ಲಿ ಭೂಪೇಂದ್ರ ಪಟೇಲ್ ಸರ್ಕಾರ ವಿಫಲವಾಗಿರುವುದು ಸ್ಪಷ್ಟವಾಗಿದೆ' ಎಂದರು.

'ದುರ್ಬಲರಿಗೆ ನೆರವು ನೀಡುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿರುವುದನ್ನು ಈ ದತ್ತಾಂಶಗಳಿಂದ ಗೊತ್ತಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡಿದ್ದ ಭರವಸೆಗಳು ಹುಸಿಯಾಗಿವೆ' ಎಂದು ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಬೇಸಿಗೆ: ಆರಂಭದಲ್ಲೇ ಹೆಚ್ಚು ಬಿಸಿಲು

ನವದೆಹಲಿ(ಪಿಟಿಐ): ಕರ್ನಾಟಕದ ಉತ್ತರ ಭಾಗ, ತೆಲಂಗಾಣ, ಆಂಧ್ರ ಪ್ರದೇಶದಲ್ಲಿ ಈ ಬಾರಿ ಬೇಸಿಗೆ ಅವಧಿಯಲ್ಲಿ ಆರಂಭದಿಂದಲೇ ಬಿಸಿಲ ಝಳ ಹೆಚ್ಚಾಗಿರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ಹೇಳಿದೆ.

ಮಹಾರಾಷ್ಟ್ರ ಮತ್ತು ಒಡಿಶಾದ ಹಲವು ಭಾಗಗಳಲ್ಲಿ ಕೂಡ ಬಿಸಿಲು ಹೆಚ್ಚಾಗಿರಲಿದೆ. ಈ ಎಲ್ಲ ರಾಜ್ಯಗಳಲ್ಲಿ ವಾಡಿಕೆಗಿಂತ ಹೆಚ್ಚು ದಿನಗಳ ಕಾಲ ಬಿಸಿಗಾಳಿ ಬೀಸಲಿದೆ ಎಂದೂ ಇಲಾಖೆ ಮುನ್ಸೂಚನೆ ನೀಡಿದೆ.

ಬೇಸಿಗೆ ಅವಧಿಯುದ್ದಕ್ಕೂ ಎಲ್ ನಿನೊ ಪರಿಸ್ಥಿತಿ ಮುಂದುವರಿಯುವ ಮುನ್ಸೂಚನೆ ಇದ್ದು, ಇದೇ ಕಾರಣಕ್ಕೆ ತಾಪಮಾನದಲ್ಲಿ ಹೆಚ್ಚಳ ಕಂಡುಬರಲಿದೆ ಇಲಾಖೆ ತಿಳಿಸಿದೆ.



ಪೆಸಿಫಿಕ್ ಸಾಗರದ ಮೇಲ್ಮೈ ಉಷ್ಣಾಂಶದಲ್ಲಿ ಆಗುವ ಹೆಚ್ಚಳವು ಮುಂಗಾರು ಮಾರುತಗಳನ್ನು ದುರ್ಬಲಗೊಳಿಸುತ್ತದೆ. ಈ ಪ್ರಾಕೃತಿಕ ವಿದ್ಯಮಾನವನ್ನು ಎಲ್ ನಿನೊ ಎನ್ನಲಾಗುತ್ತದೆ.

ದೇಶದ ಬಹುತೇಕ ಭಾಗಗಳಲ್ಲಿ ಮಾರ್ಚ್‌ನಿಂದ ಮೇ ವರೆಗಿನ ಅವಧಿಯ ಗರಿಷ್ಠ ಮತ್ತು ಕನಿಷ್ಠ ತಾಪಮಾನಗಳು ಈ ಬಾರಿ ವಾಡಿಕೆಗಿಂತ ಹೆಚ್ಚಿರಲಿವೆ ಎಂದು ಇಲಾಖೆಯ ಮಹಾ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ದೇಶದ ಉತ್ತರ ಮತ್ತು ಕೇಂದ್ರ ಭಾಗದ ಪ್ರದೇಶಗಳಲ್ಲಿ ಬಿಸಿ ಗಾಳಿಯ ಪರಿಸ್ಥಿತಿ ಕಂಡುಬರುವ ಸಾಧ್ಯತೆ ಇಲ್ಲ ಎಂದೂ ಹೇಳಿದ್ದಾರೆ.

ಮಹಾದೇವ್ ಆ್ಯಪ್: ₹ 580 ಕೋಟಿ ಮೌಲ್ಯದ ಷೇರುಗಳು ನಿಷ್ಕ್ರಿಯ

ನವದೆಹಲಿ(ಪಿಟಿಐ): ಮಹಾದೇವ್ ಆ್ಯಪ್ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯವು (ಇ.ಡಿ) ದುಬೈ ಮೂಲದ 'ಹವಾಲಾ ಆಪರೇಟರ್'ಗೆ ಸೇರಿದ ₹580 ಕೋಟಿಗೂ ಅಧಿಕ ಮೌಲ್ಯದ ಷೇರುಗಳನ್ನು ನಿಷ್ಕ್ರಿಯಗೊಳಿಸಿ, ನಗದು ಸೇರಿದಂತೆ ₹3.64 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ಪ್ರಕರಣ ಕುರಿತ ತನಿಖೆ ಭಾಗವಾಗಿ ಫೆ.28ರಂದು ಕೋಲ್ಕತ್ತ, ಗುರುಗ್ರಾಮ, ದೆಹಲಿ, ಇಂದೋರ್, ಮುಂಬೈ ಹಾಗೂ ರಾಯಪುರದ ವಿವಿಧ ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ಇದರ ಬೆನ್ನಲ್ಲೇ, ಈಗ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.



ಮಹಾದೇವ್ ಆನ್‌ಲೈನ್ ಗೇಮಿಂಗ್ ಹಾಗೂ ಬೆಟ್ಟಿಂಗ್ ಆ್ಯಪ್ ನಂಟಿನ ಅಕ್ರಮಗಳಲ್ಲಿ ಛತ್ತೀಸಗಢದ ಪ್ರಭಾವಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನಲಾದ ಅಂಶ ಇ.ಡಿ ನಡೆಸಿದ ತನಿಖೆಯಿಂದ ಗೊತ್ತಾಗಿತ್ತು.

'ಈ ಪ್ರಕರಣದಲ್ಲಿ ಹರಿಶಂಕರ್ ತಿಬ್ರೇವಾಲ್ ಎಂಬುವವರು 'ಹವಾಲಾ ಆಪರೇಟರ್' ಆಗಿದ್ದಾರೆ. ಕೋಲ್ಕತ್ತ ಮೂಲದ ಹರಿಶಂಕರ್ ಸದ್ಯ ದುಬೈ ನಿವಾಸಿ. ಮಹಾದೇವ್ ಆ್ಯಪ್ ಪ್ರವರ್ತಕರೊಂದಿಗೆ ಪಾಲುದಾರಿಕೆ ಹೊಂದಿದ್ದರು. 'ಸ್ಕೈ ಎಕ್ಸ್‌ಚೇಂಜ್' ಎಂಬ ಅಕ್ರಮ ಬೆಟ್ಟಿಂಗ್ ಆ್ಯಪ್‌ನ ಮಾಲೀಕತ್ವ ಹೊಂದಿದ್ದಲ್ಲದೇ, ಅದರ ಕಾರ್ಯಾಚರಣೆಯನ್ನೂ ನಡೆಸುತ್ತಿದ್ದ' ಎಂದು ಇ.ಡಿ ತಿಳಿಸಿದೆ.

₹1.86 ಕೋಟಿ ನಗದು ಹಾಗೂ ₹1.78 ಕೋಟಿ ಮೌಲ್ಯದ ವಿವಿಧ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದೂ ತಿಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ಈ ವರೆಗೆ ಜಾರಿ ನಿರ್ದೇಶನಾಲಯ 9 ಜನರನ್ನು ಬಂಧಿಸಿದೆ.

ಲಿಂಗತ್ವ ಅಲ್ಪಸಂಖ್ಯಾತರ ಕುರಿತ ಸುದ್ದಿಪ್ರಸಾರ: ಹೊಸ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲಿಂಗತ್ವ ಅಲ್ಪಸಂಖ್ಯಾತರ (ಎಲ್‌ಜಿಬಿಟಿಕ್ಯೂಎ+) ಕುರಿತ ಮಾಹಿತಿ ಪ್ರಸಾರ ಹಾಗೂ ಪ್ರಕಟಿಸುವುದಕ್ಕೆ ಸಂಬಂಧಿಸಿ ಸುದ್ದಿ ಪ್ರಸಾರ ಮತ್ತು ಡಿಜಿಟಲ್ ಮಾನದಂಡಗಳ ಪ್ರಾಧಿಕಾರ (ಎನ್‌ಬಿಡಿಎಸ್‌ಎ) ಹೊಸ ಮಾರ್ಗ ಸೂಚಿಗಳನ್ನು ಬಿಡುಗಡೆ ಮಾಡಿದೆ.

ಲಿಂಗತ್ವ ಅಲ್ಪಸಂಖ್ಯಾತರ ಕುರಿತು ರೂಢಿಯಲ್ಲಿರುವ ಅಭಿಪ್ರಾಯಗಳನ್ನು ಮತ್ತು ಪಕ್ಷಪಾತ ಉತ್ತೇಜಿಸುವ ಸುದ್ದಿಗಳನ್ನು ಪ್ರಸಾರ ಮಾಡಬಾರದು. ವ್ಯಕ್ತಿಯ ಲಿಂಗತ್ವ ಅಥವಾ ಲೈಂಗಿಕತೆ ಕುರಿತು ಅನುಮತಿ ಇಲ್ಲದೆ ಸುದ್ದಿಯ ಪ್ರಸಾರ ಇಲ್ಲವೇ ಪ್ರಕಟಿಸಬಾರದು ಎಂದು ಹೊಸ ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಎಲ್ಲರನ್ನು ಒಳಗೊಳ್ಳುವ ಲಿಂಗ ತಟಸ್ಥ ಭಾಷೆಯನ್ನು ಬಳಸಬೇಕು ಹಾಗೂ ವ್ಯಕ್ತಿಯು ಆದ್ಯತೆಯಂತೆ ಅವರ ಹೆಸರು ಇಲ್ಲವೇ ಸರ್ವನಾಮ ಬಳಸಬೇಕು. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ ಕುರಿತ ಸೂಕ್ಷ್ಮವಲ್ಲದ ಹಾಗೂ ತಪ್ಪು ವರದಿಗಳನ್ನು ಮಾಡುವುದರಿಂದ ಸಾಮಾಜಿಕವಾಗಿ ಆಗುವ ಪರಿಣಾಮಗಳು ಗಂಭೀರವಾಗಿರಲಿವೆ ಎಂದು ಪ್ರಾಧಿಕಾರ ಹೇಳಿದೆ.

ಮಾರ್ಗಸೂಚಿಯಲ್ಲಿನ ಪ್ರಮುಖ ಅಂಶಗಳು

- ವರದಿಗಾರಿಕೆಯು ಯಾವುದೇ ವಿಷಯವನ್ನು ನಾಟಕೀಯವಾಗಿಸಬಾರದು. ವೀಕ್ಷಕರಲ್ಲಿ ಆಘಾತ, ಸಂಕಟ ಅಥವಾ ಭಯ ಹುಟ್ಟಿಸುವಂತಿರಬಾರದು
- ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ ಕುರಿತು ರೂಢಿಗತ ಅಭಿಪ್ರಾಯಗಳು ಮುಂದುವರಿಯುವಂತೆ ಮಾಡುವ ಸುದ್ದಿಗಳ ಪ್ರಸಾರ ಮಾಡಬಾರದು
- ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ ವಿರುದ್ಧದ ದ್ವೇಷ ಭಾಷಣ ಎಂಬರ್ಥ ಬರುವ ಭಾಷೆ ಅಥವಾ ನಿಂದನೀಯ ಪದಗಳನ್ನು ಬಳಸಬಾರದು

ಎನ್‌ಐಟಿ ಕ್ಯಾಂಪಸ್‌ನಲ್ಲೇ ಪ್ರೊಫೆಸರ್‌ಗೆ ಇರಿತ

ತಿರುವನಂತಪುರ: ಕೋಯಿಕ್ಕೋಡ್‌ನಲ್ಲಿರುವ 'ಎನ್‌ಐಟಿ ಕ್ಯಾಲಿಕಟ್' ಕ್ಯಾಂಪಸ್‌ನಲ್ಲಿಯೇ ಸಹಾಯಕ ಪ್ರಾಧ್ಯಾಪಕರೊಬ್ಬರಿಗೆ ಕತ್ತು ಮತ್ತು ಹೊಟ್ಟೆಗೆ ಚಾಕುವಿನಿಂದ ಇರಿಯಲಾಗಿದ್ದು, ಅವರ ಸ್ಥಿತಿ ಸ್ಥಿರವಾಗಿದೆ.

ಕೃತ್ಯಕ್ಕೆ ಹಳೆಯ ದ್ವೇಷ ಕಾರಣ ಇರಬಹುದು ಎಂದು ಶಂಕಿಸಲಾಗಿದೆ. ತಮಿಳುನಾಡಿನ ಈರೋಡ್‌ನ ಜಯಚಂದ್ರನ್ (35) ಹಲ್ಲೆಗೊಳಗಾಗಿದ್ದು, ಆರೋಪಿ ಸೇಲಂನ ವಿನೋದ್ ಕುಮಾರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಜಾತಿ, ಧರ್ಮ, ಭಾಷೆಗಳ ಆಧಾರದಲ್ಲಿ ಮತ ಯಾಚಿಸಬೇಡಿ'

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆ ವೇಳೆ ಜಾತಿ, ಧರ್ಮ ಮತ್ತು ಭಾಷೆಗಳ ವಿಚಾರಗಳನ್ನು ಮುಂದಿಟ್ಟುಕೊಂಡು ಮತ ಯಾಚಿಸಬೇಡಿ ಮತ್ತು ಭಕ್ತ ಹಾಗೂ ಭಗವಂತನ ನಡುವಿನ ಸಂಬಂಧಗಳನ್ನು ಅವಮಾನಿಸಬೇಡಿ ಎಂದು ಕೇಂದ್ರ ಚುನಾವಣಾ ಆಯೋಗವು ಎಲ್ಲ ರಾಜಕೀಯ ಪಕ್ಷಗಳಿಗೆ ಸೂಚಿಸಿದೆ.



'ದೇವಸ್ಥಾನ, ಮಸೀದಿ, ಚರ್ಚ್ ಮತ್ತು ಗುರುದ್ವಾರ ಸೇರಿದಂತೆ ಧಾರ್ಮಿಕ ಸ್ಥಳಗಳನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳುವಂತಿಲ್ಲ. ನೀತಿಸಂಹಿತೆ ಉಲ್ಲಂಘಿಸಿದರೆ ಅಭ್ಯರ್ಥಿಗಳು ಮತ್ತು ಪ್ರಚಾರಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.' ಎಂದು ತಿಳಿಸಿದೆ.

'ವಿಷಯಾಧರಿತ ಚರ್ಚೆಗಳ ಮೂಲಕ ಚುನಾವಣಾ ಪ್ರಚಾರವನ್ನು ನಡೆಸಬೇಕು. ಪಕ್ಷಗಳು ಮತ್ತು ಅದರ ನಾಯಕರು ಆಧಾರ ರಹಿತ ಮತ್ತು ಜನರ ದಿಕ್ಕು ತಪ್ಪಿಸುವ ಹೇಳಿಕೆಗಳನ್ನು ನೀಡುವಂತಿಲ್ಲ' ಎಂದು ತಿಳಿಸಿದೆ.

ಸಾಮಾಜಿಕ ಜಾಲತಾಣ ಬಳಕೆಯ ಬಗ್ಗೆಯೂ ಸೂಚನೆ ನೀಡಿದ ಆಯೋಗ, 'ಪ್ರತಿಸ್ಪರ್ಧಿಗಳನ್ನು ನಿಂದಿಸುವ, ಅವಮಾನಿಸುವ, ಕೆಟ್ಟ ಅಭಿರುಚಿಯ ಮತ್ತು ಘನತೆಗೆ ಕುಂದು ತರುವ ಪೋಸ್ಟ್‌ಗಳನ್ನು ಮಾಡುವಂತಿಲ್ಲ' ಎಂದು ತಿಳಿಸಿದೆ.

'ಸಾರ್ವತ್ರಿಕ ಚುನಾವಣೆಯಲ್ಲಿ ನೈತಿಕ ರಾಜಕೀಯಕ್ಕೆ ವೇದಿಕೆ ಒದಗಿಸುವ ಮತ್ತು ಗೊಂದಲ ಕಡಿಮೆ ಮಾಡುವ ಉದ್ದೇಶವನ್ನು ಆಯೋಗ ಹೊಂದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮಹಾರಾಷ್ಟ್ರ ಪ್ರವೇಶಿಸಲಿರುವ ನ್ಯಾಯ ಯಾತ್ರೆ'

ಮುಂಬೈ (ಪಿಟಿಐ): 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯು ಮಾರ್ಚ್ 10ರಂದು ಗುಜರಾತ್‌ನಿಂದ ಮಹಾರಾಷ್ಟ್ರದ ನಂದುರ್ಬಾರ್ ಜಿಲ್ಲೆಯನ್ನು ಪ್ರವೇಶಿಸಲಿದೆ' ಎಂದು ಪಕ್ಷದ ಸ್ಥಳೀಯ ಕಾರ್ಯಕರ್ತರು ಶುಕ್ರವಾರ ಹೇಳಿದ್ದಾರೆ.

'ನಂದುರ್ಬಾರ್‌ನಿಂದ ಧುಲೆ, ಮಾಲೆಗಾಂವ್, ನಾಸಿಕ್ ಮೂಲಕ ಯಾತ್ರೆ ಸಾಗಲಿದೆ. ಯಾತ್ರೆಯ ವೇಳೆ ಕಾಲಾರಾಮ್‌ನ ರಾಮ ಮಂದಿರದಲ್ಲಿ ಹಾಗೂ ತ್ರಯಂಬಕೇಶ್ವರದ ಶಿವ ಮಂದಿರದಲ್ಲಿ ರಾಹುಲ್ ಅವರು ಪ್ರಾರ್ಥನೆ ಸಲ್ಲಿಸಲಿದ್ದಾರೆ. ಠಾಣೆಯ ಭಿವಂಡಿಯಲ್ಲಿ ನಡೆಯಲಿರುವ ರ್‍ಯಾಲಿಯಲ್ಲಿ ರಾಹುಲ್ ಅವರು ಭಾಷಣ ಮಾಡಲಿದ್ದಾರೆ. ಬಳಿಕ ಯಾತ್ರೆಯು ಮಾರ್ಚ್ 13 ಅಥವಾ 14ರಂದು ಮುಂಬೈನಲ್ಲಿ ಸಮಾರೋಪಗೊಳ್ಳಲಿದೆ' ಎಂದೂ ಹೇಳಿದ್ದಾರೆ.

46 ಸ್ಥಾನದಲ್ಲಿ ಸ್ಪರ್ಧಿಸಲು ಸಿದ್ಧ: ವಿಬಿಎ

ನಾಗ್ಪುರ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಹಾ ವಿಕಾಸ ಆಘಾಡಿ (ಎಂವಿಎ) ಜತೆಗೆ ಮೈತ್ರಿ ಸಾಧ್ಯವಾಗದಿದ್ದರೆ, ತಮ್ಮ ಪಕ್ಷವು ಮಹಾರಾಷ್ಟ್ರದ 46 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಎಂದು ವಂಚಿತ ಬಹುಜನ ಆಘಾಡಿ (ವಿಬಿಎ) ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್ ಹೇಳಿದ್ದಾರೆ.

ಎಂವಿಎ ಮೈತ್ರಿಯಲ್ಲಿರುವ ಇತರ ಎರಡು ಪಕ್ಷಗಳಾದ ಶಿವಸೇನಾ (ಯುಬಿಟಿ) ಮತ್ತು ಕಾಂಗ್ರೆಸ್ ನಡುವೆ ಸೀಟು ಹಂಚಿಕೆಗೆ ಸಂಬಂಧಿಸಿದಂತೆ 'ಹಗ್ಗಜಗ್ಗಾಟ' ಮುಂದುವರಿದಿದೆ ಎಂದು ಅವರು ತಿಳಿಸಿದರು. ಎಂವಿಎ ಮೈತ್ರಿಕೂಟದ ಪಕ್ಷಗಳು ಸೀಟು ಹಂಚಿಕೆ ಪ್ರಕ್ರಿಯೆ ಪೂರ್ಣಗೊಳಿಸಿದೆ ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಈಚೆಗೆ ಹೇಳಿದ್ದರು. ಅದರ ಬೆನ್ನಲ್ಲೇ ಪ್ರಕಾಶ್ ಅಂಬೇಡ್ಕರ್ ಹೇಳಿಕೆ ಹೊರಬಿದ್ದಿದೆ.

'ಶಿವಸೇನಾ (ಯುಬಿಟಿ) ಮತ್ತು ಕಾಂಗ್ರೆಸ್ ನಡುವಣ ಸೀಟು ಹಂಚಿಕೆ ಗೊಂದಲ ಬಗೆಹರಿದ ಬಳಿಕವಷ್ಟೇ ನಮ್ಮ ಜತೆ ಮಾತುಕತೆ ಆರಂಭವಾಗಲಿದೆ. ಮಹಾರಾಷ್ಟ್ರದಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿದರೂ ಆರು ಸ್ಥಾನಗಳನ್ನು ಗೆಲ್ಲುವ ಶಕ್ತಿ ನಮ್ಮ ಪಕ್ಷಕ್ಕಿದೆ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಹಾರಾಷ್ಟ್ರದಲ್ಲಿ 48 ಲೋಕಸಭಾ ಕ್ಷೇತ್ರಗಳಿದ್ದು, ಅತಿಹೆಚ್ಚು ಕ್ಷೇತ್ರಗಳಿರುವ ರಾಜ್ಯಗಳ ಪೈಕಿ ಉತ್ತರ ಪ್ರದೇಶದ (80) ಬಳಿಕ ಎರಡನೇ ಸ್ಥಾನದಲ್ಲಿದೆ.

ಮಾಜಿ ರಾಜ್ಯಪಾಲ ಖುರೇಷಿ ನಿಧನ



ಭೋಪಾಲ್ (ಪಿಟಿಐ): ಉತ್ತರ ಪ್ರದೇಶದ ಮಾಜಿ ರಾಜ್ಯಪಾಲ ಮತ್ತು ಕಾಂಗ್ರೆಸ್‌ನ ಹಿರಿಯ ನಾಯಕ ಅಜೀಜ್ ಖುರೇಷಿ(83) ಅವರು ಅನಾರೋಗ್ಯದಿಂದಾಗಿ ಶುಕ್ರವಾರ ನಿಧನರಾಗಿದ್ದಾರೆ ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

'ಕೆಲ ಸಮಯದಿಂದ ಖುರೇಷಿ ಆರೋಗ್ಯ ಸರಿ ಇರಲಿಲ್ಲ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಶುಕ್ರವಾರ ಮಧ್ಯಾಹ್ನ 11 ಗಂಟೆಯ ವೇಳೆಗೆ ಮೃತಪಟ್ಟರು' ಎಂದು ಖುರೇಷಿ ಅವರ ಅಳಿಯ ಸಫಿಯನ್ ಅಲಿ ಮಾಹಿತಿ ನೀಡಿದ್ದಾರೆ.

ಮಧ್ಯಪ್ರದೇಶದಲ್ಲಿ ಶಾಸಕರು, ಸಂಸದರಾಗಿದ್ದ ಖುರೇಷಿ ಅವರು ಉತ್ತರಾಖಂಡ್, ಉತ್ತರಪ್ರದೇಶ ಮತ್ತು ಮಿಜೋರಾಂನ ರಾಜ್ಯಪಾಲರಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಅಮೆರಿಕ ನಾಗರಿಕರಿಗೆ ವಂಚಿಸಿದ ಪ್ರಕರಣ: ಆರೋಪಿ ಬಂಧಿಸಿದ ಇ.ಡಿ

ನವದೆಹಲಿ (ಪಿಟಿಐ): ಸಾಲ ನೀಡುವುದಾಗಿ ನಕಲಿ ಕಾಲ್ ಸೆಂಟರ್‌ಗಳ ಮೂಲಕ ನಂಬಿಸಿ ಅಮೆರಿಕದ ಪ್ರಜೆಗಳಿಗೆ ವಂಚಿಸಿದ ಮತ್ತು ಹಣ ಅಕ್ರಮ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಜೈಪುರ ವಿಮಾನ ನಿಲ್ದಾಣದಲ್ಲಿ ಬಂಧಿಸಿರುವುದಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ತಿಳಿಸಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ರಫೀಕ್ ಖಾನ್ ಎಂಬಾತನನ್ನು ಬಂಧಿಸಲಾಗಿದೆ. ಪ್ರಕರಣ ದಾಖಲಾದ ನಂತರ ತಲೆಮರೆಸಿಕೊಂಡಿದ್ದ ಈತ ಸಂಯುಕ್ತ ಅರಬ್ ಸಂಸ್ಥಾನದ ಶಾರ್ಜಾಕ್ಕೆ ಪಲಾಯನ ಮಾಡಲು ಪ್ರಯತ್ನಿಸುತ್ತಿದ್ದಾಗ ಜೈಪುರ ವಿಮಾನ ನಿಲ್ದಾಣದಲ್ಲಿ ಸಿಕ್ಕಿಬಿದ್ದಿದ್ದಾನೆ ಎಂದು ಇ.ಡಿ ತಿಳಿಸಿದೆ.

ಜೈಪುರ, ಮೊಹಾಲಿ, ಮಥುರಾ ಮತ್ತು ದೇಶದ ಇತರ ಕೆಲವು ಭಾಗಗಳಿಂದ ನಕಲಿ ಕಾಲ್ ಸೆಂಟರ್‌ಗಳ ಮೂಲಕ ಅಮೆರಿಕದ ನಾಗರಿಕರಿಗೆ ಕಡಿಮೆ ಬಡ್ಡಿಗೆ ಸಾಲ ನೀಡುವುದಾಗಿ ನಂಬಿಸಿ ವಂಚಿಸಿದ್ದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳಲ್ಲಿ ಖಾನ್ ಕೂಡ ಒಬ್ಬನಾಗಿದ್ದಾನೆ. ಈ ಪ್ರಕರಣ ಸಂಬಂಧ ಈಗಾಗಲೇ ಶಹನವಾಜ್ ಅಹ್ಮದ್ ಜೀಲಾನಿ, ವಿಪಿನ್ ಕುಮಾರ್ ಶರ್ಮಾ ಮತ್ತು ವಿರಾಜ್ ಸಿಂಗ್ ಕುಂತಲ್ ಎಂಬುವವರನ್ನು ಬಂಧಿಸಲಾಗಿದೆ. ಈ ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ. 2023ರ ಆಗಸ್ಟ್‌ನಲ್ಲಿ ಇವರ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಲಾಗಿದೆ ಕೇಂದ್ರೀಯ ತನಿಖಾ ಏಜೆನ್ಸಿ ಹೇಳಿದೆ.

ರಣಜಿ ಟ್ರೋಫಿ ಕ್ರಿಕೆಟ್: ಸೆಮಿಫೈನಲ್ಸ್ ಹಣಾಹಣಿ ಇಂದಿನಿಂದ

ಅಯ್ಯರ್‌ಗೆ ಸಾಮರ್ಥ್ಯ ಪ್ರದರ್ಶನಕ್ಕೆ ಅವಕಾಶ

ಮುಂಬೈ (ಪಿಟಿಐ): ಬಿಸಿಸಿಐ ಅವಕೃಪೆಗೆ ಒಳಗಾಗಿರುವ ಶ್ರೇಯಸ್ ಅಯ್ಯರ್ ಅವರಿಗೆ ಈಗ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವ ಸದವಕಾಶ ದೊರಕಿದೆ. ಅವರನ್ನು ಒಳಗೊಂಡ ಮುಂಬೈ ತಂಡ ಶನಿವಾರ ಆರಂಭವಾಗುವ ರಣಜಿ ಟ್ರೋಫಿ ಸೆಮಿಫೈನಲ್ ಪಂದ್ಯದಲ್ಲಿ ತಮಿಳುನಾಡು ತಂಡವನ್ನು ಎದುರಿಸಲಿದೆ.

ಮುಂಬೈ ಪರ ಕ್ವಾರ್ಟರ್‌ಫೈನಲ್ ಆಡದ್ದಕ್ಕೆ ಅವರನ್ನು ಕೇಂದ್ರೀಯ ಗುತ್ತಿಗೆ ಆಟಗಾರರ ಪಟ್ಟಿಯಿಂದ ಹೊರಗಿಡಲಾಗಿತ್ತು. ತೊಡೆ ಮತ್ತು ಬೆನ್ನು ನೋವಿನಿಂದ ಸಂಪೂರ್ಣ ಗುಣಮುಖರಾಗಿರುವ ಅವರು, ಬಾಂದ್ರಾ–ಕುರ್ಲಾ ಸೆಂಟರ್ (ಬಿಕೆಸಿ) ಕ್ರೀಡಾಂಗಣದಲ್ಲಿ ನಡೆಯುವ ಸೆಮಿಫೈನಲ್ ಪಂದ್ಯಕ್ಕೆ ಲಭ್ಯರಾಗಿದ್ದಾರೆ. ತಮಿಳುನಾಡು ಬ್ರಹ್ಮಾಸ್ತ್ರವಾದ ಸ್ಪಿನ್ ದಾಳಿಯನ್ನು ಎದುರಿಸುವಲ್ಲಿ ಅವರ ಪಾತ್ರ ಪ್ರಮುಖವಾಗಲಿದೆ.

ತಮಿಳುನಾಡು ನಾಯಕ ಆರ್. ಸಾಯಿ ಕಿಶೋರ್ (47 ವಿಕೆಟ್) ಮತ್ತು ಇನ್ನೊಬ್ಬ ಸ್ಪಿನ್ನರ್ ಎಸ್.ಅಜಿತ್ ರಾಮ್ (41 ವಿಕೆಟ್) ಅವರು ಈ ಋತುವಿನಲ್ಲಿ ಅತಿ ಹೆಚ್ಚಿನ ವಿಕೆಟ್ ಪಡೆದಿದ್ದಾರೆ.

ಮುಂಬೈ ತಂಡಕ್ಕೆ ವಿವಿಧ ಸಂದರ್ಭಗಳಲ್ಲಿ ಬೇರೆ ಬೇರೆ ಬ್ಯಾಟರ್‌ಗಳು ನೆರವಾಗಿದ್ದು ನಾಲ್ಕರ ಘಟ್ಟಕ್ಕೆ ಬಂದು ನಿಲ್ಲಲು ಕಾರಣವಾಗಿದೆ. ನಾಯಕ ಅಜಿಂಕ್ಯ ರಹಾನೆ ಒಂದು ಅರ್ಧ ಶತಕ ಹೊಡೆದಿದ್ದು ಬಿಟ್ಟರೆ ವಿಫಲರಾಗಿದ್ದೇ ಹೆಚ್ಚು. ಈ ಋತುವಿನ ಟಾಪ್ 10 ಬೌಲರ್‌ಗಳಲ್ಲಿ ಮುಂಬೈನ ಯಾರೂ ಸ್ಥಾನ ಪಡೆದಿಲ್ಲ. ಮೋಹಿತ್ ಅವಸ್ಥಿ (32 ವಿಕೆಟ್) ಇದ್ದವರಲ್ಲಿ ಹೆಚ್ಚು ಯಶಸ್ವಿ ಎನಿಸಿದ್ದಾರೆ.



ಶ್ರೇಯಸ್ ಅಯ್ಯರ್

ತಮಿಳುನಾಡು ತಂಡದ ವಿಶೇಷ ಎಂದರೆ, ಅದು ಹಾಲಿ ಋತುವಿನಲ್ಲಿ ಈವರೆಗೆ ಪ್ರತಿಯೊಂದು ಎದುರಾಳಿಗಳನ್ನು ಎರಡು ಸಲ ಆಲೌಟ್ ಮಾಡಿದರುವುದು. ತಮಿಳುನಾಡು ಬ್ಯಾಟಿಂಗ್, ಎನ್.ಜಗದೀಶನ್ ಮತ್ತು ಬಾಬಾ ಇಂದ್ರಜಿತ್ ಅವರನ್ನು ನೆಚ್ಚಿಕೊಂಡಿದೆ. ಇಂದ್ರಜಿತ್ 686 ರನ್ ಕಲೆಹಾಕಿದ್ದಾರೆ. ಭಾರತ ತಂಡದಿಂದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ರಾಜ್ಯ ತಂಡಕ್ಕೆ ಮರಳಿದ್ದು ನೆರವಾಗಬಹುದೇ ಎಂದು ಕಾದುನೋಡಬೇಕಿದೆ.

ವಿದರ್ಭಕ್ಕೆ ಮಧ್ಯಪ್ರದೇಶದ ಸವಾಲು

ನಾಗ್ಪುರ (ಪಿಟಿಐ): ಕೆಚ್ಚೆದೆಯ ಆಟವಾಡಿರುವ ಮಧ್ಯ ಪ್ರದೇಶ ತಂಡಕ್ಕೆ ಶನಿವಾರ ಆರಂಭವಾಗುವ ರಣಜಿ ಟ್ರೋಫಿಯ ಸೆಮಿಫೈನಲ್ ಪಂದ್ಯದಲ್ಲಿ ಎರಡು ಬಾರಿಯ ಚಾಂಪಿಯನ್ ವಿದರ್ಭ ತಂಡವನ್ನು ಅದರ ತವರು ನಾಗ್ಪುರದ ವಿಸಿಎ ಕ್ರೀಡಾಂಗಣದಲ್ಲಿ ಎದುರಿಸುವ ಸವಾಲು ಎದುರಾಗಿದೆ.



ಕರುಣ್ ನಾಯರ್

ಈ ಸಲ ತವರಿನಲ್ಲಿ ಆಡಿದ ನಾಲ್ಕು ಪಂದ್ಯಗಳಲ್ಲಿ ವಿದರ್ಭ ಮೂರನ್ನು ಗೆದ್ದಿದೆ. ಕೊನೆಯ ಪಂದ್ಯದಲ್ಲಿ ಕರ್ನಾಟಕ ಮೇಲೆ 127 ರನ್‌ಗಳ ಜಯಪಡೆದಿತ್ತು. ಬ್ಯಾಟ್ಸಮನ್ನರು ಅದರ ಶಕ್ತಿ. ಕನ್ನಡಿಗ ಕರುಣ್ ನಾಯರ್ (515), ಧ್ರುವ್ ಶೋರೆ (496), ಅಥರ್ವ ತೈಡೆ (488), ನಾಯಕ ಅಕ್ಷಯ ವಾಡ್ಕರ್ (452) ವಿವಿಧ ಪಂದ್ಯಗಳಲ್ಲಿ ತಂಡವನ್ನು ರಕ್ಷಿಸಿದ್ದಾರೆ. ವೇಗಿ ಆದಿತ್ಯ ಠಾಕರೆ ಮತ್ತು ಎಡಗೈ ಸ್ಪಿನ್ನರ್ ಆದಿತ್ಯ ಸರ್ವಥೆ ತಮ್ಮ ನಡುವೆ 68 ವಿಕೆಟ್‌ಗಳನ್ನು ಪಡೆದು ನಿರ್ಣಾಯಕ ಪಾತ್ರ ವಹಿಸಿದ್ದಾರೆ.

2022ರ ಚಾಂಪಿಯನ್ ಮಧ್ಯಪ್ರದೇಶ ಕ್ವಾರ್ಟರ್‌ಫೈನಲ್‌ನಲ್ಲಿ ಆಂಧ್ರ ವಿರುದ್ಧ ಗಳಿಸಿದ ರೋಚಕ ನಾಲ್ಕು ರನ್‌ಗಳ ಜಯ ಪಡೆದಿತ್ತು. ಎಡಗೈ ಬ್ಯಾಟರ್ ವೆಂಕಟೇಶ ಅಯ್ಯರ್ 52ರ ಸರಾಸರಿಯಲ್ಲಿ 528 ರನ್ ಕೂಡಿಹಾಕಿದ್ದರೆ, ಹಿಮಾಂಶು ಮಂತ್ರಿ (513) ಮತ್ತು ಯಶ್ ದುಬೆ (510) ಅವರ ಕೊಡುಗೆಯೂ ಗಣನೀಯ. ಕುಮಾರ ಕಾರ್ತಿಕೇಯ ಈ ಋತುವಿನಲ್ಲಿ 38 ವಿಕೆಟ್ ಗಳಿಸಿದ್ದು ತಂಡದ ಪ್ರಮುಖ ಬೌಲರ್ ಆಗಿದ್ದಾರೆ.

ಕೋಚ್ ಚಂದ್ರಕಾಂತ್ ಪಂಡಿತ್ ಅವರು ಮಧ್ಯಪ್ರದೇಶ ತಂಡದ ಹಿಂದಿರುವ ಚಾಲನಾ ಶಕ್ತಿ. ವಿದರ್ಭ ಹಿಂದೆ ಎರಡು ಸಲ ಪ್ರಶಸ್ತಿ ಗೆದ್ದಾಗ ಪಂಡಿತ್ ಕೋಚ್ ಆಗಿದ್ದರು ಎಂಬುದು ಗಮನಾರ್ಹ.

ಪಂದ್ಯಗಳು ಆರಂಭ: ಬೆಳಿಗ್ಗೆ 9.30.

ಚುನಾವಣಾ ಸಮಿತಿ ಸದಸ್ಯರ ಆಯ್ಕೆ ವಿಚಾರದಲ್ಲಿ ಹಿಂಸಾಚಾರ

ಜೆಎನ್‌ಯು: ಎಡ– ಬಲ ಘರ್ಷಣೆ

ನವದೆಹಲಿ(ಪಿಟಿಐ): ಚುನಾವಣಾ ಸಮಿತಿ ಸದಸ್ಯರ ಆಯ್ಕೆ ವಿಚಾರದಲ್ಲಿ ಎಬಿವಿಪಿ ಮತ್ತು ಎಡ ಪಕ್ಷಗಳ ಬೆಂಬಲಿತ ವಿದ್ಯಾರ್ಥಿ ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ನಾಲ್ವರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಅವರನ್ನು ಸಫ್ದರ್‌ಜಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಶ್ವವಿದ್ಯಾಲಯದ ಭಾಷಾ ವಿಷಯಗಳ ಕಟ್ಟಡದಲ್ಲಿ ಗುರುವಾರ ತಡರಾತ್ರಿ ಘರ್ಷಣೆ ನಡೆದಿದೆ. ಈ ಸಂಬಂಧ ಎರಡೂ ಗುಂಪುಗಳು ಪರಸ್ಪರರ ವಿರುದ್ಧ ವಸಂತ್ ಕುಂಜ್ ನಾರ್ಥ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿವೆ.

'ವಿ.ವಿ ಆವರಣದಲ್ಲಿ ನಡೆದ ಘರ್ಷಣೆ ಕುರಿತು ತಡರಾತ್ರಿ 1.15ರ ಸುಮಾರಿಗೆ ನಮಗೆ ಮಾಹಿತಿ ಬಂದಿತು. ಘರ್ಷಣೆಯಲ್ಲಿ ನಾಲ್ವರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಈ ಸಂಬಂಧ ಎರಡೂ ಕಡೆಯಿಂದ ದೂರುಗಳು ಬಂದಿದ್ದು, ವಿಚಾರಣೆ ನಡೆಯುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಡಿಯೊ ತುಣುಕುಗಳು ಬಹಿರಂಗ: ಈ ಘಟನೆಗೆ ಸಂಬಂಧಿಸಿದ ಕೆಲ ವಿಡಿಯೊ ತುಣುಕುಗಳು ಬಹಿರಂಗವಾಗಿವೆ. ಒಂದರಲ್ಲಿ ವ್ಯಕ್ತಿಯೊಬ್ಬ ವಿದ್ಯಾರ್ಥಿಗಳನ್ನು ಕೋಲಿನಿಂದ ಥಳಿಸುತ್ತಿರುವುದು ದಾಖಲಾಗಿದ್ದರೆ, ಮತ್ತೊಂದರಲ್ಲಿ ವ್ಯಕ್ತಿಯೊಬ್ಬ ವಿದ್ಯಾರ್ಥಿಗಳ ಮೇಲೆ ಬೈಸಿಕಲ್ ಎಸೆದಿರುವುದು ಕಂಡುಬರುತ್ತದೆ. ಅಲ್ಲದೆ ಒಬ್ಬೊಬ್ಬರನ್ನು ಗುಂಪು ಗುಂಪಾಗಿ ಥಳಿಸುತ್ತಿರುವುದು ಹಾಗೂ ಅವರನ್ನು ರಕ್ಷಿಸಲು ವಿಶ್ವವಿದ್ಯಾಲಯದ ಭದ್ರತಾ ಸಿಬ್ಬಂದಿ ಪ್ರಯತ್ನಿಸುತ್ತಿರುವುದು ದಾಖಲಾಗಿದೆ.

'ವಿಡಿಯೊದಲ್ಲಿ ಕಾಣುವ, ಕೋಲಿನಿಂದ ಹೊಡೆದ ಹಾಗೂ ಬೈಸಿಕಲ್ ಎಸೆದ ವ್ಯಕ್ತಿಯು ತನ್ನ ಜೆಎನ್‌ಯು ಘಟಕದ ಸದಸ್ಯರಾಗಿದ್ದು, ಅವರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಈ ಮೂಲಕ ಪ್ರಯತ್ನಿಸಿದ್ದಾರೆ' ಎಂದು ಎಬಿವಿಪಿ ಸುದ್ದಿ ಸಂಸ್ಥೆಗೆ ತಿಳಿಸಿದೆ.

ಮತ್ತೊಂದೆಡೆ, ಚುನಾವಣಾ ಸಮಿತಿ ಸದಸ್ಯರ ಆಯ್ಕೆಯಿಂದ ಅಸಮಾಧಾನಗೊಂಡ ಎಬಿವಿಪಿ ಸದಸ್ಯರು ಜೆಎನ್‌ಯು ವಿದ್ಯಾರ್ಥಿ ಒಕ್ಕೂಟದ (ಜೆಎನ್‌ಯುಎಸ್‌ಯು) ಪದಾಧಿಕಾರಿಗಳು ಮತ್ತು ಇತರ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಎಡ ಪಕ್ಷಗಳ ಬೆಂಬಲಿತ ಗುಂಪುಗಳು ಆರೋಪಿಸಿವೆ.

ಜೆಎನ್‌ಯುಎಸ್‌ಯು ಅಧ್ಯಕ್ಷರಾದ ಐಶೆ ಘೋಷ್ ಜತೆಗೆ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದ ಜೆಎನ್‌ಯುಎಸ್‌ಯು ಜಂಟಿ ಕಾರ್ಯದರ್ಶಿ ಮೊಹಮ್ಮದ್ ದಾನಿಶ್ ಅವರು, ತನ್ನ ಧಾರ್ಮಿಕ ಗುರುತಿನ ಕಾರಣದಿಂದಾಗಿ ಎಬಿವಿಪಿ ಸದಸ್ಯರಿಂದ ತನಗೆ ಜೀವ ಬೆದರಿಕೆ ಇದೆ ಎಂದು ಹೇಳಿದ್ದಾರೆ. ಸಭೆಯ ವೇಳೆ ತನ್ನನ್ನು ಒತ್ತೆಯಾಳಾಗಿ ಇರಿಸಲಾಗಿತ್ತು ಎಂದೂ ಅವರು ಆರೋಪಿಸಿದ್ದಾರೆ.

ಕಠಿಣ ಕ್ರಮ: ಕುಲಪತಿ ಎಚ್ಚರಿಕೆ

ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಈ ಬಗ್ಗೆ ಪರಿಶೀಲನೆ ನಡೆಸಿ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಶಾಂತಿಶ್ರೀ ಡಿ ಪಂಡಿತ್ ಹೇಳಿದ್ದಾರೆ.

'ಜೆಎನ್‌ಯು (ವಿದ್ಯಾರ್ಥಿಗಳ ಒಕ್ಕೂಟ) ಚುನಾವಣೆಗಳನ್ನು ವಿದ್ಯಾರ್ಥಿಗಳೇ ನಡೆಸುತ್ತಾರೆ. ಅದು ಶಾಂತಿಯುತ ಮತ್ತು ಪ್ರಜಾಸತ್ತಾತ್ಮಕ ರೀತಿಯ ಪ್ರಕ್ರಿಯೆ ಆಗಿರಬೇಕು ಎಂಬುದನ್ನು ಖಚಿತಪಡಿಸಿಕೊಳ್ಳುವುದೂ ಅವರ ಜವಾಬ್ದಾರಿ. ಇಂಟರ್ ಹಾಸ್ಟೆಲ್ ಆಡಳಿತವು (ಐಎಚ್‌ಎ) ಚುನಾವಣೆ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುತ್ತದೆ. ವಿದ್ಯಾರ್ಥಿಗಳಿಂದ ಯಾವುದೇ ದೂರುಗಳು ಬಂದರೂ ಅದನ್ನು ಐಎಚ್‌ಎ ಪರಿಶೀಲಿಸುತ್ತದೆ. ತಪ್ಪಿತಸ್ಥರು ಯಾವುದೇ ರಾಜಕೀಯ ಸಂಬಂಧ ಹೊಂದಿದ್ದರೂ ಲೆಕ್ಕಿಸದೇ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಕುಲಪತಿ ಹೇಳಿದ್ದಾರೆ.

ಗಾಯಗೊಂಡ ವಿದ್ಯಾರ್ಥಿಗಳ ವೈದ್ಯಕೀಯ ವರದಿಗಳನ್ನು ಪಡೆದ ನಂತರ ಸಂಬಂಧಿಸಿದ ಪ್ರಾಧಿಕಾರವು ವರದಿಯನ್ನು ಸಿದ್ಧಪಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ. ವಿ.ವಿ ಆವರಣದಲ್ಲಿನ ಯಾವುದೇ ಹಿಂಸಾಚಾರವು ಜೆಎನ್‌ಯು ವಿದ್ಯಾರ್ಥಿ ಒಕ್ಕೂಟದ ಚುನಾವಣೆಯನ್ನು ಮುಂದೂಡಲು ಕಾರಣವಾಗಬಹುದು ಎಂದು ಅವರು ಎಚ್ಚರಿಸಿದ್ದಾರೆ.

'ಡ್ರಾ' ಪಂದ್ಯದಲ್ಲಿ ಗುಕೇಶ್– ವಿದಿತ್ ಗುಜರಾತಿ

ಚೆಸ್: ಮತ್ತೆ ಸೋತ ಪ್ರಜ್ಞಾನಂದ

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ಸತತ ಎರಡನೇ ದಿನವೂ ಪ್ರಮಾದ ಎಸಗಿದ ಗ್ರ್ಯಾಂಡ್ ಮಾಸ್ಟರ್ ಪ್ರಜ್ಞಾನಂದ, ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಶುಕ್ರವಾರ ಹಂಗೆರಿ ಸಂಜಾತ ರುಮೇನಿಯಾದ ಆಟಗಾರ ರಿಚರ್ಡ್ ರ್‍ಯಾಪೋರ್ಟ್ ಎದುರು ಸೋಲನುಭವಿಸಿದರು.

ಹತ್ತು ಆಟಗಾರರ ರೌಂಡ್ ರಾಬಿನ್ ಟೂರ್ನಿಯ ಉಳಿದ ಆರು ಸುತ್ತುಗಳಲ್ಲಿ ಭಾರತದ ಆಟಗಾರನಿಗೆ ಉತ್ತಮ ಪ್ರದರ್ಶನ ನೀಡಲೇಬೇಕಾದ ಒತ್ತಡವಿದೆ.



ಡಿ.ಗುಕೇಶ್

ನಾದಿರ್ಬೆಕ್ ಅಬ್ದುಸತ್ತಾರೋವ್ ಇನ್ನೊಂದು ಪಂದ್ಯದಲ್ಲಿ ಸ್ಥಳೀಯ ಆಟಗಾರ ಡೇವಿಡ್ ನವಾರ ಎದುರು ಸೋಲಿನ ಸುಳಿಯಿಂದ ಹೊರಬಂದು ಪೂರ್ಣ ಪಾಯಿಂಟ್ ಪಡೆಯುವಲ್ಲಿ ಯಶಸ್ವಿ ಆದರು.

ಭಾರತೀಯರ ವ್ಯವಹಾರವಾಗಿದ್ದ ಇನ್ನೊಂದು ಪಂದ್ಯದಲ್ಲಿ ವಿದಿತ್ ಗುಜರಾತಿ ಮತ್ತು ಡಿ.ಗುಕೇಶ್ ಅವರು ಪಾಯಿಂಟ್ ಹಂಚಿಕೊಳ್ಳಲು ನಿರ್ಧರಿಸಿದರು. ಎರಡನೇ ಸುತ್ತಿನ ನಂತರ ಅಗ್ರಸ್ಥಾನದಲ್ಲಿದ್ದ ಇರಾನ್‌ನ ಪರ್ಹಾಮ್ ಮಘಸೂಡ್ಲು, ಅವರು ಜರ್ಮನಿಯ ಅಗ್ರ ಆಟಗಾರ ವಿನ್ಸೆಂಟ್ ಕೀಮರ್ ಜೊತೆ ಪಾಯಿಂಟ್ ಹಂಚಿಕೊಂಡರು.

ಸಂಕೀರ್ಣ ಅಂತ್ಯಕಂಡ ದಿನದ ಇನ್ನೊಂದು ಪಂದ್ಯದಲ್ಲಿ ಝೆಕ್ ರಿಪಬ್ಲಿಕ್‌ನ ಗುಯೆನ್ ಥಾನ್ ದೈ ವಾನ್ (1 ಪಾಯಿಂಟ್) ಅವರು ಪೋಲೆಂಡ್‌ನ ಮಾಥ್ಯೂಸ್ ಬಾರ್ಟೆಲ್ (0.5) ಅವರನ್ನು ಸೋಲಿಸಿದರು.

ಮೂರನೇ ಸುತ್ತಿನ ನಂತರ ಅಬ್ದುಸತ್ತಾರೊವ್ ಮತ್ತು ಮಘಸೂಡ್ಲು ಅವರು ಮೂರು ಸುತ್ತುಗಳಿಂದ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿದ್ದಾರೆ. ಗುಕೇಶ್ ಮತ್ತು ರ್‍ಯಾಪೋರ್ಟ್ ಅವರು ತಲಾ ಎರಡು ಅಂಕ ಗಳಿಸಿದ್ದಾರೆ. ವಿದಿತ್ ಗುಜರಾತಿ (1.5) ಐದನೇ ಸ್ಥಾನದಲ್ಲಿದ್ದಾರೆ.

ಪ್ರಜ್ಞಾನಂದ, ನವಾರ, ದೈ ವಾನ್ ಮತ್ತು ಜರ್ಮನಿಯ ಕೀಮರ್ ತಲಾ ಒಂದು ಅಂಕ ಪಡೆದಿದ್ದಾರೆ. ಬಾರ್ಟೆಲ್ ಅರ್ಧ ಪಾಯಿಂಟ್ ಪಡೆದಿದ್ದು ಕೊನೆಯ ಸ್ಥಾನದಲ್ಲಿದ್ದಾರೆ.

ಶೂಟಿಂಗ್: ಸರಬ್ಜೋತ್, ಸುರುಚಿಗೆ ಪ್ರಥಮ ಸ್ಥಾನ

ಭೋಪಾಲ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿರುವ ಹರಿಯಾಣದ ಸರಬ್ಜೋತ್ ಸಿಂಗ್ ಅವರು ರಾಷ್ಟ್ರೀಯ ರೈಫಲ್/ಪಿಸ್ತೂಲ್ ಆಯ್ಕೆ ಟ್ರಯಲ್ಸ್‌ನ ಪುರುಷರ 10 ಮೀಟರ್ ಏರ್ ಪಿಸ್ತೂಲ್ ಟಿ–3 ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದರು. ಇದೇ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಅದೇ ರಾಜ್ಯದ ಸುರುಚಿ ಗೆಲುವು ಸಾಧಿಸಿದರು.



ಸರಬ್ಜೋತ್ ಸಿಂಗ್

ಟ್ರಯಲ್ಸ್‌ನ ಕೊನೆಯ ದಿನವಾದ ಶುಕ್ರವಾರ ಸರಬ್ಜೋತ್ ಅವರು ಫೈನಲ್‌ನಲ್ಲಿ ನೌಕಾಪಡೆಯ ಕುನಾಲ್ ರಾಣಾ ಅವರಿಂದ ಕಠಿಣ ಸವಾಲನ್ನು ಎದುರಿಸಿದರು. ಸರಬ್ಜೋತ್ ಮತ್ತು ಕುನಾಲ್ ಕ್ರಮವಾಗಿ 244.8 ಮತ್ತು 243.9 ಪಾಯಿಂಟ್ ಗಳಿಸಿದರು. ಒಲಿಂಪಿಯನ್ ಗುರುಪ್ರೀತ್ ಸಿಂಗ್ ಮೂರನೇ ಸ್ಥಾನ ಪಡೆದರು.

ಮಹಿಳೆಯರ ವಿಭಾಗದಲ್ಲಿ ಹರಿಯಾಣದ ಸ್ಪರ್ಧಿಗಳೇ ಮೇಲುಗೈ ಸಾಧಿಸಿದರು. ಮೊದಲ ಮೂರು ಸ್ಥಾನವನ್ನು ಕ್ರಮವಾಗಿ ಸುರುಚಿ (242.8), ಸುರ್ಭಿ ರಾವ್ (240.3) ಮತ್ತು ಏಷ್ಯನ್ ಗೇಮ್ಸ್ ಚಾಂಪಿಯನ್ ಪಾಲಕ್ (218.7) ಗೆದ್ದರು.

ಮಹಿಳಾ ಪ್ರೀಮಿಯರ್ ಲೀಗ್: ಗ್ರೇಸ್ ಮಿಂಚಿನ ಅರ್ಧಶತಕ • ಸೋಫಿಗೆ ಮೂರು ವಿಕೆಟ್

ಜೈಂಟ್ಸ್ ವಿರುದ್ಧ ವಾರಿಯರ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಸ್ ಹ್ಯಾರಿಸ್ ಅವರ ಅಜೇಯ ಅರ್ಧಶತಕ ಮತ್ತು ಸೋಫಿ ಎಕ್ಲೆಸ್ಟೋನ್ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಬಲದಿಂದ ಯುಪಿ ವಾರಿಯರ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್‌ನ ಪಂದ್ಯದಲ್ಲಿ ಶುಕ್ರವಾರ ಗುಜರಾತ್ ಜೈಂಟ್ಸ್ ವಿರುದ್ಧ ಆರು ವಿಕೆಟ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಜೈಂಟ್ಸ್ 20 ಓವರ್‌ಗೆ 5 ವಿಕೆಟ್ ನಷ್ಟಕ್ಕೆ 142 ರನ್ ಗಳಿಸಿತು. ಈ ಗುರಿಯನ್ನು ಯುಪಿ ವಾರಿಯರ್ಸ್ ತಂಡವು ಇನ್ನೂ 26 ಎಸೆತ ಬಾಕಿ ಇರುವಂತೆ 4 ವಿಕೆಟ್‌ಗೆ 143 ರನ್ ಗಳಿಸಿ ಸತತ ಎರಡನೇ ಗೆಲುವು ತನ್ನದಾಗಿಸಿಕೊಂಡಿತು. ಯು.ಪಿ ತಂಡದ ಗ್ರೇಸ್ ಹ್ಯಾರಿಸ್ (ಔಟಾಗದೆ 60, 33ಎ, 4x9, 6x2) ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಆಡಿರುವ ನಾಲ್ಕು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದು, ಮತ್ತೆ ಎರಡರಲ್ಲಿ ಸೋತಿರುವ ಯುಪಿ ತಂಡವು ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿದೆ. ಆಡಿದ ಮೂರೂ ಪಂದ್ಯಗಳಲ್ಲಿ ಸೋತಿರುವ ಜೈಂಟ್ಸ್ ಕೊನೆಯ ಸ್ಥಾನದಲ್ಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುಜರಾತ್ ತಂಡವು ಉತ್ತಮ ಆರಂಭವನ್ನೇನೊ ಮಾಡಿತ್ತು. ಲಾರಾ ವೊಲ್ವಾರ್ಡ್ (28, 26ಎ, 4x4) ಮತ್ತು ನಾಯಕಿ ಬೆತ್ ಮೂನಿ (16, 16 ಎಸೆತ) ಮೊದಲ ವಿಕೆಟ್‌ಗೆ 31 ಎಸೆತಗಳಲ್ಲಿ 41 ರನ್ ಸೇರಿಸಿದರು. ಪವರ್‌ಪ್ಲೇ ಅವಧಿಯೊಳಗೆ ಮೂನಿ ನಿರ್ಗಮಿಸಿದರು.

ವೋಲ್ವಾರ್ಡ್ ಅವರು ಮಧ್ಯಮ ವೇಗಿ ಅಂಜಲಿ ಸರ್ವಾಣಿ ಬೌಲಿಂಗ್‌ನಲ್ಲಿ ಆಫ್‌ಸೈಡ್‌ಗೆ ಸತತ ಮೂರು ಬೌಂಡರಿಗಳನ್ನು ಬಾರಿಸಿದರು. ಆದರೆ ಪವರ್‌ಪ್ಲೇ ಅವಧಿ (6 ಓವರ್: 1 ವಿಕೆಟ್‌ಗೆ 41) ಮುಗಿಯುತ್ತಿದ್ದಂತೆ ರನ್ ವೇಗಕ್ಕೆ ಕಡಿವಾಣ ಬಿತ್ತು. ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಬೌಲಿಂಗ್‌ನಲ್ಲಿ ಹೊಡೆತಕ್ಕೆ ಮುನ್ನುಗ್ಗಿದ ಅವರು ಮಿಡ್ ಆಫ್‌ನಲ್ಲಿ ಕ್ಯಾಚಿತ್ತರು.

ಆಸ್ಟ್ರೇಲಿಯಾದ ಆಲ್‌ರೌಂಡರ್‌ಗಳಾದ ಫೋಬಿ ಲಿಚ್‌ಫೀಲ್ಡ್ (35, 26ಎ) ಮತ್ತು ಆ್ಯಶ್ಲೆ ಗಾರ್ಡನರ್ (30, 17ಎ, 4x4, 1x6) ಅವರು ನಾಲ್ಕನೇ ವಿಕೆಟ್‌ಗೆ ವೇಗವಾಗಿ 52 ರನ್ ಸೇರಿಸಿದ್ದರಿಂದ ಜೈಂಟ್ಸ್ ತಂಡ ಗೌರವದ ಮೊತ್ತ ತಲುಪಲು ಸಾಧ್ಯವಾಯಿತು. ಇಬ್ಬರೂ 19ನೇ ಓವರ್‌ನಲ್ಲಿ ನಿರ್ಗಮಿಸಿದರು. ವಾರಿಯರ್ಸ್ ಬೌಲರ್‌ಗಳ ಪೈಕಿ ಸೋಫಿ 20 ರನ್ನಿಗೆ ಮೂರು ವಿಕೆಟ್ ಪಡೆದು ಮಿಂಚಿದರು.



ಯುಪಿ ವಾರಿಯರ್ಸ್ ತಂಡದ ಗ್ರೇಸ್ ಹ್ಯಾರಿಸ್ —ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಸಾಧಾರಣ ಗುರಿ ಬೆನ್ನಟ್ಟಿದ ವಾರಿಯರ್ಸ್ ತಂಡಕ್ಕೆ ಅಲಿಸಾ ಹೀಲಿ (33, 21ಎ) ಮತ್ತು ಕಿರಣ್ ನವಗಿರೆ (12) ಮೊದಲ ವಿಕೆಟ್‌ಗೆ 42 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಆದರೆ, 90 ರನ್ ಆಗುವಷ್ಟರಲ್ಲಿ ಅಲಿಸಾ, ಕಿರಣ್, ಚಾಮರಿ ಅಟಪಟ್ಟು (17) ಮತ್ತು ಶ್ವೇತಾ ಸೆಹ್ರಾವತ್ (2) ಔಟಾದರು. ಈ ಹಂತದಲ್ಲಿ ಗ್ರೇಸ್ ಅವರು ದೀಪ್ತಿ ಶರ್ಮಾ (ಔಟಾಗದೆ 17) ಅವರೊಂದಿಗೆ ತಾಳ್ಮೆಯ ಆಟ ಪ್ರದರ್ಶಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ಸ್ಕೋರುಗಳು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 142 (ಫೋಬಿ ಲಿಚ್‌ಫೀಲ್ಡ್ 35, ಆಶ್ಲೆ ಗಾರ್ಡನರ್ 30; ಸೋಫಿ ಎಕ್ಲೆಸ್ಟೋನ್ 20ಕ್ಕೆ3) ಯುಪಿ ವಾರಿಯರ್ಸ್: 15.4 ಓವರುಗಳಲ್ಲಿ 4 ವಿಕೆಟ್‌ಗೆ 143 (ಗ್ರೇಸ್ ಹ್ಯಾರಿಸ್ ಔಟಾಗದೆ 60, ಅಲಿಸಾ ಹೀಲಿ 33; ತನುಜಾ ಕನ್ವರ್ 23ಕ್ಕೆ 2). ಫಲಿತಾಂಶ: ಯುಪಿ ವಾರಿಯರ್ಸ್‌ಗೆ 6 ವಿಕೆಟ್ ಜಯ. ಪಂದ್ಯದ ಆಟಗಾರ್ತಿ ಗ್ರೇಸ್ ಹ್ಯಾರಿಸ್

ಶನಿವಾರದ ಪಂದ್ಯ: ರಾಯಲ್ ಚಾಲೆಂಜರ್ಸ್ ಬೆಂಗಳೂರು– ಮುಂಬೈ ಇಂಡಿಯನ್ಸ್ (ರಾತ್ರಿ 7.30), ನೇರಪ್ರಸಾರ: ಸ್ಪೋರ್ಟ್ಸ್ 18



ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯಲ್ಲಿ ಚಾಂಪಿಯನ್ ಆದ ಪುಣೇರಿ ಪಲ್ಟನ್ ತಂಡದ ಆಟಗಾರರ ಸಂಭ್ರಮ –ಎಕ್ಸ್ ಚಿತ್ರ

ಪ್ರೊ ಕಬಡ್ಡಿ: ಹೋರಾಟ ತೋರಿದ ಹರಿಯಾಣ ಸ್ಟೀಲರ್ಸ್

ಪಲ್ಟನ್‌ಗೆ ಚೊಚ್ಚಲ ಕಿರೀಟ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪಂಕಜ್ ಮೋಹಿತೆ (9 ಪಾಯಿಂಟ್) ಅವರ ಅಮೋಘ ರೈಡಿಂಗ್ ಜತೆಗೆ ಸಾಂಘಿಕ ಹೋರಾಟ ಕಾಯ್ದುಕೊಂಡ ಪುಣೇರಿ ಪಲ್ಟನ್ ತಂಡ ಪ್ರೊ ಕಬಡ್ಡಿ ಲೀಗ್ 10ನೇ ಆವೃತ್ತಿಯ ಫೈನಲ್‌ನಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು ಮೂರು ಪಾಯಿಂಟ್‌ಗಳಿಂದ ಸೋಲಿಸಿ ನೂತನ ಚಾಂಪಿಯನ್ ಆಗಿ ಹೊರಹೊಮ್ಮಿತು.

ಬಾಳೆವಾಡಿಯ ಗಚ್ಚಿಬೌಲಿ ಕ್ರೀಡಾ ಸಂಕೀರ್ಣದಲ್ಲಿ ಶುಕ್ರವಾರ ನಡೆದ ಫೈನಲ್‌ನಲ್ಲಿ ಮಿಂಚಿನ ಆಟವಾಡಿದ ಪುಣೇರಿ 28-25 ಪಾಯಿಂಟ್‌ಗಳಿಂದ ಹರಿಯಾಣ ತಂಡವನ್ನು ಮಣಿಸಿ ವಿಜಯೋತ್ಸವ ಆಚರಿಸಿತು. ಟ್ರೋಫಿಯೊಂದಿಗೆ ₹3 ಕೋಟಿ ಬಹುಮಾನ ಮೊತ್ತವನ್ನು ತನ್ನದಾಗಿಸಿಕೊಂಡಿತು. ಮೊದಲ ಸಲ ಫೈನಲ್ ಪ್ರವೇಶಿಸಿದ್ದ ಹರಿಯಾಣ ₹1.8 ಕೋಟಿ ಬಹುಮಾನದೊಂದಿಗೆ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟಿತು.

ಕಳೆದ ಆವೃತ್ತಿಯ ಫೈನಲ್‌ನಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ಎದುರು ಮುಗ್ಗರಿಸಿದ್ದ ಪಲ್ಟನ್, ಈ ಬಾರಿ ಯಾವುದೇ ತಪ್ಪೆಸಗದೇ ಪಂದ್ಯದುದ್ದಕ್ಕೂ ಮುನ್ನಡೆ ಕಾಪಾಡಿಕೊಂಡಿತ್ತು. ಪುಣೇರಿ ಪರ ಪಂಕಜ್ ಅಲ್ಲದೆ, ಮೋಹಿತ್ ಗೋಯೆತ್ (5), ಗೌರವ್ ಖತ್ರಿ (4) ಮತ್ತು ಅಸ್ಲಾಮ್ (4) ಉತ್ತಮ ಪ್ರದರ್ಶನ ನೀಡಿದರು. ಹರಿಯಾಣ ಪರ ರೈಡರ್ ಶಿವಂ ಪತಾರೆ (6) ಗರಿಷ್ಠ ಪಾಯಿಂಟ್ ಗಳಿಸಿದರು.

ಕರ್ನಾಟಕದ ಬಿ.ಸಿ. ರಮೇಶ್ ಗರಡಿಯಲ್ಲಿ ಪಳಗಿರುವ ಪುಣೇರಿ ಮೊದಲ ಅವಧಿಯಲ್ಲಿ 13–10ರಲ್ಲಿ ಮೂರು ಪಾಯಿಂಟ್‌ಗಳ ಮುನ್ನಡೆ ಸಾಧಿಸಿ ಆತ್ಮವಿಶ್ವಾಸದಲ್ಲಿತ್ತು. ಉತ್ತರಾರ್ಧದಲ್ಲೂ ಆಕ್ರಮಣಕಾರಿ ಆಟಕ್ಕೆ ಒತ್ತು ನೀಡಿತು. 23ನೇ ನಿಮಿಷದಲ್ಲಿ ಸ್ಟೀಲರ್ಸ್ ತಂಡವನ್ನು ಮೊದಲ ಬಾರಿ ಆಲೌಟ್ ಮಾಡಿ ಮುನ್ನಡೆಯನ್ನು 18-11ಕ್ಕೆ ಹಿಗ್ಗಿಸಿತು.

35ನೇ ನಿಮಿಷದ ವೇಳೆಗೆ 25-19ರಲ್ಲಿ ಅಂತರ ಕಾಯ್ದುಕೊಂಡ ಪುಣೇರಿ, ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿತು. ಇನ್ನೊಂದೆಡೆ ಸ್ಟೀಲರ್ಸ್ ಪಾಯಿಂಟ್ ಹೆಚ್ಚಿಸಲು ಪ್ರಯತ್ನ ಹಾಕಿತು. ಸಬ್‌ಸ್ಟಿಟ್ಯೂಟ್ ಸಿದ್ಧಾರ್ಥ ದೇಸಾಯಿ ಕಣಕ್ಕಿಳಿದು 4 ಪಾಯಿಂಟ್ಸ್ ಗಳಿಸಿದ್ದು ಸೋಲಿನ ಅಂತರವನ್ನು ಕಡಿಮೆ ಮಾಡಿತು.

ಮಾ. 28ರಿಂದ ದೇಶೀಯ ಕ್ರಿಕೆಟ್ ವನಿತೆಯರ ವಲಯ ಟೂರ್ನಿ

ನವದೆಹಲಿ (ಪಿಟಿಐ): ದೇಶೀಯ ಕ್ರಿಕೆಟ್‌ನಲ್ಲಿ ವನಿತೆಯರಿಗೆ ಮತ್ತೆ ರೆಡ್ ಬಾಲ್ (ದೀರ್ಘಾವಧಿ) ಟೂರ್ನಿಯನ್ನು ನಡೆಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಂದಾಗಿದೆ. ಇದೇ 28ರಿಂದ ಪುಣೆಯಲ್ಲಿ ‘ಸೀನಿಯರ್ ಇಂಟರ್ ಜೋನಲ್ ಮಲ್ಟಿ ಡೇ ಟ್ರೋಫಿ’ಯನ್ನು ಆಯೋಜಿಸಲಾಗಿದೆ.

ಆರು ವರ್ಷಗಳ ಬಳಿಕ ಮಹಿಳೆಯರಿಗೆ ರೆಡ್ ಬಾಲ್ ಟೂರ್ನಿಯನ್ನು ನಡೆಸಲಾಗುತ್ತಿದೆ. 2018ರಲ್ಲಿ ಕೊನೆಯ ಬಾರಿ ರೆಡ್ ಬಾಲ್ ಪಂದ್ಯಗಳನ್ನು ಆಯೋಜಿಸಲಾಗಿತ್ತು. ಇತ್ತೀಚೆಗಷ್ಟೇ ಭಾರತದ ಮಹಿಳಾ ತಂಡವು ಟೆಸ್ಟ್ ಪಂದ್ಯಗಳಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳ ವಿರುದ್ಧ ಉತ್ತಮ ಪ್ರದರ್ಶನ ನೀಡಿ ಎಲ್ಲರ ಮನಗೆದ್ದಿತು.

ರೆಡ್ ಬಾಲ್ ಟೂರ್ನಿಯನ್ನು ಆಯೋಜಿಸಲು ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಸಿದ್ಧತೆ ನಡೆಸಿದೆ. ಮಹಿಳಾ ಪ್ರೀಮಿಯರ್ ಲೀಗ್ ಮುಗಿದ ಬೆನ್ನಲ್ಲೇ ಪುಣೆಯಲ್ಲಿ ಈ ಟೂರ್ನಿ ಆರಂಭವಾಗಲಿದೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಸೆಂಟ್ರಲ್ ಮತ್ತು ಈಶಾನ್ಯ ವಲಯ ಹೀಗೆ ಆರು ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ.

ತಲಾ ಮೂರು ದಿನಗಳ ಐದು ಪಂದ್ಯಗಳ ಸರಣಿಯಲ್ಲಿ ತಂಡಗಳು ಸೆಣಸಲಿವೆ. 2018ರ ಋತುವಿನಲ್ಲಿ ಎರಡು ದಿನಗಳ ಪಂದ್ಯ ಆಡಿಸಲಾಗಿತ್ತು. ಈ ಬಾರಿ ಒಂದು ದಿನ ಹೆಚ್ಚು ಇರಲಿದೆ. ಮಾರ್ಚ್ 28ರಂದು ಪೂರ್ವ– ಈಶಾನ್ಯ ವಲಯ ಮತ್ತು ಪಶ್ಚಿಮ– ಸೆಂಟ್ರಲ್ ವಲಯದ ನಡುವಿನ ಕ್ವಾರ್ಟರ್ ಫೈನಲ್ ಪಂದ್ಯದೊಂದಿಗೆ ಟೂರ್ನಿ ಆರಂಭವಾಗಲಿದೆ. ಏ.3ರಿಂದ ಸೆಮಿಫೈನಲ್ ಮತ್ತು ಏ.9ರಿಂದ ಫೈನಲ್ ಪಂದ್ಯ ನಿಗದಿಯಾಗಿದೆ.

ಟೆಸ್ಟ್: ಐರ್ಲೆಂಡ್‌ಗೆ ಮೊದಲ ಗೆಲುವು

ಅಬುಧಾಬಿ (ಎಎಫ್‌ಪಿ): ಐರ್ಲೆಂಡ್ ತಂಡವು ಅಫ್ಗಾನಿಸ್ತಾನ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಆರು ವಿಕೆಟ್‌ಗಳ ಗೆಲುವು ಸಾಧಿಸಿ, ಸತತ ಏಳು ಪಂದ್ಯಗಳ ಸೋಲಿನ ಸರಣಿಯನ್ನು ಕೊನೆಗೊಳಿಸಿತು.

2018ರಲ್ಲಿ ಪಾಕಿಸ್ತಾನ ವಿರುದ್ಧ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಐರ್ಲೆಂಡ್, ಈತನಕ ಆಡಿರುವ 8 ಪಂದ್ಯಗಳಲ್ಲಿ ಮೊದಲ ಗೆಲುವು ಸಾಧಿಸಿದೆ.

ಮೂರನೇ ದಿನದಾಟದಲ್ಲಿ ಗೆಲುವಿಗೆ 111 ರನ್‌ಗಳ ಗುರಿಯನ್ನು ಪಡೆದ ಐರ್ಲೆಂಡ್ ತಂಡವು ನಾಯಕ ಆ್ಯಂಡಿ ಬಲ್ಬಿರ್ನಿ (ಔಟಾಗದೆ 58) ಅವರ ಬ್ಯಾಟಿಂಗ್ ಬಲದಿಂದ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಅಫ್ಗಾನಿಸ್ತಾನ 54.5 ಓವರ್‌ಗಳಲ್ಲಿ 155. ಐರ್ಲೆಂಡ್ 83.4 ಓವರ್‌ಗಳಲ್ಲಿ 263. ಎರಡನೇ ಇನಿಂಗ್ಸ್: ಅಫ್ಗಾನಿ ಸ್ತಾನ 75.4 ಓವರ್‌ಗಳಲ್ಲಿ 128 (ಹಷ್ಮತ್ ಉಲ್ಲಾ ಶಾಹಿದಿ 55, ರೆಹಮಾನುಲ್ಲಾ ಗುರ್ಬಾಜ್ 46). ಐರ್ಲೆಂಡ್ 31.3 ಓವರ್‌ಗಳಲ್ಲಿ 4 ವಿಕೆಟ್‌ಗೆ 111 (ಆ್ಯಂಡಿ ಬಲ್ಬಿರ್ನಿ ಔಟಾಗದೆ 58; ನವೀದ್ ಜದ್ರಾನ್ 31ಕ್ಕೆ 2).

ಕೆಲವರಿಗೆ ತೊಂದರೆ ಆದರೆ ಆಗಲಿ: ಬಿಸಿಸಿಐ ಕ್ರಮಕ್ಕೆ ಕಪಿಲ್ ಬೆಂಬಲ



ಕಪಿಲ್ ದೇವ್

ನವದೆಹಲಿ (ಪಿಟಿಐ): ದೇಶಿಯ ಕ್ರಿಕೆಟ್ ಆಡುವ ವಿಷಯದಲ್ಲಿ ಬದ್ಧತೆ ತೋರದ ಆಟಗಾರರ ವಿರುದ್ಧ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕೈಗೊಂಡಿರುವ ಕ್ರಮವನ್ನು ಸಮರ್ಥಿಸಿರುವ ಭಾರತದ ದಿಗ್ಗಜ ಆಲ್‌ರೌಂಡರ್ ಕಪಿಲ್ ದೇವ್, ‘ಕೆಲವು ಆಟಗಾರರಿಗೆ ಈ ಕ್ರಮದಿಂದ ತೊಂದರೆಯಾಗಬಹುದು. ಆದರೆ ಆಗಲಿ’ ಎಂದು ಹೇಳಿದ್ದಾರೆ.

ರಣಜಿ ಟ್ರೋಫಿಯಂಥ ಪ್ರಥಮ ದರ್ಜೆ ಕ್ರಿಕೆಟ್ ಟೂರ್ನಿಗಳ ರಕ್ಷಣೆಯ ಹಿತದೃಷ್ಟಿಯಿಂದ ಬಿಸಿಸಿಐ ಕೈಗೊಂಡ ಕ್ರಮ ಅಗತ್ಯವಾಗಿತ್ತು ಎಂದು ಅವರು ಹೇಳಿದ್ದಾರೆ.

ಇಶಾನ್ ಕಿಶನ್ ಮತ್ತು ಶ್ರೇಯಸ್ ಅಯ್ಯರ್ ಅವರನ್ನು ಬಿಸಿಸಿಐ, ಬುಧವಾರ ಪ್ರಕಟಿಸಿದ ಕೇಂದ್ರೀಯ ಗುತ್ತಿಗೆ ಪಟ್ಟಿಯಿಂದ ಕೈಬಿಟ್ಟಿತ್ತು. ರಣಜಿ ತಂಡಕ್ಕೆ ಲಭ್ಯರಿದ್ದರೂ ಆಡದೇ ಇದ್ದುದು ಈ ಕ್ರಮಕ್ಕೆ ಕಾರಣವಾಗಿತ್ತು. ಮಂಡಳಿಯ ಕ್ರಮಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೀರ್ತಿ ಆಜಾದ್ ಮತ್ತು ಇರ್ಫಾನ್ ಪಠಾಣ್ ಅವರು ಇಬ್ಬರು ಆಟಗಾರರ ಪರ ನಿಂತಿದ್ದರು.

ಕಪಿಲ್ ದೇವ್ ಅವರು ಯಾರ ಹೆಸರನ್ನೂ ಹೇಳಲಿಲ್ಲ. ಆದರೆ ದೇಶೀಯ ಕ್ರಿಕೆಟ್‌ಗೆ ಆದ್ಯತೆ ನೀಡಬೇಕೆನ್ನುವ ಬಿಸಿಸಿಐ ನಿರ್ಧಾರ ಈ ಹಿಂದೆಯೇ ಆಗಬೇಕಾಗಿತ್ತು ಎಂದರು.

‘ಹೌದು. ಕೆಲವು ಆಟಗಾರರಿಗೆ ತೊಂದರೆ ಆಗಬಹುದು. ಆದರೆ ಆಗಲಿ. ದೇಶಕ್ಕಿಂತ ದೊಡ್ಡವರು ಯಾರೂ ಇರಲ್ಲ’ ಎಂದು ಕಪಿಲ್ ಹೇಳಿದರು.

ಆಸ್ಟ್ರೇಲಿಯಾ ಮೇಲುಗೈ

ವೆಲಿಂಗ್ಟನ್ (ಎಎಫ್‌ಪಿ): ನ್ಯೂಜಿಲೆಂಡ್ ತಂಡ ಮೊದಲ ಇನಿಂಗ್ಸ್‌ನಲ್ಲಿ 179 ರನ್‌ಗಳಿಗೆ ಕುಸಿದ ಪರಿಣಾಮ ಆಸ್ಟ್ರೇಲಿಯಾ ತಂಡ ಮೊದಲ ಕ್ರಿಕೆಟ್ ಟೆಸ್ಟ್‌ನ ಎರಡನೇ ದಿನವೇ ಮೇಲುಗೈ ಸಾಧಿಸಿತು. 217 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆದ ಪ್ರವಾಸಿ ತಂಡ ಶುಕ್ರವಾರ ದಿನದಾಟ ಕೊನೆಗೊಂಡಾಗ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 13 ರನ್ ಗಳಿಸಿದೆ.

ಇದಕ್ಕೆ ಮೊದಲು ಕ್ಯಾಮರಾನ್ ಗ್ರೀನ್ ಅಜೇಯ 174 ರನ್ (275 ಎಸೆತ, 4x23, 6x5) ಗಳಿಸಿದ್ದರಿಂದ ಆಸ್ಟ್ರೇಲಿಯಾ ಮೊತ್ತ ಬಹಳಷ್ಟು ಉಬ್ಬಿತು. ಇದು 24 ವರ್ಷದ ಗ್ರೀನ್ ಅವರಿಗೆ ಎರಡನೇ ಟೆಸ್ಟ್ ಶತಕ. 9 ವಿಕೆಟ್‌ಗೆ 269 ರನ್‌ಗಳೊಡನೆ ಆಟ ಮುಂದುವರಿಸಿದ ಆಸ್ಟ್ರೇಲಿಯಾ ಮೊತ್ತವನ್ನು ಗ್ರೀನ್ ಮತ್ತು ಜೋಶ್ ಹ್ಯಾಜಲ್‌ವುಡ್ (22) ನಿರೀಕ್ಷೆಗೆ ಮೀರಿ ಬೆಳೆಸಿದರು. ಕೊನೆಯ ವಿಕೆಟ್‌ಗೆ 116 ರನ್‌ಗಳು ಬಂದವು.

ನ್ಯೂಜಿಲೆಂಡ್ ಮೊತ್ತ 12 ಆಗುವಷ್ಟರಲ್ಲಿ ಟಾಮ್ ಲೇಥಮ್ (5), ಕೇನ್ ವಿಲಿಯಮ್ಸನ್ (0) ಮತ್ತು ರಚಿನ್ ರವೀಂದ್ರ (0) ಪೆವಿಲಿಯನ್‌ಗೆ ಮರಳಿದರು. ಗ್ಲೆನ್ ಫಿಲಿಪ್ಸ್ (71, 70ಎ, 4x13) ಕೊಂಚ ಪ್ರತಿರೋಧ ತೋರಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 383 ಮತ್ತು 8 (ಕ್ಯಾಮರಾನ್ ಗ್ರೀನ್ ಔಟಾಗದೇ 174, ಮ್ಯಾಟ್ ಹೆನ್ರಿ 70ಕ್ಕೆ5); ನ್ಯೂಜಿಲೆಂಡ್: 43.1 ಓವರುಗಳಲ್ಲಿ 179 (ಗ್ಲೆನ್ ಫಿಲಿಪ್ಸ್ 71, ನೇಥನ್ ಲಯನ್ 43ಕ್ಕೆ4). ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ 8 ಓವರ್‌ಗಳಲ್ಲಿ 2 ವಿಕೆಟ್‌ಗೆ 13.

ಬಿಎಫ್‌ಸಿಗೆ ಇಂದು ಬ್ಲಾಸ್ಟರ್ಸ್ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲೇಆಫ್ ಪ್ರವೇಶದ ಕನಸು ಕಾಣುತ್ತಿರುವ ಬೆಂಗಳೂರು ಎಫ್‌ಸಿ ತಂಡವು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ವಿರುದ್ಧ ಸೆಣಸಲಿದೆ.

ಆಡಿರುವ 17 ಪಂದ್ಯಗಳಲ್ಲಿ ನಾಲ್ಕರಲ್ಲಿ ಗೆದ್ದು, ಆರರಲ್ಲಿ ಡ್ರಾ ಸಾಧಿಸಿರುವ ಬಿಎಫ್‌ಸಿ ತಂಡವು 18 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದೆ. 16 ಪಂದ್ಯಗಳ ಪೈಕಿ 9ರಲ್ಲಿ ಜಯ ಸಾಧಿಸಿರುವ ಬ್ಲಾಸ್ಟರ್ಸ್ ತಂಡವು 29 ಅಂಕಗಳೊಂದಿಗೆ ಐದನೇ ಸ್ಥಾನದಲ್ಲಿದೆ.

ಕಳೆದ ವಾರಾಂತ್ಯದಲ್ಲಿ ತವರಿನಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 2–1 ರಿಂದ ಹೈದರಾಬಾದ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿ, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡಿದೆ.

ಪ್ರಜಾವಾಣಿ ಶನಿವಾರ • ಮಾರ್ಚ್ 2, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER

ಕ್ಲಾಸಿಫೈಡ್ಸ್

LAND FOR RENT

10,000 Sq. Ft. Vacant, Converted Commercial Land, Available on NH 209, next to APS College of Engineering, Bangalore-Kanakapura Road

Call : 98867 85647

FLAT FOR SALE



SRI SAI VRIKSHA
2 BHK FLATS
GANGA NAGAR
NORTH EAST
CORNER SITE
NEAR CBI ROAD/
AIRPORT ROAD

Contact: 8105342502 / 9738143298

Drilling of 6½" Robo Borewells upto 1500ft



VIJAYALAKSHMI BOREWELLS-BANGALORE
94481-71416

RERA No.PRM/KA/RERA/1250/307/PR/240723/006089

Sri Thulasi Ranganatha Gardenia

BMRDA & RERA APPROVED Residential Sites



BMRDA APPROVED

Only few Plots available for Sale

Near ನಿವೇಶನಗಳು Nelamangala

Close to Thyamagondlu Industrial area

Ready For Registration & Construction

Developed Layout, Bank Loan Available

Call: 8956 412 000

Experience Life Like Never Before.

NIRMALA CONSTRUCTIONS
By H N Vijaya Raghava Reddy & Co
VRR & Co Builders



VRR GREEN CREST
Live Beyond Nature
2 & 3 BHK Luxury Flats
@ Electronic City
Phase - I

Inaugural offer
Rs.6199/- per Sqft

BDA APPROVED

V. R. R & Co.
Builders & Developers.
40 years of Excellence
Since 1984
ISO 9001-2015 Certified Company

RERA No. PRM/KA/1251/308/PR/040823/006114

Project Approved by SBI, Bank of Baroda (Hulimangala Branch) & Other leading Banks

73492 42134 / 99726 23278

sales@vrrbuilders.com www.vrrbuilders.com

CREDAI BENGALURU
Builders' Association of India Estd. 1941

REAL ESTATE SELLING

Sites

Anjanapura

SALE BDA Anjanapura 5th Block 30x40 south Facing 80lakh also 20x30 East facing 2nd Block 55lakh. 9620041313/ 9945373839

Banashankari

50X80 COMMERCIAL BDA Site for sale in Banashankari 6th Stage 7th block. Genuine buyers Only Price 16,500/-Sqft Contact 9449814105 8197964724

AVAILABLE/ WANTED BDA Sites. Banashankari 6th Stage, 4th Block, 50x80, 60ft Road 7th Block,40x60, :9845082299

SALE BSK 6th stage 4th H Block 30x40 west Facing 95lakh Also 40x60 facing 6th Block 1.72Cr Negotiable all owners site 9945373839, 9620041313

Bannerghatta Road

BANNERGHATTA ROAD Nisarga Layout 50x80 WF A Katha 4500 Nandanavana 50x80 EWS Road 3000/-:- 9449655947

Hosur Road

KHB, SURYANAGAR, Phase-III, HIG-1, Block-8, 40X60, South Facing PLOT for SALE, Near Adigondanahalli.: 9845027986

HSR Layout

"HSR 20X30 Duplex House 1.6Cr, 30x40,40x60 Houses & Residential/ Commercial sites sale. "Krishna"- 9886294610/ 7760526548"

J P Nagar

JPNAGAR 1ST Phase 30x40, North,and East Near RV`Dental College 3.30Cr Bsk`6th Stage,4th T`Block 40x60,40'Road Near Talaghattapura. Metro Station, 11000/-: 9845600007

Koramangala

KORAMANGALA 4TH Block, 8th Main 40x60 EF With Building 30000/- Final White Brokers Excuse: 9449655947

Kanakapura Road

SITE FOR Sale BCMC Layout 30x40. South Facing, immediately consideration. BDA Katha. near Kanakapura Main Road, Vajarahalli Metro Station. Contact: 9108479949

KANAKAPURA ROAD Kaggalipura, BMRDA APPROVED' E' Khatha 30x40, 30x50, East Facing 3,600/- Negotiable 9916817739/ 9740150364

Kempegowda Layout

KEMPEGOWDA LAYOUT COMMERCIAL BDA SITE FOR SALE 20X30, 30X40, 40X60, 50X80 CONTACT KUMAR: 9945119449

COMMERCIAL SITE Sale,KEMPEGOWDA LAYOUT 8th Block, 'D' Sector, 55X100,W/F BDA,NOC,NNA, Conversion land,Leagal Documents,₹5250/-sqft. Ph:9686469799

Mysore Road

"EAGLETON 70X75 South facing E-Katha 2.10 Crore, only genuine buyers "Sri.Ganesh Estate" 9845286505"

Nagarabhavi

"NAGARABHAVI BDA complex 40x60 West 40ft Road,Railway 2nd Stage 40x60 East Commercial Site,full white. 9448432633"

Nelamangala

INDUSTRIAL SITES for Sale @ Heggadadevanapura, Huskur main road, near BIEC, 10 minutes drive from Peenya. 2500 to 7000sft, With all approvals & facilities. Contact 8095014526

R T Nagar

ANANDNAGAR 40×60 site for Sale, Clear Titles, Close to INTL Airport Road adjoining UAS campus in quiet and serene neighborhood. 9845190654

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

Vishweshwariah Layout

30X40 BDA Site Sale Vishweshwaraiah Layout 2nd Block 8750 Negotiable,4th Block 40x60 South 6900 Negotiable: 8892901567

DIRECT OWNER #1628, N/F 30x40 (9×12mtr) BDA Site Sale Vishveswaraiah Layout 2nd Block, ₹7500/-. 9886634578

"VISHVESHWARAIAH LAYOUT Wanted 20x30,30x40, 40x60, 50x80 for-Immediate Settlement Genuine Transaction. "Anugraha Constructions"- 9886294610"

SMV5BL 30X40 NEAR UDUPI HOTEL SMVL4BL 2 SITES NEAR KEB CIRCLE AVAILABLE ALL BLOCKS: 9900224071

Bidadi

EAGLETON RESORTS BIDADI SITE 80X120 ES CORNER CLOSE GOLF GROUND CLEAR DOCUMENTS Rs. 2.70Cr: 9845065084

House

Kanakapura Road

SALE INDEPENDENT Duplex 3BHK Villa, Gated Community @ off kanakapura Road 30x50 E/F, With Wardrobe Kitchent, Fans, Geysers, Lights, Grill Work, Cargarage 1.35cr Negotiable Contact Roopa: 8546948484

Banashankari

RENT/ SALE House/ Flat 2, 3, 4 BHK Banashankari Pattalamma Bharath Jayanagar housing, 30*45. Siddappa 9964079497/ 9480984441

Palaceguttahalli

PALACE GUTTALLI ROAD House For Sale Ground, First, Second on 20x25 (North) 1Cr. Negotiable: 9448324477

Magadi Road

KAMAKSHIPALYA TWO Years Old Building 15x50 Sq.ft E/F, 'A' Khata, 1 B.H.K. 8 Houses + 1 Shop Fully Granite Floor, Getting 50,600 Rent. Rs. 1.20 Cr Negotiable. 9845288310

Mysore

40 X 60 3BHK, Duplex House, 2.60 Crores, Slightly Negotiable, K. C. Layout, Mysuru 9448040401

HOUSE OF 23 squares for Sale 1200 sqft Site E/F, Rs.1.2Cr. Vijayanagar 4th stage near SVEI School, Mysore Genuine Buyers Contact: 8762059656.

Nagarabhavi

NAGARABHAVI BDA_COMPLEX, Annaporneswari Nagara 30x40 3 BHK Duplex House Sale. Ground 2BHK Rental. 9945643370.

Flat

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

Kanakapura Road

2 BHK apartment with a super built up area of 1,170 sq.feet in Ground Floor at SV Spring Woods near Thalaghattapura metro station, Bangalore. Contact: 9901902500/ 9986363038

3 BHK apartment with a super built up area of 1,560 sq.feet in Ground Floor at SV Spring Woods near Thalaghattapura metro station, Bangalore. Contact: 9901902500/ 9986363038

Mysore Road

AVAILABLE LEASE 3BHK APARTMENT FLAT MYSORE ROAD OCCUPATION 31ST MARCH 2024 RUPEES. 25 LAKHS: 9738223432

Commerical

J P Nagar

J.P.NAGAR 100' Ring Road 40x60`North, Jayanagar 9th Block SouthEast corner 30x50 Commercial, Suraj Realtors- 9845232711

Vijayanagar

500 SQFT Commercial office Space For Sale, Opposite to Vijayanagar Metro Station Contact: 9945569909 7676900174

Real Estate Agents

Mysore Road

MYSORE ROAD Near Rajarajeshwari Hospital SALE: 2Acres 28.8Guntas Residential Converted East Facing 3250 per Sqft Contact ESHWERI ENTERPRISES 98454-97163

REAL ESTATE BUYING

Sites

Anjanapura

WANTED 20X30 or 30x40 Site Anjanapura BDA Layout any Block & any Facing Contact: 9980978986

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED BDA SITES ANY MEASUREMENT, Anjanapura, Banashankari 6th Stage JP Nagar 8th & 9th Phase, Narayan Nagar, BCC & BCMC Layout, Vishweshwaraiah Layout. CONTACT: 9845298419

Kanakapura Road

WANTED SITE: 40x60,30x40 NarayanaNagar, BCMC, BCC Layout, Anjanapura BDA, Banashankari 6th Stage, Gubblala. Agents Excuse. 6363726250.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9900268073 9448068073

WANTED SITE House 1500- 2400 sqft. in Malleshwaram, Seshadripuram, Vyalikaval or Devaiah Park. CALL: 8867713145

Nagarabhavi

WANTED SITE 20x30,30x40, 40x60,50x80, Nagarabhavi, Rajajinagar Housing Co-operative Society, ITI, MPM, Vishweswaraiah Layout. 8105688602.

Vishweshwariah Layout

"20X30, 30X40, 40x60, 50x80 Residential/ Commercial BDA [Owners] Sites Buying Vishveshwaraiah Layout, Kempegowda Layout. 9845143579"

BDA-SITES WANTED Vishweshwaraiah Layout, Banashankari 6th Stage, 30x40, 40x60, 50x80 Immediate Settlement Contact: 98455-55666

RENTAL PROPERTIES

Accommodation Available

Commercial

COMMERCIAL CONVERTED 61410 sqft Land for Rent exclusively off parking space and park, with BIAAPA approved plan. Situated on Bangalore-Hyderabad National Highway (NH-7) Near Devanahalli. Contact: 9916929394.

Industrial And Factory

RENT/SALE: FACTORY premises at Karnad Industrial Area, Mulki, Mangalore. Plot Size 1001 sqm, 24cents, Building 2500sqft, Ground & first floor, covered rooftop. Well maintained with interlocks, 2 gates, compound wall; Contact: 9844025467

Godown

COMMERCIAL RCC Building 2000 Sq.ft 14 feet height roof with water and electricity ready for occupation suitable for Departmental Store, Clinics, Office, Courier Etc at Sri Ragavendra layout, Near Metro Station back side of Sparsh Hospital Tumkur Road Contact 9845026300

AVAILABLE 1400 Rcc building at near Kanteerava studio,Yeswanthapur for GODOWN purpose contact 9845026300

General

PRIME LAND 50,000 Sft+ Close to Kengeri Metro, Mysore road, Nice Road Junction & Elevated Expressway available for RENT or LEASE with various options open. Ravishankar 9483509169

BUILDERS ESSENTIAL

Building Contractors

KANTHI CONSTRUCTION We Construct Your Dream House. Premium Quality, Reasonable Price, Timely Completion. Free: Sump: 9880785589/ 9066487178

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

WANTED BUSINESS Partners Saree Business Contact: 8892501007/ 9606701007

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted&, Agriculture Lands Call:7204995189

PERSONAL

Change of Name

I, BASHEER AHMED R/a#125, 4th Cross, Vinobha`Nagar KG.Halli, Bengaluru-45, have changed name BASHEER KANNIGAR vide affidavit 1.3.2024 before Notary Hemalatha, Bengaluru.

I, SURESH R. MEHTA S/o Late RANMAL MEHTA R/a- #68/402,'Arihant Giri', New Model House Street, 1st cross, Basavanagudi, Bangalore- 560004 have changed my name to SURESH J. RANMAL vide affidavit dated 01/03/2024 before Notary L.SHANKARANARAYANA Bangalore

CHANGE OF NAME
I **SHANKARA. R** residing at No.02, 2nd Cross, Near Anjaneya Temple, Tavarekere, Dharmaram College Post, Bangalore south, Bangalore-560029.
have changed my name to
SHANKAR. R
Vide affidavite dated:01/03/2024 before Notary Mamatha N. K. Bangalore. Henceforth I shall be called **SHANKAR. R** only.

I, ROSHAN MOHAMMAD SHA , W/o. Vijay Manoj Kumar Residing at No.G1, SV Homes, Near Raj Kumar Circle, Suddeguntapalya, Bangalore- 560093, have changed my name to ROSHINI vide affidavit dated: 29.02.2024 before Advocate and notary UDAY KUMAR .K., Bengaluru.

I, UMME SALMA, residing at #7, 1st cross, Chikkanna Layout, Bangalore- 560045, have changed my name to UME SALMA, vide affidavit dated 01.03.2024 before Notary Meer Hassan, Bangalore. Henceforth I shall be known as UME SALMA only.

SHARMILA A, Wife/o 6497958F HAV, MURALI AM, Vill- Hoysalanagar, Doorvaninagar, Bengaluru North, Bengaluru, Karnataka changed name SHARMILA A to SHARMILA M, 29/02/2024, Notary K.V. Mani, Bangalore

MEENU PAL, 6395605N, HAV, Vill - Kheri Karmu, Shamli, Uttar Pradesh changed daughter's name UJWAL to UJWAL CHOUDHARY, 29/02/2024, Notary K.V. Mani , Bangalore

MEENU PAL, 6395605N, HAV, Vill - Kheri Karmu, Shamli, Uttar Pradesh changed Son's name KRISHNA to KRISHNA CHOUDHARY, 29/02/2024, Notary K.V. Mani , Bangalore

I,HRUDAY SINGH.J, S/o Jagannath Singh H R/a No.26/A, Property No. 184/1,Marenahalli,Chokkana halli,Bagalur,Bangalore-5621 49 have changed my Name from HEMALATHA BAI.J to HRUDAY SINGH.J vide affidavit dated 5-1-2024 Sworn before Notary Bhagya Kumari N,Bangalore.

Lost

ಕಳೆದಿದೆ
ವಿಜಯವಾಡ–10, ವಿಸಾಲಾಂಧ್ರ ರೋಡ್, ಪ್ರಜಾಶಕ್ತಿ ನಗರ, ಮನೆ ನಂ. 32–6–13ರಲ್ಲಿ ವಾಸವಾಗಿರುವ ಟಿ. ಮಧುಸುದನರಾವ್ ಕಾಕಾಣಿ ಚಂಧನ ಹೆಸರಿನಲ್ಲಿರುವ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಸೀಡೇದಹಳ್ಳಿ ಗ್ರಾಮದಲ್ಲಿರುವ ಸೈಟ್ ನಂ. 58ಎ, ಮಾಜಿ ಸರ್ವೇ ನಂ.11 ಹಾಲಿ ನಂ. 28,29,30,31ರಲ್ಲಿರುವ ಕ್ರಯಪತ್ರವು ಕ್ರಿಲೋಸ್ಕರ್ ಮತ್ತು ಬಗಲಗುಂಟೆ ಮಧ್ಯೆ ಕಳೆದುಹೋಗಿರುತ್ತದೆ. ನೋಂದಣಿಯ ನಂ. ಎಲ್‌ಎನ್–1–3528/84–85, ದಿನಾಂಕ:22–12–1984. ಈ ಪತ್ರವು ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಮೊಬೈಲ್ ನಂಬರ್ **9341383707, 9848148574** ಗೆ ತಿಳಿಸಬೇಕಾಗಿ ವಿನಂತಿ.

DOCUMENT LOST
I, **P. RAJA RAM,** Residing at # 32, Erappa Reddy Layout, Hosa Road, Banglaore-560100, have lost my **Original Sale Deed & House documents No.8575/80-81 of property Ward No. 67, K.C. Malappa Reddy Layout, Koramangala 5th Main, Banglaore** While in transit. If Found please contact: **9886548953**



email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್









NATIONAL PUBLIC SCHOOL BANGALORE

Welcome to

NATIONAL PUBLIC SCHOOL NORTH WEST

ADMISSION OPEN TO OPEN MINDS

Bangalore Northwest Neighbourhood
will now witness World Class Education



Dr. K. P. Gopalkrishna
Chairman
NPS Group of schools, Bangalore



2024-25 ADMISSION OPEN

Montessory to Grade VIII


Enroll Now

Chairman's Desk


Few things have greater importance to parents than the education of their children. Every parent looks for academic excellence, good values, and discipline for their children. Choosing the right school for them is therefore a crucial decision.

NPS Northwest stimulate creativity and develop problem-solving capability in each student

CLASS ROOM



LIBRARY



SCHOOL CAMPUS



SWIMMING POOL



NPS Website

National Public School NorthWest
Lakshmipura, Madanayakanahalli, Tumkur Road, Bengaluru - 562162.

info@npsnorthwest.com www.npsnorthwest.com

Call us for Enquiries

80671 66989 +91 90350 59750 / +91 90350 59751

Reach out | Reach High | Reach Beyond

NPS Google Map location